# ಆನಂದ ನಿಲಯಂ

ಲೇಖಕರು

ಶ್ರೀ ಜಾಲಕಂಟಿ ಬಾಲಸುಬ್ರಹ್ಮಣ್ಯಂ

ಕನ್ನಡಕ್ಕೆ ಅನುವಾದ

ಡಾ|| ಎನ್.ಎಸ್. ಲೀಲಾವತಿ

ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

2025

# ANANDANILAYAM

*Telugu*
**Sri Julakanti Balasubrahmanyam**

*Kannada Translation*
**Dr. N.S. Leelavathy**

*Editor*
**Dr. Akella Vibhishana Sarma**
Special Officer
Publications Division

T.T.D. Religious Publications Series No. 1516

© All Rights Reserved

First Edition : 2025
Copies : 250

*Published by*
**Sri J. Syamala Rao,** I.A.S.,
Executive Officer
Tirumala Tirupati Devasthanams
Tirupati - 517 507.

***DTP***
Publications Division
T.T.D, Tirupati.

*Printed at*
Tirumala Tirupati Devasthanams Press
Tirupati - 517 507.

# FOREWORD

Tirumala is a divine place of world renown. In this holiest of holy places, Sriman Narayana is being worshipped as Sri Venkateswara. About five thousand years ago, at the beginning of Kaliyuga, Sri Maha Vishnu with Sri Maha Lakshmi - ever seated in his bosom adorning it - had come down from Vaikunta to holy Tirumala which is the very Vaikunta on the earth. He has manifested himself here in the form of *salagramasila. H*ere he is worshipped as “Srinivasa.”

From then onwards “Srinivasa” - Lord Sri Venkateswara, renowned as *Kalau Venkata Nayakaha,* which means that in Kaliyuga, Venkata Nayaka alone takes care of all his devotees in all ways. It is for this reason that this deity is glorified by the devotees as a saviour of the distressed, the lord of salutations galore, and the bestower of all wishes.

The Tirumala range consists of seven hills named Seshadri, Garudadri, Venkatadri, Narayanadri, Vrishabhadri, Vrishadri and Anjanadri. For this reason Srinivasa is hailed variously as the Lord of the Seven Hills, the Lord of the Sesha Hill, the Lord who dispels sins and by many other names as well.

Swami Sri Venkateswara, who is totally committed to the sole purpose of doing good to his devotees and for the well being of the world, vowed that he would

rather be away from Vaikunta than in no way leave his helpless devotees. He who is the deity and emperor of the eternally auspicious has descended to the earth to shower his blessings on devotees every day.

His name traverses the world Worshipped by his umpteen number of names unique to himself alone, his divine story is penned by many in several forms.

The present book entitled, Ananda Nilayam is the divine story of Sri Venkateswara Swamy. Dr. N.S. Leelavathy (Leela Basavaraju), a renowned scholar, has translated Sri Julakanti Balasubrahmanyam's (Rtd. Editor in TTD and Renowned Writer) Original Telugu work on Ananda Nilayam in a simple, fluent, idiomatic style. This work, it is deemed, is yet another lotus offered at the feet of the Lord of the Seven Hills with great diligence and reverence. I congratulate Dr. N.S. Leelavathy (Leela Basavaraju) for successfully accomplishing this task.

*In the Service of Lord Venkateswara*

**Executive Officer**

Tirumala Tirupati Devasthanams, Tirupati.

# ಪೀಠಿಕೆ

# ಅದಿವೋ ಅಲ್ಲದಿವೋ ಆನಂದಮಯಮು

ತಿರುಮಲೇಶನಿಗೆ ಅನೇಕ ಹೆಸರುಗಳಿದ್ದರೂ, 'ಆನಂದನಿಲಯುಡು' ಎಂಬ ಹೆಸರಿನ ಪ್ರತಿ ಅಕ್ಷರವು ಸಾರ್ಥಕವಾಗಿ ವಿಜೃಂಭಿಸುತ್ತಿದೆ. ತಿರುಮಲಕ್ಕೆ ಪ್ರವಾಸ ಕೈಗೊಳ್ಳುವುದೇ ಒಂದು ಸಂತೋಷ ಖುಷಿ! ಏಳು ಬೆಟ್ಟಗಳಲ್ಲಿ ಪ್ರಕೃತಿ ಸೌಂದರ್ಯದ ನಡುವೆ ಪ್ರಯಾಣ ಮಾಡುವುದು ಕೊನೆಯಿಲ್ಲದ ಸಂತೋಷ! ಬ್ರಹ್ಮಾಂಡ ನಾಯಕನ ಬಂಗಾರುಮೇಡ, ಸುವರ್ಣದಿಂದ ಮಾಡಲ್ಪಟ್ಟಿರುವ ವಿಮಾನ ನಿಲಯ. ಆನಂದನಿಲಯವೆಂಬ ವಿಮಾನವನ್ನು ನೋಡುವುದೇ ಒಂದು ದಿವ್ಯ ಆನಂದ! ಸಪ್ತಗಿರಿಯೊಡೆಯ ವಿಮಾನದೊಳಗೆ ನಿಂತು ಭಕ್ತರಿಗಾಗಿ ಸದಾ ಕಾಯುತ್ತಿರುವುದನ್ನು ನೋಡುವುದೇ ಮಹದಾನಂದ. ಸ್ವಾಮಿಯ ದರ್ಶನ ಪಡೆದ ಪ್ರತಿಯೊಬ್ಬ ಭಕ್ತನು ಈ ಅವ್ಯಕ್ತ ಆನಂದವನ್ನು ಅನುಭವಿಸುತ್ತಾನೆ. ದರ್ಶನಮಾಡಲೇಬೇಕಾದ ಮೂರ್ತಿಗಳು ಹಲವು. ಯಾತ್ರೆಗೆ ಬರುವ ಯಾತ್ರಾರ್ಥಿಗಳಿಗೆ ಮಾತ್ರವಲ್ಲದೆ, ದೇವಸ್ಥಾನದ ಸಿಬ್ಬಂದಿ, ನೌಕರರು ಮತ್ತು ದೇವಾಲಯದಲ್ಲಿ ನಿರಂತರವಾಗಿ ಸೇವೆಸಲ್ಲಿಸುತ್ತಿರುವ, ಭಗವಂತನಿಗೆ ಆಭರಣ ಮತ್ತು ನೈವೇದ್ಯಗಳನ್ನು ಅರ್ಪಿಸುವ ಅರ್ಚಕವೃಂದ, ಸ್ವಾಮಿಗೆ ಪುಷ್ಪಮಾಲೆ ಕಟ್ಟುವುದೂ ಒಂದುಕಲೆ. ಅಂತಹ ಭಕ್ತವೃಂದಕ್ಕೂ ಈ ಆನಂದದ ಅನುಭವವಾಗುವುದು ನಿತ್ಯಸತ್ಯ.

ಈ ಆನಂದಾಮೃತದ ಆಸ್ವಾದನೆ, ಅನುಭವ ಭಕ್ತನ ಭಕ್ತಿ, ಶಕ್ತಿಗೆ ಅನುಗುಣವಾಗಿರುತ್ತದೆ. ನೂರಾರು ಮೆಟ್ಟಿಲುಹತ್ತಿ, ಗಂಟೆಗಟ್ಟಲೆ, ದಿನಗಟ್ಟಲೆ ಸರದಿಯಲ್ಲಿ ಕಾದು ಸ್ವಾಮಿಯನ್ನು ಮನಸಾರೆ ದರ್ಶನ ಮಾಡಿದರೂ ತೃಪ್ತಿಯಿಲ್ಲ. ನೂರಾರು ಸಲ ಯಾತ್ರೆ ಕೈಗೊಂಡರೂ ಎಲ್ಲ ಭಕ್ತರೂ ಹೇಳುವದು ಒಂದೇ, ಎಷ್ಟೇ ಕಣ್ಣನ ತುಂಬಿ ಕೊಂಡರೂ ನೋಡಿದಂತಾಗಲಿಲ್ಲ ಎಂಬ ಹಪಹಪಿಕೆ. ಭಕ್ತನ ಅಲವರಿಕೆ, ಅನುಭೂತಿ, ಆನಂದ ಎಲ್ಲದಕ್ಕೂ ಕಾರಣೀಭೂತನಾದವನು ಮಾತ್ರ ಒಬ್ಬನೇ, ಆ ಒಬ್ಬನೇ ಸಾಕ್ಷಾತ್ ತಿರುಮಲ ಶ್ರೀವೆಂಕಟೇಶ್ವರಸ್ವಾಮಿ ಅನ್ನುವುದರಲ್ಲಿ ಸಂಶಯವಿಲ್ಲ.

ಈ ರೀತಿಯಾಗಿ ಪ್ರತಿ ಭಕ್ತನ ಕಣ ಕಣದಲ್ಲೂ ಆ ಸ್ವಾಮಿಯನ್ನು ಮತ್ತೆ ಮತ್ತೆ ಕಾಣಬೇಕೆಂಬ ಹಂಬಲ ಕಂಡು ಮೈಮನ ಪುಳಕಗೊಂಡು ಆನಂದದಿಂದ

ತೇಲಾಡುವುದರಿಂದಲೇ ಆ ಸ್ವಾಮಿಯ ನೆಲೆಯನ್ನು "ಆನಂದನಿಲಯಂ" ಎಂದು ವರ್ಣಿಸಲಾಗಿದೆ.

ಹೀಗೆ ವೆಂಕಟಾದ್ರಿಯನ್ನು "ಆನಂದಾಚಲಂ" ಎಂದೂ, ಸ್ವಾಮಿಯ ಚಿನ್ನದ ಗೋಪುರವನ್ನು "ಆನಂದ ನಿಲಯ ವಿಮಾನ" ಎಂದು, ಅಲ್ಲಿರುವ ಭಗವಂತನನ್ನು "ಆನಂದ ನಿಲಯಡು" ಎಂದು ಹೇಳಿದೆ.

**ಆನಂದ ಜನಕತ್ತ್ವಾತ್ತಂ**
**ಆನಂದ ನಿಲಯಂ ವಿದುಃ ।**
**ವರಪದ್ಮಾಸನ ಸುಸ್ಥಾಮ್**
**ವಿಧಾಯ ಕಮಲಾಲಯಮ್ ॥**

ಸ್ವಾಮಿ ತನ್ನ ವಕ್ಷಸ್ಥಳದಲ್ಲಿ ಶ್ರೀಮಹಾಲಕ್ಷ್ಮೀ ಸಮೇತನಾಗಿ ವೈಕುಂಠಾಧಿಪತಿ ಶ್ರೀಮನ್ನಾರಾಯಣ ತನ್ನ ವಾಸಸ್ಥಳದಿಂದ ಧರೆಗಿಳಿದು ಭೂವೈಕುಂಠ ಎನಿಸಿರುವ ತಿರುಮಲವೆಂಬ ದಿವ್ಯಕ್ಷೇತ್ರದಲ್ಲಿ ನೆಲೆಸಿದನು. ತನ್ನ ದರ್ಶನಾಕಾಂಕ್ಷಿಗಳಾಗಿ ಬರುವ ಭಕ್ತರಿಗೆ ಅವ್ಯಕ್ತವಾದ ಆನಂದವನ್ನು ಕರುಣಿಸುವನು. ಇದೇ ಸ್ವಾಮಿನೆಲೆಸಿರುವ "ಆನಂದನಿಲಯ".

**ವಿಮಾನಂ ಸರ್ವಪಾಪಘ್ನಂ**
**ವಿಷ್ಣು ನಾऽಧಿಷ್ಠಿತಂ ಸಹ**
**ಪಶ್ಯತಾಂ ಸರ್ವಭೂತಾನಾಂ**
**ಆಹ್ಲಾದ ಜನಕಂ ಶುಭಂ**

ಸ್ವಾಮಿಯ ಬಂಗಾರ ವಿಮಾನ, ಹಾಗು ಅದರಲ್ಲಿ ನೆಲೆಸಿರುವ ವಿಮಾನವೆಂಕಟೇಶ್ವರನ ದರ್ಶನ ಮಾಡುವುದರಿಂದ ಆ ಭಕ್ತನ ಪಾಪ ನಿವಾರಣೆಯಾಗಿ, ಶುಭಗಳಿಗೆ ಆರಂಭವಾಗಿ ಮನಸ್ಸಿಗೆ ಸಂತೋಷ ನೆಮ್ಮದಿ ಉಂಟಾಗುತ್ತದೆ.

ಶ್ರೀ ವೆಂಕಟೇಶ್ವರಸ್ವಾಮಿ ನಂದಕಾಂಶ ಸಂಭೂತನು. ಸಂಗೀತ ಪದಕವಿತಾ ಪಿತಾಮಹ ತಾಳಪಾಕಂ ಅನ್ನಮಾಚಾರ್ಯರು ಆನಂದನಿಲಯ, ವಿಮಾನದರ್ಶನ ಭಾಗ್ಯವನ್ನು ಹೊಂದಿ, ಸಿದ್ಧಿ ಪಡೆದು ಹಲವಾರು ಮಹೋನ್ನತ ಕೀರ್ತನೆಗಳನ್ನು ರಚಿಸಿದರು.

**ಇಂಚುಕೈನ ವೆಂಕಟೇಶಗಿರಿ ಶಿಖರಮು**
**ಕಾಂಚುಟೆ ಕಲುಗವಲೆ ಗಾಕಾ**

**ಅಂಚಿತಂಬೈನ ನಿತ್ಯಾನಂದ ಪದವುಲುನು**
**ಮಿಂಚಿ ತಮ ಎದುಟ ಪ್ರಭವಿಂಚಿನವೇ ಕಾವಾ!**

**ಅಷ್ಟೇ ಅಲ್ಲದೆ**

**ಕೋರಿನ ವಾರಿಕಿ ಕೋರಿನ ವರಮುಲ**
**ನೂರಂತ ಪ್ರೋದುಲು ನೊಸಗುಚು**
**ಚೇರುವೈ ಕೃಪಾಚೇಸೆ ನಿದಿವೋ**
**ಕೂರಿಮಿ ನಾ ನಡಮಿ "ಗೋಪುರಮೇಡ"**

"ತಿರುಮಲ" ಸಪ್ತಗಿರಿ ಶಿಖರಗಳ ನಟ್ಟನಡು, ಮಧ್ಯಭಾಗದಲ್ಲಿ ಪ್ರಕಾಶಿಸುತ್ತಿರುವ ಬಂಗಾರು ಆನಂದನಿಲಯದ ಗೋಪುರವನ್ನು ಯಾರು ದರ್ಶನ ಮಾಡುತ್ತಾರೋ ಅವರು ಕೋರಿದ ವರವನ್ನು ಆ ದೇವರು ಕರುಣಿಸುತ್ತಾನೆ ಎಂದು ಸ್ವಾಮಿಭಕ್ತ ಅನ್ನಮಯ್ಯ ಅವರ ಸಂಕೀರ್ತನೆಯಲ್ಲಿ ಹೇಳಿದ್ದಾರೆ. ಎಲ್ಲ ಯುಗದಲ್ಲಿ ಎಲ್ಲ ಭಕ್ತರಿಗೆ ಎಲ್ಲಾ ವಿಧದ ಪರಮಾದ್ಭುತವಾದ ಆನಂದವನ್ನು ಕರುಣಿಸಿ, ಕೋರಿಕೆಗಳನ್ನು ಈಡೇರಿಸುತ್ತಾ ನಿರಂತರ ತನ್ನ ಭಕ್ತರನ್ನು ತನ್ನ ನೆಲೆಗೆ ಬರಮಾಡಿಕೊಳ್ಳುತ್ತಿದ್ದಾನೆ ವೆಂಕಟಾಚಲ ಶ್ರೀನಿವಾಸ.

**ಅದೇ ವೆಂಕಟಾಚಲಮಖಿಲ್ಲೋನ್ನತಮು**
**ಅದಿವೋ ಬ್ರಹ್ಮಾದುಲಕಪುರೂಪಮು**
**ಅದಿವೋ ನಿತ್ಯ ನಿವಾಸಮಖಿಲಮುನುಲಕು**
**ನದೇ ಚೂಡುಂಡದೇ ಮ್ರಕ್ಕುಂಡಾನಂದ ಮಯಮು**

ಸ್ವಾಮಿಯ ಪರಮಭಕ್ತರು ಹೇಳುವಹಾಗೆ ಹೆಸರು ಮಾತ್ರದಿಂದಲೇ ಆನಂದವನ್ನುಂಟು ಮಾಡುವ ಆನಂದನಿಲಯ ವಿಮಾನದ ಒಳಗೆ ಆನಂದ ನಿಲಯಡು ನೆಲೆಸಿರುವ ಸ್ವಾಮಿ ಶ್ರೀವೆಂಕಟೇಶನ ದಿವ್ಯಚರಿತಾಮೃತ ಸರಳವಾಗಿ ಸುಂದರವಾಗಿ ಮೂಡಿಬಂದಿರುವ ಗ್ರಂಥವೇ "ಆನಂದನಿಲಯಂ".

ಇಂದಿಗೂ ಶಂಖಣ ಮಹಾರಾಜ, ಆತ್ಮಾರಾಮ, ಧರ್ಮಗುಪ್ತ, ಸುಮತಿ ಎಂಬ ಒಬ್ಬ ಬ್ರಾಹ್ಮಣ, ತೊಂಡಮಾನ, ಕುಮ್ಮರನಂಬಿ ಅಂತಹ ಪರಮಭಕ್ತರ ಕಥೆಗಳು, ಸಪ್ತಗಿರಿಗೆ ಸಂಬಂಧಪಟ್ಟ ಆಹ್ಲಾದಕರ ವೃತ್ತಾಂತಗಳು, ಬೆಟ್ಟದ ಗರ್ಭದಲ್ಲಿ ಅಡಗಿರುವ ಪವಿತ್ರ ತೀರ್ಥಗಳು, ತಿರುಮಲೆಗೆ ಬರುವ ಭಕ್ತರು ನೋಡಬೇಕಾದ ಸ್ಥಳಗಳು, ನೋಡಲೇ ಬೇಕಾದ ಗುಡಿಗೋಪುರಗಳು ಅಲ್ಲದೆ ತಿರುಮಲೆಗೆ ಬರುವ

ಯಾತ್ರಾರ್ಥಿಗಳು ಅನುಸರಿಸಬೇಕಾದ ನಿಯಮಗಳು ಧಾರ್ಮಿಕ ಕಾರ್ಯಗಳ, ಪಿತೃಕಾರ್ಯ ಶ್ರಾದ್ಧಾದಿಕಾರ್ಯಗಳ ಬಗ್ಗೆ ಮನಮುಟ್ಟುವಂತೆ, ಓದುಗರಲ್ಲಿ ಆಸಕ್ತಿ, ಶ್ರದ್ಧೆ ಅಂಕುರಿಸುವಂತೆ ತಿಳಿಹೇಳಲಾಗಿದೆ. ಈ "ಆನಂದನಿಲಯಂ" ಗ್ರಂಥ ತನ್ನ ಭಕ್ತರಿಗಾಗಿ ಬರೆದಿರುವ ದಿವ್ಯವಾದ ಅಕ್ಷರ ಪ್ರಸಾದವಾಗಿದೆ.

ತಡಮಾಡದೆ, ಭಕ್ತರು ಅವರಿಗೆ ಅನುಕೂಲವಾದ ರೀತಿಯಲ್ಲಿ ಆನಂದ ನಿಲಯ ಗ್ರಂಥವನ್ನು ಪಠಿಸಿರಿ, ಪಾರಾಯಣ ಮಾಡಿ, ಬೇರೆಯವರೂ ಪಠಿಸುವಂತೆ ಮಾಡಿ ಆನಂದನಿಲಯನ ಸಂಪೂರ್ಣವಾದ ಅನುಗ್ರಹವನ್ನು ಪಡೆಯುತ್ತ ಹೆಚ್ಚು ಹೆಚ್ಚು ಇಹಪರ ಸುಖವನ್ನು ಅನುಭವಿಸುತ್ತ ನಿಮ್ಮ ನಿಮ್ಮ ಜೀವನವನ್ನು ಆನಂದಮಯವಾಗಿಸಿಕೊಳ್ಳಿ.

**ಆನಂದ ನಿಲಯೇ ಶ್ರೀಮದ್ವಿಮಾನೇ ಸ್ವರ್ಣಭೂಷಿತೇ ।**
**ಸರ್ವ ಮಂಗಳ ಮಾಂಗಲ್ಯೇ ದಿವ್ಯತೇ ನಿತ್ಯಮಂಗಲಂ ॥**

ಇಂತಿ
ಲೇಖಕರು

# ಅನುಕ್ರಮಣಿಕೆ


| | | |
|---|---|---|
| 1. | ಆನಂದ ನಿಲಯಂ | 1 |
| 2. | ಸತ್ರಯಾಗಂ | 1 |
| 3. | ಆದಿವರಾಹಸ್ವಾಮಿಯ ಅವತಾರ | 3 |
| 4. | ಸ್ವಾಮಿ ಪುಷ್ಕರಿಣಿ | 8 |
| 5. | ಸ್ವಾಮಿಪುಷ್ಕರಣಿ ಮಹಿಮೆ | 9 |
| 6. | ಶಂಖಣ ಮಹಾರಾಜ | 9 |
| 7. | ಆತ್ಮಾರಾಮ | 12 |
| 8. | ಬ್ರಹ್ಮಹತ್ಯಾ ದೋಷ ನಿವಾರಣೆ | 16 |
| 9. | ಪರೀಕ್ಷಿತ ಮಹಾರಾಜಾ | 16 |
| 10. | ವೈದ್ಯನ ಪರಮಧರ್ಮ | 19 |
| 11. | ನರಕಭಯ ನಿವಾರಣೆ | 23 |
| 12. | ಧರ್ಮಗುಪ್ತನ ಚರಿತ್ರೆ | 24 |
| 13. | ಸುಮತಿ ಕಥೆ | 28 |
| 14. | ಸಮಸ್ತತೀರ್ಥ ಯಾತ್ರಾಫಲ | 31 |
| 15. | ಸರಸ್ವತೀದೇವಿ | 32 |
| 16. | ಸ್ವಾಮಿ ಪುಷ್ಕರಣಿಯಲ್ಲಿರುವ ಒಂಭತ್ತು ಪವಿತ್ರ ತೀರ್ಥಗಳು | 35 |
| 17. | ಸಪ್ತಗಿರಿ | 38 |
| 18. | ವಪಾಯಾಗಂ | 46 |
| 19. | ಕುಮಾರಧಾರಾತೀರ್ಥ | 49 |
| 20. | ಕಪಿಲತೀರ್ಥ | 55 |
| 21. | ಶಕ್ರತೀರ್ಥ | 59 |
| 22. | ವಿಶ್ವಕ್ಸೇನ ತೀರ್ಥಂ | 59 |
| 23. | ಪಂಚಾಯುಧ ತೀರ್ಥಗಳು | 59 |
| 24. | ಅನಲತೀರ್ಥ | 59 |

| | | |
|---|---|---|
| 25. | ಬ್ರಹ್ಮತೀರ್ಥ | 60 |
| 26. | ಸಪ್ತರ್ಷಿ ತೀರ್ಥ | 60 |
| 27. | ಪಾಂಡವ ತೀರ್ಥ | 60 |
| 28. | ಪಾಂಡವತೀರ್ಥ ಮಹಾತ್ಮೆ | 61 |
| 29. | ವೈಕುಂಠ ಗುಹೆ | 63 |
| 30. | ಇಂದ್ರಾದಿದೇವತೆಗಳಿಂದ ವಿಷ್ಣುವಿನ ಹುಡುಕಾಟ | 68 |
| 31. | ದಶರಥನ ವೆಂಕಟಾಚಲಯಾತ್ರೆ | 70 |
| 32. | ಬ್ರಹ್ಮೋತ್ಸವಗಳು | 73 |
| 33. | ಹುಣಸೆ ಮರದ ನೆರಳಿನಲ್ಲಿ ಹುತ್ತ | 76 |
| 34. | "ಯಾಗ" ಯಾರಿಗಾಗಿ | 79 |
| 35. | ಯಾರು ಶ್ರೇಷ್ಠರು? | 81 |
| 36. | ಸತ್ಯಲೋಕಕ್ಕೆ ಪಯಣ | 81 |
| 37. | ಕೈಲಾಸ ಸಂದರ್ಶನ | 82 |
| 38. | ಶ್ರೀವೈಕುಂಠ ಪ್ರವೇಶ | 83 |
| 39. | ಆದಿಲಕ್ಷ್ಮಿಯ ಕೋಪ | 87 |
| 40. | ವಿಷ್ಣು ದೇವನ ನಡೆ | 88 |
| 41. | ವಿಚಿತ್ರವಾದ ಗಿಡ! ಆಶ್ಚರ್ಯಕರವಾದ ಹುತ್ತ | 88 |
| 42. | ಗೋಪಾಲಿಕಾ! ಹಸು! ಕರು! | 90 |
| 43. | ಶ್ರೀನಿವಾಸನ ಕ್ಷೀರವಾಸ | 90 |
| 44. | ಚೋಳರಾಜನಿಗೆ ಶಾಪ | 91 |
| 45. | ವರಾಹಸ್ವಾಮಿ ಯಾರು? | 93 |
| 46. | ಈ ವಕುಳಾದೇವಿ ಯಾರು? | 94 |
| 47. | ಶ್ರೀನಿವಾಸನ ಬೇಟೆ | 95 |
| 48. | ಪ್ರೇಮಾನುರಾಗ | 96 |
| 49. | ವಕುಳಮಾತಾ ಪರಾಮರ್ಷ! | 98 |
| 50. | ವೇದವತಿ, ಮಾಯಾಸೀತ | 99 |

51. ವೇದಾವತಿ ಯಾರು? 101

52. ಹಿಂದಿನ ಜನ್ಮದಲ್ಲಿ ಆಕಾಶರಾಜ 103

53. ಮದುವೆಯ ರಾಯಭಾರ! 104

54. ಕಣಿ ಹೇಳುವವಳ (ಕೊರವಂಜಿ) ವೇಷ 106

55. ವಿವಾಹ ನಿಶ್ಚಯ 108

56. ಮುಕ್ಕೋಟಿ ದೇವತೆಗಳ ಆಗಮನ 109

57. ಪದ್ಮಾವತಿ ಶ್ರೀನಿವಾಸನ ಪರಿಣಯ 114

58. ತೀರ್ಥಯಾತ್ರೆ ಮಾಡಕೂಡದು 118

59. ಚೆರಿ ಅರ್ಧ 120

60. ತೊಂಡಮಾನನ ಶ್ರೀನಿವಾಸ ದರ್ಶನ 120

61. ಭಕ್ತಶಿಖಾಮಣಿ ರಂಗದಾಸ 123

62. ಆನಂದನಿಲಯ ಪ್ರವೇಶ 125

63. ಬ್ರಹ್ಮ ಅಖಂಡಂ 126

64. ಬ್ರಹ್ಮೋತ್ಸವಗಳು 127

65. ಸಿರಿಯನ್ನು ಕೊಡುವ ವೃಕ್ಷ (ಕಲ್ಪವೃಕ್ಷ) 128

66. ತೊಂಡಮಾನುವಿನ ಶರಣಾಗತಿ 133

67. ಶಿಲೆಯಾದ ಶ್ರೀನಿವಾಸ 134

68. ಸಹಸ್ರನಾಮಾರ್ಚನೆ 138

69. (ಮಣ್ಣು ನನ್ನ ಪ್ರೀತಿ!) ಭೂಮಿಯಲ್ಲಿ ಬೆಳೆದ ತುಳಸಿ ನನಗೆ ಪ್ರೀತಿ 140

70. ಭಕ್ತ ಕುಂಬಾರ ಕುಮ್ಮರದಾಸ 142

71. ಗೋವಿಂದಾ! ಗೋವಿಂದಾ!! ಗೋವಿಂದಾ!!! 147

72. "ಆನಂದನಿಲಯ" ಪೂಜಿಸುವ ವಿಧಾನ 148

73. ವೆಂಕಟಾಚಲಕ್ಷೇತ್ರ ನಿಯಮ 151

74. ಮಾಡಬೇಕಾದ ದಾನ, ಮತ್ತು ಅದರ ಫಲ 155

75. ಆನಂದಮಯ 167



## ಸಮರ್ಪಣೆ

ಯುಗಯುಗಗಳಿಂದ ಲಕ್ಷಾಂತರ ಜನರಿಗೆ ಸಾಮಾನ್ಯ ಜನರಿಂದ ಬ್ರಹ್ಮದೇವನ ವರೆಗೆ, ಪಾಮರರಿಂದ ಪರಮಯೋಗಿಗಳ ವರೆಗೆ ಎಲ್ಲರಿಗು, ಸ್ವಾಮಿಯ ದರ್ಶನ ಮಾಡಿ ಅನುಭವಿಸಿದ ದಿವ್ಯಾನುಭವವನ್ನು ನೀಡುತ್ತ ಆನಂದನಿಲಯ ವಿಮಾನಾಂತರ ಭಾಗದಲ್ಲಿ, ಸಾರ್ಥಕ ನಾಮದಿಂದ ಕೋರಿಕೆಗಳನ್ನು ಈಡೇರಿಸುವ, ನಿರಂತರ ಭಕ್ತರನ್ನು ಎದುರು ನೋಡುತ್ತ ನಿಂತಿರುವ ಆನಂದನಿಲಯನಿಗೆ

**ಆನಂದನಿಲಯೇ ಶ್ರೀಮದ್ವಿಮಾನ ಸ್ವರ್ಣಭೂಷಿತೇ ।**
**ಸರ್ವಮಂಗಳ ಮಾಂಗಲ್ಯೇ ದೀವ್ಯತೇ ನಿತ್ಯಮಂಗಳಂ ॥**

ಎನ್ನುತ್ತ ಮಂಗಳನೀರಾಜನವನ್ನು ಬೆಳಗುತ್ತ ಆ ದೇವದೇವನ ದಿವ್ಯ ಪಾದಪದ್ಮಗಳಿಗೆ ಈ "ಆನಂದನಿಲಯಂ" ಎನ್ನುವ ಅಕ್ಷರಸುಮವನ್ನು ನತಮಸ್ತಕನಾಗಿ ವಂದಿಸುತ್ತ ಸಮರ್ಪಿಸುತ್ತಿದ್ದೇನೆ.

**ಸಂಪೂರ್ಣ ಮಂಗಳ ಮಹಿಮನಿಗೆ**
**ಗೋವಿಂದ! ಗೋವಿಂದ! ಗೋವಿಂದ!**

# ಆನಂದ ನಿಲಯಂ

ತಿರುಮಲ ಕ್ಷೇತ್ರ ವಿಶ್ವವಿಖ್ಯಾತ ಪುಣ್ಯ ಕ್ಷೇತ್ರ. ಈ ದಿವ್ಯ ಸ್ಥಳದಲ್ಲಿ ವಿರಾಜಮಾನವಾಗಿದ್ದುಕೊಂಡು ಬೆಳಗುತ್ತಿರುವ ಸ್ವಾಮಿ ಶ್ರೀ ವೆಂಕಟೇಶ್ವರ. ಈ ಸ್ವಾಮಿಯ ದರ್ಶನಕ್ಕೆ ಜಗತ್ತಿನಾದ್ಯಂತ ಭಕ್ತರು ನಿರಂತರವಾಗಿ ಬರುತ್ತಿದ್ದಾರೆ. ಸುಮ್ಮನೆ ಬರುವುದಿಲ್ಲ. ಆ ಭಕ್ತಾದಿಗಳೆಲ್ಲ ಆ ಭಗವಂತನನ್ನು ಭಕ್ತಿ, ಅರ್ತಿ, ತಿಳುವಳಿಕೆ, ಆನಂದದಿಂದ ಸಪ್ತಗಿರಿ ವಾಸನನ್ನು ಏಡುಕೊಂಡಲವಾಡು, ತಿರುಮಲೇಶುಡು, ಶ್ರೀನಿವಾಸುಡು, ಹೆಜ್ಜೆ ಹೆಜ್ಜೆಗೆ, ಆಡುಗಡುಗು ದಂಡಾಲವಾಡು, ಆಪದಮೊಕ್ಕುಳವಾಡು, ವರಣರಾಯ, (ಕೋರಿನ ವರಾಲ) ವಡ್ಡಿಕಾಸುಲವಾಡು, ಹೀಗೆ ಭಾಷಾಭೇದವಿಲ್ಲದೆ ಹಲವು ಹೆಸರುಗಳಿಂದ ಕರೆಯುತ್ತಾರೆ. ಭಕ್ತರು ಹರಕೆಗಳನ್ನು ಸಲ್ಲಿಸುತ್ತಾರೆ. ಅನೇಕ ನೈವೇದ್ಯಗಳನ್ನು ಸಮರ್ಪಿಸುತ್ತಾರೆ. ಹಬ್ಬ, ಉತ್ಸವಗಳನ್ನೂ ಮಾಡುತ್ತಾರೆ.

ಹೀಗೆ ಅನೇಕ ರೀತಿಯಲ್ಲಿ ಕಾಯಾ, ವಾಚಾ, ಮನಸಾ ಆ ಸ್ವಾಮಿಯನ್ನು ಭಕ್ತಿಯಿಂದ ಪೂಜಿಸುವ ಭಕ್ತರನ್ನು, ಕ್ಷಣಮಾತ್ರದಲ್ಲಿ ಅವರ ಇಷ್ಟಾರ್ಥಗಳನ್ನು ಈಡೇರಿಸುತ್ತಿದ್ದಾನೆ. ಆ ತಿರುಮಲೇಶ ಕಾಲಿಲ್ಲದವರಿಗೆ ಕಾಲು, ಕಣ್ಣಿಲ್ಲದವರಿಗೆ ದೃಷ್ಟಿ, ತುತ್ತು ಅನ್ನಕ್ಕೂ ಕಷ್ಟಪಡುವ ಭಕ್ತರಿಗೆ ಅನ್ನಭಾಗ್ಯದ ಸಂಪತ್ತನ್ನೂ, ಮಾತುಬಾರದ ಮೂಕರಿಗೆ ಮಾತನಾಡುವಂತೆ ಮಾಡಿದ ಕರುಣಾಮೂರ್ತಿ ವೆಂಕಟೇಶ. ತನ್ನನ್ನು ನಂಬಿಬಂದ ಭಕ್ತರನ್ನು ಜಾತಿ–ಮತ, ಬಡವ–ಬಲ್ಲಿದ, ಭಾಷಾ ಭೇಧವಿಲ್ಲದೆ ಎಲ್ಲರಿಗು ಪಕ್ಷಪಾತವಿಲ್ಲದೆ ಸಲಹುತ್ತ ಬಂದಿದ್ದಾನೆ ಕರುಣಾಸಿಂಧು ಸಪ್ತಗಿರಿಯೊಡೆಯ. ಇಂತಹ ಭಕ್ತಪ್ರಿಯ ಭಗವಂತನಾದ, ಆ ಬೆಟ್ಟದೊಡೆಯನಿಗೆ ಜನ್ಮಕೊಟ್ಟ ಆ ಪುಣ್ಯನೆಲ ಯಾವುದು? ಅದು ಎಲ್ಲಿದೆ?

ಯಾವಾಗ ಹುಟ್ಟಿದ? ಆ ಸ್ವಾಮಿಯ ಇತಿಹಾಸವೇನು? ಸ್ವಾಮಿಯು ಬಂದು ನೆಲೆಸುವ ಮೊದಲು ಇಲ್ಲಿ ಯಾರಾದರೂ ಬಂದು ನೆಲೆಸಿದ್ದರಾ? ಇಂತಹ ಪ್ರಶ್ನೆಗಳಿಗೆ, ಮನಸ್ಸಿನ ಆಲೋಚನೆಗಳಿಗೆ ಈ "ಆನಂದನಿಲಯ" ಉತ್ತರವಾಗಿದೆ. ನೀವೂ ಓದಿ ನಿಮ್ಮ ಸ್ನೇಹಿತರೊಂದಿಗೆ ಓದಿ ಆನಂದಿಸಿ.

## ಸತ್ರಯಾಗಂ

ಒಂದಾನೊಂದು ಕಾಲದಲ್ಲಿ ನೈಮಿಷಾರಣ್ಯದಲ್ಲಿ ಶೌನಕಾದಿ ಮಹಾಮುನಿಗಳು ಸೇರಿದ್ದರು. ಪವಿತ್ರವಾದ ಪುಣ್ಯಭೂಮಿಯಲ್ಲಿ ಆ ಋಷಿಮುನಿಗಳೆಲ್ಲರೂ

ಲೋಕಕಲ್ಯಾಣಾರ್ಥವಾಗಿ, ಮಾನವರ ಸಕಲ ಬಾಧೆಗಳು ದೂರವಾಗಿ ಸುಖಶಾಂತಿ ನೆಲಸಲಿ ಎಂದು ಹನ್ನೆರಡು ವರ್ಷಗಳ ಕಾಲ ಸುದೀರ್ಘವಾದ 'ಸತ್ರಯಾಗಂ' ಎಂಬ ಮಹಾಯಜ್ಞವನ್ನು ಆರಂಭಿಸಿದರು. ಪ್ರತಿದಿನ ಯಜ್ಞದ ನಂತರ ವಿರಾಮದ ಸಮಯದಲ್ಲಿ ವೇದವ್ಯಾಸ ಮುನೀಂದ್ರರ ಪ್ರಿಯ ಶಿಷ್ಯರಾಗಿದ್ದ ಸೂತ ಮಹರ್ಷಿಗಳಿಂದ ಪುರಾಣ, ಪುಣ್ಯಕಥೆ, ತೀರ್ಥಮಹಿಮೆ, ಕ್ಷೇತ್ರ ಮಹಾತ್ಮೆ ಕೇಳುತ್ತಾ ಕಾಲ ಕಳೆಯುತ್ತಿದ್ದರು.

ಆ ಋಷಿಗಳು ಒಮ್ಮೆ ಸೂತಮುನಿಗಳಿಗೆ ಹೀಗೆ ಹೇಳಿದರು.

"ಸೂತ ಮಹಾಶಯ! ನೀನು ಹೇಳುತ್ತಿರುವ ಕಥೆಗಳು ಬಹಳ ಸ್ವಾರಸ್ಯಕರವಾಗಿವೆ. ಅವು ಮನ ಮುಟ್ಟುವಂತಿವೆ. ಈಗ ನಮಗೊಂದು ಸಂದೇಹ ಬಂದಿದೆ.

ಅದೇನೆಂದರೆ, ಈ ಜಗತ್ತಿನಲ್ಲಿ ನೂರಾ ಎಂಟು ದಿವ್ಯ ಸ್ಥಳಗಳಲ್ಲಿ ಶ್ರೀಮನ್ನಾರಾಯಣ ನನ್ನು ಅಕ್ಷರಶಃ ಪೂಜಿಸಲಾಗುತ್ತದೆ ಎಂದು ಹೇಳಲಾಗಿದೆ. ಆ ಎಲ್ಲಾ ದೈವಿಕ ಸ್ಥಳಗಳನ್ನು "ದಿವ್ಯ ತಿರುಪತಿ" ಎಂದು ಕರೆಯಲಾಗುತ್ತದೆ! ಅವುಗಳಲ್ಲಿ ಶ್ರೀರಂಗಂ, ಶ್ರೀಮುಷ್ಣ ತೋತಾದ್ರಿ, ಸಾಲಗ್ರಾಮಂ, ನೈಮಿಷಾರಣ್ಯಂ, ಬದರೀಕಾಶ್ರಮ, ಕಾಂಚೀಪುರಂ ಮತ್ತು ವೆಂಕಟಾಚಲಂ ಎಂಬ ಈ ಎಂಟು ಪುಣ್ಯಕ್ಷೇತ್ರಗಳಲ್ಲಿ ಶ್ರೀ ಮಹಾವಿಷ್ಣುವೇ ಅವತರಿಸಿ ಭಕ್ತರ ಇಷ್ಟಾರ್ಥಗಳನ್ನು ಪೂರೈಸುತ್ತಿದ್ದಾನೆ ಎಂಬುದಾಗಿಯೂ ತಿಳಿದುಬರುತ್ತದೆ! ಅಲ್ಲವೇ?

ಹಾಗಾದರೆ ಈ ಎಂಟು ದೈವಿಕ ಸ್ಥಳಗಳಲ್ಲಿ, ಭಗವಂತನಿಗೆ ಅತ್ಯಂತ ಪ್ರಿಯವಾದ ಸ್ಥಳ ಯಾವುದು? ಅದು ಎಲ್ಲಿದೆ? ಆ ಪುಣ್ಯಭೂಮಿಯ ಹಲವು ವೈಶಿಷ್ಟತೆಗಳು ಮತ್ತು ವಿಶೇಷವನ್ನು ತಿಳಿದುಕೊಳ್ಳಲು ನಮಗೆ ಬಹಳ ಆಸಕ್ತಿದಾಯಕವಾಗಿದೆ. ದಯವಿಟ್ಟು ಆ ದಿವ್ಯ ಸ್ಥಳದ ಹಿರಿಮೆಯನ್ನು ನಮಗೆ ವಿವರವಾಗಿ ತಿಳಿಸಿ" ಎಂದು ಕೇಳಿದರು.

ಅಲ್ಲಿ ಸೇರಿದ್ದ ಮುನಿಗಳು ಕೇಳಿದ ಪ್ರಶ್ನೆಗಳಿಂದ ಸೂತಮಹರ್ಷಿಗಳು ಬಹಳ ಸಂತೋಷಪಟ್ಟರು. ಅವರ ಕಣ್ಣುಗಳನ್ನು ಅರ್ಧಮುಚ್ಚಿ ಅನಿರ್ವಚನೀಯವಾದ ದಿವ್ಯಾನುಭವವನ್ನು ಹೊಂದಿ ನಂತರ ಚೇತರಿಸಿಕೊಂಡು ಹೀಗೆ ಹೇಳಿದರು,

"ತಪೋಧನರೇ! ನೀವೆಲ್ಲರೂ ಬಹಳ ಒಳ್ಳೆಯ ಪ್ರಶ್ನೆಗಳನ್ನು ಕೇಳಿದ್ದೀರಿ. ತಿಳಿದುಕೊಳ್ಳುವ ಕುತೂಹಲವಿರುವ, ನಿಜವಾದ ಅನುಮಾನಗಳನ್ನು ನೀವು

ಹುಟ್ಟುಹಾಕಿದ್ದೀರಿ. ಶ್ರೀಮಹಾ ವಿಷ್ಣುವಿಗೆ ವೈಕುಂಠದ ನಂತರ ಲೀಲಾಮಾನುಷನ ರೂಪದಲ್ಲಿ ಭೂಲೋಕದಲ್ಲಿ ವಿಹರಿಸಲು ಇಷ್ಟ ಪಡುವ ಕ್ಷೇತ್ರವೇ ವೆಂಕಟಾಚಲಂ. ಅತ್ಯಂತ ಆದ್ಯತೆಯ ಸ್ಥಳವಾಗಿದೆ. ಈ ಸ್ಥಳದ ಪ್ರಾಶಸ್ತ್ಯವು ಮಹಿಮೆಗಳು ಈಗಿನವೂ ಇಂದಿನವೂ ಅಲ್ಲ. ಶ್ವೇತವರಾಹ ಕಲ್ಪದಿಂದ ಇಂದಿಗೂ ಈ ಪುಣ್ಯಕ್ಷೇತ್ರದಲ್ಲಿ ಶ್ರೀಮಹಾವಿಷ್ಣುವು ಮಾನವ ಮೂರ್ತಿಯಾಗಿ ವಿಹರಿಸುತ್ತಿದ್ದಾನೆ. ಈ ಕಲಿಯುಗದಲ್ಲಿ ಆ ದೇವರು ಸಾಲಗ್ರಾಮ ಶಿಲಾಮೂರ್ತಿಯಾಗಿ ದೇವದೇವನಾದ "ವೆಂಕಟೇಶ್ವರ"ನೆಂಬ ಪ್ರಸಿದ್ಧ ನಾಮದಲ್ಲಿ ಕಾಣಿಸಿಕೊಂಡಿದ್ದಾನೆ. ದಿವ್ಯಮಂಗಳ ವಿಗ್ರಹನಾಗಿ ಅನುಪಮ ಸೌಂದರ್ಯದಿಂದ ಭಕ್ತರಿಗೆ ಕಾಣಿಸಿಕೊಂಡು ಅವರು ಕೇಳಿದ ಎಲ್ಲಾ ವರಗಳನ್ನು ಅನುಗ್ರಹಿಸುತ್ತಾ "ಕಲೌ ವೆಂಕಟನಾಯಕ" ಎಂದು ಪ್ರಸಿದ್ಧನಾಗಿದ್ದಾನೆ.

ಮಹಾತ್ಮರೇ, ಈ ಸ್ಥಳ ಮಹಾತ್ಮೆಯನ್ನು ಶ್ರೀ ಸ್ವಾಮಿಯಲೀಲೆಗಳನ್ನು ಬ್ರಹ್ಮ ಇಂದ್ರಾದಿದೇವತೆಗಳು, ಈಶಾನ್ಯಾದಿ ದಿಕ್ಪಾಲಕರು, ಸಹಸ್ರ ಹೆಡೆಗಳನ್ನು ಹೊಂದಿರುವ ಆದಿಶೇಷ ಮುಂತಾದವರು ಯಾರೇ ಆಗಿರಲಿ ಸಮಗ್ರವಾಗಿ, ಸಂಪೂರ್ಣವಾಗಿ ವರ್ಣಿಸಲು ಸಾಧ್ಯವಿಲ್ಲ ಅಲ್ಲವೇ? ಸರಿ! ಅವರೆಲ್ಲ ಸ್ವಲ್ಪ ಮಟ್ಟಿಗಾದರೂ ಅರ್ಥಮಾಡಿಕೊಂಡಿರುವುದು ಅನುಮಾನ! ಹೀಗಿರುವಾಗ ನಾನು ಯಾರು? ಕೇವಲ ಮನುಷ್ಯನಾದ ನಾನು ಎಷ್ಟರವನು? ಆದರೂ ನಮ್ಮ ಗುರುಗಳಾದ ವೇದವ್ಯಾಸ ಮುನೀಂದ್ರರ ಅನಿರ್ವಚನೀಯ ಕೃಪೆಯಿಂದ ನೀವು ಕೋರಿದ ಶ್ರೀ ವೆಂಕಟಾದ್ರಿಯ ಮಹಿಮೆಯನ್ನು, ಭಕ್ತಪ್ರಿಯನಾದ, ಕರುಣಾಮೂರ್ತಿ ಶ್ರೀ ವೆಂಕಟೇಶ್ವರ ಸ್ವಾಮಿಯ ಲೀಲೆಗಳನ್ನು, ತಿಳಿಸಲು ಯಥಾಶಕ್ತಿ ಪ್ರಯತ್ನಿಸುತ್ತೇನೆ. ನೀವೆಲ್ಲರೂ ಜಾಗರೂಕರಾಗಿ ಮತ್ತು ಬಹಳ ಶ್ರದ್ಧೆಯಿಂದ ಮತ್ತು ಭಕ್ತಿಯಿಂದ ಕೇಳುವವರಾಗಿ.

ಈ ಕಥೆಯನ್ನು ಹೇಳುತ್ತಿರುವ ನನಗೆ ಮತ್ತು ಕೇಳುತ್ತಿರುವ ನಿಮ್ಮೆಲ್ಲರಿಗೂ ಶುಭವಾಗಲಿ ಪ್ರತ್ಯಕ್ಷವಾಗಿ, ಸ್ವತಃ ತಿರುಮಲತಿರುಪತಿ ಯಾತ್ರೆಯನ್ನು ಮಾಡಿ ಶ್ರೀವೆಂಕಟೇಶ್ವರನ ದರ್ಶನ ಮಾಡಿದ ಪುಣ್ಯಪ್ರಾಪ್ತಿ ಉಂಟಾಗಿ ದಿವ್ಯ ಅನುಭವ ಆಗುತ್ತದೆ. ಹೀಗೆ ಸಪ್ತಗಿರಿ ಒಡೆಯನ ಸಂಪೂರ್ಣ ಅನುಗ್ರಹವನ್ನು ಪಡೆಯೋಣ!" ಎಂದು ಸೂತಮಹರ್ಷಿಗಳು ಮಾತು ಆರಂಭಿಸಿದರು.

## ಆದಿವರಾಹಸ್ವಾಮಿಯ ಅವತಾರ

ಪೂರ್ವಕಾಲದಲ್ಲಿ, ಕ್ಷೀರಸಾಗರ ಶೇಷಶಯನ ಭಗವಾನ್ ವಿಷ್ಣುವಿನ ನಾಭಿ, ಹೊಕ್ಕುಳಿನಿಂದ ದೇದೀಪ್ಯಮಾನವಾದ ಪ್ರಕಾಶಗಳೊಂದಿಗೆ ಹೊಳೆಯುವ ಚಿನ್ನದ

ಕಮಲವು ಹೊರಹೊಮ್ಮಿತು. ಆದುದರಿಂದ ಹರಿಯನ್ನು 'ಪದ್ಮನಾಭ' ಎಂದು ಕರೆಯುತ್ತಾರೆ.

ಆ ಚಿನ್ನದ ನಾಭಿಕಮಲದಿಂದ ಚತುರ್ಮುಖ ಬ್ರಹ್ಮದೇವನು ಜನಿಸಿದನು. ಭಗವಾನ್ ವಿಷ್ಣು, ತನ್ನ ಗರ್ಭದಲ್ಲಿನ ಕಮಲದಿಂದ ಮಗನಾಗಿ ಅವತರಿಸಿದ ಚತುರ್ಮುಖ ಬ್ರಹ್ಮನನ್ನು ನೋಡಿ ಎಲ್ಲ ಲೋಕಗಳನ್ನು ಸೃಷ್ಟಿಸುವಂತೆ ಆದೇಶಿಸಿದನು. ಬ್ರಹ್ಮದೇವನು ತನ್ನ ತಂದೆಯ ಆಣತಿಯಂತೆ ಎಲ್ಲ ಲೋಕಗಳನ್ನು ಸೃಷ್ಟಿಸಿ "ಸೃಷ್ಟಿಕರ್ತ"ನಾದನು. ವಿಷ್ಣುವು ಅವುಗಳನ್ನು ಚೆನ್ನಾಗಿ ಪೋಷಿಸಿ "ಸ್ಥಿತಿಕರ್ತ" ಎಂದೆನಿಸಿದನು. ಈ ರೀತಿ ದಿನಂಪ್ರತಿ ಕಾರ್ಯಗಳು ನಡೆಯುತ್ತಿರುವಾಗ ಯಾರಿಗಾದರೂ ಸಮಯ ನಿಲ್ಲಲ್ಲು ಸಾಧ್ಯವೇ? ಅಥವಾ ನಿಲ್ಲಿಸಲು ಸಾಧ್ಯವೇ. ಇದು ಯಾವ ಕಾರಣಕ್ಕೂ ಸಾಧ್ಯವಿಲ್ಲ ಎನ್ನುವುದು ನಿತ್ಯಸತ್ಯ.

ಮಾನವನ ಕಾಲಗಣನೆಯ ಪ್ರಕಾರ ಕೃತ,ತ್ರೇತಾ, ದ್ವಾಪರ, ಕಲಿಯುಗ ಎನ್ನುವ ನಾಲಕ್ಕು ಯುಗಗಳನ್ನು ಒಟ್ಟಾಗಿ "ಮಹಾಯುಗ" ಎಂದು ಕರೆಯಲಾಗುತ್ತದೆ. ಅಂತಹ ಸಾವಿರ ಸಾಮೂಹಿಕ ಮಹಾಯುಗಗಳು ಕಳೆದವು. ಆದರೆ ಬ್ರಹ್ಮದೇವರಿಗೆ ಕೇವಲ ಅರ್ಧದಿನ, ಅಂದರೆ ಹಗಲು. ನಂತರ, ಸಮಯದ ಮಿತಿಯ, ರಾತ್ರಿ ಪ್ರಾರಂಭವಾದಾಗ, ಬ್ರಹ್ಮದೇವರು ಸೃಷ್ಟಿ ಪ್ರಕ್ರಿಯೆಯಲ್ಲಿ ಒಂದುಕ್ಷಣವೂ ಕಾಲವ್ಯಯ ಮಾಡಲು ಆಗದೆ ಕಾರ್ಯನಿರತನಾಗಿದ್ದ ಕಾರಣ, ಸ್ವಲ್ಪಕಾಲ ವಿಶ್ರಾಂತಿ ತೆಗೆದುಕೊಳ್ಳಲು ನಿರ್ಧರಿಸಿದನು. ಅಷ್ಟರಲ್ಲಿ ಬಹಳ ದಣಿದಿದ್ದ ಬ್ರಹ್ಮದೇವನನ್ನು ಕ್ಷಣಮಾತ್ರದಲ್ಲಿ ಗಾಢವಾದ ನಿದ್ರೆ ಆವರಿಸಿತು. ಇದರಿಂದಾಗಿ ಲೋಕವೆಲ್ಲ ಅಲ್ಲೋಲಕಲ್ಲೋಲವಾಯಿತು. ಇಡೀ ಸೃಷ್ಟಿ ಕಾರ್ಯವು ಅಸ್ತವ್ಯಸ್ತವಾಯಿತು. ಸೂರ್ಯ, ಚಂದ್ರರ ಚಲನೆ ವ್ಯತಿರಿಕ್ತ್ಯಾ, ಮೋಡಗಳು ಎಡಬಿಡದೆ ಕುಂಭವೃಷ್ಟಿ, ಮಳೆಸುರಿಸಿದವು. ಇಡೀ ಜಗತ್ತು ನೀರಿನಿಂದ ಆವೃತವಾಯಿತು. ಜಲಪ್ರಳಯ. ಅಪರಿಮಿತವಾದ ಜಲಸಮುದ್ರದಲ್ಲಿ ಭೂಮಿಯು ಸಂಪೂರ್ಣವಾಗಿ ಮುಳುಗಿತು.

ಅದೇ ಸಮಯದಲ್ಲಿ ಹಿರಣ್ಯಾಕ್ಷನೆಂಬ ರಾಕ್ಷಸನು ಭೂಮಿಯನ್ನು (ಭೂದೇವಿಯನ್ನು) ಪಾತಾಳಲೋಕಕ್ಕೆ ಎಳೆದೊಯ್ದು ನಾನಾ ರೀತಿಯ ಹಿಂಸೆಕೊಟ್ಟು ಸಂಕಟವನ್ನು ಉಂಟು ಮಾಡಿದನು. ಹೀಗೆ ಯುಗ ಯುಗಗಳು ಕಳೆದ ನಂತರ ಬ್ರಹ್ಮದೇವರಿಗೆ ನಿದ್ರೆಯಿಂದ ಎಚ್ಚರವಾಯಿತು. ಏತನ್ಮಧ್ಯೆ ಮಹಾವಿಷ್ಣುವು ಶ್ವೇತವರಾಹರೂಪಿಯಾಗಿ ಅವತರಿಸಿದ. ಎದುರಾದ ಹಿರಣ್ಯಾಕ್ಷನನ್ನು ಸಂಹರಿಸಿ

ನೀರಿನಲ್ಲಿ ಮುಳುಗಿದ್ದ ಭೂಮಿಯನ್ನು ತನ್ನ ಕೋರೆಹಲ್ಲುಗಳಿಂದ ಮೇಲಕ್ಕೆ ಎತ್ತಿತರುತ್ತಾನೆ. ಈ ದೃಶ್ಯವನ್ನು ಕಂಡ ದೇವತೆಗಳು ದುಂದುಭಿ ಮೊಳಗಿಸಿದರು, ಸಂತೋಷದಿಂದ ಪುಷ್ಪವೃಷ್ಟಿ ಮಾಡಿದರು.

ಭಗವಾನ್ ವಿಷ್ಣುವು ಬ್ರಹ್ಮದೇವನನ್ನು ಕರೆದು ಎಂದಿನಂತೆಯೇ ಸೃಷ್ಟಿಕಾರ್ಯವನ್ನು ಮುಂದುವರಿಸಲು ಆದೇಶಿಸಿದನು. ಹಾಗೆಯೇ ಉಳಿದೆಲ್ಲ ದೇವತೆಗಳಿಗೂ ತಮ್ಮ ತಮ್ಮ ಕಾರ್ಯಸ್ಥಾನಕ್ಕೆ ತೆರಳುವಂತೆ ಹೇಳಿದನು. ನಂತರ ಆದಿಭೂವರಾಹಸ್ವಾಮಿಯು, ಭಕ್ತಿಯಿಂದ ತನ್ನ ಪಕ್ಕದಲ್ಲಿಯೇ ನಿಂತಿದ್ದ ಗರುತ್ಮಾಂತನಿಗೆ ಹೀಗೆ ಹೇಳಿದನು.

ಪಕ್ಷಿರಾಜ! ನಾನು ಪ್ರಳಯಾರ್ಣವದಿಂದ, ರಾಕ್ಷಸನ ಹಿಡಿತದಲ್ಲಿ ಸಿಲುಕಿದ್ದ ಭೂದೇವಿಯನ್ನು ಈ ಪರಿಯ ವರಾಹ ರೂಪದಿಂದ ಕಾಪಾಡಿದೆ, ಆದರೂ ಅವಳು ನನ್ನನ್ನು ತನ್ನ ಪತಿಯಾಗಿ ವರಿಸಿದ್ದಾಳೆ. ಹಾಗೆಯೇ ನಾನು ಅವಳನ್ನು ಅಂಗೀಕರಿಸಿದ್ದೀನಿ. ಈಗ ನಾನು ಈ ವಿಕೃತ ರೂಪದಲ್ಲಿ ವೈಕುಂಠಕ್ಕೆ ಹೋದರೆ ಲಕ್ಷ್ಮಿಯು ನನ್ನನ್ನು ನೋಡಿ ಭಯಪಡಬಹುದು, ಅಥವಾ ಗೇಲಿಮಾಡಿ ನಗಬಹುದು ಅಲ್ಲವೇ? ಅಲ್ಲದೆ ನಾನು ಸ್ವಲ್ಪದಿನ ಇಲ್ಲಿಯೇ ಇದ್ದು ಈ ಭೂಮಂಡಲವನ್ನು ಜಾಗರೂಕತೆಯಿಂದ ಕಾಪಾಡುವುದು ನನ್ನ ಕರ್ತವ್ಯವಾಗಿದೆ. ಆದ್ದರಿಂದ ನೀನು ವೈಕುಂಠಕ್ಕೆ ಹೋಗಿ ಅಲ್ಲಿಂದ ನಾನು ವಿಹರಿಸುತ್ತಿದ್ದ ಕ್ರೀಡಾದ್ರಿಯನ್ನು ತೆಗೆದುಕೊಂಡು ಬಾ ಎಂದು ಆಜ್ಞಾಪಿಸಿದನು. ನಂತರ ವೈಕುಂಠಾಧಿಪತಿಯು ತನ್ನ ಕಾರ್ಯಕ್ಷೇತ್ರಕ್ಕಾಗಿ, ಉತ್ತರ ದಿಕ್ಕಿನಲ್ಲಿ ಪವಿತ್ರವಾದ ಸುವರ್ಣಮುಖಿ ನದಿಯ ತಟದಲ್ಲಿ ಸೂಕ್ತವಾದ ದಿವ್ಯ ಸ್ಥಳವನ್ನು ಕ್ರೀಡಾದ್ರಿಯ ಸ್ಥಾಪನೆಗಾಗಿ ಆರಿಸಿಕೊಂಡನು.

ಸ್ವಾಮಿಯ ಆಣತಿಯಂತೆ ಪಕ್ಷಿರಾಜನು ವೈಕುಂಠಕ್ಕೆ ಹೋಗಿ ಮಾತೆ ಲಕ್ಷ್ಮೀದೇವಿಗೆ ನಡೆದ ವೃತ್ತಾಂತವನ್ನು ವಿವರವಾಗಿ ಹೇಳಿ, ಸ್ವಾಮಿಯ ಅಪ್ಪಣೆಯಂತೆ ತಾನು ಕ್ರೀಡಾಪರ್ವತವನ್ನು ತೆಗೆದುಕೊಂಡು ಹೋಗಲು ಬಂದಿರುವುದಾಗಿ ಹೇಳಿದನು. ಆಗ ಲಕ್ಷ್ಮೀದೇವಿಯು ತನ್ನ ಸ್ವಾಮಿ ಇರುವಕಡೆ ತಾನೂ ಇರುವುದಾಗಿ ಸಂಕಲ್ಪಿಸಿ ತನ್ನ ಮೂಲರೂಪವನ್ನು, ಅಂಶವನ್ನು ವೈಕುಂಠದಲ್ಲಿ ಇಟ್ಟು, ಒಂದೇ ಒಂದು ಕಲಾಂಶದೊಂದಿಗೆ ಭೂಲೋಕಕ್ಕೆ ಹೊರಟಳು. ಪಕ್ಷಿರಾಜನಾದ ಗರುಡ ಲಕ್ಷ್ಮೀದೇವಿ ಸಮೇತನಾಗಿ ಕ್ರೀಡಾದ್ರಿಯೊಂದಿಗೆ ಭೂಲೋಕವನ್ನು ತಲುಪಿದನು. ಸ್ವಾಮಿಯು ಸುವರ್ಣಮುಖಿ ನದಿಯ ಉತ್ತರ ಭಾಗದಲ್ಲಿ ತೋರಿಸಿದ ಪವಿತ್ರ ಸ್ಥಳದಲ್ಲಿ ಪಕ್ಷಿರಾಜನು ಕ್ರೀಡಾದ್ರಿಯನ್ನು ಪ್ರತಿಷ್ಠಾಪಿಸಿದನು.

ಶ್ವೇತವರಾಹಸ್ವಾಮಿಯು ಭೂದೇವಿ ಸಮೇತನಾಗಿ ಪಕ್ಷಿರಾಜ ಗರುಡನಿಂದ ಸ್ಥಾಪಿಸಲ್ಪಟ್ಟ ಕ್ರೀಡಾಪರ್ವತವನ್ನು ಹತ್ತಿ ಸಂತೋಷದಿಂದ ಸ್ವಾಮಿಪುಷ್ಕರಣಿಯ ಹತ್ತಿರಕ್ಕೆ ನಡೆದು ಪಶ್ಚಿಮ ದಂಡೆಯಲ್ಲಿ ನಿಂತನು. ತದನಂತರ ಬ್ರಹ್ಮಾದಿ ದೇವತೆಗಳೆಲ್ಲರೂ ಅಲ್ಲಿಗೆ ಆಗಮಿಸಿ, ಹಿರಣ್ಯಾಕ್ಷನನ್ನು ಸಂಹರಿಸಿ ಭೂದೇವಿಯನ್ನು ಪಾತಾಳಲೋಕದಿಂದ ಮೇಲಕ್ಕೆ ತಂದು ತೇಜಸ್ಸಿನಿಂದ ಕಂಗೊಳಿಸುತ್ತಿದ್ದ ಆದಿವರಾಹನ ರೂಪದಲ್ಲಿದ್ದ ಮಹಾವಿಷ್ಣುವನ್ನು ಕಂಡು ಕರಮುಗಿದು ಭಕ್ತಿಯಿಂದ ಸ್ತುತಿಸಿ ಹೀಗೆ ಪ್ರಾರ್ಥಿಸಿದರು.

ಸ್ವಾಮಿ! ಆದಿವರಾಹರೂಪಾವತಾರಿ!ಶ್ರೀಹರಿ! ನಿನಗೆ ಅನಂತಕೋಟಿ ನಮಸ್ಕಾರ. ಈ ನಿನ್ನ ರೂಪವು ಹೇಗೆ ಅದ್ಭುತವಾಗಿ ಆಶ್ಚರ್ಯಕರವಾಗಿದೆಯೋ ಹಾಗೆಯೇ ಭಯಾನಕವೂ ಆಗಿದೆ. ಸರ್ವಲೋಕದ ನಿನ್ನ ಭಕ್ತರಿಗಾಗಿ ಈ ಭಯಂಕರ ಸ್ವರೂಪವನ್ನು ಬಿಟ್ಟು, ಈ ದಿವ್ಯತಾಣದಲ್ಲಿ ನಿನ್ನೊಡನಿರುವ ಶ್ರೀಲಕ್ಷ್ಮಿ, ಭೂದೇವಿ ಸಮೇತನಾಗಿ ನಿನ್ನ ಪರಮ ಶಾಂತಸ್ವರೂಪದ ದರ್ಶನವನ್ನು ಕೊಡು ತಂದೆ, ಹಾಗೆಯೇ ಇನ್ನೂ ಅನಂತವಾದ ನಿನ್ನ ದಿವ್ಯಮಹಿಮಾ ಲೀಲೆಗಳನ್ನು ತೋರುತ್ತಿರು ಎಂದು ಮತ್ತೆ ಮತ್ತೆ ಪ್ರಾರ್ಥಿಸಿದರು.

ದೇವತೆಗಳ ಪ್ರಾರ್ಥನೆಯಿಂದ ಸಂತೋಷಗೊಂಡ ಆದಿವರಾಹಸ್ವಾಮಿ, ಅವರಿಗೆ ಹೀಗೆ ಹೇಳಿದನು:

"ಹಿರಣ್ಯಾಕ್ಷನನ್ನು ಸಂಹರಿಸಿದ ನಾನು ಒಂದು ಮಹತ್ವದ ಉದ್ದೇಶ್ಯದಿಂದ ಈಗಿನಿಂದಲೇ ಈ ಸ್ಥಳದಲ್ಲಿ ಸ್ಥಿರವಾಗಿ ನೆಲಸುವೆನು. ನೀವೆಲ್ಲರೂ ನನ್ನ ಸಂಕಲ್ಪವನ್ನು ಅನುಸರಿಸಿ ಪ್ರಾರ್ಥಿಸಿದ್ದೀರ. ನನ್ನ ವಕ್ಷಸ್ಥಳದಲ್ಲಿ ಲಕ್ಷ್ಮೀದೇವಿ ಒಡಗೂಡಿ ದಿವ್ಯದರ್ಶನವನ್ನು ಕೊಡುತ್ತ, ಭಕ್ತರ ಕೋರಿಕೆಗಳನ್ನು ನೆರವೇರಿಸುತ್ತ ಇರುತ್ತೇನೆ. ಹೀಗೆ ಹೇಳುತ್ತಾ, ಭಗವಂತನು ಸೌಮ್ಯ ರೂಪವನ್ನು ಧರಿಸಿ ಭೂದೇವಿ ಸಮೇತನಾಗಿ 'ಸ್ವಾಮಿಪುಷ್ಕರಿಣಿ' (ಕೊನೆಟಿಕಿ)ಯ ಪಶ್ಚಿಮ ತೀರದಲ್ಲಿರುವ ಸ್ವರ್ಣಮಯ ದಿವ್ಯಕಾಂತಿಯಿಂದ ಪ್ರಕಾಶಿಸುತ್ತ ದಿವ್ಯ ವಿಮಾನ (ಗೋಪುರ) ಹೊಂದಿರುವ ಭವನವನ್ನು ಪ್ರವೇಶಿಸಿದನು. ಅಂತಹ ವೈಭವದಿಂದ ಕೂಡಿದ ಮಂದಿರದಲ್ಲಿ ಶೋಭಾಯಮಾನವಾಗಿ ಪ್ರಕಾಶಿಸುತ್ತಿರುವ ವಿಮಾನ ಮಂದಿರದಲ್ಲಿರುವ ಶ್ರೀವರಾಹಸ್ವಾಮಿಯನ್ನು ದೇವತೆಗಳೆಲ್ಲರು ಪರಿಪರಿವಿಧದಲ್ಲಿ ವೈಭವದಿಂದ ಹಾಡಿ ಹೊಗಳಿ ಸ್ತುತಿಸಿದರು. ಎಲ್ಲರೂ ನೋಡುತ್ತಿರುವಾಗಲೇ ಆಕಾಶ ವಿಮಾನ

ಕಣ್ಮರೆಯಾಯಿತು. ಶ್ರೀ ಸ್ವಾಮಿಯ ದಿವ್ಯ ಮಹಿಮೆಗೆ ಬೆರಗಾದ ಬ್ರಹ್ಮದೇವರೆಲ್ಲರೂ ಸ್ವಾಮಿಯ ವಿಮಾನವು ಕಣ್ಮರೆಯಾಗುವ ಕಡೆಗೆ ಆಕಾಶವನ್ನು ಆಸಕ್ತಿಯಿಂದ ದಿಟ್ಟಿಸುತ್ತಾ ಅನೇಕ ರೀತಿಯಲ್ಲಿ ಸ್ತೋತ್ರಗಳನ್ನು ಪಠಿಸುತ್ತಾ ತಮ್ಮ ತಮ್ಮ ಲೋಕಗಳಿಗೆ ಹೋದರು. ಆಗ ವರಾಹಸ್ವಾಮಿಯು ಲಕ್ಷ್ಮೀದೇವಿಗೆ ಹೇಳಿದನು. "ಲಕ್ಷ್ಮೀ! ನೀನು ನನ್ನ ವಿಕಾರ ಸ್ವರೂಪವನ್ನು ನೋಡಿ ಹೆದರುತ್ತೀಯ ಎಂದುಕೊಂಡು ನಾನು ವೈಕುಂಠಕ್ಕೆ ಬರಲಿಲ್ಲ. ಆದರೆ ನೀನೇ ಸಪರಿವಾರ ಸಮೇತಳಾಗಿ ನನ್ನ ಬಳಿಗೆ ಬಂದೆ. ನನಗೆ ತುಂಬಾ ಸಂತೋಷವಾಗಿದೆ."

ಆಗ ಲಕ್ಷ್ಮೀದೇವಿಯು – "ಸ್ವಾಮಿ! ನೀನೆಲ್ಲಿ ಇದ್ದರೆ ಅಲ್ಲಿ ನಾನು. ನೀನಿಲ್ಲದೆ ನಾನಿಲ್ಲ. ನೀನಿದ್ದರೆ ಪ್ರಪಂಚ. ನಾನು ನಿನ್ನನ್ನು ಬಿಟ್ಟು ಕ್ಷಣಮಾತ್ರವೂ ಇರಲಾರೆ ಎನ್ನುವುದು ನಿನಗೂ ತಿಳಿದಿದೆ ಅಲ್ಲವೇ? ಆ ಕಾರಣದಿಂದಾಗಿ ನಿನ್ನ ಆಣತಿ ಇಲ್ಲದೆ ನಾನು ಬೇರೆಲ್ಲರೊಟ್ಟಿಗೆ ವೈಕುಂಠದಿಂದ ಭೂಲೋಕಕ್ಕೆ ಬಂದೆ. ಈ ನನ್ನ ತಪ್ಪನ್ನು ಕ್ಷಮಿಸು ಎಂದು ಕೇಳಿಕೊಳ್ಳುತ್ತಿದ್ದೇನೆ.

"ದೇವಿ! ದಾನವ ಸ್ವಭಾವದಿಂದ ವರ್ತಿಸುತ್ತಿರುವ ದುಷ್ಟರಿಂದ ಸತ್ಪುರುಷರನ್ನು ಕಾಪಾಡುವುದಕ್ಕಾಗಿ ನಾನು ಈ ಭೂಲೋಕದಲ್ಲಿ ನೆಲಸಬೇಕು. ವೈಕುಂಠಕ್ಕಿಂತಲೂ ಈ ಸ್ಥಳ ತುಂಬಾ ಪ್ರಶಸ್ತವಾಗಿದೆ ಎಂದೆನುತ ಸ್ವಾಮೀ ಆದಿಲಕ್ಷ್ಮೀಯನ್ನು ಪ್ರೀತಿಯಿಂದ ತನ್ನ ವಕ್ಷಸ್ಥಳದಲ್ಲಿ ಆನಿಸಿ ಬಿಗಿದಪ್ಪಿದನು.

ಅಂದಿನಿಂದ ಶ್ರೀಭೂದೇವಿಸಮೇತನಾದ ಶ್ವೇತವರಾಹಸ್ವಾಮಿಯು ಭಕ್ತರಿಗೆ ಬೇಕಾದಾಗ ಸೌಮ್ಯರೂಪದಲ್ಲಿ ದರ್ಶನಕೊಡುತ್ತಾ ಉಳಿದ ಸಮಯದಲ್ಲಿ ಲೀಲಾಮಾನುಷ ರೂಪ ಧಾರಿಯಾಗಿ ಆ ಕ್ರೀಡಾಪರ್ವತದಲ್ಲಿ ವಿಹರಿಸುತ್ತಿದ್ದಾನೆ ಎಂಬುದಾಗಿ ಸೂತಮಹರ್ಷಿಗಳು ಹೇಳುತ್ತಿರುವಾಗ ಶೌನಕಾದಿಗಳು ಮತ್ತೆ ತಮಗೆ ಬಂದಿರುವ ಸಂದೇಹವನ್ನು ಪರಿಹಾರ ಮಾಡಿಕೊಳ್ಳುವುದಕ್ಕಾಗಿ

"ಮುನೀಂದ್ರಾ! ಶ್ರೀಹರಿಯು ಕ್ರೀಡಾದ್ರಿಯ ಮೇಲಿರುವ ಸ್ವಾಮಿ ಪುಷ್ಕರಿಣಿಯ ಪಶ್ಚಿಮ ತೀರದಲ್ಲಿರುವ ದಿವ್ಯ ವಿಮಾನ ಮಂದಿರದಲ್ಲಿ ನೆಲಸಿದ್ದಾನೆ ಎಂದು ಹೇಳಿದಿರಲ್ಲವೇ! ಆ ಸ್ವಾಮಿ ಅಲ್ಲಿ ಏಕೆ ನಿಂತನು.? ಅದಕ್ಕೆ ಪ್ರತ್ಯೇಕವಾದ ಕಾರಣ ಏನಾದರೂ ಇದೆಯಾ? ಆ ಪುಷ್ಕರಿಣಿಯನ್ನು "ಸ್ವಾಮಿ ಪುಷ್ಕರಿಣಿ" ಎಂದು ಹೇಳುತ್ತಾರೆ. ಅದನ್ನು ಏಕೆ ಆ ಹೆಸರಿನಿಂದ ಕರೆಯಲಾಗುತ್ತದೆ? ಪುಷ್ಕರಿಣಿಯ ಮಹಿಮೆಗಳೇನು? ನಮಗೆ ಅವುಗಳನ್ನು ವಿವರವಾಗಿ ತಿಳಿಸಿ ಎಂದು ಪ್ರಾರ್ಥಿಸಿದರು.

ಸೂತರು, ಅವರಿಗೆ 'ಸರಿ' ಎಂದು ತಲೆದೂಗುತ್ತಾ ಹೀಗೆ ಪ್ರಾರಂಭ ಮಾಡಿದರು.

## ಸ್ವಾಮಿ ಪುಷ್ಕರಿಣಿ

ಶ್ರೀ ವೈಕುಂಠದಲ್ಲಿ ಕ್ರೀಡಾಚಲದಲ್ಲಿರುವ "ಕ್ರೀಡವಾಪಿ"ಯನ್ನು "ಸ್ವಾಮಿ ಪುಷ್ಕರಿಣಿ" ಎಂದು ಕರೆಯಲಾಗುತ್ತದೆ. ಶ್ರೀಮಹಾವಿಷ್ಣುವಿನ ಅಪ್ಪಣೆಯಂತೆ ಗರುತ್ಮಂತನು ಕ್ರೀಡಾವರಿಯನ್ನು ತಂದು ಇಲ್ಲಿ ಸ್ಥಾಪಿಸಿದನು.

ಈ ಪುಷ್ಕರಿಣಿಯಲ್ಲಿ ವೈಕುಂಠನಾಥನಾದ ಶ್ರೀಮಹಾವಿಷ್ಣುವು ಶ್ರೀದೇವಿ ಭೂದೇವಿಯ ರೊಂದಿಗೆ ಜಲಕ್ರೀಡೆಯನ್ನು ಆಡಿದ್ದರಿಂದ ಇದು ವಿರಜಾನದಿಯಂತೆ ಪವಿತ್ರವಾಗಿ ಹೊಮ್ಮಿಹರಿಯುತ್ತಿದೆ. ಆ ಕಾರಣದಿಂದ ಗಂಗಾನದಿಗಿಂತಲೂ ಮಹತ್ವವುಳ್ಳ, ಅತ್ಯಂತ ಪವಿತ್ರವಾದನದಿ ಎಂದು ಕರೆಯಲ್ಪಡುತ್ತದೆ. ಈ ಪುಷ್ಕರಿಣಿಯು ಪ್ರಪಂಚದ ಎಲ್ಲಾ ಪಾಪಗಳನ್ನು ತೊಡೆದುಹಾಕುವ ಮಹಿಮೆಯುಳ್ಳ, ಪ್ರಭಾವವನ್ನು ಹೊಂದಿರುವ ಅತ್ಯಂತ ಮಂಗಳಕರವಾದ ತೀರ್ಥವಾಗಿದೆ. ಈ ಪುಷ್ಕರಣಿಯ ದರ್ಶನ, ತೀರ್ಥಸೇವನೆ ಸ್ಮರಣೆ ಮಾತ್ರದಿಂದಲೇ ಎಲ್ಲ ದುರಿತಗಳು ನಿವಾರಣೆ ಆಗುವುದು ಸಮಸ್ತ ಸಿದ್ಧಿಯು ಸಿದ್ಧಿಸುತ್ತದೆ ಎಂದು ಮತ್ತೆ ಮತ್ತೆ ಹೇಳಿದರು.

**"ಸ್ವಾಮಿ ಪುಷ್ಕರಿಣಿ ಸ್ನಾನಂ ಸದ್ಗುರುಃ ಪಾದ ಸೇವನಂ ।**
**ಏಕಾದಶಿವ್ರತಂ ಚಾಪಿ ತ್ರಯಮತ್ಯಂತ ದುರ್ಲಭಮ್ ॥**
**ದುರ್ಲಭಂ ಮಾನುಷಂ ಜನ್ಮ ದುರ್ಲಭಂ ತತ್ರ ಜೀವನಮ್ ।**
**"ಸ್ವಾಮಿಪುಷ್ಕರಿಣಿ ಸ್ನಾನಂ ತ್ರಯಮತ್ಯಂತ ದುರ್ಲಭಮ್" ॥**

ಸ್ವಾಮಿಪುಷ್ಕರಿಣಿ ಸ್ನಾನ, ಸದ್ಗುರು ಪಾದಸೇವೆ ಮತ್ತು ಏಕಾದಶಿವ್ರತ ಇವು ಮೂರು ಮಾನವನ ಜೀವಿತದಲ್ಲಿ ಲಭ್ಯವಿದೆ, ಆದರೆ ಬಹಳ ದುರ್ಲಭ. ಹಾಗೆಯೇ ಮನುಷ್ಯನಾಗಿ ಹುಟ್ಟಿ, ಮನುಷ್ಯನಾಗಿ ಉಳಿದು, ಅವನ ಜೀವಿತದಲ್ಲಿ ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನ ಮಾಡುವುದು–ಆದರೆ ಈ ಮೂರು ಕಾರ್ಯ ಒಟ್ಟಾಗಿ ಮಾಡುವುದು ಬಹಳ ಕಷ್ಟಕರ ಎಂದು ವರಾಹಪುರಾಣದಲ್ಲಿ ಹೇಳಲಾಗಿದೆ. ವೆಂಕಟಾದ್ರಿಯ ಮೇಲಿರುವ ಈ ಪುಷ್ಕರಣಿಯು ಅನಂತ ಮಹಿಮೆಗಳಿಂದ ವಿರಾಜಮಾನವಾಗಿ ಪ್ರಪಂಚದಲ್ಲಿನ ಎಲ್ಲ ತೀರ್ಥಗಳಿಗೂ **"ಸ್ವಾಮೀ"** ಎಂದು, ಪ್ರಭುವಿನಂತೆ ಅಗ್ರಮಾನ್ಯವಾದ ಕಾರಣ **"ಸ್ವಾಮಿಪುಷ್ಕರಣಿ"** ಎಂಬ ಸಾರ್ಥಕ ನಾಮದಿಂದ ಪ್ರಸಿದ್ಧವಾಗಿದೆ.

**ಧನುರ್ಮಾಸೇ ಸಿತೇ ಪಕ್ಷೇ ದ್ವಾದಶ್ಯಮರುಣೋದಯೇ ।**
**ಆಯಾನ್ತಿ ಸರ್ವತೀರ್ಥಾನಿ ಸ್ವಾಮಿಪುಷ್ಕರಿಣೀ ಜಲೇ ।**
**ತತ್ರ ಸ್ನಾನಂ ಪ್ರಕುರ್ವನ್ತಿ ಯೇ ನರಃ ಪ್ರೀತ ಮಾನಸಃ ।**
**ತೇ ಸರ್ವ ಪಾಪೈರ್ಮುಚ್ಯನ್ತೇ ಸಗೋತ್ರ ಜಾತಿ ಬಾನ್ಧವಾಃ ॥**

ಇಂತಹ ಪರಮಪಾವನವಾದ ಈ ಪುಷ್ಕರಣಿಯಲ್ಲಿ ಪ್ರತಿ ವರ್ಷ ವೈಕುಂಠ ಏಕಾದಶಿಯ ಮರುದಿನ **"ಅರುಣೋದಯ"** ಸಮಯದಲ್ಲಿ ಮೂರುಲೋಕದಲ್ಲಿನ ಸಕಲ ತೀರ್ಥಗಳು ಬಂದು ಸೇರುವ ಈ ಪುಷ್ಕರಿಣಿಯೇ ಧನ್ಯ! ಅದಕ್ಕಾಗಿಯೇ ಆ ದಿನವನ್ನು "ಸ್ವಾಮಿ ಪುಷ್ಕರಿಣಿ ತೀರ್ಥ ಮುಕ್ಕೋಟಿ" ಎಂದು ಕರೆಯಲಾಗುತ್ತದೆ. ಹಾಗೆಯೇ ಧನುರ್ ಮಾಸದಲ್ಲಿ ಶುಕ್ಲಪಕ್ಷದ ದ್ವಾದಶಿಯಂದು ಅರುಣೋದಯದ ವೇಳೆ ಯಾರು ಭಕ್ತಿಯಿಂದ ಸ್ನಾನ ಮಾಡುವವರೋ ಅವರು, ಅವರ ದಾಯಾದಿ ಬಂಧು–ಬಳಗ, ಎಲ್ಲರೂ ಪಾಪಗಳಿಂದ ಮುಕ್ತಿ ಹೊಂದುತ್ತಾರೆ.

ಈ **"ಸ್ವಾಮಿಪುಷ್ಕರಣಿ"** ಪ್ರಭಾವವನ್ನು ಹೇಳಲು ಪದಗಳು ಸಾಲದು. ಆದರೂ ಈ ತೀರ್ಥಮಹಿಮೆಯನ್ನು ತಿಳಿಸುವ ಎರಡು–ಮೂರು ಕಥೆಯನ್ನು ಈ ಸಮಯದಲ್ಲಿ ನಾವು ತಿಳಿಯುವುದು ಅಗತ್ಯವಿದೆ. ಆದ್ದರಿಂದ ನೀವೆಲ್ಲರು ಗಮನವಿಟ್ಟು ಕೇಳಿ ಎಂದು ಸೂತಮಹರ್ಷಿಗಳು ಹೇಳಲು ಪ್ರಾರಂಭಿಸಿದರು.

## ಸ್ವಾಮಿಪುಷ್ಕರಣಿ ಮಹಿಮೆ

ಈ ಸ್ವಾಮಿ ಪುಷ್ಕರಿಣಿಯ ಪ್ರಭಾವವನ್ನು, ಮಹಿಮೆಯನ್ನು, ಕಥೆಯನ್ನು ವರ್ಣಿಸಲಸದಳ. ಪ್ರಮುಖವಾಗಿ ಇಲ್ಲಿ ಸ್ಮರಿಸಬೇಕಾದ್ದು ಶಂಖಣ ಮಹಾರಾಜನನ್ನು, ಅವನ ಕಥೆಯನ್ನು. ಆದರೆ, ಈ ಸಮಯದಲ್ಲಿ ಈ ತೀರ್ಥದ ಮಹಿಮೆಯನ್ನು ಹೇಳುವ ಎರಡು ಮೂರು ಕಥೆಗಳನ್ನು ನಾವು ತಿಳಿದುಕೊಳ್ಳಬೇಕಾದ ಅವಶ್ಯಕತೆಯಿದೆ. ಅವರ ಕಥೆಗಳನ್ನು ಮಾತುಗಳನ್ನು ಸಾವಧಾನವಾಗಿ ಕೇಳುವವರಾಗಿ**"** ಎಂದು ಸೂತ ಮಹರ್ಷಿ ಮಾತು ಮುಂದುವರಿಸಿದರು.

## ಶಂಖಣ ಮಹಾರಾಜ

ಪೂರ್ವಕಾಲದಲ್ಲಿ **"ಕಾಂಭೋಜ"** ದೇಶವನ್ನು **"ಶಂಖಣಮಹಾರಾಜ"**ನು ಪರಿಪಾಲಿಸುತ್ತಿದ್ದನು. ಪ್ರಜೆಗಳನ್ನು ತನ್ನ ಮಕ್ಕಳಂತೆ ಪ್ರೀತಿಯಿಂದ ಪಾಲಿಸುತ್ತಿದ್ದು ಎಲ್ಲರಿಗೂ ಪ್ರೀತಿಪಾತ್ರನಾದ ರಾಜನಾಗಿದ್ದನು. ಹೆಸರಿಗೆ ತಕ್ಕಂತೆ ರಾಜನು ಯಾರನ್ನು

ಸಂದೇಹದಿಂದ ನೋಡದೆ ಸುಲಭವಾಗಿ ನಂಬುತ್ತಿದ್ದನು. ಹೀಗಿರುವಾಗ ರಾಜ ಶತ್ರುಗಳ ಕೈಗೆ ಸುಲಭವಾಗಿ ರಾಜ್ಯಭಾರಮಾಡಲು ಕೊಟ್ಟು, ತಾನು ಪತ್ನಿಸಮೇತನಾಗಿ ಬಹಳ ಕಷ್ಟಪಡುತ್ತ ದಿಕ್ಕು ತೋರದೆ ಎಲ್ಲೆಂದರೆ ಅಲ್ಲಿ ತಿರುಗುತ್ತಿದ್ದನು.

ಕಷ್ಟಕಾಲವು ಪ್ರಾರಂಭವಾಗಿ, ಗ್ರಹಗತಿ ಅಂದರೆ ಗ್ರಹ ಸಂಚಾರ ಸರಿಯಿಲ್ಲದ ಕಾರಣ, ಪಾಪನಿವಾರಣೆಗಾಗಿ ಈ ಸಮಯದಲ್ಲಿ ಕ್ಷೇತ್ರದರ್ಶನ, ಮಹಾಪುರುಷರನ್ನು ಭೇಟಿಯಾಗಿ ಅವರ ಆಶೀರ್ವಾದ ಪಡೆಯುವುದು ಒಳ್ಳೆಯದು ಎಂದು ಹೇಳಿದ ಹಿರಿಯರ ಮಾತುಗಳಿಗೆ ಮನ್ನಣೆಕೊಟ್ಟು ರಾಜನು ಶ್ರೀರಂಗಂ, ರಾಮೇಶ್ವರಂ, ಮಧುರೈ, ಕಂಚಿ ಮೊದಲಾದ ಅನೇಕ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸುತ್ತಾ ಶ್ರೀವೆಂಕಟಾಚಲ ದಿವ್ಯಕ್ಷೇತ್ರಕ್ಕೆ ಬಂದನು. ಅಲ್ಲಿಯೇ ಹತ್ತಿರದಲ್ಲಿದ್ದ ಪಾವನ ಸುವರ್ಣಮುಖಿ ನದಿಯಲ್ಲಿ ಭಕ್ತಿ ಶ್ರದ್ಧೆಯಿಂದ ಸಂಕಲ್ಪಮಾಡಿ ತನ್ನ ಪತ್ನಿಯೊಡಗೂಡಿ ಸ್ನಾನ ಮಾಡಿದನು.

ಹಾಗೆಯೇ ಸಮೀಪದಲ್ಲಿ ಶ್ರೀಮಹಾಲಕ್ಷೀದೇವಿ ಬಂಗಾರದ ಸಹಸ್ರದಳ ಪದ್ಮದಿಂದ "ಪದ್ಮಾವತಿ" ಯಾಗಿ ಆವಿರ್ಭವಿಸಿದ "ಪದ್ಮಸರೋವರ" ವಿದೆ ಎಂಬುದನ್ನು ಕೇಳಿ ತಿಳಿದು ಅಲ್ಲಿಗೆ ಹೋಗಿ ಸ್ನಾನ ಮಾಡಿದರು. ತಾಯಿ ಪದ್ಮಾವತಿಯನ್ನು ಭಕ್ತಿಯಿಂದ ಧ್ಯಾನಿಸುತ್ತ ಸ್ವಲ್ಪಹೊತ್ತು ವಿಶ್ರಾಂತಿಗಾಗಿ ಮಲಗಿದರು. ತುಂಬಾ ಆಯಾಸವಾಗಿದ್ದ ಕಾರಣ ಬೇಗನೆ ಸುಖನಿದ್ರೆ ಆವರಿಸಿತು. ರಾಜನು ಮತ್ತೆ ಮತ್ತೆ ಒಂದು ಸುಂದರವಾದ ಕನಸು ಕಂಡನು. "ತನ್ನನ್ನು ಯಾರೋ ಕರೆದಂತೆ, ಅವರನ್ನು ಹಿಂಬಾಲಿಸಿಕೊಂಡು ಹೋಗಿ ವೆಂಕಟಾಚಲ ಕ್ಷೇತ್ರವನ್ನು ಹತ್ತಿ, ಆ ಕ್ಷೇತ್ರದ ಮೇಲೆ ಇರುವ ಪವಿತ್ರವಾದ "ಸ್ವಾಮಿಪುಷ್ಕರಣಿ"ಯನ್ನು ತೋರಿಸಿದರು. ರಾಜನು ಈ ಪುಷ್ಕರಣಿಯಲ್ಲಿ ಸ್ನಾನಮಾಡಿದರೆ ಎಲ್ಲಕಷ್ಟಗಳು ದೂರವಾ ಗುತ್ತದೆ, ದುಷ್ಟಶಕ್ತಿಗಳೆಲ್ಲವು ಮಾಯವಾಗುತ್ತದೆ, ಐಶ್ವರ್ಯ ಸಮೃದ್ಧಿ ಆಗುತ್ತದೆ, ಶುಭಪ್ರದವಾದ ಕಲ್ಯಾಣ ಪರಂಪರೆ ವೃದ್ಧಿ ಆಗುತ್ತದೆ, ಅಲ್ಲದೆ ಕೈಬಿಟ್ಟು ಹೋಗಿರುವ ತನ್ನ ರಾಜ್ಯವು ಮರಳಿ ತನಗೆ ದೊರೆಯುತ್ತದೆ ಸಿದ್ಧಿಸುತ್ತದೆ ಎಂದು ಹೇಳಿದಂತಾಗಿ ವಿಚಿತ್ರವಾದ ದಿವ್ಯಾನುಭವವನ್ನು ಹೊಂದಿದವನಾಗಿ" ರಾಜನು ನಿದ್ರೆಯಿಂದ ಏಳುವಂತೆ ಮಾಡಿತು.

ಕನಸಿನಲ್ಲಿ ತನಗಾದ ಆ ವಿಚಿತ್ರ ಅನುಭವಕ್ಕೆ ಆಶ್ಚರ್ಯಪಟ್ಟು ಅದ್ಭುತವಾದ, ಅವ್ಯಕ್ತ ಆನಂದವನ್ನು ಅನುಭವಿಸುತ್ತ ಶಂಖಣ ರಾಜನು ತನ್ನ ಪತ್ನಿಯೊಡಗೂಡಿ ವೆಂಕಟಾಚಲ ಕ್ಷೇತ್ರಕ್ಕೆ ಭಕ್ತಿಯಿಂದ ತೆರಳಿದನು. ಪವಿತ್ರವಾದ ವಾತಾವರಣ, ಪ್ರಕೃತಿ

ಸೌಂದರ್ಯ, ಆಧ್ಯಾತ್ಮಿಕ ವಾತಾವರಣವನ್ನು ಕಂಡು ಆಶ್ಚರ್ಯ ಚಕಿತನಾಗಿ ಅಲ್ಲಿದ್ದ ಪವಿತ್ರವಾದ "ಸ್ವಾಮಿಪುಷ್ಕರಣಿ"ಯಲ್ಲಿ ಸ್ನಾನಮಾಡಿ ಅನುದಿನ ಸ್ವಾಮಿಯನ್ನು ಧ್ಯಾನಮಾಡುತ್ತ, ಮನದಲ್ಲಿಯೇ ತಪಸ್ಸು ಮಾಡುತ್ತಿದ್ದನು. ಹೀಗೆಯೇ ಸುಮಾರು ಆರು ವರ್ಷಗಳಕಾಲ ಅಲ್ಲಿಯೇ ನೆಲೆಸಿದ್ದನು.

ಅನಂತರ ಒಂದು ದಿನ ಪುಷ್ಕರಣಿಯ ಮಧ್ಯದಿಂದ ಅದ್ಭುತವಾದ ಕಣ್ಣುಕೋರೈಸುವ ತೇಜಸ್ಸಿನಿಂದ ಪ್ರಕಾಶಮಾನವಾಗಿ ಹೊಳೆಯುವ ಒಂದು ಬಂಗಾರದ ವಿಮಾನ ಆವಿ ರ್ಭವಿಸಿತು. ಆ ಬಂಗಾರದ ವಿಮಾನದಲ್ಲಿ ಶ್ರೀದೇವಿ, ಭೂದೇವಿ ಸಮೇತನಾಗಿ ಶ್ರೀಹರಿಯು ದಿವ್ಯವಾದ ಆಭರಣಗಳಿಂದ, ಸುಗಂಧಪೂರಿತ, ಸುಮನೋಹರವಾದ ಪುಷ್ಪಮಾಲೆಯಿಂದ ಅಲಂಕೃತನಾಗಿ ದೇದೀಪ್ಯಮಾನವಾಗಿ ಬೆಳಗುವ ಸಾವಿರಾರು ದೀಪಗಳು ಒಮ್ಮೆಗೇ ಪ್ರಕಾಶಿಸುವಂತೆ ಸ್ವಾಮಿಯು ಕಾಣಿಸಿಕೊಂಡನು. ಈ ಅಭೂತಪೂರ್ವ ದೃಶ್ಯದಿಂದ ವಿಸ್ಮಿತರಾದ ಬ್ರಹ್ಮಾದಿದೇವತೆಗಳು ಭಗವಂತನ ಮೇಲೆ ಪುಷ್ಪವೃಷ್ಟಿ ಮಾಡಿದರು. ಎಲ್ಲರೂ ಅನೇಕರೀತಿಯಲ್ಲಿ ಭಗವಂತನನ್ನು ತಮ್ಮ ತಮ್ಮ ಇಷ್ಟದಂತೆ ಪ್ರಾರ್ಥಿಸಿದರು.

ಶಂಖಣ ಮಹಾರಾಜನೂ ದೇವತೆಗಳೆಲ್ಲರಿಗೂ, ದೇವ ದೇವನಾದ ಶ್ರೀಮಹಾವಿಷ್ಣುವನ್ನು ಪತ್ನಿಸಮೇತನಾಗಿ ಮೈಮನತುಂಬಿ ಭಕ್ತಿಯಿಂದ ಸ್ತುತಿಸಿದನು. ನಂತರ ಸಾಷ್ಟಾಂಗ ಪ್ರಣಾಮವನ್ನು ಮಾಡಿದನು. ಭಕ್ತಿಯಿಂದ ಮನಸಾರ ಸುಮಾಂಜಲಿಯನ್ನು ಅರ್ಪಿಸಿ ಪೂಜೆಸಲ್ಲಿಸಿದನು. ಆ ಚಕ್ರವರ್ತಿಯ ಭಕ್ತಿಯಿಂದ ಸಂತುಷ್ಟನಾದ ಶ್ರೀಹರಿಯು ಹೀಗೆ ಹೇಳಿದನು.

ರಾಜನೇ! ಈಗ ನಿನಗಾಗಿ ನಾನು ಪ್ರತ್ಯಕ್ಷನಾಗಿದ್ದೇನೆ. ಮೊದಲು ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನ ಮಾಡಿದ್ದರಿಂದ ನಿನ್ನ ಪಾಪವೆಲ್ಲವೂ ನಶಿಸಿದೆ. ನನ್ನ ದರ್ಶನದಿಂದ ಈಗ ಪುಟಕ್ಕಿಟ್ಟ ಚಿನ್ನದಂತೆ ನಿನ್ನ ಪಾಪವೆಲ್ಲವೂ ಸಂಪೂರ್ಣವಾಗಿ ಇಲ್ಲವಾಗಿ ನೀನು ಪುನೀತನಾಗಿರುವೆ. ನಿನ್ನ ಕಳೆದು ಹೋದ ರಾಜ್ಯವು ಅತಿಶೀಘ್ರವಾಗಿ ನಿನಗೆ ಮರಳಿ ದೊರೆಯುತ್ತದೆ. ಬಹುಕಾಲ ರಾಜಭೋಗಗಳನ್ನು ಅನುಭವಿಸುತ್ತ ರಾಜ್ಯಭಾರ ಮಾಡುತ್ತೀಯ. ಇಷ್ಟುಮಾತ್ರವಲ್ಲದೆ ಕೊನೆಗೆ ಪುನರ್ಜನ್ಮವಿಲ್ಲದ ಕೈವಲ್ಯಪದವನ್ನು ಹೊಂದುವೆ ಎಂದು ಹೇಳುತ್ತ ಅನೇಕ ವರಗಳನ್ನು ಕೊಟ್ಟು ಅಂತರ್ಧಾನನಾದನು.

ಶ್ರೀಸ್ವಾಮಿಯ ದಿವ್ಯವಾದ ಮಾತುಗಳು, ಅಮೃತದರ್ಶನದಿಂದ ಆನಂದ ಪರವಶನಾದ ಶಂಖಣ ಮಹಾರಾಜನು ಮತ್ತೆ ಮತ್ತೆ ಆ ಸ್ವಾಮಿಯ ದಿವ್ಯಮಂಗಳ

ಸ್ವರೂಪವನ್ನು ಸ್ಮರಿಸುತ್ತ, ಸ್ವಾಮಿಪುಷ್ಕರಣಿಗೆ ಭಕ್ತಿಯಿಂದ ನಮಸ್ಕಾರ ಮಾಡಿ ತನ್ನ ರಾಜ್ಯಕ್ಕೆ ಹಿಂದಿರುಗಿದನು. ಭಗವಂತನ ಕೃಪೆಯಿಂದ ಮಹಾರಾಜ ಶಂಖಣನು ತನ್ನ ಶತ್ರುಗಳನ್ನು ಅನಾಯಾಸವಾಗಿ ಸೋಲಿಸಿದನು. ಪ್ರಜೆಗಳ ಆದರಾಭಿಮಾನದಿಂದ ಮತ್ತೆ ಸಿಂಹಾಸನವನ್ನು ಏರಿದನು. ಪ್ರಜೆಗಳ ಪ್ರೀತಿಪಾತ್ರ ರಾಜನಾಗಿ ಸುಭಿಕ್ಷವಾದ ರಾಜ್ಯಭಾರ ಮಾಡಿದನು. ಅಂತಿಮವಾಗಿ ಮೋಕ್ಷವನ್ನು ಪಡೆದನು. ಎಂದು ಹೇಳುತ್ತ ಇದಕ್ಕೆಲ್ಲ ಮುಖ್ಯಕಾರಣ ಸ್ವಾಮಿಪುಷ್ಕರಣಿ ಸ್ನಾನ. ಸ್ವಾಮಿಪುಷ್ಕರಣಿಯ ಮಹಿಮೆಯನ್ನು ತಿಳಿಯುವ ಇನ್ನೊಂದು ವೃತ್ತಾಂತವನ್ನು ಕೇಳಿರಿ ಎಂದು ಸೂತಮಹರ್ಷಿಗಳು ತಮ್ಮ ಮಾತನ್ನು ಮುಂದುವರಿಸಿದರು.

## ಆತ್ಮಾರಾಮ

ಬಹಳ ವರ್ಷಗಳ ಹಿಂದೆ ಮಧ್ಯದೇಶದಲ್ಲಿ ಸದಾಚಾರ ಸಂಪನ್ನನಾದ "ಆತ್ಮಾರಾಮ" ನೆಂಬ ಬ್ರಾಹ್ಮಣನು ಇದ್ದನು. ಆ ಬ್ರಾಹ್ಮಣನು ನಿತ್ಯವೂ ನಿರಂತರವಾಗಿ ಭಕ್ತಿ, ಗೌರವಗಳೊಂದಿಗೆ ಅತಿಥಿ ಅಭ್ಯಾಗತರನ್ನು ಸಂತೋಷದಿಂದ ತಪಸ್ಸಿನಂತೆ ಸತ್ಕರಿಸುತ್ತಿದ್ದನು. ದಿನನಿತ್ಯದ ಅನ್ನದಾನದೊಂದಿಗೆ ಆಧ್ಯಾತ್ಮಿಕ ಕೆಲಸ ಕಾರ್ಯಗಳನ್ನು ಮಾಡುತ್ತ ಉತ್ತಮ ಗೃಹಸ್ಥನಾಗಿ ಜೀವನ ನಡೆಸುತ್ತಿದ್ದನು. ಆ ಬ್ರಾಹ್ಮಣ ತನ್ನ ಉದಾರ ಮನಸ್ಸಿನಿಂದ ಮಾಡಿದ ದಾನಧರ್ಮದಿಂದಾಗಿ ಹಿರಿಯರು ಮಾಡಿಟ್ಟ ಆಸ್ತಿ ಎಲ್ಲವು ಕರ್ಪೂರ ಕರಗುವಂತೆ ಕರಗಿ ಹೋಯಿತು. ಕೆಲವು ಕಾಲದ ನಂತರ ದಟ್ಟದರಿದ್ರನಾದನು ಜೊತೆಗೆ ಕಷ್ಟಗಳಿಂದ ನರಳುವಂತೆ ಆಯಿತು. ಅಷ್ಟೇಅಲ್ಲ, ತಾನು ಇದುವರೆಗೂ ಬಾಳ್ವೆನಡೆಸಿದ ಊರನ್ನು, ದೇಶವನ್ನು ತೊರೆದು ದಿಕ್ಕುದೆಸೆಯಿಲ್ಲದೆ ಸಂಚರಿಸುತ್ತಿದ್ದನು.

ಹೀಗೆ ಗೊತ್ತು ಗುರಿಯಿಲ್ಲದೆ ತಿರುಗುತ್ತ ತಿರುಗುತ್ತ ವೆಂಕಟಾಚಲ ಕ್ಷೇತ್ರ, ಆನಂದ ನಿಲಯಕ್ಕೆ ಸಮೀಪದಲ್ಲಿದ್ದ "ಕಪಿಲತೀರ್ಥ"ದ ಬಳಿಗೆ ಬಂದು ಸೇರಿದನು. ಆ ಪವಿತ್ರವಾದ ತೀರ್ಥದಲ್ಲಿ ಸ್ನಾನಮಾಡಿ ಭಕ್ತಿಯಿಂದ ಸ್ವಾಮಿ "ಕಪಿಲೇಶ್ವರ"ನ ದರ್ಶನ ಮಾಡಿದನು. ನಂತರ ಸ್ವಾಮಿವೆಂಕಟೇಶ್ವರನ ದರ್ಶನ ಮಾಡಲು ಸಪ್ತಗಿರಿ ಬೆಟ್ಟವನ್ನು ಹತ್ತುತ್ತಿರುವಾಗ "ಆತ್ಮಾರಾಮ" ಒಂದು ಗುಹೆಯನ್ನು ಕಂಡನು. ಆ ಗುಹೆಯಲ್ಲಿ "ಸನತ್ಕುಮಾರ" ನೆಂಬ ಯೋಗಿಯು ತಪಸ್ಸು ಮಾಡುತ್ತಿರುವುದನ್ನು ಕಂಡು ಭಕ್ತಿಯಿಂದ ನಮಸ್ಕರಿಸಿ ಪ್ರಾರ್ಥಿಸುತ್ತ, ತನ್ನ ಕಥೆಯನ್ನು ಹೇಳಿ ತನ್ನ ಕಷ್ಟ ನಿವಾರಣೆ ಆಗಲು ಮಾರ್ಗವನ್ನು ಹೇಳಿ ಎಂದು ವಿನಂತಿಸಿಕೊಂಡನು.

ಆಗ ಸನತ್ಕುಮಾರ ಮುನಿಯು ಆ ಬ್ರಾಹ್ಮಣನ ದೀನಸ್ಥಿತಿಯನ್ನು ತನ್ನ ದಿವ್ಯದೃಷ್ಟಿಯಲ್ಲಿ ಕಂಡು "ಓ ಬ್ರಾಹ್ಮಣನೇ ನೀನು ನಿನ್ನ ಹಿಂದಿನ ಜನ್ಮದಲ್ಲಿ ಅನೇಕ

ಪಾಪಗಳನ್ನು ಮಾಡಿದ್ದೀಯ. ಆ ಕಾರಣದಿಂದಾಗಿ ಕಷ್ಟವನ್ನು ಅನುಭವಿಸುವಂತೆ ಆಯಿತು. ಈಗ ನೀನು ಈ ಕಪಿಲತೀರ್ಥದಲ್ಲಿ ಸ್ನಾನಮಾಡಿದ್ದರಿಂದ ನಿನ್ನ ಪಾಪವು ನಶಿಸುವಂತೆ ಆಯಿತು. ಈಗ ನಿನ್ನ ಸಕಲ ಸಂಪತ್ತನ್ನು ಮತ್ತೆ ಪಡೆಯಬೇಕಾದರೆ ಶ್ರೀಲಕ್ಷ್ಮೀದೇವಿಯ ಅನುಗ್ರಹ ಅವಶ್ಯಕ. ಪ್ರಸ್ತುತ ಆ ಮಹಾಲಕ್ಷ್ಮೀದೇವಿಯು, ವೆಂಕಟಾದ್ರಿ ಕ್ಷೇತ್ರದಲ್ಲಿ ಲೀಲಾಮಾನುಷ ರೂಪನಾಗಿ ವಿಹರಿಸುತ್ತಿರುವ ವೈಕುಂಠಾಧಿಪತಿ ಶ್ರೀಮನ್ನಾರಾಯಣನ ವಕ್ಷಸ್ಥಳದಲ್ಲಿ ತಂತ್ರರೂಪದಲ್ಲಿರುವ **"ವ್ಯೂಹಾಲಕ್ಷ್ಮಿ"** ಯಾಗಿ ನೆಲಸಿದ್ದಾಳೆ. ವೆಂಕಟಾಚಲ ಕ್ಷೇತ್ರದಲ್ಲಿ ಇರುವ **"ಸ್ವಾಮಿಪುಷ್ಕರಣಿ"** ಯಲ್ಲಿ ಸ್ನಾನಮಾಡಿ ಆ ಜಗಜ್ಜನನಿಯನ್ನು ಪೂಜಿಸಿದರೆ ಆ ತಾಯಿಯ ಕರುಣಾದೃಷ್ಟಿ ನಿನ್ನ ಮೇಲೆ ಬೀಳುತ್ತದೆ. ಆಗ ನೀನು ಕಳೆದುಕೊಂಡಿರುವ ಸಂಪತ್ತೆಲ್ಲವೂ ನಿನಗೆ ಮತ್ತೆ ದೊರೆಯುತ್ತದೆ ಎಂಬುದಾಗಿ ಹೇಳಿ ಒಂದು ಮಹಾಮಂತ್ರವನ್ನು ಉಪದೇಶಿಸಿದರು.

**ದಯಾಲೋಲಾ ತರಂಗಾಕ್ಷೀ ಪೂರ್ಣಚಂದ್ರ ನಿಭಾನನಾ ।**
**ಜನನೀ ಸರ್ವಲೋಕಾನಾಂ ಮಹಾಲಕ್ಷ್ಮೀಃ ಹರಿಪ್ರಿಯಾ ॥**
**ಸರ್ವಪಾಪಹರಾ ಸೈವ ಪ್ರಾರಬ್ಧಸ್ಯಾಪಿ ಕರ್ಮಣಃ ।**
**ಸಂಹೃತೌ ತು ಕ್ಷಮಾಸೈವ ಸರ್ವ ಸಂಪತ್ಪ್ರದಾಯಿನೀ ॥**
**ತಸ್ಯಾಃ ವ್ಯೂಹಾ ಪ್ರಭೇದಾಸ್ತು ಲಕ್ಷ್ಮೀಃ ಕೀರ್ತಿರ್ಜಯೇತಿ ಚ ।**
**ತತ್ರ ಯಾ ವ್ಯೂಹಾಲಕ್ಷ್ಮೀಃ ಸ ಮುಗ್ಧಾ ಕಾರುಣ್ಯ ವಿಗ್ರಹಾ ॥**
**ಅನಾಯಾಸೇನ ಸಲಕ್ಷ್ಮೀಃ ಸರ್ವಪಾಪ ಪ್ರಣಾಶಿನೀ ।**
**ಸರ್ವೈಶ್ವರ್ಯಪ್ರದಾ ನಿತ್ಯಂ ತಸ್ಯಾಃ ಮಂತ್ರಮಿಮಂ ಶೃಣು ॥**
**ವೇದಾದಿಮಾಯೈ ಮಾತ್ರೇ ಚ ಲಕ್ಷ್ಮ್ಯೈ ನತಿಪದಂ ವದೇತ್ ।**
**ಪರಮೇತಿ ಪದಂ ಚೋಕ್ತ್ವಾ ಲಕ್ಷ್ಮ್ಯೈ ಇತಿ ಪದಂ ತತಃ ॥**
**ವಿಷ್ಣು ವಕ್ಷಃಸ್ಥಿತಾಯೈ ಸ್ಯಾತ್ ಮಾಯಾ ಶ್ರೀತಾರಿಕಾ ತತಃ ।**
**ವಹ್ನಿಜಾಯಾನ್ತ ಮಂತ್ರೋಽಯಂ ಅಭೀಷ್ಟಾರ್ಥ ಸುರದ್ರುಮ ॥**
**ದ್ವಿಭುಜಾ ವ್ಯೂಹಲಕ್ಷ್ಮಿಸ್ಸ್ಯೈದ್ಬದ್ಧ ಪದ್ಮಾಸನ ಪ್ರಿಯಾ ।**
**ಶ್ರೀನಿವಾಸಂಗ ಮಧ್ಯಸ್ಥಾ ಸುತಾರಾಂ ಕೇಶವ ಪ್ರಿಯಾ ॥**
**ತಮೇವ ಶರಣಂ ಗಚ್ಛ ಸರ್ವಭಾವೇನ ಸತ್ವರಮ್ ।**
**ಇತಿ ಮಂತ್ರಮುಪಾದಿಶ್ಯ ದದೃಶೇ ನ ಕುತ್ರಚಿತ್ ॥**

ಹುಣ್ಣಿಮೆಯ ಚಂದ್ರನಂತೆ ಸುಂದರ ಮುಖಾರವಿಂದದಿಂದ ಪ್ರಕಾಶಿಸುತ್ತಿರುವ ಶ್ರೀ ಮಹಾಲಕ್ಷ್ಮೀ! ಸರ್ವಲೋಕಜನನಿ ಶ್ರೀಹರಿಗೆ ತುಂಬಾ ಪ್ರಿಯಳು ಮತ್ತು ಎಲ್ಲಾ ಭಕ್ತರ ಮೇಲೆ ಕರುಣೆಯನ್ನು ಸುರಿಸುವ ಕಣ್ಣುಗಳಿಂದ ವಿರಾಜಮಾನಳಾಗಿದ್ದಾಳೆ.

ಪ್ರಾರಬ್ಧ ಕರ್ಮಗಳನ್ನು, ಕಷ್ಟಕೋಟಲೆಗಳನ್ನು ಹೋಗಲಾಡಿಸಿ, ಸರ್ವಸಂಪದವನ್ನು ಪ್ರಸಾದಿಸುವ ಶಕ್ತಿಯಿರುವುದು ಆ ಜಗನ್ಮಾತೆ ಒಬ್ಬಳಿಗೆ ಮಾತ್ರ ಸಾಧ್ಯ.

ಲಕ್ಷ್ಮಿ, ಕೀರ್ತಿ, ಜಯ, ಅನುರೂಪ ಎಲ್ಲವೂ ಆ ಜಗಜ್ಜನನಿಯ ರೂಪಗಳೇ ಆಗಿದೆ. ಅದರಲ್ಲಿಯೂ ಸ್ವಾಮಿ ಶ್ರೀನಿವಾಸನ ವಕ್ಷಸ್ಥಳದಲ್ಲಿ ವಾಸವಾಗಿರುವ ವ್ಯೂಪಾ ರೂಪದ "ಲಕ್ಷ್ಮೀ" ಕರುಣಾಮೂರ್ತಿಯಾಗಿ ದರ್ಶನವನ್ನು ಕೊಡುತ್ತಿದ್ದಾಳೆ.

ಆ ವ್ಯೂಪಾಲಕ್ಷ್ಮೀ, ಅನಾಯಾಸವಾಗಿ ಸರ್ವಪಾಪಗಳನ್ನು ನಶಿಸುವಂತೆ ಮಾಡುವುದಲ್ಲದೆ ಸಕಲ ಸಂಪತ್ತನ್ನು ಅನುಗ್ರಹಿಸುತ್ತಾಳೆ. ಈಗ ನಾನು ನಿಮಗೆ ಆ ಮಂತ್ರವನ್ನು ಉಪದೇಶಿಸುತ್ತೇನೆ. ಎಚ್ಚರಿಕೆಯಿಂದ ಕೇಳುವವರಂತರಾಗಿ ಎಂದು ಮುನಿಯು ಹೇಳಿ ಮಂತ್ರೋಪದೇಶವನ್ನು ಮಾಡಿದನು.

"ವೇದ" ಎನ್ನುವ ಪದ, "ಮಾತಾ" ಎನ್ನುವ ಪದ, "ಲಕ್ಷ್ಮೀ" ಎನ್ನುವ ಪದ, "ಪರಮಲಕ್ಷ್ಮೀ" ಎನ್ನುವ ಪದ, "ತಾರಿಕಾ" ಎನ್ನುವ ಪದ, "ವಿಷ್ಣುವಕ್ಷಸ್ಥಿತಾಯೈ" ಎನ್ನುವ ಪದ, "ಮಾಯಾ" ಎನ್ನುವ ಪದ ಹೀಗೆಯೇ "ವಹ್ನಿಜಾಯನ್ತಾ" ಎನ್ನುವ ಪದವನ್ನು ಸೇರಿಸಿ ಮಂತ್ರವನ್ನು ಪಠಿಸಬೇಕು. ಈ ಮಂತ್ರವು ಕಲ್ಪವೃಕ್ಷದಂತೆ ಎಲ್ಲಾ ಕೋರಿಕೆಗಳನ್ನು ಈಡೇರಿಸುತ್ತದೆ.

ಸ್ವಾಮಿ ಶ್ರೀನಿವಾಸನ ವಕ್ಷಸ್ಥಳದಲ್ಲಿ ಶೋಭಾಯಮಾನವಾಗಿ ಪದ್ಮಾಸನದಲ್ಲಿ ಕುಳಿತಿರುವ ಮತ್ತು ಎರಡು ತೋಳುಗಳನ್ನು ಹೊಂದಿರುವ ವ್ಯೂಪಾಲಕ್ಷ್ಮೀಯು ಮಹಾವಿಷ್ಣುವಿಗೆ ಅತ್ಯಂತ ಪ್ರಿಯಳು. ಸ್ವಾಮಿ ಪುಷ್ಕರಿಣಿಯಲ್ಲಿ ನೇಮನಿಷ್ಠೆಯಿಂದ ಸ್ನಾನಮಾಡಿ ಆ ವ್ಯೂಪಾಲಕ್ಷ್ಮೀಯನ್ನು ಮನಸಾ, ವಾಚಾ, ಕರ್ಮಣವನ್ನು ಸರ್ವವಿಧದಲ್ಲಿಯೂ ಪೂಜಿಸಿ ಸಂಪೂರ್ಣ ಶರಣಾಗಿ ಆಶ್ರಯಿಸಬೇಕು." ಎಂದು ಆತ್ಮರಾಮನಿಗೆ ವ್ಯೂಪಾಲಕ್ಷ್ಮೀ ಮಹಾಮಂತ್ರವನ್ನು ಉಪದೇಶಿಸಿ ಸನತ್ಕುಮಾರಮುನಿಯು ಅದೃಶ್ಯವಾದನು.

ಮಹಾಮುನಿಯ ದರ್ಶನವಾದ ನಂತರ ಜರುಗಿದಂತಹ ಸನ್ನಿವೇಶದಿಂದ ವಿಸ್ಮಿತನಾಗಿ ಆನಂದಗೊಂಡ ಆತ್ಮರಾಮನು ಅನಂತ ಭಕ್ತಿಯಿಂದ ವೆಂಕಟಾಚಲ ಪರ್ವತವನ್ನು ಹತ್ತಿ ಪರ್ವತದ ಇಳಿಜಾರಿನ ಅಕ್ಕಪಕ್ಕದಲ್ಲಿ ನೆಲೆಸಿರುವ ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸಿದನು. ಅದರಲ್ಲೂ ದಾರಿಯಲ್ಲಿ ಕಾಣಿಸಿದ ಹದಿನೇಳು ತೀರ್ಥಗಳಲ್ಲಿ ಸ್ನಾನ ಮಾಡಿ ಕೊನೆಗೆ ಶೇಷಾಚಲಂ ತಲುಪಿದನು. ಅಲ್ಲಿ ಪವಿತ್ರವಾದ "ಸ್ವಾಮಿ ಪುಷ್ಕರಿಣಿ" ಯಲ್ಲಿ ಪ್ರತಿದಿನ ದೀಕ್ಷಾಸ್ನಾನವನ್ನು ಮಾಡಿದನು.

ಶ್ರೀಮಹಾವಿಷ್ಣುವನ್ನು, ಸ್ವಾಮಿಯ ವಕ್ಷಸ್ಥಳದಲ್ಲಿ ಶೋಭಾಯಮಾನವಾಗಿರುವ "ವ್ಯೂಪಾಲಕ್ಷ್ಮಿ"ಯನ್ನು ಭಕ್ತಿಯಿಂದ ಪೂಜಿಸಿದನು. ಶಂಖಚಕ್ರಾದಿ ಪಂಚಾಯುಧಗಳು, ಕೇಯುರಾದಿ ಕಿರೀಟ ಕುಂಡಲ ಮತ್ತು ವಕ್ಷಸ್ಥಳದಲ್ಲಿ ಮಹಾಲಕ್ಷ್ಮಿ ಸಮೇತ ಶ್ರೀವಿಷ್ಣುವು ಆತ್ಮಾರಾಮನಿಗೆ ಪ್ರತ್ಯಕ್ಷನಾದ. ಪರಮಾತ್ಮನ ಆ ದಿವ್ಯ ಸ್ವರೂಪವನ್ನು ನೋಡಿ ಅವನು ಆನಂದದಿಂದ ಮುಳುಗಿದನು. ಶ್ರೀನಿವಾಸನು ಆ ಆತ್ಮಾರಾಮನನ್ನು ಸಂಪೂರ್ಣವಾಗಿ ಅನುಗ್ರಹಿಸುತ್ತ **"ಓ ಬ್ರಾಹ್ಮಣೋತ್ತಮ!"**

ಸ್ವಾಮಿ ಪುಷ್ಕರಿಣಿಯ ಸ್ನಾನದಿಂದ ನಿನ್ನ ಪಾಪಗಳು ಸಂಪೂರ್ಣವಾಗಿ ನಾಶವಾಗಿದೆ. ಲಕ್ಷ್ಮೀದೇವಿಯ ಅಪಾರವಾದ ಕರುಣಾಕಟಾಕ್ಷ ಸಂಪೂರ್ಣವಾಗಿ ನಿನಗೆ ದೊರೆತಿದೆ. ಇನ್ನುಮುಂದೆ ನಿನ್ನ ಸಂಪತ್ತಿನಿಂದ ದಾನಧರ್ಮಗಳನ್ನು ಮಾಡಿ ಸುಖವಾಗಿ ಬಾಳು," ಎಂದು ಹೇಳಿ ಅಂತರ್ಧಾನನಾದನು.

ಹಾಗೆ ಕಾಣಿಸಿಕೊಂಡು ಅದೃಶ್ಯನಾದ ಶ್ರೀಸ್ವಾಮಿಯ ದಿವ್ಯಮಂಗಳ ಸ್ವರೂಪವನ್ನು, ಲೀಲೆಗಳನ್ನು

**ವೇಂಕಟೇಶಾತ್ ತ್ಪರೋ ದೇವ ನಾಸ್ತ್ಯನ್ಯ ಶರಣಂ ಭುವಿ,**
**ವೆಂಕಟೇಶ ನಮೋ ದೇವೋ ನಾಸ್ತಿ ನಾಸ್ತಿ ಮಹೀತಲೇ**
**ಸ್ವಾಮಿಪುಷ್ಕರಿಣಿ ತೀರ್ಥ ಸಮಂ ನಾಸ್ತಿ ನ ಚಾಸ್ತಿ ಹಿ**

"ಭೂಲೋಕದ ವೈಕುಂಠವೆನಿಸಿದ ಶೇಷಾಚಲದಲ್ಲಿ ನಿಂತಿರುವ ಶ್ರೀವೆಂಕಟೇಶ್ವರ ಸ್ವಾಮಿಗಿಂತ ಅನ್ಯದೈವ ಇಲ್ಲವೇ ಇಲ್ಲ. ಆ ಭಗವಂತನನ್ನು ಆಶ್ರಯಿಸಿ ಸಂಪೂರ್ಣವಾಗಿ ಶರಣಾದರೆ ಸಾಕು! ಬೇರೆ ಶರಣಾಗತಿ ಬೇಕಿಲ್ಲ! ಶ್ರೀ ವೆಂಕಟೇಶ್ವರನಿಗೆ ಸಮಾನವಾದ ದೇವರು ಈ ಜಗತ್ತಿನಲ್ಲಿ ಎಲ್ಲಾದರೂ ಇದೆಯೇ? ಇಲ್ಲವೇ ಇಲ್ಲ ಎಂದು ಘಂಟಾಘೋಷವಾಗಿ ಹೇಳಬಹುದು. ಅಂತೆಯೇ ವೆಂಕಟಾದ್ರಿ ಕ್ಷೇತ್ರದಲ್ಲಿ ಬೆಳಗುತ್ತಿರುವ **"ಸ್ವಾಮಿಪುಷ್ಕರಿಣಿ"** ತೀರ್ಥಕ್ಕೆ ಸರಿಸಮಾನವಾದ ಪುಣ್ಯತೀರ್ಥಕ್ಷೇತ್ರ ಇಲ್ಲವೇ ಇಲ್ಲ. ಎಂದು ಹಲವು ರೀತಿಯಲ್ಲಿ ಹೊಗಳಿ ತನ್ನ ಗುರುಗಳಾದ ಸನತ್ಕುಮಾರರನ್ನು ಭಕ್ತಿಯಿಂದ ಸ್ಮರಿಸುತ್ತ ಆತ್ಮರಾಮ ತನ್ನ ಊರಿಗೆ ತಲುಪಿ ತನ್ನ ಜೀವನವನ್ನು ಆರಾಮವಾಗಿ ಮುಂದುವರಿಸಿ ಕೊನೆಗೆ ಮುಕ್ತಿಯನ್ನು ಪಡೆದನು. ಅಷ್ಟೇಅಲ್ಲ, ಸ್ವಾಮಿ ಪುಷ್ಕರಿಣಿಯ ಮಹಿಮೆ ಅನಂತ! ಅದ್ಭುತ! ಎಂದು ಹೇಳುತ್ತ ಶಂಖಣ ಮಹಾರಾಜನ ಕಥೆ ಮತ್ತು ಆತ್ಮರಾಮನ ಕಥೆಯನ್ನು ಹೇಳಿದ ನಂತರ ಸೂತರು ಸ್ವಾಮಿಪುಷ್ಕರಿಣಿ ತೀರ್ಥದ ಮಹಿಮೆಯನ್ನು ಮುಂದುವರೆಸಿದರು.

## ಬ್ರಹ್ಮಹತ್ಯಾ ದೋಷ ನಿವಾರಣೆ

ಪೂರ್ವದಲ್ಲಿ ದೇವತೆಗಳ ಸೇನಾಧಿಪತಿಯಾದ ಕುಮಾರಸ್ವಾಮಿ, ಲೋಕಕಂಟಕನಾಗಿದ್ದ ತಾರಕಾಸುರನನ್ನು ಸಂಹರಿಸಿದನು. ಆದ್ದರಿಂದ ಆತನ ಮೇಲೆ ಬ್ರಹ್ಮಹತ್ಯಾ ಪಾಪದ ಆರೋಪ ಹೊರಿಸಲಾಯಿತು. ಆ ಬ್ರಹ್ಮಹತ್ಯಾದೋಷ ನಿವಾರಣೆಗಾಗಿ, ಬೇರುಸಹಿತ, ಸಂಪೂರ್ಣವಾಗಿ ಇಲ್ಲವಾಗಿಸುವ ಸಲುವಾಗಿ ಷಣ್ಮುಖನು ಎಲ್ಲೆಲ್ಲಿಯೋ ಅಲೆದಾಡಿದನು. ಆದರೆ ಯಾವ ಲಾಭವೂ ಇಲ್ಲದಿದ್ದಾಗ ಸಾಕಾಗಿ ಅನಿಶ್ಚಿತವಾಗಿ ಲೋಕಗಳನ್ನು ಸುತ್ತುತ್ತಿರುವ ಕಾರಣದಿಂದಾಗಿ ನಿರುತ್ಸಾಹಿಯಾಗಿ ಬೇಸರಪಟ್ಟನು. ಸುಬ್ರಹ್ಮಣ್ಯ ಸ್ವಾಮಿ ಕೊನೆಗೆ ಪರಮೇಶ್ವರನನ್ನು ಆಶ್ರಯಿಸಿದನು. ಶಿವನು ವೆಂಕಟಾದ್ರಿಯಲ್ಲಿರುವ "ಸ್ವಾಮಿ ಪುಷ್ಕರಿಣಿ"ಯನ್ನು ಸೇವಿಸಲು ಆಣತಿಮಾಡಿದನು. ತಕ್ಷಣವೇ ಕುಮಾರಸ್ವಾಮಿ ಅಲ್ಲಿಗೆ ಹೋಗಿ ಆ ಪುಣ್ಯತೀರ್ಥ, ಪಾವನಜಲದಲ್ಲಿ ಸ್ನಾನಮಾಡಿದರು. ಕ್ಷಣ ಮಾತ್ರದಲ್ಲಿ ಷಣ್ಮುಖ ಬ್ರಹ್ಮಹತ್ಯಾ ಪಾಪದಿಂದ ಮುಕ್ತನಾದನು. ಅಂತಹ ಆ ಪುಷ್ಕರಣಿ ಮಹಿಮಾ ವಿಶೇಷಕ್ಕೆ ಆಶ್ಚರ್ಯ ಪಡುತ್ತಾ ಕುಮಾರಸ್ವಾಮಿಯು, ಶ್ರೀಭೂದೇವಿ ಸಹಿತನಾಗಿ ಲೀಲಾಮಾನುಷ ರೂಪಧಾರಿ ಆ ದಿವ್ಯಸ್ಥಳದಲ್ಲಿ ಸಂಚರಿಸುತ್ತಿರುವ ಶ್ರೀಮಹಾವಿಷ್ಣುವನ್ನು ಸಂದರ್ಶಿಸಿ ಧನ್ಯನಾಗಿ ಹೋದನು ಎಂಬುದಾಗಿ ಸೂತಮಹಾಮುನಿಯು ಹೇಳುತ್ತ, ಓ ಮಹಾಪುರುಷರೇ! ಈ ಸಂದರ್ಭದಲ್ಲಿ ಸ್ವಾಮಿಪುಷ್ಕರಣಿಯ ಮಹಿಮೆ, ಹಿರಿಮೆಯನ್ನು ಕುರಿತು ಹೇಳುವಾಗ ಕಶ್ಯಪ ಮುನಿಯ ಅದ್ಭುತವಾದ ಕಥೆ ನೆನಪಾಗುತ್ತಿದೆ. ಅದನ್ನೂ ಹೇಳುತ್ತೇನೆ. ನೀವೆಲ್ಲರೂ ಸಾವಧಾನ ಚಿತ್ತರಾಗಿ ಕೇಳಿ ಎಂದೆನ್ನುತ್ತ!

## ಪರೀಕ್ಷಿತ ಮಹಾರಾಜ

ಇದು ಮಹಾಭಾರತದ ಕಥೆ. ಕುರುಕ್ಷೇತ್ರ ಮಹಾಯುದ್ಧ ಮುಗಿದ ನಂತರ ಅಭಿಮನ್ಯುವಿನ ಪುತ್ರ ಪರೀಕ್ಷಿತರಾಜ ಹಸ್ತಿನಾಪುರವನ್ನು ಆಳುತ್ತಿದ್ದ ದಿನಗಳು. ಒಂದು ದಿನ ಬೇಟೆಗೆ ಹೋದ ಪರೀಕ್ಷಿತನು ಆಯಾಸಗೊಂಡು ಹಸಿವನ್ನು ತಾಳಲಾರದೆ ಮೂರ್ಛೆಹೋದನು. ಆದಾಗ್ಯೂ ಬೇಟೆಯಾಡುವ ತೀವ್ರ ಆಸಕ್ತಿಯಿಂದ ಒಂದು ಜಿಂಕೆಯನ್ನು ಬೆನ್ನಟ್ಟಿದನು. ಜಿಂಕೆಯು ರಾಜನ ನೋಟದಿಂದ ಕ್ಷಣಮಾತ್ರದಲ್ಲಿ ತಪ್ಪಿಸಿಕೊಂಡು ಓಡಿಹೋಯಿತು.

ಅದನ್ನು ಹುಡುಕುತ್ತಾ ಹೋದ ರಾಜನಿಗೆ ಹತ್ತಿರದಲ್ಲಿಯೇ ಶಮಿಕ ಋಷಿಯ ಆಶ್ರಮ ಕಾಣಿಸಿತು. ಆ ಆಶ್ರಮದ ಮುಂದೆ ಇದ್ದ ವಿಶಾಲವಾದ ಮರದ ನೆರಳಿನಲ್ಲಿ ತಪೋಮಗ್ನನಾದ ಶಮಿಕ ಋಷಿಯನ್ನು ಕಂಡನು. ಬೇಟೆ ಸಿಗದೆ ಬೇಸರಗೊಂಡ

ಪರೀಕ್ಷಿತನು ಇದು ಯಾವುದನ್ನೂ ಗಮನಿಸದೆ, ಮುನಿಯ ಹತ್ತಿರಕ್ಕೆ ಹೋಗಿ "ಮುನೀಂದ್ರ! ನಾನು ಬೆನ್ನಟ್ಟಿಬಂದ ಜಿಂಕೆ ಈ ಮಾರ್ಗದಲ್ಲಿ ಬಂದಿತ್ತಾ? ಅದನ್ನು ನೀವು ನೋಡಿದಿರಾ?" ಎಂಬುದಾಗಿ ತಪೋಮಗ್ನನಾದ ಋಷಿಯನ್ನು ಅವರ ತಪಸ್ಸಿಗೆ ಭಂಗವಾಗುವಂತೆ ಒಂದೇ ಸಮನೆ ಪ್ರಶ್ನಿಸುತ್ತಿದ್ದನು. ತಪೋಮಗ್ನನಾದ ಆ ಶಮಿಕಮಹರ್ಷಿ ಮಾತನಾಡಲಿಲ್ಲ. ಮತ್ತೆ ಮತ್ತೆ ಪ್ರಶ್ನಿಸಿ ವಿಫಲನಾದ ಮಹಾರಾಜ ಹಸಿವಿನ ಸಂಕಟದಿಂದಾಗಿ ವಿವೇಕಶೂನ್ಯನಾದನು. ಕೋಪಾವಿಷ್ಟನಾದನು. ನಾನು ಹಸ್ತಿನಾಪುರದ ಮಹಾರಾಜ ಇಂತಹ ಕ್ಷುಲಕ ಕಾರಣಕ್ಕೆ ಸೋಲುವುದೆ? ಎಂದು ಯೋಚಿಸುತ್ತ ವಿವೇಕವನ್ನು ಕಳೆದುಕೊಂಡವನಾಗಿ ಕೋಪದಿಂದ ಹತ್ತಿರದ ಪೊದೆಯಲ್ಲಿ ಸತ್ತುಬಿದ್ದಿದ್ದ ಹಾವನ್ನು ತನ್ನ ಬಿಲ್ಲಿನ ತುದಿಯಿಂದ ತಂದು ತಪೋಮಗ್ನರಾಗಿದ್ದ ಮುನಿಯ ಕೊರಳಿಗೆ ಹಾರದಂತೆ ಹಾಕಿ ಹೊರಟು ಹೋದನು. ತರುವಾಯ ಆಶ್ರಮಕ್ಕೆ ಬಂದ ಶಮಿಕ ಮಹರ್ಷಿಯ ಪುತ್ರ ಶೃಂಗಿ ತನ್ನ ತಂದೆಯ ಕೊರಳಿನಲ್ಲಿ ಸತ್ತಹಾವು ಮಾಲೆಯಂತೆ ಇರುವುದನ್ನು ನೋಡಿ ತೀವ್ರ ಕೋಪಗೊಂಡನು. ಇತರರಿಂದ ಈ ಕಾರ್ಯವು ರಾಜಾಪರೀಕ್ಷಿತನು ಮಾಡಿರುವುದನ್ನು ತಿಳಿದವನಾಗಿ ತಂದೆಯ ಮೇಲಿನ ಪ್ರೀತಿಯಿಂದಾಗಿ, ಭಕ್ತಿಯಿಂದಾಗಿ "ತನ್ನ, ತಂದೆಯ ಮೇಲೆ ಈ ಸತ್ತಹಾವನ್ನು ಹಾಕಿರುವ ಪರೀಕ್ಷಿತನನ್ನು "ತಕ್ಷಕನೆಂಬ ಮಹಾವಿಷಸರ್ಪದಿಂದ ಕಚ್ಚಿ ಸಾಯಲಿ" ಎಂದು ಶಪಿಸಿದನು.

ತಪವನ್ನು ಮುಗಿಸಿ ಎಚ್ಚರಗೊಂಡ ಶಮಿಕಮಹರ್ಷಿ ತನ್ನ ಪುತ್ರನು ಕೊಟ್ಟ ಶಾಪದ ಬಗ್ಗೆ ತಿಳಿದನು. ಪ್ರಜೆಗಳ ಪರಿಪಾಲಕನಾದ ರಾಜನನ್ನು ಶಪಿಸಿದ್ದು ತನ್ನ ಪುತ್ರನ ಮೂರ್ಖತನಕ್ಕಾಗಿ ಆತಂಕಗೊಂಡನು. ಕೂಡಲೆ ತನ್ನೊಬ್ಬ ಶಿಷ್ಯನನ್ನು ಕರೆದು ಪರೀಕ್ಷಿತನ ಬಳಿಗೆ ಕಳುಹಿಸಿ ಸೂಕ್ತ ಮುಂಜಾಗ್ರತೆಯನ್ನು ವಹಿಸಿ ತನ್ನನ್ನು ತಾನು ರಕ್ಷಿಸಿ ಕೊಳ್ಳಬೇಕೆಂದು ತಿಳಿಸಿದನು. ಈ ಶಾಪವನ್ನು ಕೇಳಿದ ರಾಜನು ಮಹನೀಯರೆ, ಹಿರಿಯರ ಮಾತನ್ನು ತಿರಸ್ಕರಿಸುವುದು, ಅಗೌರಿಸುವುದು ಒಳ್ಳೆಯದಲ್ಲ ಎಂದು ಅವರ ಮಾತನ್ನು ಗೌರವಿಸಿ ಗಂಗಾನದಿಯ ಮಧ್ಯದಲ್ಲಿ ಇರುವಂತಹ ಒಂಟಿ ಕಂಭದಮೇಲೆ ಒಂದು ಮಂಟಪವನ್ನು ನಿರ್ಮಿಸುವ ಏರ್ಪಾಡುಮಾಡಿದನು. ಹಾಗೆಯೆ ಹಾವಿನ ವಿಷವನ್ನು ತೆಗೆಯುವ ವೈದ್ಯರು ಮತ್ತು ಮಾಂತ್ರಿಕರನ್ನು ತನ್ನ ಜೊತೆಯಲ್ಲಿ ಇರಲು ಕರೆಸಿದನು. ಜೊತೆಗೆ ಮುಕ್ತಿಯನ್ನು ಕೊಡುವಂತಹ ಮಹಾವಿಷ್ಣುವಿನ ಕಥೆಯನ್ನು ಕೇಳಲು ಉತ್ಸುಕನಾಗಿ ದೇವರ್ಷಿಗಳನ್ನು, ಬ್ರಹ್ಮರ್ಷಿಗಳನ್ನು ಇತರ ಯೋಗಿಗಳನ್ನು ಆಹ್ವಾನಿಸಿ, ಅವರಿಂದ ಭಗವಂತನ ಲೀಲೆಯನ್ನು ಹಾಡು, ಕಥೆಯ ಮೂಲಕ ಕೇಳಲು ಮುಂದಾದನು.

ಹೀಗಿರುವಾಗ ಮಹಾಮಾಂತ್ರಿಕನಾದ ಕಾಶ್ಯಪನೆಂಬ ಹೆಸರಿನ ಬ್ರಾಹ್ಮಣನು ಪರೀಕ್ಷಿತನನ್ನು ತಕ್ಷಕನ ವಿಷದಿಂದ ರಕ್ಷಿಸುವ ಉದ್ದೇಶ್ಯದಿಂದ ರಾಜನ ಬಳಿಗೆ ಬಂದನು. ಅದು ಕೊನೆಯದಿನ ಅಂದರೆ ಏಳನೆಯ ದಿನವಾಗಿತ್ತು. ದರಿದ್ರನಾದ ಆ ಬ್ರಾಹ್ಮಣನು ರಾಜನನ್ನು ಪ್ರಾಣಾಪಾಯದಿಂದ ಪಾರುಮಾಡಿ ಸಂಪತ್ತನ್ನು ಪಡೆಯುವ ಆಸೆಯಿಂದ ರಾಜನ ಬಳಿಗೆ ಬಂದಿದ್ದನು. ಇದನ್ನು ಗಮನಿಸಿದ ತಕ್ಷಕನು, ಬ್ರಾಹ್ಮಣನ ವೇಷದಲ್ಲಿ ಕಾಶ್ಯಪನ ಬಳಿ ಬಂದು ಓ ವಿಪ್ರೋತ್ತಮ ನೀನು ಯಾರು? ಎಲ್ಲಿಂದ ಬಂದಿರುವೆ? ಎಂದು ಪ್ರಶ್ನಿಸಿದನು. ಆಗ ಆ ಬ್ರಾಹ್ಮಣನು "ನಾನು ಕಾಶ್ಯಪ ಎಂದು ಕರೆಯುವ ಮಹಾಮಾಂತ್ರಿಕ. ತಕ್ಷಕನ ವಿಷದಿಂದ ಮರಣಿಸುವ ಪರೀಕ್ಷಿತ ರಾಜನನ್ನು, ನನ್ನ ಮಂತ್ರಸಿದ್ಧಿಯಿಂದ ಕ್ಷಣದಲ್ಲಿ ಬದುಕಿಸಬಲ್ಲೆ. ಆಮೇಲೆ ನಾನು ಸಿರಿವಂತನಾಗುತ್ತೇನೆ" ಎಂದು ಹೇಳಿದನು. ಹಾಗಿದ್ದರೆ ಕೇಳು "ನಾನೇ ಆ ತಕ್ಷಕ, ಇಗೋ ಈಗ ನಾನು ಈ ಮಹಾವೃಕ್ಷವನ್ನು ಕಚ್ಚಿ, ನನ್ನ ವಿಷದಿಂದ ಅದನ್ನು ಸುಟ್ಟು ಭಸ್ಮ ಮಾಡುತ್ತೇನೆ, ನಿನಗೆ ಶಕ್ತಿಯಿದ್ದರೆ ಅದನ್ನು ತಡೆದು ನಿಲ್ಲಿಸು ಎಂದು ಹೇಳಿ ತಕ್ಷಕನು ತನ್ನ ವಿಷದಿಂದ ಮರವನ್ನು ಸುಟ್ಟು ಭಸ್ಮ ಮಾಡಿದನು.

ತಕ್ಷಣವೇ ಕಾಶ್ಯಪು ತನ್ನ ಮಾಂತ್ರಿಕವಿದ್ಯೆಯಿಂದ ತಕ್ಷಕನು ಸುಟ್ಟುಹಾಕಿದ್ದ ಮರವನ್ನು ಹಸಿರು ವೃಕ್ಷವನ್ನಾಗಿಮಾಡಿ ಅದು ಎಂದಿನಂತೆ ಮಿರ ಮಿರುಗುತ್ತ ತೇಜಸ್ಸಿನಿಂದ ಕಂಗೊಳಿಸುವಂತೆ ಮಾಡಿದನು. ಅದಕ್ಕೂ ಮುಂಚಿತವಾಗಿ ಒಬ್ಬ ಬ್ರಾಹ್ಮಣನು ಎಲೆಗಾಗಿ ಕಡಿದ ಮರದ ಜೊತೆಯಲ್ಲಿಯೇ ಸತ್ತನು. ನಂತರ ಆ ಬ್ರಾಹ್ಮಣನು ಕಾಶ್ಯಪನ ಮಂತ್ರವಿದ್ಯೆಯಿಂದ ಬದುಕಿದನು.

ಇದನ್ನು ಗಮನಿಸಿದ ತಕ್ಷಕನು ಕಾಶ್ಯಪನಿಗೆ "ಅಯ್ಯಾ! ವಿಪ್ರವರ್ಯಾ, ನೀನು ಮಹಾಮಹಿಮಾನ್ವಿತ ಮಹಾಮಂತ್ರ ಸಿದ್ಧಿಯುಳ್ಳವನು. ಆದರೆ ಋಷಿಪುತ್ರ ಶೃಂಗಿ ನೀಡಿರುವ ಶಾಪವು ಅಷ್ಟೇ ಶಕ್ತಿಯುತ, ಅದ್ಭುತವಾದದ್ದು. ಋಷಿನೀಡಿದ ಶಾಪವು ಎಂದಿಗೂ ವ್ಯರ್ಥವಾಗುವುದಿಲ್ಲ. ಆದ್ದರಿಂದ ನೀನು ಹಿಂದಿರುಗಿ ಹೋಗುವುದು ಒಳ್ಳೆಯದು. ನೀನು ಬಯಸಿದಷ್ಟು ಹಣವನ್ನು ನಾನು ನಿನಗೆ ಕೊಡುತ್ತೇನೆ. ಅದಕ್ಕಾಗಿ ನೀನು ಚಿಂತಿಸುವುದು ಬೇಡ" ಎಂದು ಹೇಳಿದನು.

ಮಹಾಮಹಿಮನಾದ ಕಾಶ್ಯಪನು ತನ್ನ ದಿವ್ಯದೃಷ್ಟಿಯಿಂದ ಪರೀಕ್ಷಿತ ಮಹಾರಾಜನ ಪೂರ್ವಪರವನ್ನು ಕಂಡು, ಸರಿಯಾಗಿ ಯೋಚಿಸಿ ರಾಜನು ಎಷ್ಟಾದರೂ ಅಲ್ಪಾಯುಷಿ ಆದಕಾರಣ ತಾನು ರಾಜನಿಗೆ ಸಹಾಯ ಮಾಡುವುದು, ಚಿಕಿತ್ಸೆ ಕೊಡುವುದು ಎಲ್ಲವು ವ್ಯರ್ಥ ನಿಷ್ಪ್ರಯೋಜಕ ಎಂದು ತಕ್ಷಕನು ಕೊಟ್ಟ ಹಣವನ್ನು ತೆಗೆದುಕೊಂಡು ಹೊರಟು ಹೋದನು. ಅದಾದನಂತರ ಪರೀಕ್ಷಿತ ಮಹಾರಾಜನು ತಕ್ಷಕನ ವಿಷದಿಂದ ಮರಣ ಹೊಂದಿದನು.

ಸುಟ್ಟು ಕರಕಲಾದ ಮರ, ಮರದಿಂದಾಗಿ ಮರಣಹೊಂದಿದ್ದ ಬ್ರಾಹ್ಮಣ, ಕಾಶ್ಯಪನಿಂದಾಗಿ ಜೀವ ಪಡೆದ ವೃತ್ತಾಂತವನ್ನು ಪ್ರಪಂಚದ ಜನರು ಎಲ್ಲರು ತಿಳಿಯುವಂತಾಯಿತು. ವಿಪ್ರಕಾಶ್ಯಪನ ಈ ಕಾರ್ಯದಿಂದಾಗಿ, ಜನರು ಅವನನ್ನು ಕಂಡಾಕ್ಷಣ ಭಯಪಟ್ಟು ಓಡುವಂತಾಯಿತು. ಅವನು ಎಲ್ಲಿಗೆ ಹೋದರು ಜನ ಅವನನ್ನು ಅಸ್ಪೃಶ್ಯನಂತೆ ಕಂಡು ಓಡಿಸುತ್ತಿದ್ದರು. ಹೀಗೆ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಅಲೆಯುವಂತಾಯಿತು. ಬೇಸತ್ತ ಬ್ರಾಹ್ಮಣ ಅಲೆದಾಡುತ್ತ ಬಂದು ಕಡೆಗೆ "ಸಾಕಲ್ಯಮುನಿ" ಗಳಲ್ಲಿ ಆಶ್ರಯ ಪಡೆದನು. ಅವರಲ್ಲಿ ನಡೆದುದೆಲ್ಲವನ್ನು ಹೇಳಿ,

"ಸ್ವಾಮೀ! ಮಹಾನುಭಾವ ನಾನು ಎಲ್ಲಿಹೋದರು ಜನ ನನ್ನನ್ನು ನಿಷ್ಕರುಣೆಯಿಂದ ದೂಷಿಸುತ್ತಿದ್ದಾರೆ. ನಾನು ಯಾವುದೇ ಪಾಪವನ್ನು ಮಾಡಿಲ್ಲ. ಈಗ ನೀವೇ ನಾನು ಮಾಡಿರುವ ತಪ್ಪಾದರೂ ಏನು? ಎಂದು ತಿಳಿಸಿ ನನ್ನನ್ನು ನೀವೇ ರಕ್ಷಿಸಬೇಕು ಎಂದು ಅವರಲ್ಲಿ ವಿನಂತಿಸಿಕೊಂಡು ಅವರ ಪಾದಗಳಿಗೆ ನಮಸ್ಕರಿಸಿ ಶರಣಾದನು.

## ವೈದ್ಯನ ಪರಮಧರ್ಮ

ಸಾಕಲ್ಯಮಹರ್ಷಿ, ಕಾಶ್ಯಪನನ್ನು ಆಪಾದಮಸ್ತಕ ನೋಡಿ ಆಲೋಚಿಸಿ ವಿಪ್ರೋತ್ತಮಾ! ನೀನು ಮಹಾ ಅಪರಾಧವನ್ನು ಮಾಡಿದ್ದೀಯ. ಬ್ರಾಹ್ಮಣನ ಶಾಪವನ್ನು ಪಡೆದು ಪರೀಕ್ಷಿತನಿಗೆ ಮಹಾಕಾಲನಾದ ತಕ್ಷಕನ ಘೋರವಿಷದಿಂದ ಸಾಯುತ್ತಿದ್ದ ರಾಜನನ್ನು ನಿನ್ನ ಮಂತ್ರಶಕ್ತಿಯಿಂದ ರಕ್ಷಿಸದೆ ಧನಮೋಹದಿಂದ ವೈದ್ಯಧರ್ಮವನ್ನು ಪಾಲಿಸದೆ ಹಿಂದಿರುಗಿ ಹೋದೆ.

ಪರೀಕ್ಷಿತ ಮಹಾರಾಜ ಸಾಮಾನ್ಯನಲ್ಲ. ಅವನು ಮಹಾವಿಷ್ಣುಭಕ್ತ, ಮಹಾಯೋಗಿ. ಪ್ರಜೆಗಳನ್ನು ತನ್ನ ಮಕ್ಕಳಂತೆ ಪಾಲಿಸಿ ರಕ್ಷಿಸುತ್ತಿದ್ದನು. ಇಂತಹ ರಾಜನನ್ನು ರಕ್ಷಿಸಬೇಕಾದ್ದು ಧರ್ಮ ಅಲ್ಲವೇ? ಸಮಯದಲ್ಲಿ ನೀನು ಪರೀಕ್ಷಿತ ರಾಜನನ್ನು ರಕ್ಷಿಸದೇ ಹೋದೆ. ರಾಜಾ ಪ್ರತ್ಯಕ್ಷ ದೇವತಾ, ರಾಜನನ್ನು ರಕ್ಷಿಸುವುದು ಪ್ರಜೆಗಳ ಕರ್ತವ್ಯ. ರಕ್ಷಿಸದೆ ಹೋದರೆ ಕರ್ತವ್ಯಭ್ರಷ್ಟರಾಗುತ್ತಾರೆ, ಅದು ಮಹಾ ಅಪರಾಧ ಮಾಡಿದಂತೆಯೇ ಅಲ್ಲವೆ.

**ಯಾವತ್ಕಂಠಾ ಗತಾಃ ಪ್ರಾಣಾಃ ಮುಮುರ್ಷೋರ್ಮಾನವಸ್ಯ ಹಿ**
**ತಾವತ್ ಚಿಕಿತ್ಸಾ ಕರ್ತವ್ಯಾ ಕಾಲಸ್ಯ ಕುಟಿಲಾ ಗತಿಃ**
**ಇತಿ ಪ್ರಾಹುಃ ಪುರಾ ಶ್ಲೋಕಂ ಭಿಷಗ್ವಿದ್ಯಾಬ್ಧಿಃ ಪರಗಾಹ**
**ತತಶ್ಚಿಕಿತ್ಸಾ ಶಕ್ತೋಽಪಿ ಯಸ್ಮಾದಕೃತಭೇಷಜಃ**

ರೋಗಿಯು ಸಾಯಲು ಸಿದ್ಧವಾಗಿದ್ದರೂ ಸಹ. ರೋಗಿಯ ದೇಹದಲ್ಲಿ ಜೀವ ಇರುವವರೆಗೂ ವೈದ್ಯರು ತನಗೆ ಗೊತ್ತಿರುವ ವೈದ್ಯಕೀಯ ಚಿಕಿತ್ಸೆಯನ್ನು ಮಾಡಿ ಬದುಕಿಸಲು ಪ್ರಯತ್ನ ಮಾಡಬೇಕು. ಏಕೆಂದರೆ ಪ್ರಾಣ ತುಂಬಾ ಅಮೂಲ್ಯವಾದದು. ಎಂದು ಈ ವಿಧವಾಗಿ ಆಯುರ್ವೇದ ವೈದ್ಯಕೀಯ ಬೋಧಕರು, ಹಿರಿಯರು ಹೀಗೆ ಹೇಳಿದ್ದಾರೆ.

ಕೇವಲ ಕೀರ್ತಿಗಾಗಿ, ಧನಸಂಪಾದನೆಯ ಆಸೆಗಾಗಿ, ವೈದ್ಯಕೀಯ ವೃತ್ತಿಯನ್ನು ಮಾಡ ಬಾರದು. ಸೇವಾ ಮನೋಭಾವನೆ ಇರುವ ವೈದ್ಯರು ಯಾವುದೇ ಸಂದರ್ಭದಲ್ಲಿ ಚಿಕಿತ್ಸೆ ನೀಡಬೇಕು. ಅಷ್ಟೆಅಲ್ಲ, ರೋಗವನ್ನು ಸರಿಯಾಗಿ ಅರಿತು, ಚಿಕಿತ್ಸೆಯನ್ನು ಸಂಪೂರ್ಣವಾಗಿ ಮಾಡಬೇಕು. "ರೋಗಿಯು ಬೇಗ ಸಾಯುತ್ತಾನೆ" ಎಂದು ವೈದ್ಯರು ಎಂದಿಗೂ ಹೇಳಬಾರದು. ರೋಗಿಯ ದೇಹದಲ್ಲಿ ಪ್ರಾಣ ಇರುವವರೆಗೂ ವೈದ್ಯರು ಚಿಕಿತ್ಸೆ ನೀಡಬೇಕು. ವೈದ್ಯರು ರೋಗಿಯ ರೋಗ ಮತ್ತು ಚಿಕಿತ್ಸೆಯ ಬಗ್ಗೆ ಯೋಚಿಸಬೇಕು. ಆದರೆ, ಬದುಕನ್ನು ನಿರ್ಧರಿಸಬಾರದು. ಇದಲ್ಲದೆ, ಅಸ್ತಿತ್ವದಲ್ಲಿಲ್ಲದ ಕಾಯಿಲೆ ಇದೆ ಎಂದು ಹೇಳಬಾರದು ಅಥವಾ ಸಣ್ಣ ರೋಗವು ಗಂಭೀರವಾಗಿದೆ ಎಂದು ಹೇಳಬಾರದು. ಒಬ್ಬ ವೈದ್ಯ ಬಹಳ ತಾಳ್ಮೆ, ತಾಳ್ಮೆ ಮತ್ತು ಕೌಶಲ್ಯದಿಂದ ಕಾರ್ಯನಿರ್ವಹಿಸಿದಾಗ, ತನ್ನ ವೃತ್ತಿಗೆ ನ್ಯಾಯ ಸಲ್ಲಿಸಿದವನು ಇಹಪರದಲ್ಲಿ ಸುಖಸಂತೋಷದಿಂದ ಇರುತ್ತಾನೆ.

ನೀನು, ನಿನ್ನ ಮಂತ್ರಶಕ್ತಿಯಿಂದ ಪರೀಕ್ಷಿತ ಮಹಾರಾಜನನ್ನು ಪ್ರಾಣಾಪಾಯದಿಂದ ರಕ್ಷಿಸಲು ನೀನು ಶಕ್ತನಾಗಿದ್ದರೂ ಅವನ ಆಯುಷ್ಯ ಮುಗಿಯಿತು ಎಂದು ಮೊದಲೇ ನಿರ್ಧರಿಸಿ ಹಣದ ಆಮಿಷಕ್ಕೆ ಒಳಗಾಗಿ ಅವನಿಗೆ ರಕ್ಷಣೆ ಕೊಡದೆ ಹಿಂತಿರುಗಿ ಹೋದೆ. ಆ ಪಾಪವು ನಿನ್ನನ್ನು ಹಿಂಬಾಲಿಸುತ್ತಿದೆ. ಆದುದರಿಂದಲೇ ಎಲ್ಲ ಲೋಕಗಳೂ ನಿನ್ನನ್ನು ದೂಷಿಸುತ್ತಿವೆ. ನಿನ್ನ ಜೀವನದಲ್ಲಿ ಅಶಾಂತಿ ಉಂಟಾಗಿದೆ. ಎಂದು ಸಾಕಲ್ಯ ಮುನಿ ವಿವರಿಸಿದರು.

ಆಗ ಕಾಶ್ಯಪನು ತನ್ನ ಘೋರ ಪರಿಸ್ಥಿತಿಯನ್ನು ನೆನೆದು ಚಿಂತಾಕ್ರಾಂತನಾಗಿ, "ಓ ಸಾಕಲ್ಯಮಹರ್ಷೀ! ನೀನು ನನಗೆ ಈ ಘೋರ ಪಾಪದಿಂದ ಮುಕ್ತಿ ಹೊಂದುವ ಮಾರ್ಗವನ್ನು ಬೋಧಿಸಬೇಕು. ಮತ್ತೊಮ್ಮೆ ನನ್ನ ಬಂಧು ಮಿತ್ರರು ಮತ್ತು ಜನರು ನನ್ನನ್ನು ಮೊದಲಿನಂತೆ ಪ್ರೀತಿಯಿಂದ ಕಾಣುವಂತೆ ಅನುಗ್ರಹಿಸಿ ನನ್ನ ಪಾಪಕರ್ಮವನ್ನು ಹೋಗಲಾಡಿಸು ಎಂದು ಬೇಡಿಕೊಂಡನು.

ಸಾಕಲ್ಯಮುನಿ ಶಾಂತವಾಗಿ ಕಣ್ಣುಮುಚ್ಚಿ ಸ್ವಲ್ಪ ಸಮಯಕಾಲ ಧ್ಯಾನಾಸಕ್ತನಾದನು. ತಕ್ಷಣ –

**"ಅಸ್ಯ ಪಾಪಸ್ಯ ಶಾಂತ್ಯರ್ಥಂ ಉಪಾಯಂ ಪ್ರವದಾಮಿ ತೇ,**
**ತತ್ಕರ್ತವ್ಯಂ ತ್ವಯಾ ಶೀಘ್ರಂ ವಿಲಂಬಂ ಮಾ ಕೃತಾ ದ್ವಿಜ!**
**ಸುವರ್ಣ ಮುಖರೀ ತೀರೇ ಲಕ್ಷ್ಮೀಪತಿ ನಿವಾಸಭೂಃ**
**ವೆಂಕಟಾದ್ರಿರಿತಿ ಖ್ಯಾತಃ ಸರ್ವಲೋಕೇಷು ಪೂಜಿತಃ**
**ತಸ್ಮಿನ್ ಶೇಷಗಿರೌ ಪುಣ್ಯೇ ಸುರಾಸುರ ನಮಸ್ಕೃತೇ,**
**ಬ್ರಹ್ಮಹತ್ಯಾ ಸುರಾಪಾನ ಸ್ವರ್ಣಸ್ತೇಯಾದಿ ನಾಶಕೇ,**
**ಸ್ವಾಮಿಪುಷ್ಕರಿಣೀ ನೋತಿ ಸರ್ವಪಾಪಾಪನೋದಿನೀ**
**ಉತ್ತರೇ ಶ್ರೀನಿವಾಸಸ್ಯ ವರ್ತತೇ ಮಂಗಳಪ್ರದಾ,**
**ತಂ ಗತ್ವಾ ವೆಂಕಟಂಶೈಲಂ ಸ್ವಾಮಿಪುಷ್ಕರಿಣೀಂ ಶುಭಮ್,**
**ಸ್ನಾತ್ವಾ ಸಂಕಲ್ಪಪೂರ್ವಂ ತು ವರಾಹಸ್ವಾಮಿನಂ ಹರಿಂ,**
**ಸೇವಿತ್ವಾ ಪಶ್ಚಿಮೇತೀರೇ ನಿರ್ಗತ್ಯ ಹರಿ ಮಂದಿರಂ,**
**ಗತ್ವಾ ತತ್ರ ವಿಧಾನೇನ ಸ್ವರ್ಣಾಚಲ ನಿವಾಸಿನಮ್,**
**ಶ್ರೀನಿವಾಸಂ ಪರಂ ದೇವಂ ಭಕ್ತಾನಾಂ ಅಭಯಪ್ರದಂ,**
**ಶಂಖಚಕ್ರಧರಂ ದೇವಂ ವನಮಾಲಾ ವಿಭೂಷಿತಂ,**
**ದೃಷ್ಟ್ವಾ ನಿರ್ಧೂತ ಪಾಪೋಽಸಿ ಸಂಶಯಂ ಮಾ ಕೃತಾ ದ್ವಿಜ."**

ಓ ಕಾಶ್ಯಪ! ನೀನು ಮಾಡಿದ ಈ ಘೋರ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವುದಕ್ಕೆ ಒಂದು ಉಪಾಯವನ್ನು ಹೇಳುತ್ತೇನೆ. ಅದನ್ನು ಯಾವುದೇ ಕಾರಣದಿಂದಲೂ ತಡಮಾಡದೆ ಆಚರಣೆಗೆ ತರುವಂತೆ ಸಾಕಲ್ಯರು ಹೇಳಿದರು.

ಪರಮಪಾವನವಾದ ಸುವರ್ಣಮುಖಿ ನದಿತೀರದಲ್ಲಿ ಶ್ರೀನಿವಾಸನ, ಶ್ರೀಮಹಾವಿಷ್ಣುವಿನ ನಿವಾಸಸ್ಥಾನ ಪ್ರಕಾಶಮಾನವಾಗಿ ಬೆಳಗುತ್ತ ಸದಾಕಾಲ ಪೂಜೆಯನ್ನು ಕೈಗೊಳ್ಳುತ್ತ ವೆಂಕಟಾಚಲ ದಿವ್ಯಾಧಾಮ ಪ್ರಸಿದ್ಧವಾಗಿದೆ.

ಆ ದಿವ್ಯ ಕ್ಷೇತ್ರವು ಬ್ರಹ್ಮಹತ್ಯೆ, ಸುರಾಪಾನ, ಚಿನ್ನವನ್ನು ಕದಿಯುವುದು ಮುಂತಾದ ಮಹಾಪಾಪಗಳನ್ನು ಹೋಗಲಾಡಿಸುತ್ತ ನಿತ್ಯವೂ ದೇವತೆಗಳು ಮತ್ತು ರಾಕ್ಷಸರಿಂದ ಪೂಜಿಸಲ್ಪಡುತ್ತದೆ.

**"ಸ್ವಾಮಿಪುಷ್ಕರಿಣೀಂ ತ್ಯಕ್ತ್ವಾ ತೀರ್ಥಮನ್ಯದ್ವ್ರಜೇತ್ತು ಯಃ,**
**ಸ್ನಿಗ್ಧಂ ಸ ಗೋಪಯ್ಸ್ತ್ಯಕ್ತ್ವಾ ಸ್ನುಹೀಕ್ಷೀರಂ ಪ್ರಯಾಚತೇ,**
**ಸ್ವಾಮಿತೀರ್ಥಂ ಸ್ವಾಮಿತೀರ್ಥಂ ಸ್ವಾಮಿತೀರ್ಥಮಿತಿ ದ್ವಿಜಾಃ,**
**ತ್ರಿಃಪಠಂತೇ ನರಾ ಏವಂ ಯತ್ರ ಕ್ವಾಪಿ ಜಲಾಶಯೇ,**
**ಸ್ನಾನ್ತಿಸರ್ವೇ ನರಾತೇವೈ ಯಾಸ್ಯಾನ್ತಿಬ್ರಹ್ಮಣಃ ಪದಮ್."**

ಶ್ರೀ ವೆಂಕಟಾಚಲ ಕ್ಷೇತ್ರದ ಸ್ವಾಮಿಪುಷ್ಕರಿಣಿ ತೀರ್ಥವನ್ನು ಬಿಟ್ಟು ಬೇರೆ ತೀರ್ಥಗಳಿಗೆ ಹೋಗಿ ಸ್ನಾನ ಮಾಡಿದರೆ, ಶ್ರೇಷ್ಠವಾದ ಪವಿತ್ರವಾದ ಒಳ್ಳೆಯ ಹಸುವಿನ ಹಾಲನ್ನು ಬಿಟ್ಟು ಬೊಮ್ಮಜೆಮೂಡು ಮರದಹಾಲು, ಅಂದರೆ ಫಲ ಕೊಡದ ಮರದ ಹಾಲು, ಗೊಡ್ಡು ಹಸುವಿನ ಹಾಲು ಸ್ವೀಕರಿಸಿದಂತಾಗುತ್ತದೆ. ಭಕ್ತರು ಯಾವುದೇ ತೀರ್ಥಗಳಲ್ಲಿ ಅಥವಾ ಯಾವುದೇ ನದಿಗಳಲ್ಲಿ ಸ್ನಾನ ಮಾಡುವ ಸಮಯದಲ್ಲಿ "ಸ್ವಾಮಿಪುಷ್ಕರಿಣಿ, ಸ್ವಾಮಿಪುಷ್ಕರಿಣಿ ಸ್ವಾಮಿಪುಷ್ಕರಿಣಿ" ಎಂದು ಮೂರು ಬಾರಿ ಹೇಳಿದರೆ ಬ್ರಹ್ಮಪದವೆಂಬ ಮೋಕ್ಷವನ್ನು ತಪ್ಪದೆ ಹೊಂದುತ್ತಾರೆ.

ಅಂತಹ ಪವಿತ್ರವಾದ ವೆಂಕಟಾಚಲಕ್ಷೇತ್ರದಲ್ಲಿ ಪ್ರಭು ಶ್ರೀನಿವಾಸನಿಗೆ ಉತ್ತರ ದಿಕ್ಕಿನ ಅತಿ ಸಮೀಪದಲ್ಲಿರುವ ಸರ್ವಪಾಪಗಳನ್ನು ನಾಶಪಡಿಸುವ, ಸಕಲ ಸೌಭಾಗ್ಯಗಳನ್ನು ದಯಪಾಲಿಸುವ "ಸ್ವಾಮಿಪುಷ್ಕರಿಣಿ" ಎಂಬ ದಿವ್ಯ ಸರೋವರವಿದೆ.

ನೀನು ತಕ್ಷಣ ಆ ಜಾಗಕ್ಕೆ ಹೋಗು. ಆ ಪರ್ವತದ ಮೇಲಿರುವ ಮಂಗಳಕರವಾದ ಸ್ವಾಮಿಪುಷ್ಕರಿಣಿಯಲ್ಲಿ ಸಂಕಲ್ಪಮಾಡಿ ಭಕ್ತಿ ಶ್ರದ್ಧೆಯಿಂದ ಸ್ನಾನಮಾಡಿದ ನಂತರ ಆ ಪುಷ್ಕರಿಣಿಯ ವಾಯುವ್ಯ ಮೂಲೆಯಲ್ಲಿರುವ ಶ್ರೀ ಆದಿವರಾಹಸ್ವಾಮಿಯನ್ನು ಪೂಜೆಮಾಡು.

ಮುಂದೆ, ಪುಷ್ಕರಿಣಿಯ ಪಶ್ಚಿಮ ತೀರದಲ್ಲಿರುವ ಆನಂದ ನಿಲಯದಲ್ಲಿ ಪೂಜೆಗೊಳ್ಳುತ್ತಿರುವ ಶಂಖ ಚಕ್ರಧಾರಿಯಾಗಿ, ವನಮಾಲಾದಿಗಳಿಂದ ಅಲಂಕರಿಸಲ್ಪಟ್ಟಿರುವ ಮತ್ತು ಭಕ್ತರ ಭಯವನ್ನು ಹೋಗಲಾಡಿಸಿ ವರಗಳನ್ನು ನೀಡುವ ದಿವ್ಯದರ್ಶನವನ್ನು ಕೊಡುವ ಶ್ರೀನಿವಾಸನನ್ನು ಪರಮ ವಿಶ್ವಾಸ, ಶ್ರದ್ಧೆಯಿಂದ ಪೂಜಿಸು. ನಿನ್ನ ಎಲ್ಲ ಪಾಪಗಳನ್ನು ನಿವಾರಿಸುವನು. ಈ ಬಗ್ಗೆ ಯಾವುದೇ ಅನುಮಾನ ಬೇಡ ಎಂದು ಸಲಹೆ ನೀಡಿದರು.

ಮಾಂತ್ರಿಕನಾದ ಕಾಶ್ಯಪನು, ಸಾಕಲ್ಯ ಮುನಿಗಳಿಗೆ ನಮಸ್ಕರಿಸಿ ತಕ್ಷಣವೇ ವೆಂಕಟಾಚಲಕ್ಕೆ ಯಾತ್ರಾರ್ಥಿಯಾಗಿ ಹೊರಟನು. ಆ ಕ್ಷೇತ್ರದಲ್ಲಿರುವ "ಸ್ವಾಮಿಪುಷ್ಕರಣಿ" ಪವಿತ್ರ ತೀರ್ಥದಲ್ಲಿ ಸಂಕಲ್ಪಯುತನಾಗಿ ಸ್ನಾನಮಾಡಿ ಪಾಪಮುಕ್ತನಾದನು. ಹಾಗೆಯೇ ಪೂರ್ವದಲ್ಲಿ ಅವನನ್ನು ಜನ ಹೇಗೆ ಗೌರವದಿಂದ ನೋಡುತ್ತಿದ್ದರೋ ಅದೇ ರೀತಿಯಲ್ಲಿ ಕಾಣುವಂತಾಯಿತು. ಇದೆಲ್ಲವು ಸ್ವಾಮಿಪುಷ್ಕರಣಿಯ ಮಹಿಮೆಯನ್ನು, ಪಾವಿತ್ರತೆಯನ್ನು ತೋರಿಸುತ್ತದೆ ಎಂದು ಸೂತಮಹರ್ಷಿಗಳು ಶೌನಕಾದಿಗಳಿಗೆ ಈ ಕಥೆಯನ್ನು ಹೇಳಿ, ಈ ಕಥೆಯನ್ನು ಕೇಳಿದವರಿಗೆ ವಿಷ್ಣುಲೋಕ ಪ್ರಾಪ್ತಿಯಾಗುವುದರಲ್ಲಿ ಸಂಶಯವಿಲ್ಲ ಎಂದು ಹೇಳಿದರು.

## ನರಕಭಯ ನಿವಾರಣೆ

ಸ್ವಾಮಿಪುಷ್ಕರಣಿಯಲ್ಲಿ ಸ್ನಾನ ಮಾಡುವುದರಿಂದ ಎಲ್ಲ ಪವಿತ್ರತೆ ಉಂಟಾಗುತ್ತದೆ. ಯಾರು ಸ್ವಾಮಿಪುಷ್ಕರಣಿಯಲ್ಲಿ ಸ್ವಾಮಿಯನ್ನು ಭಕ್ತಿಯಿಂದ ಕೀರ್ತಿಸಿ ಸ್ತುತಿಸಿ ಸ್ನಾನ ಮಾಡುತ್ತಾರೋ ಅವರಿಗೆ ತಾಮಿಸ್ರಮ್, ಅಂಧತಾ ಮಿಸ್ರಮ್, ಮಹಾರೌರವ, ರೌರವ, ಕುಂಭೀಪಾಕಂ, ಕಾಲಭಯ, ಅಸೀಪತ್ರವನಂ ಇತ್ಯಾದಿ ಇಪ್ಪತ್ತೆಂಟು ವಿಧದ ನರಕದಿಂದ ಮುಕ್ತಿ ಸಿಗುತ್ತದೆ. ಈ ಮಹಾನರಕಗಳೆಲ್ಲವೂ ಕಲ್ಪನಾತೀತವಾದ, ವರ್ಣಿಸಲಾಗದ ಪಾಪಗಳನ್ನು ಮಾಡುವುದರಿಂದ ಉಂಟಾಗುತ್ತದೆ. ಅಂತಹ ಮಹಾಪಾಪಗಳೆಲ್ಲವು ಒಂದು ಬಾರಿ **"ಸ್ವಾಮಿಪುಷ್ಕರಣಿ"** ತೀರ್ಥದಲ್ಲಿ ಸ್ನಾನ ಮಾಡುವುದರಿಂದಲೇ ಪರಿಹಾರ ಆಗುತ್ತದೆ. ಆದ್ದರಿಂದ ಇಂತಹ ಪವಿತ್ರವಾದ "ಸ್ವಾಮಿ ಪುಷ್ಕರಿಣಿ"ಯನ್ನು ಭಕ್ತಿಯಿಂದ ಕೊಂಡಾಡಬೇಕು. ಆ ಪಾವನತೀರ್ಥದಲ್ಲಿ ಅತ್ಯಂತ ವಿಶ್ವಾಸ ನಂಬಿಕೆ ಮತ್ತು ಭಕ್ತಿಯಿಂದ ಸ್ನಾನ ಮಾಡಬೇಕು. ಸೇವಿಸಬೇಕು, ಅತ್ಯಂತ ಪವಿತ್ರವಾದ "ಸ್ವಾಮಿ ಪುಷ್ಕರಿಣಿ" ಯನ್ನು ಯಾವುದೇ ರೀತಿಯಲ್ಲಿ ಅಗೌರವಗೊಳಿಸಬಾರದು. ಸ್ವಾಮಿ ಪುಷ್ಕರಿಣಿಯ ಶ್ರೇಷ್ಠತೆಯ ಬಗ್ಗೆ ಯಾವುದೇ ಅನುಮಾನ ಬೇಡ. ಮೇಲಾಗಿ, ಧಾರ್ಮಿಕ ನಂಬಿಕೆಗಳನ್ನು ಹೊಂದಿರುವವರಿಗೆ ಅನುಮಾನ ಉಂಟಾಗಬಾರದು. ಆ ನಂಬಿಕೆಗಳೆಲ್ಲವೂ ಭ್ರಮೆ, ಮಿಥ್ಯೆ ಎಂದು ಹೇಳುವ ಮೂಲಕ ಇತರರು ನಂಬಿಕೆಯನ್ನು ಕಳೆದುಕೊಳ್ಳುವಂತೆ ಮಾಡುವವರು ದುಃಖಕರವಾದ ಹಂದಿಯ ಜನ್ಮವನ್ನು ಹೊಂದಿ ಮೇಲೆ ಹೇಳಿದ ಮಹಾನರಕವನ್ನು ಅನುಭವಿಸುತ್ತಾರೆ.

**"ಅಹೋ ಮೌರ್ಖ್ಯ ಮಹೋಮರ್ಥ್ಯಮ್ ಅಹೋ ಮರ್ತ್ಯಂ ದ್ವಿಜೋತ್ತಮಃ**
**ಸ್ವಾಮಿ ತೀರ್ಥಾಭಿಧೇ ತೀರ್ಥೇ ಸರ್ವಪತಾಕ ನಾಶನೇ**
**ಅದ್ವೈತ ಜ್ಞಾನದೇ ಪುಂಸಾಂ ಭುಕ್ತಿ ಮುಕ್ತಿ ಪ್ರದಾಯಿನಿ**
**ಇಷ್ಟ ಕಾಮಪ್ರದೇ ನಿತ್ಯಂ ತಥೈವಾಜ್ಞಾನ ನಾಶನೇ,**
**ಸ್ಥಿತೇsಪಿ ತದ್ವಿಪಾಯಾಯಂ ರಮತೇsನ್ಯತ್ರ ವೈ ಜನಃ**
**ಸ್ನಾತಸ್ಯ ಸ್ವಾಮಿತೀರ್ಥೇ ತು ನಾಸ್ತಿಕಾ ಭಯಮಸ್ತಿ ವೈ**
**ಸ್ವಾಮಿ ತೀರ್ಥಂಚ ಪಶ್ಯನ್ತಿ ತತ್ರ ಸ್ನಾಂತಿ ಚ ಯೇ ನರಾಃ**
**ಸ್ತುವಂತಿ ಚ ಪ್ರಶಂಸಂತಿ ಸ್ಪೃಶಂತಿ ಚ ನಮಂತಿ ಚ**
**ನ ಪಿಬಂತಿ ಪೀತೌ ಸ್ತನ್ಯಮ್ ಮಾತೃಣಾಂ ದ್ವಿಜಪುಂಗವಾಃ**
**ಏವಂ ವಃ ಕಥಿತಂ ವಿಪ್ರಃ ಸ್ವಾಮಿತೀರ್ಥಸ್ಯ ವೈಭವಮ್**
**ಭುಕ್ತಿಮುಕ್ತಿಪ್ರದಂ ನೃಣಾಮ್ ಸರ್ವಪಾಪ ನಿಬರ್ಹಣಮ್."**

"ಓ ಋಷಿಗಳೇ! ಮನುಷ್ಯರು ಎಷ್ಟು ಮೂರ್ಖರು, ಅವರ ಮೂರ್ಖತನವು ಆಶ್ಚರ್ಯಕರವಾಗಿದೆ. ಏಕೆಂದರೆ ಸ್ವಾಮಿ ಪುಷ್ಕರಿಣಿಯ ತೀರ್ಥವು ಸರ್ವಪಾತಕಗಳನ್ನು ನಾಶಮಾಡುತ್ತದೆ. ಸರ್ವ ಚರಾಚರಗಳು ಬ್ರಹ್ಮವಾಗಿದೆ, ಬ್ರಹ್ಮಜ್ಞಾನವೆಲ್ಲವನ್ನು ಅನುಗ್ರಹಿಸುತ್ತಿ ರುವ, ಇಹಲೋಕದಲ್ಲಿ ಭಕ್ತಿ, ಮೋಕ್ಷವನ್ನು ಈ ರೀತಿಯಲ್ಲಿ ಇಹಪರ ಲೋಕದಲ್ಲಿ ಸಂತೋಷವನ್ನು ನೀಡುತ್ತ ಅಜ್ಞಾನನಾಶಿನಿಯಾಗಿ ಸ್ವಾಮಿಪುಷ್ಕರಣಿ ಪ್ರಸಿದ್ಧವಾಗಿದೆ.

ಇಂತಹ ಪುಷ್ಕರಣಿಯ ಮಹಿಮೆಯನ್ನು ಪಾಡುವುದು, ಆಲಿಸುವುದನ್ನು ಬಿಟ್ಟು ಇನ್ನಿತರ ವ್ಯರ್ಥವಿಷಯಗಳ ಬಗ್ಗೆ ಚರ್ಚಿಸಲು ಆಸಕ್ತರಾಗಿರುತ್ತಾರೆ. ಅವರ ಜ್ಞಾನ ಎಷ್ಟರ ಮಟ್ಟಿಗೆ ಹದಗೆಟ್ಟಿದೆ ಎಂಬುದನ್ನು ವಿವರಿಸಿ ಹೇಳಲು ಸಾಧ್ಯವಿಲ್ಲ.

ಸ್ವಾಮಿ ಪುಷ್ಕರಿಣಿ ಸ್ನಾನವು ನಾಸ್ತಿಕರಲ್ಲಿರುವ ಭಯವನ್ನು ಹೋಗಲಾಡಿಸುತ್ತದೆ. ಆ ತೀರ್ಥವನ್ನು ಸೇವಿಸಿದವರು, ಆ ತೀರ್ಥದ ನೀರಿನಲ್ಲಿ ಸ್ನಾನ ಮಾಡಿದವರು, ಮಾಡುವವರು ಆ ಪುಷ್ಕರಿಣಿಯನ್ನು ಸ್ತುತಿಸಿದವರು, ಸ್ತುತಿಸುವವರು, ಸ್ಪರ್ಶಿಸಿದವರು, ನಮಸ್ಕರಿಸಿದವರು ಅಂತಹವರೆಲ್ಲ ತಾಯಿಯ ಗರ್ಭದಲ್ಲಿ ಪುನಃ ಹುಟ್ಟುವುದಿಲ್ಲ. ಅಂದರೆ ಅವರಿಗೆ ಪುನರ್ಜನ್ಮ ಇಲ್ಲ.

ಆದ್ದರಿಂದ, ಪಂಡಿತರಾದ ಮುನಿಗಳಿರಾ! ಭಕ್ತಿಮುಕ್ತಿಯನ್ನು ದಯಪಾಲಿಸುವ, ಸರ್ವಪಾಪಗಳನ್ನು ಹೋಗಲಾಡಿಸುವ ಪವಿತ್ರತೀರ್ಥ ಸ್ವಾಮಿಪುಷ್ಕರಣಿಯ ವೈಭವವನ್ನು ನಾನು ನಿಮಗೆ ಹೇಳಿದ್ದೇನೆ ಎಂದು ಸೂತಮಹಾಮುನಿಯು ಮುಂದೆ ಶೌನಕಾದಿಗಳಿಗೆ ಹೇಳಿದರು.

## ಧರ್ಮಗುಪ್ತನ ಚರಿತ್ರೆ

ಪೂರ್ವದಲ್ಲಿ ಚಂದ್ರವಂಶದಲ್ಲಿ "ನಂದ"ನೆಂಬ ಹೆಸರಾಂತ ರಾಜನೊಬ್ಬ ಪ್ರೀತಿಯ ಪ್ರಜಾಪರಿಪಾಲಕನಾಗಿ ಆಳುತ್ತಿದ್ದನು. ಅವರಿಗೆ "ಧರ್ಮಗುಪ್ತ" ಎಂಬ ಮಗನಿದ್ದನು. ರಾಜನಾದ ನಂದ ವಯೋವೃದ್ಧನಾದ ಕಾರಣ ಮಗನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು ತಪೋವನಕ್ಕೆ ತೆರಳಿದನು.

ತಂದೆಯಂತೆಯೆ ಮಗ "ಧರ್ಮಗುಪ್ತ" ನು ಪ್ರಜೆಗಳ ಪ್ರೀತಿಯನ್ನು ಸಂಪಾದಿಸಿ ಒಳ್ಳೆಯ ಪ್ರಜಾಪಾಲಕನಾಗಿ ರಾಜ್ಯವನ್ನು ಆಳುತ್ತಿದ್ದನು. ರಾಜ್ಯಭಾರವನ್ನು ಸುಸೂತ್ರವಾಗಿ ನಡೆಸುವಲ್ಲಿ ತಂದೆಯನ್ನು ಮೀರಿಸುವ ಮಗನಾಗಿ ವಿಜೃಂಭಿಸಿದನು. ಒಂದು ದಿನ ಧರ್ಮಗುಪ್ತನು ಬೇಟೆಗೆ ಹೋಗಿ ಸಮಯದ ಪರಿವೆ ಇಲ್ಲದೆ

ಅಡವಿಯಲ್ಲಿ ಸಂಚರಿಸುತ್ತಿರುವಾಗ ಕತ್ತಲೆ ಆವರಿಸಿತು. ಆ ರಾತ್ರಿ ಒಂದು ಸಿಂಹವು ರಾಜನನ್ನು ಬೆನ್ನಟ್ಟಿದಾಗ ಧರ್ಮಗುಪ್ತನು ಪ್ರಾಣಭಯದಿಂದ ಓಡಿಹೋಗಿ ಮರವನ್ನು ಹತ್ತಿ ಮೇಲೆ ಕುಳಿತನು.

ಆದರೆ ಆ ಮರದ ಮೇಲೆ ಅದಾಗಲೇ ಒಂದು ಕರಡಿ ಇತ್ತು. ಭಯದಿಂದ ಮೊದಲೇ ಆಯಾಸಗೊಂಡಿದ್ದ ರಾಜ ಅದನ್ನು ನೋಡಿ ಅವನ ಹೃದಯ ಮತ್ತಷ್ಟು ಕುಗ್ಗಿತು. "ಅತ್ತದರಿ ಇತ್ತಪುಲಿ" ಎನ್ನುವಷ್ಟು ದಾರುಣವಾಗಿತ್ತು ರಾಜನ ಪರಿಸ್ಥಿತಿ.

ಅಷ್ಟರಲ್ಲಿ ಆ ಭಲ್ಲೂಕ, ಮಾನವ ಭಾಷೆಯಲ್ಲಿ "ರಾಜ! ಭಯಪಡಬೇಡ, ನಾವಿಬ್ಬರೂ ಈ ರಾತ್ರಿ ಈ ಮರದ ಮೇಲೆ ವಿಶ್ರಾಂತಿ ಪಡೆಯೋಣ. ನನ್ನಿಂದ ನಿನಗೇನೂ ತೊಂದರೆಯಾಗದು. ಆದ್ದರಿಂದ ದಣಿದ ನೀನು ಮೊದಲು ಶಾಂತವಾಗಿ ಮಲಗು, ನಾನು ನಿನ್ನನ್ನು ರಕ್ಷಿಸುತ್ತೇನೆ. ಮರದ ಕೆಳಗಿರುವ ಸಿಂಹದಿಂದ ನಿನ್ನನ್ನು ನನ್ನ ಕಣ್ಣುರೆಪ್ಪೆಯಂತೆ ಕಾಪಾಡುತ್ತೇನೆ. ನೀನು ಎಚ್ಚರವಾದ ಮೇಲೆ ನಂತರ ನಾನು ಮಲಗುತ್ತೇನೆ ಆಗ ನೀನು ನನ್ನನ್ನು ರಕ್ಷಿಸಬೇಕು" ಎಂದು ಹೇಳಿತು.

ಧರ್ಮಗುಪ್ತನು ನಿಶ್ಚಿಂತೆಯಿಂದ ಶಾಂತವಾಗಿ ನಿದ್ರಿಸಿದನು. ಮರದ ಕೆಳಗೆ ತನ್ನ ಆಹಾರಕ್ಕಾಗಿ ಕಾಯುತ್ತಿದ್ದ ಸಿಂಹವು, ಕರಡಿಯೊಂದಿಗೆ "ಮಲಗಿರುವ ರಾಜನನ್ನು ನನಗೆ ಆಹಾರವಾಗಿ ಮರದಿಂದ ಕೆಳಗೆ ತಳ್ಳಿಬಿಡು" ಎಂದು ಕೇಳಿತು. ಆದರೆ ಕರಡಿ ಹೇಳಿತು, "ನಾನು ಅವನಿಗೆ ಆಶ್ರಯ ನೀಡಿದ್ದೇನೆ, ಅವನಿಗೆ ನನ್ನ ಮೇಲೆ ಸಂಪೂರ್ಣ ನಂಬಿಕೆ ಇದೆ. ನಂಬಿದವರಿಗೆ ದ್ರೋಹ ಮಾಡಬಾರದು. ಅವರಿಗೆ ದ್ರೋಹ ಬಗೆದರೆ ಅಂತಹವರಿಗೆ ಮುಕ್ತಿ ಇಲ್ಲ. ಆದ್ದರಿಂದ, ನೀನು ನಿನ್ನ ದುರಾಸೆಯನ್ನು ಬಿಟ್ಟು ಹಿಂದಿರುಗಿ ಹೋಗು." ಎಂದು ಹೇಳಿತು. ಅಷ್ಟರಲ್ಲಿ ರಾಜನಿಗೆ ಎಚ್ಚರವಾಯಿತು. ನಂತರ ಕರಡಿಯು ನಿದ್ದೆಮಾಡಿತು. ಅದರ ನಿದ್ದೆ ಕೆಡದಂತೆ ರಾಜನು ಅದನ್ನು ಕಾಪಾಡುತ್ತಿದ್ದನು. ಎಂದಿನಂತೆ, ಸಿಂಹವು ರಾಜನನ್ನು "ಆ ಕರಡಿಯನ್ನು ನನಗೆ ಆಹಾರವಾಗಿ ಕೊಡು" ಎಂದು ಕೇಳಿತು. ಹಿಂದು ಮುಂದು ಯೋಚಿಸದೆ ರಾಜನು, ಮಲಗಿದ್ದ ಕರಡಿಯನ್ನು ಮರದಿಂದ ಎಸೆದು ನಂಬಿದವರಿಗೆ ದ್ರೋಹ ಮಾಡಿದನು. ಅಷ್ಟರಲ್ಲಿ ಎಚ್ಚೆತ್ತುಕೊಂಡ ಭಲ್ಲೂಕ, ಜಾರದಂತೆ ಕೊಂಬೆಯನ್ನು ಹೊಟ್ಟೆಯನ್ನು ಆಸರೆಯಾಗಿ ಹಿಡಿದುಕೊಂಡು ಬಂದು ಕೋಪದಿಂದ-- "ವಿಶ್ವಾಸಘಾತುಕ! ನಿನ್ನನ್ನು ಕಾಪಾಡಿದ ಪಾಪಕ್ಕೆ ನೀನು ನನಗೆ ದ್ರೋಹ ಬಗೆದಿರುವೆ. ನಿನ್ನಂಥ ಕೃತಘ್ನನಿಗೆ ಶಿಕ್ಷೆಯಾಗಲೇಬೇಕು. ಆದುದರಿಂದ ನೀನು ಮತಿಭ್ರಮಣನಾಗಿ ಹುಚ್ಚನಹಾಗೆ ಅಲೆಯುವಂತಾಗಲಿ" ಎಂದು ಶಪಿಸಿತು.

ಹುಚ್ಚುಹಿಡಿದ ಭಿಕ್ಷುಕನಂತೆ ಏನೇನೋ ಮಾತಾಡುತ್ತ, ತಿರುಗುತ್ತಿದ್ದ ರಾಜನನ್ನು ಅವನ ಮಂತ್ರಿಗಳು ಕಂಡರು. ಅವರು ಆ ಹುಚ್ಚು ರಾಜನನ್ನು, ರೇವಾನದಿಯ ದಡದ ಕಾಡಿನಲ್ಲಿ ತಪಸ್ಸು ಮಾಡುತ್ತಿದ್ದ ಅವನ ತಂದೆ ನಂದನ ಬಳಿಗೆ ಕರೆದೊಯ್ದರು.

ಮಗನ ವಿಚಿತ್ರ ಕಥೆಯನ್ನು ಕೇಳಿ ದುಃಖಿತನಾದ ನಂದರಾಜನು ಅವನನ್ನು ಜೈಮಿನಿ ಮಹರ್ಷಿಗಳ ಬಳಿಗೆ ಕರೆದೊಯ್ದನು. ಅವರಿಗೆ ಮಗನು ಮಾಡಿರುವ ತಪ್ಪನ್ನು ಹೇಳಿ, ಅವನ ಹುಚ್ಚುತನವನ್ನು ಹೋಗಲಾಡಿಸಲು ಮಾರ್ಗವನ್ನು ಹೇಳಬೇಕೆಂದು ವಿನಂತಿಸಿದನು. ಜೈಮಿನಿ ಮಹರ್ಷಿ ತನ್ನ ದಿವ್ಯದೃಷ್ಟಿಯಿಂದ ನೋಡಿ, ಮಾಡಿರುವ ಕೆಲಸಕ್ಕೆ ಆಗಬೇಕಾದ ಶಿಕ್ಷೆ ಆಗಿದೆ. ಇದು ಸಾಮಾನ್ಯವಾದುದಲ್ಲ ನಂಬಿಕೆದ್ರೋಹ ಮಾಡಿ ಪಶ್ಚಾತಾಪ ಪಡದೆ ಇರುವ ಕಾರಣ ಶಾಪಗ್ರಸ್ಥನಾಗಿದ್ದಾನೆ ಎಂದು ಮಾತನ್ನು ಮುಂದುವರಿಸಿದರು.

**ಸುವರ್ಣಮುಖರೀ ತೀರೇ ವೇಂಕಟಂ ನಾಮ ಪರ್ವತೇ**
**ಸರ್ವಪಾಪಹರೌ ಪುಣ್ಯೇ ನಾನಾ ಧಾತು ವಿನಿರ್ಮಿತಮ್**
**ಸ್ವಾಮಿಪುಷ್ಕರಣೀರಿತಿ..... ತೀರ್ಥಮಸ್ತಿ ಮಹತ್ತರಮ್**
**ಪವಿತ್ರಾಣಾಂ ಪವಿತ್ರಂ ಯೋ ಮಂಗಳಾನಾಂ ಚ ಮಂಗಳಮ್**
**ಶ್ರುತಿ ಸಿದ್ಧಮ್ ಮಹಾಪುಣ್ಯಂ ಬ್ರಹ್ಮಹತ್ಯಾದಿ ಶೋಧಕಮ್**
**ನೀತ್ವಾ ತತ್ರ ಸುತಂ ತೇऽದ್ಯ ಸ್ನಾಪಯಸ್ವ ಮಹಾಮತೇ**
**ಉನ್ಮಾದಸ್ತಕ್ಷಣಾ ದೇವ ತಸ್ಯ ನಶ್ಯೇನ್ನಸಂಶಯಃ**

ಪರಮ ಪಾವನಿಯಾದ ಸುವರ್ಣಮುಖಿ ನದಿತೀರದಲ್ಲಿ, ಸರ್ವಪಾಪಹರವಾದ ಪವಿತ್ರವಾದ ವೆಂಕಟಾಚಲವೆಂಬ ಕ್ಷೇತ್ರವಿದೆ.

ಆ ದಿವ್ಯಕ್ಷೇತ್ರದಲ್ಲಿ ಸ್ವಾಮಿಪುಷ್ಕರಣಿ ಎಂಬ ತೀರ್ಥವಿದೆ. ಮಂಗಳಪ್ರದವಾದ ತೀರ್ಥಗಳಲ್ಲಿ ಇದು ಅತ್ಯಂತ ಮಂಗಳಪ್ರದವಾದದ್ದು.

ಆ ಪುಷ್ಕರಣಿ ವೇದಕಾಲದಿಂದ ಸುಪ್ರಸಿದ್ಧವಾಗಿದೆ. ಆ ಪುಣ್ಯಕ್ಷೇತ್ರ ಬ್ರಹ್ಮಹತ್ಯಾದಿ ಪಾಪಗಳನ್ನು ಹೋಗಲಾಡಿಸುತ್ತದೆ. ಇದು ಮಂಗಳಕರ ತೀರ್ಥಗಳಲ್ಲಿ ಅತ್ಯಂತ ಮಂಗಳಕರ. ಆ ಪುಷ್ಕರಿಣಿಯು ಬ್ರಹ್ಮಹತ್ಯಾದಿ ಪಾಪಗಳನ್ನು ಹೋಗಲಾಡಿಸುತ್ತದೆ. ಆದುದರಿಂದ ನೀನು, ನಿನ್ನ ಮಗನನ್ನು ವೆಂಕಟಾಚಲಕ್ಕೆ ಕರೆದುಕೊಂಡು ಹೋಗಿ ಅಲ್ಲಿರುವ 'ಸ್ವಾಮಿ ಪುಷ್ಕರಿಣಿ'ಯಲ್ಲಿ ಸ್ನಾನ ಮಾಡಿದರೆ ಮತಿಭ್ರಮಣೆಯು ತಕ್ಷಣವೇ ತೊಲಗುತ್ತದೆ. ಹುಚ್ಚು ನಿವಾರಣೆ ಆಗಿ ಸಾಮಾನ್ಯ ಮನುಷ್ಯನಾಗುತ್ತಾನೆ ಎಂದು ಹೇಳಿದರು.

ಜೈಮಿನಿ ಮಹರ್ಷಿ ಆದೇಶದ ಮೇರೆಗೆ, ನಂದಮಹಾರಾಜನು ತನ್ನ ಮಗ ಧರ್ಮಗುಪ್ತನಿಗೆ ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನಮಾಡಿಸಿದನು. ಪವಿತ್ರಸ್ನಾನದಿಂದಾಗಿ ನಂದ ಮಹಾರಾಜನ ಪುತ್ರ ಗುಣಮುಖನಾದನು. ನಂತರ ಶ್ರೀವೆಂಕಟೇಶ್ವರನ ಸೇವೆ ಮಾಡಿ ಕೃತಾರ್ಥನಾದನು. ಧರ್ಮಗುಪ್ತನು ಶ್ರೀಸ್ವಾಮಿಯ ಅಪಾರ ಕರುಣೆ, ಸ್ವಾಮಿಪುಷ್ಕರಿಣಿಯ ಮಹಿಮೆಯನ್ನು ಕಂಡು ಆಶ್ಚರ್ಯಪಟ್ಟನು ಮತ್ತು ಸಂತೋಷದಿಂದ ಭಕ್ತಿಸಮರ್ಪಣೆಗ ಳೊಂದಿಗೆ ಅನೇಕ ಪ್ರಾರ್ಥನೆಗಳನ್ನು ಸಲ್ಲಿಸಿದನು, ವಿವಿಧ ರೀತಿಯ ಅನ್ನದಾನ, ಧನದಾನ, ಗೋದಾನ ಮತ್ತು ಭೂದಾನವನ್ನು ಆಯೋಜಿಸಿ ರಾಜ್ಯಕ್ಕೆ ಹಿಂತಿರುಗಿದನು.

"**ಏವಂ ವಃ ಕಥಿತಾ ವಿಪ್ರಾಃ ಧರ್ಮಗುಪ್ತ ಕಥಾ ಶುಭಾ**
**ಯಸ್ಯಾಃ ಶ್ರವಣ ಮಾತ್ರೇಣ ಬ್ರಹ್ಮಹತ್ಯಾ ವಿನಶ್ಯತಿ**".

ಮಹಾಮಹಿಮರೇ! ಈಗ ನಾನು ಹೇಳಿದ ಧರ್ಮಗುಪ್ತನ ಕಥೆಯನ್ನು ಕೇಳುವವರಿಗೆ ಬ್ರಹ್ಮಹತ್ಯಾದೋಷದ ಪಾಪ ನಾಶವಾಗುತ್ತದೆ. ಹೀಗೆ ಹೇಳುತ್ತಾ ಸೂತರು ಮುಂದುವರಿಸಿದರು.

**"ವೆಂಕಟಾದ್ರಿ ಮಹಾಪುಣ್ಯೇ ಸರ್ವ ಪಾತಕ ನಾಶನೇ**
**ಸ್ವಾಮಿಪುಷ್ಕರಣೀರಿತಿ ವರ್ತತೇ ಮಂಗಳಪ್ರದಾ**
**ಭೋ!ಭೋ! ತಪೋಧನಾಃ ಸರ್ವ ನೈಮಿಶಾರಣ್ಯ ವಾಸಿನಃ**
**ಸ್ವಾಮಿತೀರ್ಥಸ್ಯ ಮಾಹಾತ್ಮ್ಯಂ ಭೂಯೋಽಪಿ ಪ್ರಪದಾಮ್ಯಹಮ್"**

"ಸರ್ವಪಾತಕವನ್ನು ನಾಶ ಮಾಡುವಂತಹ ವೆಂಕಟಾದ್ರಿಕ್ಷೇತ್ರಂ ಮಹಾಪುಣ್ಯಪ್ರದವೆಂದು ಪ್ರಸಿದ್ಧವಾಗಿದೆ. ಆ ಪವಿತ್ರವಾದ ದಿವ್ಯ ಪ್ರದೇಶದಲ್ಲಿ ಮಂಗಳಪ್ರದವಾದ ಸಕಲ ಕಲ್ಯಾಣ ಪರಂಪರೆಯನ್ನು ಉಂಟುಮಾಡುವ "ಸ್ವಾಮಿಪುಷ್ಕರಿಣಿ"ಎನ್ನುವ ತೀರ್ಥರಾಜ ವರ್ಧಿಸುತ್ತಲೇ ಇದೆ ಅಲ್ಲವೇ? ಪರಮಪವಿತ್ರವಾದ ನೈಮಿಶಾರಣ್ಯ ಕ್ಷೇತ್ರ ಭುವಿಯಲ್ಲಿ ಬೇರೊಂದು ಇಲ್ಲ. ಶೌನಕಾದಿ ಮಹಾಮುನಿಗಳೇ! ನಿಮಗೆಲ್ಲರಿಗೂ ಆ ಸ್ವಾಮಿಪುಷ್ಕರಣಿ ತೀರ್ಥ ಮಹಾತ್ಮೆಯನ್ನು ಮತ್ತೆ ಮತ್ತೆ ಹೇಳುತ್ತಲೇ ಇದ್ದೀನಿ. ನೀವು ಶ್ರದ್ಧೆಯಿಂದ, ಭಕ್ತಿಯಿಂದ ಕೇಳಿದಿರಿ ಎಂದು ಹೇಳುತ್ತ ಸೂತಮುನಿಗಳು ವೆಂಕಟಾಚಲದಲ್ಲಿ ಇರುವ ಶ್ರೀಆದಿವರಾಹ ಸ್ವಾಮಿಯ ಬಗ್ಗೆ ಹೇಳುವ ಮೊದಲು, ಹಲವಾರು ಕಥೆಗಳ ಮೂಲಕ ಸ್ವಾಮಿಪುಷ್ಕರಣಿ ಮಹಿಮೆಯನ್ನು ಹೇಳಿ ತಮ್ಮ ಪ್ರವಚನವನ್ನು ಮುಂದುವರಿಸಿದರು

## ಸುಮತಿ ಕಥೆ

ಪೂರ್ವದಲ್ಲಿ ಮಹಾರಾಷ್ಟ್ರದಲ್ಲಿ "ಯಜ್ಞದೇವ"ನೆಂಬ ಬ್ರಾಹ್ಮಣನು ಇದ್ದನು. ಈತನು ಭೇದಭಾವ ತೋರದೆ, ಎಲ್ಲರಲ್ಲಿಯೂ ದಯೆ ತೋರುವ, ಸದಾ ತನ್ನ ಇಷ್ಟದೇವರನ್ನು ಪೂಜಿಸಲ್ಪಡುವ ಶ್ರೇಷ್ಠ ಬ್ರಾಹ್ಮಣನೆಂದು ಹೆಸರಾಗಿದ್ದ. ನಿತ್ಯವು ಅತಿಥಿ ಅಭ್ಯಾಗತರನ್ನು ಸೇವಿಸುತ್ತಿದ್ದನು. ಆ ಪಂಡಿತನಿಗೆ "ಸುಮತಿ" ಎಂಬ ಮಗನಿದ್ದನು, ಅವನು ಧರ್ಮನಿಷ್ಠನೂ ಭಕ್ತರ ಸೇವೆಯಲ್ಲಿ ನಿರತನು ಆಗಿದ್ದನು.

ತಂದೆಗೆ ತಕ್ಕ ಮಗನಾಗಿ ಬೆಳೆದು ದೊಡ್ಡವನಾದ. ಸುಮತಿ ಸುಂದರ ಕನ್ಯೆಯನ್ನು ಮದುವೆಯಾದನು. ಅವರ ಸಂಸಾರವು ಸುಖ ಶಾಂತಿ ನೆಮ್ಮದಿಯಿಂದ ಇತ್ತು. "ವಿನಾಶಕಾಲೇ ವಿಪರೀತ ಬುದ್ಧಿ" ಎನ್ನುವ ಹಾಗೆ ಸುಮತಿಯು ತನ್ನ ಸುಂದರವಾದ ಪತ್ನಿ ಅತ್ಯಂತ ಪ್ರೀತಿಯಿಂದ ಸಾಕಿಸಲುಹಿದ ತಂದೆತಾಯಿಯನ್ನು ಬಿಟ್ಟು ಭೋಗಲಾಲಸೆಗೆ ವಶನಾಗಿ ಉತ್ಕಲ ದೇಶಕ್ಕೆ ಸಂಚಾರ ಹೊರಟನು.

ಆ ಸಮಯದಲ್ಲಿ ಯುವಕರ ಜತೆ ಚೆಲ್ಲಾಟವಾಡುತ್ತಿದ್ದ ಯುವತಿಯೊಬ್ಬಳನ್ನು ಕಂಡನು. ಅವಳ ಕಾಮುಕ ನೋಟಕ್ಕೆ ಸಿಲುಕ್ಕಿಬಿದ್ದ ಸುಮತಿ ಅವಳನ್ನು ಹಿಂಬಾಲಿಸಿದನು. ತನ್ನ ಪ್ರೀತಿಯ ತಂದೆ–ತಾಯಿಯನ್ನು, ಮುಗ್ಧಮನಸ್ಸಿನ ಪ್ರೀತಿಯ ಹೆಂಡತಿ, ಕೊನೆಗೆ ತಾನು ಹುಟ್ಟಿದ ಹಳ್ಳಿಯನ್ನು ಮರೆತು, ವೇಶ್ಯೆಯ ಮನೆಯಲ್ಲಿ ಸಂಪೂರ್ಣವಾಗಿ ನೆಲೆಸಿದ. ಆ ಹೆಂಗಸೇ ತನ್ನ ಸರ್ವಸ್ವವೆಂದು ಭಾವಿಸಿ, ಹಗಲಿರುಳು ಅವಳ ಗುಲಾಮನಂತೆ ಸೇವೆ ಮಾಡುತ್ತ ಅವಳ ಸಂಗದಲ್ಲಿ ಮದ್ಯಮಾಂಸಕ್ಕೆ ಶರಣಾಗಿ, ಅಲೆದಾಡುತ್ತಾ ಭ್ರಮೆಯಲ್ಲಿದ್ದನು. ಅವನ ವೇಷಭೂಷಣ ಅಭ್ಯಾಸ, ಆಚಾರ–ವಿಚಾರಗಳೂ ಸಂಪೂರ್ಣ ಬದಲಾದವು. ಕೊನೆಗೆ ತಾನು ಒಬ್ಬ ಬ್ರಾಹ್ಮಣ ಎಂಬುದನ್ನೂ ಸಂಪೂರ್ಣವಾಗಿ ಮರೆತು ಅಲೆದಾಡಿದನು.

ಹೀಗಿರುವಾಗ ಆ ಭ್ರಷ್ಟಬ್ರಾಹ್ಮಣ ಸುಮತಿ ಧನಾರ್ಜನೆಗಾಗಿ ಒಂದು ದಿನ ಇತರ ಹುಡುಗರೊಂದಿಗೆ ಹಣವನ್ನು ಕದಿಯಲು ಹೊರಟನು. ಅದಕ್ಕಾಗಿ ಧನಿಕನಾದ ಒಬ್ಬ ವಿಪ್ರನ ಮನೆಯನ್ನು ಪ್ರವೇಶಿಸಿದನು. ಅಷ್ಟರಲ್ಲಿ ಮನೆಯ ಯಜಮಾನ ಎದುರಾಗಿ ವಿರೋಧಿಸಿ ಜಗಳವಾಡಿದ, ಸುಮತಿ ಆ ಧನಿಕನನ್ನು ತನ್ನ ಕತ್ತಿಯಿಂದ ಕೊಂದು ಮನೆಯಲ್ಲಿದ್ದ ಹಣವನ್ನು ದೋಚಿದನು. ಅಲ್ಲದೆ ಹತ್ಯೆ ಮಾಡಿದ ಕಾರಣ "ಬ್ರಹ್ಮಹತ್ಯಾದೋಷಕ್ಕೆ" ಗುರಿಯಾದನು.

**ನೀಲವಸ್ತ್ರಧರಾ, ಭೀಮಾ ಭೃಶಂ ರಕ್ತ ಶಿರೋರುಹಾ**
**ಗರ್ಜನ್ತಿ ಅಟ್ಟಹಾಸಂ ಕಂಪಯಂತಿ ಚ ರೋದಸಿ**

ಕಪ್ಪುವಸ್ತ್ರವನ್ನು ಧರಿಸಿ, ಭಯವನ್ನು ಉಂಟುಮಾಡುವ ವಿರೂಪದ ಕೆಂಪು ಕೂದಲಿನೊಂದಿಗೆ, ನೋಡಿದರೆ, ಭೂಮಿ ಆಕಾಶ ಕಂಪಿಸುವಂತೆ ವಿಕಟಾಟ್ಟಹಾಸದಿಂದ ಗಹ ಗಹಿಸಿ ನಗುತ್ತ ಒಂದು ವಸ್ತು ಅವನನ್ನು ಅಟ್ಟಿಸಿಕೊಂಡು ಬಂತು.

ಸುಮತಿಯು ತನ್ನನ್ನು ಹಿಂಬಾಲಿಸಿಕೊಂಡು ಬರುತ್ತಿರುವ ಬ್ರಹ್ಮಹತ್ಯಾ ರೂಪದಲ್ಲಿರುವ ವಸ್ತುವನ್ನು ಕಂಡು ಹೆದರಿ ಓಡುತ್ತಿದ್ದನು. ಆದರೆ ಅದು ಅವನನ್ನು ಬೆನ್ನಟ್ಟುತ್ತಲೇ ಇತ್ತು. ಹೀಗೆ ಭ್ರಷ್ಟನಾದ ಸುಮತಿ ತಿರುಗುತ್ತಾ ತಿರುಗುತ್ತಾ ಕಡೆಗೆ ತನ್ನ ಸ್ವಗ್ರಾಮಕ್ಕೆ ಬಂದು ಭಯದಿಂದ ತನ್ನ ತಂದೆಯಾದ ಯಜ್ಞದೇವನಿಗೆ ನಮಸ್ಕರಿಸಿ, ಮಾಡಿದ ತಪ್ಪನ್ನು ಮನ್ನಿಸುವಂತೆ ಕೇಳಿಕೊಂಡನು. ಹಲವಾರು ವರ್ಷಗಳಿಂದ ತಮ್ಮ ಮಗ ಎಲ್ಲಿ ಹೋಗಿದ್ದಾನೆ, ಏನು ಮಾಡುತ್ತಿದ್ದಾನೆ ಎಂದು ಪರಿತಪಿಸುತ್ತಿದ್ದ ತಂದೆಯ ಬಳಿ ತನ್ನನ್ನು ಅಟ್ಟಿಸಿಕೊಂಡು ಬರುತ್ತಿರುವ ಬ್ರಹ್ಮಹತ್ಯಾ ರೂಪದ ವಸ್ತುವಿನಿಂದಾಗಿ ತನಗೆ ಆಗುತ್ತಿರುವ ಹಿಂಸೆ, ಭಯವನ್ನು ಹೇಳಿಕೊಂಡನು. ಮಗನಿಗಾಗಿ ಹಂಬಲಿಸುತ್ತಿದ್ದ ತಂದೆ ಪ್ರೀತಿಯಿಂದ ನೀನು ಯಾವದೇ ಕಾರಣಕ್ಕೂ ಹೆದರಬೇಡ ಎಂದು ಹೇಳಿದನು.

ಅಷ್ಟರಲ್ಲಿ ವಿಕಾರರೂಪದ ಬ್ರಹ್ಮಹತ್ಯಾದೋಷವು ಅವನನ್ನು ಹಿಂಬಾಲಿಸುತ್ತ ಅಲ್ಲಿಗೆ ಬಂದು, "ಓ ಸ್ವಾಮಿ! ಯಜ್ಞದೇವ! ಸರ್ವ ವಿಧದಲ್ಲಿ ಭ್ರಷ್ಟನಾದ ನಿನ್ನ ಪುತ್ರನನ್ನು ನೀನು ಈ ರೀತಿ ಆದರಿಸುವುದು ಸರಿಯಲ್ಲ. ಅಲ್ಲದೆ ಅವನು ಸುರಾಪಾನ, ಮಾಂಸಾಹಾರಿ ಆಗಿ ದ್ದಾನೆ, ವೇಶ್ಯೆಯ ಸಂಗವನ್ನು ಮಾಡಿದ್ದಾನೆ. ಇದೂ ಸಾಲದು ಎಂಬಂತೆ ಒಬ್ಬ ಬ್ರಾಹ್ಮಣನನ್ನು ಹತ್ಯೆಮಾಡಿದ್ದಾನೆ. ಹಣವನ್ನು ದೋಚಿದ್ದಾನೆ. ಅಲ್ಲದೆ ಅವನೇ ಸರ್ವಸ್ವ ಎಂದು ನಂಬಿ ಬಂದಿದ್ದ ಹೆಂಡತಿಯನ್ನು ಬಿಟ್ಟು ವೇಶ್ಯೆಯ ಸಂಗಮಾಡಿದ್ದಾನೆ. ನಿನ್ನ ವಂಶವನ್ನು ಸರ್ವನಾಶ ಮಾಡಿದ್ದಾನೆ. ಇಷ್ಟೆಲ್ಲ ದುಷ್ಕೃತ್ಯವನ್ನು ಮಾಡಿರುವ ಈ ದುಷ್ಟನನ್ನು ಬಿಟ್ಟುಬಿಡು. ನಿಮ್ಮನ್ನು ಬಿಟ್ಟು, ಇವನನ್ನು ಮಾತ್ರ ನುಂಗುತ್ತೇನೆ ಎಂದು ಕರ್ಕಶವಾಗಿ ಹೇಳಿತು.

ಕೂಡಲೆ ಯಜ್ಞದೇವನು "ಇವನು ಎಷ್ಟೇ ಪಾಪಮಾಡಿದ್ದರೂ ಇವನು ನನ್ನ ಮಗ! ಇವನ ಮೇಲಿನ ಪ್ರೀತಿಯನ್ನು ಹೇಗೆ ಕೊಲ್ಲಲಿ. ಹೀಗಿರುವಾಗ ಇವನನ್ನು ಹೇಗೆ ಬಿಡಲಿ ಎಂದು ಹೇಳುತ್ತಿರುವಾಗಲೆ ಅವನ ಎದುರಿಗೆ ಆ ಬ್ರಹ್ಮಹತ್ಯೆ ರೂಪವು ಕ್ಷುದ್ರನಾಗಿ ಸುಮತಿಯನ್ನು ಹೊಡೆದನು. ಸುಮತಿ ಅಸಹಾಯಕನಾಗಿ ತಂದೆಯನ್ನು ನೋಡುತ್ತ ಅಳುತ್ತಿದ್ದನು.

ಅವನ ಸ್ಥಿತಿಯನ್ನು ನೋಡಿ ಅವನ ತಂದೆ, ತಾಯಿ, ಹೆಂಡತಿ ಎಲ್ಲರೂ ನೋವಿನಿಂದ, ಹಿಂಸೆ ಪಡುತ್ತಿದ್ದರು. ಆ ಸಮಯಕ್ಕೆ ಸರಿಯಾಗಿ ರುದ್ರನ ಅಂಶದಿಂದ

ಜನಿಸಿದ ಪರಮಯೋಗಿಗಳು, ಜ್ಞಾನಿಗಳೂ ಆದ ದೂರ್ವಾಸ ಮಹರ್ಷಿಗಳು ಅಲ್ಲಿಗೆ ಬಂದರು.

ಅವರನ್ನು ನೋಡಿ ಯಜ್ಞದೇವನು, ಅವರ ಪಾದಗಳಿಗೆ ಭಕ್ತಿಯಿಂದ ನಮಸ್ಕರಿಸಿ, ಭೀತನಾಗಿರುವ ತನ್ನ ಮಗನನ್ನು ತೋರಿಸುತ್ತ "ಮಹರ್ಷಿಯೇ, ಇವನ್ನು ನನ್ನ ಒಬ್ಬನೇ ಮಗ, ವಂಶದಕುಡಿ. ಅವನು ಸತ್ತರೆ ನನ್ನ ವಂಶ ನಿರ್ನಾಮವಾಗುತ್ತದೆ. ನನ್ನ ಮಗನ ಬ್ರಹ್ಮಹತ್ಯಾ ದೋಷವು ನಿವಾರಣೆ ಆಗಲು ತಾವು ನನಗೆ ದಾರಿ ತೋರಬೇಕು ಎಂದು ಪ್ರಾರ್ಥಿಸಿದನು.

ಯಜ್ಞದೇವನು ನಡೆದ ವೃತ್ತಾಂತವನ್ನು ಹೇಳಿದ್ದೆಲ್ಲವನು ಕೇಳಿದ ದುರ್ವಾಸ ಮಹರ್ಷಿಗಳು ಹಲವು ಬಗೆಯಲ್ಲಿ ಆಲೋಚಿಸಿ "ಯಜ್ಞದೇವ, ನಿನ್ನ ಮಗ ಮಾಡಿರುವ ಪಾಪಕರ್ಮಗಳು ಹೇಳಲು ಅಸಾಧ್ಯ. ಅವನು ಎಷ್ಟೇ ತಪಸ್ಸು ಮಾಡಿದರು ಮುಕ್ತಿ ಅಸಾಧ್ಯ. ಆದರೂ ಒಂದೇ ಒಂದು ದಾರಿಕಾಣಿಸುತ್ತಿದೆ. ಅದನ್ನು ಈಗ ನಾನು ಹೇಳುತ್ತೇನೆ ನೀವು ಬಹಳ ಎಚ್ಚರಿಕೆಯಿಂದ ಕೇಳಿಸಿಕೊಳ್ಳುವಂತರಾಗಿ..

ಈ ಭೂಮಿಯ ಮೇಲೆ ಅತ್ಯಂತ ಪವಿತ್ರವಾದ ಮತ್ತು ಎಲ್ಲಾ ರೀತಿಯ ಮಹಾಪಾಪಗಳನ್ನು ನಾಶಮಾಡುವ ದಿವ್ಯ ಕ್ಷೇತ್ರವಿದೆ. ಅದು ಶ್ರೀ ವೆಂಕಟಾಚಲ. ಆ ಪುಣ್ಯಕ್ಷೇತ್ರದಲ್ಲಿ ಸಕಲ ಐಶ್ವರ್ಯಗಳನ್ನು, ದಯಪಾಲಿಸುವ 'ಸ್ವಾಮಿಪುಷ್ಕರಿಣಿ' ಎಂಬ ತೀರ್ಥವಿದೆ.

ಆ ಪರಮಪವಿತ್ರವಾದ ನೀರಿನಲ್ಲಿ ನಿಮ್ಮ ಮಗನಿಗೆ ಸ್ನಾನ ಮಾಡಿಸಿದರೆ, ನಿಮ್ಮ ಮಗನನ್ನು ಕಾಡುತ್ತಿರುವ ಬ್ರಹ್ಮಹತ್ಯಾದೋಷವು ಕ್ಷಣಾರ್ಧದಲ್ಲಿ ಮಾಯವಾಗುತ್ತದೆ. ಮಹಾವೃಕ್ಷಗಳನ್ನು ಕಡಿಯುವ ಹರಿತವಾದ ಕೊಡಲಿಯಂತೆ ಸ್ವಾಮಿಪುಷ್ಕರಣಿ ಸಕಲ ಪಾತಕಗಳನ್ನು ನಾಶಮಾಡುತ್ತದೆ. ಯಾವುದೇ ಸಂದೇಹವಿಲ್ಲದೆ ಆದಷ್ಟು ಶೀಘ್ರವಾಗಿ ಶ್ರೀವೆಂಕಟಾಚಲಕ್ಕೆ ಹೊರಡುವಂತರಾಗಿ. ಅಲ್ಲಿ ಸ್ವಾಮಿಪುಷ್ಕರಣಿಯನ್ನು ಪೂಜಿಸಿ, ಸ್ನಾನಮಾಡಿ ಆನಂದವನ್ನು ಹೊಂದಿ ಎಂದು ಆಶೀರ್ವದಿಸಿ ಕಳಿಸಿದರು.

ಅಲ್ಲಿಂದ ಹೊರಟ ಯಜ್ಞದೇವನು ಶ್ರೀವೇಂಕಟೇಶನ ಸನ್ನಿಧಿಗೆ ತೆರಳಿ, ಅದಕ್ಕೆ ಮುನ್ನ "ಸ್ವಾಮಿಪುಷ್ಕರಣಿ"ಯಲ್ಲಿ ತನ್ನ ಪುತ್ರನಿಗೆ ಸ್ನಾನ ಮಾಡಿಸಿದನು. ಆಗ ಒಂದು ಸುಮಧುರವಾದ ವಾಣಿಯು ಕೇಳಿಬಂತು.

"ಓ ಯಜ್ಞದೇವ! ಮಹಾಭಾಗ! ನಿನ್ನ ಪುತ್ರನು ಬ್ರಹ್ಮಹತ್ಯಾ ದೋಷದಿಂದ ವಿಮುಕ್ತಿ ಹೊಂದಿ ಪವಿತ್ರನಾಗಿದ್ದಾನೆ. ಇದರ ಬಗ್ಗೆ ನಿನಗೆ ಸಂದೇಹಬೇಡ." ಎಂಬುದಾಗಿ ಅಶರೀರವಾಣಿ ಕೇಳಿಬಂತು.

ಒರೆಗೆ ಹಚ್ಚಿದ ಚಿನ್ನದಂತೆ ಪವಿತ್ರನಾಗಿರುವ, ಪಾಪವಿಮುಕ್ತನಾದ ಮಗನೊಂದಿಗೆ ವೆಂಕಟಾಚಲಪತಿಯ ದರ್ಶನಮಾಡಿ ಯಜ್ಞದೇವನು ತನ್ನ ಸ್ವಗ್ರಾಮಕ್ಕೆ ತೆರಳಿದನು.

**"ಏವಂ ಪ್ರಭಾವಂ ತತ್‌ತೀರ್ಥಮ್ ಪಾಪವೃಕ್ಷ ಕುಠಾರಕಮ್**
**ಏವಂ ವಃ ಕಥಿತಂ ವಿಪ್ರಾಃ ಇತಿಹಾಸಂ ಪುರಾತನಂ**
**ಶೃಣ್ವತಾಂ ಪಠತಾಂ ಚಾಪಿ ವಾಜಪೇಯ ಫಲಂ ಲಭೇತ್"**

ಮಹಾವೃಕ್ಷಗಳನ್ನು ಕಡಿಯುವ ಹರಿತವಾದ ಕೊಡಲಿಯಂತೆ, ಸ್ವಾಮಿಪುಷ್ಕರಣಿ ಮಹಾಪಾತಕಗಳನ್ನು ನಿವಾರಿಸುತ್ತದೆ. ಅತ್ಯಂತ ಪ್ರಾಚೀನವು, ಪವಿತ್ರವು ಆದ ದಿವ್ಯಕಥೆಯನ್ನು ನೀವು ಕೇಳಿದಿರಿ. ಈ ಕಥೆಯನ್ನು ಹೇಳಿದವರಿಗೆ, ಕೇಳಿದವರಿಗೆ ಅತ್ಯಂತ ಸುಲಭವಾಗಿ "ವಾಜಪೇಯಯಾಗ" ಮಾಡಿದ ಫಲವು ಸಿಗುತ್ತದೆ ಎಂದು ಸೂತಮಹರ್ಷಿಗಳು ಹೇಳಿದರು.

## ಸಮಸ್ತತೀರ್ಥ ಯಾತ್ರಾಫಲ

ಒಂದಾನೊಂದು ಕಾಲದಲ್ಲಿ ಮಾರ್ಕಂಡೇಯ ಮಹಾಮುನಿ, ಬ್ರಹ್ಮದೇವರನ್ನು ಕುರಿತು ಭಕ್ತಿ, ಶ್ರದ್ಧೆಯಿಂದ ತಪಸ್ಸು ಮಾಡಿದನು. ಮುನಿಯ ತಪಸ್ಸಿಗೆ ಮೆಚ್ಚಿದ ಬ್ರಹ್ಮದೇವ ಪ್ರತ್ಯಕ್ಷನಾಗಿ "ಮುನೀಂದ್ರ! ಯಾವ ಉದ್ದೇಶ್ಯಕ್ಕಾಗಿ ತಪಸ್ಸನ್ನು ಮಾಡುತ್ತಿರುವೆ? ನಾನು ಅದನ್ನು ನೆರವೇರಿಸುತ್ತೇನೆ. ಆ ನಿನ್ನ ಕೋರಿಕೆ ಏನೆಂದು ಕೇಳಲು, ಮಾರ್ಕಂಡೇಯ ಮಹಾಮುನಿಯು "ಬ್ರಹ್ಮದೇವ! ಪ್ರಪಂಚದಲ್ಲಿರುವ ಸಕಲ ತೀರ್ಥಗಳ ದರ್ಶನವನ್ನು ಮಾಡಲು ಶಕ್ತಿಯನ್ನು ಕೊಡು ತಂದೆ" ಎಂದು ವರವನ್ನು ಬೇಡಿದನು.

ಬ್ರಹ್ಮದೇವನು ತಕ್ಷಣವೇ "ಮುನಿವರ್ಯ, ನಿನ್ನ ಈ ಕೋರಿಕೆ ಈಡೇರಿಸುವುದು ಅಷ್ಟು ಸುಲಭವಲ್ಲ. ಎಷ್ಟು ಛಲವಿದ್ದರೂ, ಶಕ್ತಿಯಿದ್ದರೂ ಸಾಲದು. ಇದನ್ನು ಕರುಣಿಸಲು ನನಗೆ ಸಾಧ್ಯವಿಲ್ಲ. ನನಗೇ ಏನು ರುದ್ರನಿಗೂ ಸಾಧ್ಯವಿಲ್ಲ. ಇದು ಆಗದ ಕೆಲಸ. ಆದರೆ ಸರ್ವ ತೀರ್ಥ ಯಾತ್ರಾಫಲ ಸಿದ್ಧಿಸಲು ಒಂದು ಉಪಾಯವಿದೆ. ಸರಿಯಾಗಿ ಕೇಳಿಸಿಕೋ:–

**ಅಸ್ತಿ ಶ್ರೀವೆಂಕಟನಾಮ ಪ್ರಥಿತಃ ಪರ್ವತೋತ್ತಮಃ**
**ದ್ರವಿಡೇಷು ಮಹಾಪುಣ್ಯಂ ಸೇವಿತಸ್ತ್ರಿದಶ್ತ ರ್ಗಿರಿಃ**
**ತಸ್ಯ ಶೃಂಗ ಸುಮಪಾತಿ ಪುಣ್ಯಾ ಪಾಪನಾಶಿನೀ**
**ಸ್ವಾಮಿಪುಷ್ಕರಣೀ ನಾಮ ಸರಸಿ ಸರ್ವ ಕಾಮದಾ**

ಇಲ್ಲಿಂದ ಸುಮಾರು ಇನ್ನೂರು ಯೋಜನ ದೂರದಲ್ಲಿ ಸಕಲ ದೇವಾನುದೇವತೆಗಳಿಂದ ಪೂಜಿಸಲ್ಪಡುವ ಪರ್ವತರಾಜ ಶ್ರೀವೆಂಕಟನು ವಿರಾಜಿಸುತ್ತಿದ್ದಾನೆ. ಅದು ಮಹಾ ಪುಣ್ಯ ಪ್ರದ ಆಗಿದೆ.

ಆ ಪರ್ವತ ಶಿಖರದ ಮೇಲೆ **"ಸ್ವಾಮಿ ಪುಷ್ಕರಣಿ"** ಎನ್ನುವ ಹೆಸರಿನಿಂದ ಪ್ರಸಿದ್ಧವಾಗಿರುವ ಕಲ್ಯಾಣಿಯಿದೆ. ಅದು ಸಕಲ ಪಾಪಗಳನ್ನು ನಿವಾರಿಸಿ, ಪುಣ್ಯವನ್ನು ಕೊಟ್ಟು, ಸಕಲ ಕೋರಿಕೆಗಳನ್ನು ನೆರವೇರಿಸುತ್ತಿದೆ.

**"ಧನುರ್ಮಾಸೇ ಸಿತೇ ಪಕ್ಷೇ ದ್ವಾದಶ್ಯಾಂ ಅರುಣೋದಯೇ**
**ಆಯಾಂತಿ ಸರ್ವ ತೀರ್ಥಾನಿ ಸ್ವಾಮಿಪುಷ್ಕರಿಣೀ ಜಲೇ"**

ಪ್ರತಿ ವರ್ಷ ಧನುರ್ಮಾಸದಲ್ಲಿ ಅಂದರೆ ಮಾರ್ಗಶಿರಮಾಸ ಶುಕ್ಲ ಪಕ್ಷದಲ್ಲಿ ದ್ವಾದಶಿ ತಿಥಿಯಂದು ಉಷೋದಯದಲ್ಲಿ ಮೂರುಲೋಕದಲ್ಲಿನ ಎಲ್ಲಾ ತೀರ್ಥವನ್ನು ಮನಸಾರೆ ಸ್ವಾಮಿಪುಷ್ಕರಿಣಿ ಎಂದು ಪೂಜಿಸುತ್ತಾರೆ. ಏಕೆಂದರೆ ಆ ತೀರ್ಥಗಳೆಲ್ಲ ಅನೇಕ ಪಾಪಾತ್ಮರು ಮುಳುಗಿ ಸ್ನಾನ ಮಾಡಿರುವುದರಿಂದ ಆ ಪಾಪಗಳೆಲ್ಲವು ಲೀನವಾಗಿ ಅಪವಿತ್ರವಾಗಿದೆ. ಪಾಪಾತ್ಮರು, ತಾವು ಮಾಡಿದ ಪಾಪಕರ್ಮದಿಂದ, ಆ ಪವಿತ್ರದಿನ ಪಾಪಗಳಿಂದ ಮುಕ್ತರಾಗಲು ಅಂದು ಆ ಪವಿತ್ರ ದಿನದಂದು ಸ್ವಾಮಿಪುಷ್ಕರಿಣಿಯಲ್ಲಿ ಮುಳುಗಿ ಸ್ನಾನಮಾಡುತ್ತಾರೆ! ಆದುದರಿಂದ "ಓ ಮಾರ್ಕಂಡೇಯ ಮುನಿಗಳೇ, ನೀವೂ ಕೂಡ ಶುಭಪ್ರದವಾದ ಆ ವಿಶೇಷದಿನದಂದು ಸ್ವಾಮಿ ಪುಷ್ಕರಿಣಿ ತೀರ್ಥದಲ್ಲಿ ಸ್ನಾನ ಮಾಡಿರಿ. ಅದರಿಂದ ಎಲ್ಲಾ ತೀರ್ಥಗಳನ್ನು ಸೇವಿಸಿದ ಫಲವು ನಿನಗೆ ದೊರೆಯುತ್ತದೆ" ಎಂದು ಬ್ರಹ್ಮದೇವನು ಆಜ್ಞಾಪಿಸಿದನು.

ಚತುರ್ಮುಖ ಬ್ರಹ್ಮದೇವನ ಆಣತಿಯ ಪ್ರಕಾರ ಮಾರ್ಕಂಡೇಯ ಮಹರ್ಷಿಗಳು ಮಾರ್ಗಶಿರ ಶುಕ್ಲದ್ವಾದಶಿಯಂದು ಅರುಣೋದಯ ಕಾಲದಲ್ಲಿ ವೆಂಕಟಾಚಲ ಕ್ಷೇತ್ರಕ್ಕೆ ತೆರಳಿ ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನಮಾಡಿದನು. ತರುವಾಯ ಶ್ರೀವೆಂಕಟಾಚಲಪತಿಯನ್ನು ಹಲವು ರೀತಿಯಲ್ಲಿ ಪ್ರಾರ್ಥಿಸಿ ಕೃತಾರ್ಥನಾದನು ಎಂದು ಸೂತರು ಶೌನಕಾದಿಗಳಿಗೆ ಸ್ವಾಮಿಪುಷ್ಕರಣಿಯ ಬಗ್ಗೆ ಮನಮುಟ್ಟುವಂತೆ ತಿಳಿಹೇಳಿದರು.

## ಸರಸ್ವತಿದೇವಿ

ಪೂರ್ವದಲ್ಲಿ ಸರಸ್ವತಿದೇವಿ, ಗಂಗಾನದಿ ಮೊದಲಾದ ಮಹಾನದಿಗಳಿಗಿಂತ ಉನ್ನತವಾದ, ಮಹಿಮಾನ್ವಿತವಾದ "ತೀರ್ಥರಾಜ"ನೆಂಬ ಖ್ಯಾತಿಯನ್ನು ಹೊಂದಿ

ಗೌರವಿಸಲ್ಪಡಬೇಕು ಎಂಬ ಮನೋಕಾಂಕ್ಷೆಯನ್ನು ಹೊಂದಿ ಸರಸ್ವತಿ ನದಿಯಾಗಿ ಪ್ರವಹಿಸುತ್ತಿದ್ದಳು. ಅದೇ ಸಮಯದಲ್ಲಿ ಪೌಲಸ್ತ್ಯನು ತಪಸ್ಸು ಮಾಡಲು ಆ ನದಿತೀರದ ಪ್ರಾಂತ್ಯಕ್ಕೆ ಬಂದರು. ಅಲ್ಲಿಗೆ ಬಂದ ಆ ಮಹರ್ಷಿಯನ್ನು ನೋಡಿಯೂ, ನೋಡದವಳಂತೆ ಇದ್ದು, ಅವರಿಗೆ ಕೊಡಬೇಕಾದ ಗೌರವವನ್ನು ಕೊಡಲಿಲ್ಲ, ಅತಿಥಿ ಸತ್ಕಾರವನ್ನು ಮಾಡಲಿಲ್ಲ, ಪುತ್ರನಂತೆ ಕಾಣಲಿಲ್ಲ, ಪೂಜಿಸಲಿಲ್ಲ... ಆದರದಿಂದ ಮಾತನಾಡಿಸಲಿಲ್ಲ.

"**ತತಸ್ತಂ ಕುಪಿತಾಃ ಪ್ರಾಹ ಯಾ ತೇ ಕಾಂಕ್ಷ ಸರಸ್ವತಿ.**
**ತವ ನೇ ವಿಫಲಾ ಭೂಯಾತ್ ನದೀ ರೂಪೇಣ ಸರ್ವದಾ**
**ಗುಣ ಸಾಮಾನ್ಯ ಭಾವೇಽಪಿ ವಿಷ್ಣುಪಾದ ಪ್ರಭಾವತಃ**
**ತವಾಧಿಕೇನ ಯಶಸಾ ಭವಿಷ್ಯತಿ ಸರಿದ್ವರಾ**
**ತೀರ್ಥತೃಷ್ವೇ ಸ್ತವ ಭೂಯಾತ್ ಭುವಿ ಗಂಗಾಖ್ಯಾಯಾ ಶುಭಾ"**

ಅದರಿಂದ ಪುಲಸ್ತ್ಯ ಮಹರ್ಷಿ ಅವಳ ಮೇಲೆ ಕೋಪಗೊಂಡು **"**ಓ ಸರಸ್ವತಿ! ನೀನು ಗಂಗಾನದಿಗಿಂತ ಹೆಚ್ಚು ಪ್ರಸಿದ್ಧಳಾಗಬೇಕೆಂಬ ನಿನ್ನ ಬಯಕೆ ಈಡೇರುವುದಿಲ್ಲ. ನಿನಗೆ ಇತರ ಎಲ್ಲಾ ನದಿಗಳಿಗೆ ಸಮಾನವಾದ ಧರ್ಮವನ್ನು ಹೊಂದಿದ್ದರೂ, ಶ್ರೀಮಹಾವಿಷ್ಣುವಿನ ಪಾದದಿಂದ ಹುಟ್ಟಿದ ಪವಿತ್ರ ಗಂಗಾನದಿ ಮಾತ್ರವೇ ಶ್ರೇಷ್ಠ ಹಾಗು ಎಲ್ಲ ರೀತಿಯ ಗೌರವವನ್ನು ಹೊಂದಿದ್ದಾಳೆ, ಅವಳಂತೆ ನೀನು ಕೀರ್ತಿ ಹೊಂದಲು ಸಾಧ್ಯವಿಲ್ಲ ಎಂದು ಶಪಿಸಿದರು.

ಈ ಮುನಿಯು ನೀಡಿದ ಶಾಪದಿಂದ ಕುಪಿತಳಾದ ಸರಸ್ವತಿನದಿ **"**ಓ ಮುನಿಯೇ! ನೀನು ತಾಪಸಿಯಾಗಿದ್ದರೂ, ನೀನು, ನಿನ್ನ ಸ್ವಾಭಿಮಾನದಿಂದ ನಿಷ್ಕಾರಣವಾಗಿ ನನ್ನನ್ನು ಶಪಿಸಿದ್ದೀಯಾ. ಆದ್ದರಿಂದ

"**ರಾಕ್ಷಸಸ್ತ್ರೀ ಭವೇದ್ವಂಶೋ ಸತ್ ವಿಷ್ಣೋರಪ್ರಿಯ ಕಾರಕಃ**".

"ಭಗವಾನ್ ವಿಷ್ಣುವಿಗೆ ಅಪ್ರಿಯರಾದ ರಾಕ್ಷಸರೊಂದಿಗೆ ನಿಮ್ಮ ವಂಶವು ಪ್ರವರ್ಧಮಾನಕ್ಕೆ ಬರಲಿ!" ಎಂದು ಸರಸ್ವತಿ ಶಪಿಸಿದಳು. ತಕ್ಷಣವೇ ಪುಲಸ್ತ್ಯನು ತನ್ನ ಅವಸರದ ಅವಿವೇಕದ ಬಗ್ಗೆ ಪಶ್ಚಾತ್ತಾಪಪಟ್ಟನು. ಹಾಗೆಯೇ ಪರಿತಾಪದಿಂದ ತನ್ನನ್ನು ದಯೆಯಿಂದ ಕ್ಷಮಿಸುವಂತೆ ಮತ್ತು ಅವಳು ನೀಡಿದ ಶಾಪವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಅನೇಕ ರೀತಿಯಲ್ಲಿ ಪ್ರಾರ್ಥಿಸಿದನು. ಪುಲಸ್ತ್ಯನು ನಮ್ರತೆಯಿಂದ ಪಶ್ಚಾತ್ತಾಪ ಪಡುವುದನ್ನು ನೋಡಿ, ಸರಸ್ವತೀದೇವಿಯು, ಕರುಣೆಯಿಂದ ವಿಶಾಲವಾದ ಕ್ಷಮೆಯ ಮನಸ್ಸಿನಿಂದ ಆಶೀರ್ವದಿಸಿ, ನಿನ್ನ ಕುಲದವನೇ ಆದ ರಾಕ್ಷಸನು ಭಗವಾನ್

ವಿಷ್ಣುವಿನ ಅತ್ಯಂತ ಪ್ರಿಯಭಕ್ತನಾಗುವವನು ಎಂದು ವಿಭೀಷಣನ ಹೆಸರಿನಿಂದ ಚಿರಂಜೀವಿಯಾಗಿ ಪ್ರವರ್ಧಮಾನಕ್ಕೆ ಬರುವನು ಎಂದು ವರವನ್ನು ಕೊಟ್ಟಳು.

ನಂತರ ಸರಸ್ವತಿನದಿಯು ಆ ಮರುಗಳಿಗೆಯಿಂದಲೇ ಸರ್ವಶ್ರೇಷ್ಠತೆ ಮತ್ತು ಉನ್ನತ ಸ್ಥಾನವನ್ನು ಪಡೆಯಲು ಶ್ರೀಮಹಾವಿಷ್ಣುವನ್ನು ಕುರಿತು ತೀವ್ರ ತಪಸ್ಸು ಮಾಡಿದಳು. ಆಕೆಯ ಪರಿಶ್ರಮ ಮತ್ತು ಭಕ್ತಿಯನ್ನು ಮೆಚ್ಚಿದ ವಿಷ್ಣುವು ಕಾಣಿಸಿಕೊಂಡು ಬಯಸಿದ ವರವನ್ನು ಕೇಳು ಎನ್ನಲಾಗಿ, ಕೂಡಲೇ ಸರಸ್ವತೀನದಿಯು ಪುಲಸ್ತ್ಯಬ್ರಹ್ಮ ನೀಡಿದ ಶಾಪದಿಂದ ಅಧೋಗತಿಗೆ ಒಳಗಾದ ತನಗೆ ನದಿಯ ಪವಿತ್ರತೆ ಹಾಗು ಶ್ರೇಷ್ಠತೆಯನ್ನು ಮತ್ತೆ ಕರುಣಿಸಬೇಕೆಂದು ಪ್ರಾರ್ಥಿಸಿದಳು.

ತಕ್ಷಣವೇ ವಿಷ್ಣುವು, 'ಪುಲಸ್ತ್ಯ ಬ್ರಹ್ಮನು ನೀಡಿದ ಶಾಪದಿಂದ ನೀನು ನದಿಯ ರೂಪದಲ್ಲಿ ಶ್ರೇಷ್ಠತೆಯನ್ನು ಹೊಂದಲು ಸಾಧ್ಯವಾಗದಿದ್ದರೂ, ಪುಷ್ಕರಣಿ ರೂಪದಲ್ಲಿ ನೀನು ಪರಮೋನ್ನತ, ಪವಿತ್ರವಾದ ತೀರ್ಥರಾಜನಂತೆ, ವಿರಾಜಿಸು ಎಂದು ವರವನ್ನು ಕೊಟ್ಟನು.

**"ಅತಃ ಶೇಷಗಿರಿಂ ಗಚ್ಛ ವಾ ಸಾರ್ಥಂ ಯಾಮಿ ತಾಂ ಗಿರಿಂ**
**ಗಿರೇರ್ದಕ್ಷಿಣಭಾಗೇ ತು ಮೂರ್ಧ ದೇಶೇ ಸುಖಂ ವಸ**
**ಸ್ವಾಮಿಪುಷ್ಕರಿಣೀ ನಾಮ್ನಾ ವಸೇಯಂ ತವ ದಕ್ಷಿಣೇ.**
**ತಿಸ್ರಃ ಕೋಟ್ಯರ್ಧ ಕೋಟಿ ಚ ತೀರ್ಥಾನಿ ಭುವನತ್ರಯ**
**ಸ್ವಸ್ಯ ಪಾಪವಿಮೋಕ್ಷಾರ್ಥಂ ಯಾಚಯಷ್ಯನ್ತಿ ಮಾಂ ಶುಭೇ**
**ತೇ ದ್ವಾದಶ್ಯಮರುಣೋದಯೇ ಧನುರ್ಮಾಸೇ ಸಿತೇ ಪಕ್ಷೇ**
**ಸ್ನಾನಾರ್ಥಮಾಗತಂ ತೀರ್ಥ ಜಾಲಂ ಪ್ರೇಷತ್ವಾಮಾಪ್ನುಯಾತ್**
**ತೀರ್ಥಾಧಿರಾಜ್ಯೇ ತತ್‌ತೀರ್ಥ ಜಾಲಂ ತ್ವಾಮಾಭಿಷೇಕ್ಷತಿ."**

"ನೀನು ಕೂಡಲೇ ಇಲ್ಲಿಂದ 'ಶೇಷಾಚಲ ದಿವ್ಯಕ್ಷೇತ್ರಕ್ಕೆ ಹೋಗು. ಆ ಪುಣ್ಯಸ್ಥಳದಲ್ಲಿ "ಸ್ವಾಮಿಪುಷ್ಕರಣಿ" ಎನ್ನುವ ಹೆಸರಿನಿಂದ ಪರಮ ಪವಿತ್ರವಾದ ತೀರ್ಥವಾಗಿ ನೆಲೆಸು. ನಾನು ಅಲ್ಲಿಗೆ ಬಂದು ನಿನ್ನನ್ನು ದಕ್ಷಿಣ ಕರಾವಳಿಯಲ್ಲಿ ಭೇಟಿಯಾಗುತ್ತೇನೆ. ಮೇಲಾಗಿ ಮೂರುಲೋಕಗಳನ್ನು ಬೆಳಗುವ ಮೂರೂವರೆ ಕೋಟಿ ತೀರ್ಥಗಳೂ ಆ ಸಂದರ್ಭಗಳಲ್ಲಿ ಭಕ್ತರಿಗೆ ಸಲ್ಲುತ್ತವೆ. ಅವರು ನನ್ನ ಬಳಿಗೆ ಬಂದು ತಮ್ಮ ಎಲ್ಲಾ ಪಾಪಗಳನ್ನು ತೊಡೆದುಹಾಕಲು ಪ್ರಾರ್ಥಿಸುತ್ತಾರೆ. ಆ ಸಮಯದಲ್ಲಿ ನಾನು ಆ ಎಲ್ಲಾ ತೀರ್ಥಗಳನ್ನು "ಸ್ವಾಮಿ ಪುಷ್ಕರಿಣಿ" ಎಂದು ಕರೆಯುವ ನಿನ್ನಲ್ಲಿ ಪ್ರತಿ ವರ್ಷ ಮಾರ್ಗಶಿರ ಮಾಸದ ಶುಕ್ಲ ಪಕ್ಷದ ದ್ವಾದಶಿಯ ಅರುಣೋದಯ

ಕಾಲದಂದು ತಮ್ಮ ಪಾಪವಿಮೋಚನೆಗಾಗಿ ಸ್ನಾನ ಮಾಡಲು ಆದೇಶಿಸುತ್ತೇನೆ. ಆ ಶುಭಸಮಯದಲ್ಲಿ ಆ ಯಾತ್ರಾರ್ಥಿಗಳೆಲ್ಲರೂ ಸೇರಿ ನಿನ್ನನ್ನು ಸ್ತುತಿಸಿ, ಅಭಿಷೇಕಮಾಡಿ, ಸ್ನಾನಮಾಡಿ ಧನ್ಯರಾಗುತ್ತಾರೆ' ಎಂದು ವಿಷ್ಣುವು ಸರಸ್ವತಿಗೆ ವರವನ್ನು ದಯಪಾಲಿಸಿದನು. ಹಾಗೆ ಪ್ರಜ್ವಲಿಸಿದ ತೀರ್ಥರಾಜರು "ಸ್ವಾಮಿ ಪುಷ್ಕರಿಣಿ" ಎಂಬ ಜನಪ್ರಿಯ ಹೆಸರು ಪಡೆದರು.

ವಿಚಿತ್ರವಾದ ಕಥೆಗಳು ಮತ್ತು ಅದ್ಭುತ ಕಥೆಗಳಿಂದ ಕೂಡಿರುವ ಈ ಸ್ವಾಮಿಪುಷ್ಕರಿಣಿಯ ಮಧ್ಯಭಾಗದಲ್ಲಿ ಸುಮಾರು ಒಂಬತ್ತು ಪವಿತ್ರ ತೀರ್ಥಗಳಿವೆ. ಅದರ ಹೆಸರುಗಳು ಮತ್ತು ಅದರ ಮಹಿಮೆಗಳನ್ನು ಸಹ ಕೇಳಿಎಂದು ಸೂತ ಮಹರ್ಷಿ ಮಾತು ಮುಂದುವರಿಸಿದರು.

## ಸ್ವಾಮಿ ಪುಷ್ಕರಣಿಯಲ್ಲಿರುವ ಒಂಭತ್ತು ಪವಿತ್ರ ತೀರ್ಥಗಳು

ಇಲ್ಲಿಯವರೆಗೆ ಶ್ರೀಸ್ವಾಮಿ ಪುಷ್ಕರಿಣಿಯ ಮಧ್ಯ ಭಾಗದಲ್ಲಿ ಹಲವು ರೀತಿಯಲ್ಲಿ ಆಶ್ಚರ್ಯಕರ ಸಂಗತಿಗಳು ಮತ್ತು ಪವಾಡದ ವೈಶಿಷ್ಟಗಳು ಪತ್ತೆಯಾಗಿವೆ. ಅವುಗಳಲ್ಲಿ ಪ್ರಮುಖವಾದವು ಒಂಬತ್ತು ತೀರ್ಥಗಳು.

### ಕುಬೇರ ತೀರ್ಥ

**"ಉತ್ತರೇ ಧನದಂ ತೀರ್ಥಂ ಧನದೇನ ವಿನಿರ್ಮಿತಂ**
**ಯತ್ರ ಸ್ನಾತ್ವಾಽಘ ನಿರ್ಮುಕ್ತೋ ಧನಸಂಪದಮಾಪ್ನುಯಾತ್."**

ಸ್ವಾಮಿ ಪುಷ್ಕರಿಣಿಯ ಉತ್ತರದಲ್ಲಿ ಧನ ಸಂಪತ್ತಿನ ತೀರ್ಥವಿದೆ. ಈ ದೇಗುಲವನ್ನು ಕುಬೇರನು ನಿರ್ಮಿಸಿದನು. ಹಾಗಾಗಿ ಇದನ್ನು ಕುಬೇರತೀರ್ಥ ಎಂದೂ ಕರೆಯುತ್ತಾರೆ. ಅದರಲ್ಲಿ ಸ್ನಾನ ಮಾಡಿದರೆ ಸಾಕು. ಪಾಪಗಳೆಲ್ಲ ನಾಶವಾಗಿ ಸಕಲ ಸಂಪತ್ತು ಪ್ರಾಪ್ತಿಯಾಗುತ್ತದೆ.

### ಗಾಲವ ತೀರ್ಥ

**"ಐಶಾನ್ಯಾಮ್ ಗಾಲವತೀರ್ಥಂ ಗಾಲವೇನ ವಿನಿರ್ಮಿತಂ,**
**ತತ್ರ ಸ್ನಾತ್ವಾ ಚ ಪೀತ್ವಾಚ ಭುಕ್ತಿಂ ಮುಕ್ತಿಂ ಚ ವಿಂದತಿ."**

ಗಾಲವತೀರ್ಥವು ಸ್ವಾಮಿಪುಷ್ಕರಿಣಿಯ ಈಶಾನ್ಯ ಭಾಗದಲ್ಲಿದೆ. ಇದು ಗಾಲವ ಮಹರ್ಷಿಯಿಂದ ನಿರ್ಮಿಸಲಾಗಿದೆ ಈ ಭಾಗದ ತೀರ್ಥವನ್ನು ಕುಡಿಯುವುದರಿಂದ ಅಥವಾ ಸ್ನಾನ ಮಾಡುವುದರಿಂದ ಇಹಪರದ ಸುಖಗಳು ಪ್ರಾಪ್ತಿಯಾಗುತ್ತವೆ.

**ಮಾರ್ಕಂಡೇಯತೀರ್ಥ**

**"ಮಾರ್ಕಂಡೇಯ ಪೂರ್ವಭಾಗೇ ಮಾರ್ಕಂಡೇಯ ವಿನಿರ್ಮಿತಂ**
**ತತ್ರ ಸ್ನಾನ್ತಿ ನರಾ ಯೇತು ತೇಷಾಮಾಯುಃ ಪ್ರವರ್ಧತೇ**

ಸ್ವಾಮಿಪುಷ್ಕರಿಣಿಯ ಪೂರ್ವ ಭಾಗದಲ್ಲಿ ಋಷಿ ಮಾರ್ಕಂಡೇಯ ನಿರ್ಮಿಸಿದ ಮಾರ್ಕಂಡೇಯ ತೀರ್ಥವಿದೆ. ಇಲ್ಲಿ ಸ್ನಾನ ಮಾಡುವ ಮಾನವರಿಗೆ ದೀರ್ಘಾಯುಷ್ಯ ಪ್ರಾಪ್ತವಾಗುತ್ತದೆ.

**ಅಗ್ನಿತೀರ್ಥ–ಯಮತೀರ್ಥ**

**"ಅಗ್ನಿನಾ ನಿರ್ಮಿತಂ ತೀರ್ಥಮಾಗ್ನೇಯ್ಯಾಂ ಪಾಪಮೋಚನಂ**
**ದಕ್ಷಿಣೇ ಯಮತೀರ್ಥಂ ತು ನರಕೋತ್ತಾರ ಕಾರಣಂ."**

ವೆಂಕಟಾಚಲಂ, ಸ್ವಾಮಿ ಪುಷ್ಕರಿಣಿಯ ಆಗ್ನೇಯ ಮೂಲೆಯಲ್ಲಿ ಅಗ್ನಿ ದೇವರಿಂದ ಸ್ಥಾಪಿಸಲ್ಪಟ್ಟ ಅಗ್ನಿ ತೀರ್ಥವಿದೆ. ಅದರಲ್ಲಿ ಸ್ನಾನ ಮಾಡಿದರೆ ಪಾಪಗಳಿಂದ ಮುಕ್ತಿ ಲಭಿಸುತ್ತದೆ.

ಹಾಗೆಯೇ ದಕ್ಷಿಣ ಭಾಗದಲ್ಲಿ ಯಮತೀರ್ಥವಿದೆ. ಈ ತೀರ್ಥದಲ್ಲಿ ಸ್ನಾನ ಮಾಡುವವರಿಗೆ ನರಕಯಾತನೆ ದೂರವಾಗುತ್ತದೆ.

**ವಸಿಷ್ಠ ತೀರ್ಥ**

**"ವಶಿಷ್ಠ ನಿರ್ಮಿತಂ ತೀರ್ಥಂ ರಾಕ್ಷಸಂ ತ್ಯಣಂ ಮೋಚನಂ"**

ನೈರುತ್ಯ ದಿಕ್ಕಿನಲ್ಲಿ ವಸಿಷ್ಠ ಮಹರ್ಷಿಗಳು ನಿರ್ಮಿಸಿದ 'ವಸಿಷ್ಠ ತೀರ್ಥ'ವೂ ಈ ಸ್ವಾಮಿ ಪುಷ್ಕರಿಣಿಯ ಭಾಗವಾಗಿಯೇ ಆವಿರ್ಭವಿಸಿದೆ. ಈ ತೀರ್ಥಸ್ನಾನ ಮಾಡುವುದರಿಂದ ತೀವ್ರತರವಾದ ಗಂಭೀರ ಋಣಬಾಧೆ ದೂರವಾಗುತ್ತದೆ.

**ವರುಣತೀರ್ಥ–ವಾಯುತೀರ್ಥ**

**"ವಾರುಣೌ ವಾಯುತೀರ್ಥಂ ಚ ಸದ್ಯಃ ಕೈವಲ್ಯದಾಯಕಮ್."**

ಅಲ್ಲದೆ ಈ ಸ್ವಾಮಿ ಪುಷ್ಕರಿಣಿಯಲ್ಲಿ ಭಕ್ತಿಯಿಂದ ಸ್ನಾನ ಮಾಡುವುದರಿಂದ, ಎಲ್ಲ ತೀರ್ಥಗಳಂತೆಯೇ ಇದು ಮುಕ್ತಿಪ್ರದವಾಗಿದೆ. ವರುಣತೀರ್ಥ ಮತ್ತು ವಾಯುತೀರ್ಥವು ಸ್ವಾಮಿಪುಷ್ಕರಣಿಯ ಎಡಭಾಗದಲ್ಲಿದ್ದು ಮೋಕ್ಷಪ್ರದವಾಗಿದೆ.

**ಸರಸ್ವತೀ ತೀರ್ಥ**

**"ಮಧ್ಯೇ ಸರಸ್ವತಿ ತೀರ್ಥಂ ಮಹಾಪಾತಕ ನಾಶನಂ**
**ಯಾ ಏಷು ನವತೀರ್ಥಂ ಸ್ನಾನ ಮೇಕ ದಿನೇ ನರಃ."**

ಸ್ವಾಮಿ ಪುಷ್ಕರಿಣಿಯ ಮಧ್ಯಭಾಗದಲ್ಲಿ ಮಹಾಪಾತಕಗಳನ್ನು ನಾಶಮಾಡುವ ಪ್ರಖ್ಯಾತವಾದ ಸರಸ್ವತಿ ತೀರ್ಥವಿದೆ. "ಸ್ವಾಮಿಪುಷ್ಕರಣಿ" ಎಂದು ಜನಪ್ರಿಯವಾಗಿ ಕರೆಯಲ್ಪಡುವ ಪವಿತ್ರವಾದ ಒಂಬತ್ತು ತೀರ್ಥಗಳಿವೆ.

**"ಯ ಏಷು ನವತೀರ್ಥೆಷು ಸ್ನಾನಮೇಕಂ ದಿನೇ ನರಃ**
**ಕೃತ್ವಾ ಪಶ್ಯ ಶ್ರೀನಿವಾಸಂ ನ ಪುನರ್ಜಾಯತೇ ತು ನಃ**
**ಸ್ವಾಮಿಪುಷ್ಕರಿಣೀ ಸ್ನಾನಂ ಶ್ರೀನಿವಾಸಸ್ಯ ದರ್ಶನಮ್**
**ಸಹಸ್ರನಾಮಪಠಣಂ ನಾಲ್ಪಸ್ಯ ತಪಸಃ ಫಲಮ್**
**ಅಸ್ನಾತುರ್ನವತೀರ್ಥೇಷು ವರಾಹಂ ಚಾಪ್ಯಪಶ್ಯತಃ**
**ಸರ್ವಂ ನಿಷ್ಫಲತಾಂ ಯಾತಿ ಶ್ರೀನಿವಾಸೋ ನ ತುಷ್ಯತಿ**
**ಫಲಂ ಧರ್ಮಾದಿಕಂ ಚೈವ ನ ಯಚ್ಛತಿ ನೃಣಾಂ ವಿಭುಃ"**

ಈ ಒಂಬತ್ತು ತೀರ್ಥಗಳಲ್ಲಿ ಒಂದೇ ದಿನ ಸ್ನಾನ ಮಾಡಿ ಸ್ವಾಮಿ ಪುಷ್ಕರಿಣಿಯ ದಕ್ಷಿಣ ದಂಡೆಯಲ್ಲಿರುವ ಶ್ರೀನಿವಾಸ ದೇವರ ದರ್ಶನ ಪಡೆದ ವ್ಯಕ್ತಿಗೆ ಮರುಜನ್ಮ ಇರುವುದಿಲ್ಲ. ಇದೇ ಸುಲಭವಾದ ಮೋಕ್ಷಮಾರ್ಗ ಎನ್ನುವುದರಲ್ಲಿ ಸಂಶಯವಿಲ್ಲ.

ಸ್ವಾಮಿಪುಷ್ಕರಿಣಿ ಸ್ನಾನ, ಶ್ರೀ ವೆಂಕಟೇಶ್ವರ ಸ್ವಾಮಿ ದರ್ಶನ, ವಿಷ್ಣುಸಹಸ್ರನಾಮ ಪಾರಾಯಣ– ಈ ಮೂರು ಕಾರ್ಯಗಳು ಅತ್ಯುತ್ತಮ ತಪಃ ಫಲವನ್ನು ನೀಡುತ್ತವೆ. ಆದ್ದರಿಂದ ಒಂಬತ್ತು ತೀರ್ಥಗಳ ಪವಿತ್ರ ಸಂಗಮ ಸ್ಥಳವಾದ ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನ ಮಾಡಬೇಕು. ಆ ಬಳಿಕ ಅಲ್ಲಿನ ಶ್ರೀ ವರಾಹಸ್ವಾಮಿಯ ದರ್ಶನಮಾಡಬೇಕು. ಆ ಕ್ಷೇತ್ರದಲ್ಲಿ ಎಷ್ಟು ಸಲ ಸೇವೆ ಮಾಡುತ್ತಾರೋ, ಅವರೆಲ್ಲ ಅಗ್ನಿಯಂತೆ ಪವಿತ್ರರಾಗುತ್ತಾರೆ.

ಆದುದರಿಂದಲೇ ವೆಂಕಟಾಚಲದ ಈ "ಸ್ವಾಮಿಪುಷ್ಕರಿಣಿ"ಯನ್ನು ಒಮ್ಮೆ ದಶರಥ ಮಹಾರಾಜನು ಸೇವಿಸಿ ಸಂತಾನವನ್ನು ಪಡೆದನು. ಅಂತೆಯೇ ದಶರಥ ನಂದನ ಶ್ರೀರಾಮಚಂದ್ರ ಈ ಸ್ಥಳಕ್ಕೆ ಬಂದು ನೇಮದಿಂದ ಪುಷ್ಕರಣಿಯಲ್ಲಿ ಸ್ನಾನಮಾಡಿ ಏಳುಗಿರಿಯೊಡೆಯನ್ನನ್ನು ಭಕ್ತಿಯಿಂದ ಪೂಜಿಸಿದ್ದರಿಂದ ರಾವಣಾಸುರನಿಂದ ಅಪಹರಣಕ್ಕೊಳಗಾದ ಸೀತಾದೇವಿಯನ್ನು ಮರಳಿ ಪಡೆದನು.

ಅಂತಹ ಮಹಿಮಾನ್ವಿತ ಸ್ವಾಮಿ ಪುಷ್ಕರಿಣಿಯ ವೈಭವವನ್ನು ವರ್ಣಿಸಲು ಸಾಧ್ಯವಿಲ್ಲ. ಇದು ಅನಂತವಾಗಿದೆ. ಹಾಗಾದರೆ ಈಗ ನಾವು ಈ ಕೆಳಗಿನ ಕಥೆಗಳನ್ನು ತಿಳಿಯೋಣ. ಸ್ವಾಮಿ ಪುಷ್ಕರಿಣಿಯ ಹಿರಿಮೆಯ ಬಗ್ಗೆ ಹೇಳಲು ಬೇರೆ ವಿಷಯಗಳಿದ್ದರೆ, ಆ ಸಂದರ್ಭಗಳಲ್ಲಿ ಚರ್ಚಿಸೋಣ.

## ಸಪ್ತಗಿರಿ

### ಏಳು ಬೆಟ್ಟಗಳು

**"ಕೃತೇ ವೃಷಾದ್ರಿಂ ವಕ್ಷ್ಯಂತಿ ತ್ರೇತಾಯಾಮಂಜನಾಚಲಂ**
**ದ್ವಾಪರೇ ಶೇಷಶೈಲೇತಿ ಕಲೌ ಶ್ರೀ ವೆಂಕಟಾಚಲಂ**
**ನಾಮಾನಿ ಯುಗಭೇದೇನ ಶೈಲಸ್ಯಾಸ್ಯ ಭವನ್ತಿ ಹಿ"**

ಕೃತಯುಗದಲ್ಲಿ 'ವೃಷಾದ್ರಿ', ತ್ರೇತಾಯುಗದಲ್ಲಿ 'ಅಂಜನಾದ್ರಿ', ದ್ವಾಪರಯುಗದಲ್ಲಿ ಶೇಷಶೈಲಂ, ಕಲಿಯುಗದಲ್ಲಿ 'ವೆಂಕಟಾದ್ರಿ' ಎಂಬ ಪ್ರಸಿದ್ಧ ಹೆಸರುಗಳೊಂದಿಗೆ ಕಾಣಿಸಿಕೊಂಡ ಕ್ಷೇತ್ರವನ್ನು ಕುರಿತು, ವೆಂಕಟಾಚಲ ಕ್ಷೇತ್ರ ಮಹಾತ್ಮೆಯನ್ನು ಸೂತಮಹರ್ಷಿ ಶೌನಕಾದಿ ಮುನಿಗಳಿಗೆ ವಿವರಿಸಿದರು.

ಈ ರೀತಿಯಾಗಿ, ಅನೇಕಾನೇಕ ವಿಧದಲ್ಲಿ ಎಂಥೆಂತಹ ಮಹಾಪಾತಕಗಳನ್ನು ಹೋಗಲಾಡಿಸಿದ ದಿವ್ಯಾತಿದಿವ್ಯವಾದ ಪುಣ್ಯಕ್ಷೇತ್ರ, ಆ ಕಾರಣದಿಂದಲೇ **"**ವೆಂಕಟಾಚಲ**"** ಎನ್ನುವ ನಾಮಧೇಯದಿಂದ ವಿರಾಜಮಾನವಾಗಿದೆ.

ಈ ಪವಿತ್ರ ಪರ್ವತ ಇಳಿಜಾರುವುಳ್ಳದ್ದಾಗಿದ್ದು ಯಾವಾಗಲೂ ಹಸಿರು ಮರಗಳು, ಹೂವುಗಳು ಪವಿತ್ರ ಸುಗಂಧ ದ್ರವ್ಯಗಳಿಂದ ತುಂಬಿರುತ್ತವೆ. ಎಲ್ಲಿ ನೋಡಿದರೂ ಕಮಲದ ಕೊಳಗಳು ಮತ್ತು ಕೊಳಗಳ ಮೇಲೆ ಸುತ್ತುತ್ತಿರುವ ದುಂಬಿಗಳು ಜೇನುಹುಳಗಳು, ಮಿಂಚುಹುಳುಗಳು ನಿಸರ್ಗದ ರಮಣೀಯ ಸೌಂದರ್ಯವನ್ನು ನೋಡುವ ಮತ್ತು ಆನಂದಿಸುವ ದೃಶ್ಯವಾಗಿದೆ. ಇದಲ್ಲದೆ, ಈ ಕ್ಷೇತ್ರವು ತಾಳೆ ಮತ್ತು ಬಾಳೆ ತೋಟಗಳಿಂದ ಕಂಗೊಳಿಸುತ್ತಿದೆ.

ಸಪ್ತಗಿರಿಯ ಪ್ರಕೃತಿ ಸೌಂದರ್ಯ ಮನಸ್ಸಿಗೆ ಮುದ ಕೊಡುವಂತಹದ್ದಾಗಿದೆ. ಈ ಗಿರಿಯು ಅನೇಕ ಪ್ರಾಣಿ, ಪಕ್ಷಿಸಂಕುಲಕ್ಕೆ ನೆಲೆಯಾಗಿದೆ. ಅಂದಮೇಲೆ ಮಹರ್ಷಿಗಳು, ಯೋಗಿಗಳು, ದೇವತೆಗಳು ಜಂತು ರೂಪದಲ್ಲಿ ಸಂಚರಿಸುತ್ತಿದ್ದಾರೆ ಎಂಬುವುದರಲ್ಲಿ ಆಶ್ಚರ್ಯವಿಲ್ಲ. ಇಲ್ಲಿರುವ ದುಂಬಿಯ ಝೇಂಕಾರ, ಕ್ರಿಮಿಕೀಟಗಳ ಶಬ್ದ, ಪಕ್ಷಿಗಳ ಚಿಲಿಪಿಲಿನಾದ, ಗಾಳಿಯಿಂದಾಗಿ ಮರಗಿಡಗಳ ತೂಗಾಟದಿಂದ

ಉಂಟಾಗುವ ಶಬ್ದ, ನೀರಿನ ಕಲರವ ಎಲ್ಲವೂ ಶ್ರೀನಿವಾಸನಿಗೆ ಸಂಗೀತಸೇವೆ, ಸುಪ್ರಭಾತ. ಗಿರಿಶಿಲೆಗಳಲ್ಲಿ, ವಸುಂಧರೆಯ ರತ್ನಗರ್ಭದಲ್ಲಿ ಅಡಗಿರುವ ವಜ್ರ, ನವರತ್ನಗಳೇ ಸ್ವಾಮಿಗೆ ಆಭರಣ.

ಪೂರ್ವದಲ್ಲಿ ಮೇರುಪರ್ವತವು ಬ್ರಹ್ಮದೇವನನ್ನು ಹೀಗೆಂದು ಪ್ರಾರ್ಥಿಸಿತು "ಓ! ಬ್ರಹ್ಮದೇವ ನನ್ನ ಹೆಸರು ಭೂಲೋಕದಲ್ಲಿ ಚಿರಸ್ಥಾಯಿಯಾಗಿ ನಿಲ್ಲುವಂತೆ ವರವನ್ನು ಕರುಣಿಸು ತಂದೆ" ಎಂದು ಪ್ರಾರ್ಥಿಸಿದನು. ಅದರಿಂದಾಗಿ ಆ ಮೇರು "ಬಂಗಾರುಕೊಂಡ" ಎಂದು ಪ್ರಸಿದ್ಧವಾಗಿ ತನ್ನ ಗರ್ಭದಲ್ಲಿ ನವರತ್ನ, ಕಲ್ಪವೃಕ್ಷ ಇವುಗಳನ್ನು ಅಡಗಿಸಿಟ್ಟುಕೊಂಡು ಪರ್ವತರಾಜ ಎಂದೆನಿಸಿದೆ. ಬ್ರಹ್ಮದೇವರ ವರದಿಂದಾಗಿ ಬ್ರಹ್ಮಾಂಡ ಭಾಂಡೋದರನಾಗಿ ಪ್ರಸಿದ್ಧನಾದನು.

ಇಂತಹ ಪರಮ ಪಾವನವಾದ ದಿವ್ಯಕ್ಷೇತ್ರದಲ್ಲಿ ಪರಮಭಾಗವತರಾದ ಭೂಪರು, ಯೋಗಿಗಳು, ಹಿರಿಯರು, ಸೂರ್ಯಚಂದ್ರಾದಿ ನವಗ್ರಹ ದೇವತೆಗಳು, ಸಕಲ ತೀರ್ಥಗಳು, ಎಲ್ಲ ಗಿರಿ ಪರ್ವತಗಳು ಎಲ್ಲರೂ ಲೋಕಕಲ್ಯಾಣಾರ್ಥವಾಗಿ ನಿಸ್ವಾರ್ಥದಿಂದ, ಭಕ್ತಿಯಿಂದ ತಪಸ್ಸು ಮಾಡುತ್ತಿದ್ದಾರೆ. ಅವರ ಕೋರಿಕೆ ಲೋಕಕಲ್ಯಾಣ, ಅದರ ಪರಮಗುರಿ ಈಡೇರಬೇಕು ಎಂದು ಪ್ರಾರ್ಥಿಸಿದರು.

ಹೀಗೆ ಶ್ರೀಶುಕಮುನಿಗಳು, ಬ್ರಹ್ಮಾದಿಗಳು, ಅಲ್ಲದೆ ರಾಮಚಿಲುಕ (ಗಿಣಿರಾಮ) ಎಲ್ಲರೂ ಸೇರಿ ಶೃತಿ, ಸ್ಮೃತಿ ಸಹಿತವಾದ ಗಾನ, ಮಧುರವಾದ ಮಂಜುಳವಾದ ಧ್ವನಿಯಲ್ಲಿ ಮಂಗಳಗಾನ ಮಾಡುತ್ತಿದ್ದರೆ ಈ ಪರ್ವತದಲ್ಲಿ ಅದು ಪ್ರತಿಧ್ವನಿಸುತ್ತಿತ್ತು. ಮಹಾ ಯೋಗೀಶ್ವರರು ಅದರ ತಾಳಕ್ಕೆ ಸರಿಯಾಗಿ "ತಕಧಿಮ್ಮಿ" ಎಂದು ನರ್ತಿಸುತ್ತಿದ್ದರು... ಇಂತಹ ವಿವರಣೆಯನ್ನು ಇನ್ನಿತರ ಪುರಾಣಗಳಲ್ಲಿಯೂ ಕಾಣುತ್ತೇವೆ. ಇಂತಹ ಸಕಲ ವಿದ್ಯೆಗಳಿಗು, ಕಲೆಗಳಿಗೂ ಈ ಕ್ಷೇತ್ರರಾಜ ನಿಲಯವು ಪ್ರಕಾಶಿಸುತ್ತಿದೆ.

ವೆಂಕಟಾಚಲದಲ್ಲಿರುವ ಸ್ವಾಮಿಪುಷ್ಕರಣಿ ಇತ್ಯಾದಿ ಅನೇಕಾನೇಕಾದಿ ತೀರ್ಥಗಳು, ಪುಷ್ಕರಣಿಗಳು ಪಾಪಾತ್ಮರನ್ನು ಅವರ ಪಾಪಗಳನ್ನು ತೊಡೆದು ಅಮರರನ್ನಾಗಿ ಮಾಡುತ್ತಿದೆ. ಭಕ್ತರ ಸರ್ವವಿಧದ ಪಾಪಗಳನ್ನು ನಿವಾರಿಸುವುದಲ್ಲದೆ ಸಮಸ್ತ ಕೋರಿಕೆಗಳನ್ನು ತೀರಿಸುತ್ತಾ, ಈ ಕ್ಷೇತ್ರವು ಕಾಮಿತಫಲದಾಯಕವಾಗಿ ಪ್ರಸಿದ್ಧಿಯಾಗಿ ನಿಂತಿದೆ.

ಭೂಲೋಕದಲ್ಲಿ ವೈಕುಂಠ ಎನಿಸಿರುವ ಈ ಶೇಷಾಚಲ ಕ್ಷೇತ್ರವನ್ನು ಸ್ವಲ್ಪಕಾಲ ಲೋಕಕಂಠಕರಿಂದ ರಕ್ಷಿಸಬೇಕಾಗಿದೆ ಎಂದು ಬ್ರಹ್ಮಾದಿದೇವತೆಗಳು ಪ್ರಾರ್ಥಿಸಿದರು.

ಅವರ ಕೋರಿಕೆಯನ್ನು ನೆರವೇರಿಸಲು ಶ್ರೀಮನ್ನಾರಾಯಣ ಶ್ರೀದೇವಿ, ಭೂದೇವಿ ಸಮೇತನಾಗಿ ಇಲ್ಲಿ ನೆಲಸಿದ್ದಾನೆ. ಈ ಪುಣ್ಯಕ್ಷೇತ್ರ ಹಲವಾರು ಹೆಸರಿನಿಂದ ಶೋಭಿಸುತ್ತಿದೆ. ಆಕಾಶದಲ್ಲಿ ಶೋಭಾಯಮಾನವಾಗಿ ಬೆಳಗುತ್ತಿರುವ ನಕ್ಷತ್ರ, ಭೂಮಿಮೇಲಿನ ಧೂಳಿನ ಕಣವನ್ನು ಹೇಗೆ ಎಣಿಸಲು ಆಗುವುದಿಲ್ಲವೋ ಹಾಗೆ ಸ್ವಾಮಿಯನ್ನೂ, ಈ ಕ್ಷೇತ್ರದ ಮಹಿಮೆಯನ್ನು ಹೆಸರಿನಿಂದ ವರ್ಣಿಸಲು, ಗುರುತಿಸಲು ಸಾಧ್ಯವಿಲ್ಲ. ಗಿರಿಯ ಮಹಾತ್ಮೆ, ಹೆಸರಿನ ಪ್ರಭಾವವನ್ನು ತಿಳಿಯುವ ಪ್ರಯತ್ನ ಮಾಡೋಣ.

'ಚಿಂತಾಮಣಿ'ಯಂತಹ ಐಶ್ವರ್ಯವನ್ನು ಬಯಸುವವರನ್ನು ಬೆಂಬಲಿಸಿ ಅವರ ಇಷ್ಟಾರ್ಥಗಳನ್ನು ಪೂರೈಸುವುದರಿಂದ ಇದನ್ನು 'ಚಿಂತಾಮಣಿ ಪರ್ವತ' ಎಂದು, ಪರಿಪೂರ್ಣಜ್ಞಾನವನ್ನು ಕೋರುವವರಿಗೆ ಜ್ಞಾನವನ್ನು ಅನುಗ್ರಹಿಸುತ್ತಿರುವುದರಿಂದ "ಜ್ಞಾನಾದ್ರಿ" ಎಂದು, ಕೋರಿಕೆಗಳನ್ನು ತೀರಿಸುವ ಪವಿತ್ರ ಕ್ಷೇತ್ರ ಆಗಿರುವುದರಿಂದ "ತೀರ್ಥಾಚಲಂ" ಎಂದು, ಈ ದಿವ್ಯಸ್ಥಳದಲ್ಲಿ ಪುಷ್ಕರಣಿಗಳು ಇರುವುದರಿಂದ "ಪುಷ್ಕರಾದ್ರಿ"ಎಂದು, ಇದು ಶ್ರೀವೈಕುಂಠದ ಭಾಗವೇ ಆಗಿರುವುದರಿಂದ "ವೈಕುಂಠಾದ್ರಿ" ಎಂದು, ಶ್ರೀ ಮಹಾವಿಷ್ಣುವು ಶ್ವೇತವರಾಹ ರೂಪದಲ್ಲಿ ಅವತರಿಸಿ ಭೂದೇವಿಯನ್ನು ರಕ್ಷಿಸಿ ಭೂದೇವಿಯೊಂದಿಗೆ ನೆಲೆಸಿದ ಕಾರಣ 'ಶ್ರೀ ಭೂವರಾಹ ಕ್ಷೇತ್ರ' 'ಶ್ವೇತ ವರಾಹ ಕ್ಷೇತ್ರ ಎಂದೂ, ನೀಲ ಎಂಬ ಒಬ್ಬ ಮುನೀಂದ್ರ ತಪಸ್ಸಿನ ಮೂಲಕ ಸಿದ್ಧಿಯನ್ನು ಪಡೆದ ಕಾರಣ ಇದನ್ನು 'ನೀಲಾದ್ರಿ' ಎಂದು ಅನೇಕ ಹೆಸರುಗಳಿಂದ ಕರೆಯಲಾಗುತ್ತದೆ.

ಅಷ್ಟೇ ಅಲ್ಲ. ಭಗವಾನ್ ವಿಷ್ಣುವು ಶ್ರೀದೇವಿ ಭೂದೇವಿ ಸಮೇತನಾಗಿ ಆಟವಾಡುತ್ತಿರುವ ಪರ್ವತವಾಗಿದೆ, ಆದ್ದರಿಂದ ಇದನ್ನು 'ಕ್ರೀಡಾಚಲಂ' ಎಂದು ಕರೆಯಲಾಗುತ್ತದೆ, ಶ್ರೀಹರಿ, ಶ್ರೀ ಮಹಾಲಕ್ಷ್ಮಿಯನ್ನು ತನ್ನ ವಕ್ಷಸ್ಥಳದಲ್ಲಿಯೇ ಇರುವಂತೆ ಆನಿಸಿಕೊಂಡಿರುವ, ಆನಂದಮಯ ಸ್ವರೂಪನಾದ ಶ್ರೀನಿವಾಸನು "ಆನಂದ ನಿಲಯದ"ದಲ್ಲಿ ತನ್ನ ಭಕ್ತರಿಗೆ ದರ್ಶನವನ್ನು ಕೊಡುತ್ತಾ ಆನಂದವನ್ನು ಉಂಟು ಮಾಡುತ್ತಿದ್ದಾನೆ. ಹಾಗಾಗಿ ಈ ಕ್ಷೇತ್ರಕ್ಕೆ ಶ್ರೀಶೈಲ ಮುಂತಾದ ಅನಂತ ಹೆಸರುಗಳಿವೆ.

**"ಬಹೂನಿ ಚಾನ್ಯ ನಾಮಾನಿ ಕಲ್ಪಭೇದದ್ಭವಂತಿ ಹಿ**
**ಯಾವದುಕ್ತ ಭಗವತಃ ಕಲ್ಯಾಣ ಗುಣರಾಶಯಃ**
**ತಾವನ್ತೋಽಸ್ಯ ಗಿರೇಸ್ಸಂತಿ ಗುಣಾಃ ಪರಮ ಪಾವನಾಃ**
**ಅಸ್ಯ ವೆಂಕಟಶೈಲಸ್ಯ ಮಾಹಾತ್ಮ್ಯಂ ಯಾವದಸ್ತಿ ಹಿ**

**ತಾವದ್ವಕ್ತುಂ ಚ ಕಾರ್ತ್ಸ್ನೇನ ನ ಸಮರ್ಥಶ್ಚತುರ್ಮುಖಃ**
**ಷಣ್ಮುಖಶ್ಚ ಸಹಸ್ರಾಸ್ಯಃ ಫಣಿ ದೇವಾಃ ಪರೇ ಕಿಮು?"**

"ಅಖಿಲಾಂಡಕೋಟಿ ಬ್ರಹ್ಮಾಂಡನಾಯಕ ಭಗವಂತನ ಕಲ್ಯಾಣ ಗುಣ ಪರಂಪರೆಯಲ್ಲಿ ಹೇಗೆ ಅಸಂಖ್ಯಾತವೋ ಅನಂತವೋ ಹಾಗೆಯೇ ಕ್ಷೇತ್ರರಾಜನ ನಾಮಗಳು, ಮಹಿಮಾನ್ವಿತವಾದ ಗುಣವು ಕಲ್ಪನೆಗೂಮೀರಿ ಪ್ರಸಿದ್ಧವಾಯಿತು. ಅಂತಹ ವೆಂಕಟಾಚಲನ ಮಹಿಮೆಯನ್ನು ವರ್ಣಿಸಲು, ಪಾಡಿಪೊಗಳಲು, ಚತುರ್ಮುಖ ಬ್ರಹ್ಮನಿಗಾಗಲಿ, ಷಣ್ಮುಖನಾದ, ಆರುಮುಖವುಳ್ಳ ಕುಮಾರಸ್ವಾಮಿಗಾಗಲಿ, ಸಾವಿರ ನಾಲಿಗೆಯುಳ್ಳ ಆದಿಶೇಷನಿಗಾಗಲಿ, ಅನ್ಯದೇವತೆಗಳಿಗಾಗಲಿ ಸಾಧ್ಯವೇ ಇಲ್ಲ", ಎಂದು ಶೌನಕಾದಿ ಋಷಿಗಳಿಗೆ ಕ್ಷೇತ್ರನಾಮಗಳ ಮಹಿಮೆಯನ್ನು ವಿವರಿಸಿದ ಸೂತ ಮಹರ್ಷಿಗಳು, ಶಿಷ್ಯರ ಕೋರಿಕೆಯಂತೆ ಸಪ್ತಗಿರಿವಾಸ ವೆಂಕಟೇಶ್ವರನ ಮಹಿಮೆ, ಅವನ ನೆಲೆಯಾದ ಪ್ರಸಿದ್ಧವಾದ ಮಹಾಮಹಿಮೆಯುಳ್ಳ ಏಳುಬೆಟ್ಟಗಳ ಕಥೆಯನ್ನು ಹೇಳಲಾರಂಭಿಸಿದರು.

## ಶೇಷಶೈಲ

ಆದಿಶೇಷನು ವೈಕುಂಠಾಧಿಪತಿಯಾದ ಮಹಾವಿಷ್ಣುವಿಗೆ ಪವಡಿಸಲು ಹಾಸಿಗೆಯಾಗಿ, ಛತ್ರಚಾಮರವಾಗಿ ಅನೇಕ ವಿಧಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾನೆ. ಒಮ್ಮೆ ಈ ಆದಿಶೇಷನಿಗೂ, ವಾಯುದೇವನಿಗೂ ಯಾರು ಹೆಚ್ಚು? ಯಾರು ಶ್ರೇಷ್ಠರು ಎಂದು ವಾದ ವಿವಾದವಾಯಿತು. ನಿನಗೆ ಶಕ್ತಿಯಿದ್ದರೆ ನನ್ನನ್ನು ಸರಿಸು, ಕದಲಿಸು ಎಂದು ಆದಿಶೇಷನು ವೆಂಕಟಾಚಲನನ್ನು ಸುತ್ತುತ್ತಾನೆ. ವಾಯುದೇವನು, ಪರ್ವತವನ್ನು ಸುತ್ತುವರಿದು ತನ್ನಲ್ಲಿದ್ದ ಅಧಿಕವಾದ ಶಕ್ತಿಯಿಂದ ಕಲ್ಲನ್ನು ಎಸೆಯುವಂತೆ ಪರ್ವತವನ್ನೇ ಕದಲಿಸಿದ. ಆ ರಭಸಕ್ಕೆ ಆದಿಶೇಷನು ಕೆಳಗೆ ಬಿದ್ದನು. ತನ್ನ ಸೋಲಿನಿಂದ ಚಿಂತಾಕ್ರಾಂತನಾದ ಆದಿಶೇಷನನ್ನು ಶ್ರೀನಿವಾಸನು ಸಮಾಧಾನಪಡಿಸಿ ನಿನ್ನನ್ನು ಆಭರಣವಾಗಿ ಧರಿಸುತ್ತೇನೆ ಮತ್ತು ನಿನ್ನ ಹೆಸರಿನೊಂದಿಗೆ ಈ ಕ್ಷೇತ್ರವು ಪ್ರಸಿದ್ಧವಾಗುವಂತೆ ನಾನು ನಿನ್ನನ್ನು ಆಶೀರ್ವದಿಸುತ್ತೇನೆ ಎಂದು ಹೇಳುತ್ತಾನೆ. ಅಂದಿನಿಂದ ಇದಕ್ಕೆ 'ಶೇಷಾಚಲ' ಮತ್ತು 'ಶೇಷಾದ್ರಿ' ಎಂಬ ಹೆಸರಾಯಿತು. ಅಲ್ಲದೆ ಶ್ರೀನಿವಾಸನಿಗೆ ಶೇಷಾಚಲಪತಿ ಎಂಬ ನಾಮಧೇಯನಾಗಿ, ನಾಗಾಭರಣನಾಗಿ ವಿರಾಜಿಸುತ್ತಿದ್ದಾನೆ.

## ಗರುಡಾದ್ರಿ

ಶ್ರೀಮಹಾವಿಷ್ಣು, ರಕ್ಕಸನಾದ ಹಿರಣ್ಯಾಕ್ಷನಿಂದ ಭೂದೇವಿಯನ್ನು ರಕ್ಷಿಸುವ ಸಲುವಾಗಿ ಆದಿವರಾಹನಾಗಿ ಅವತರಿಸಿ ಹಿರಣ್ಯಾಕ್ಷನನ್ನು ಸಂಹರಿಸಿದನು. ನಂತರ

ಗರುತ್ಮಂತನನ್ನು, ವೈಕುಂಠದಲ್ಲಿರುವ ತನ್ನ "ಕ್ರೀಡಾದ್ರಿ"ಯನ್ನು ತಾನಿರುವಲ್ಲಿಗೆ ತರಲು ಆಜ್ಞಾಪಿಸಿದನು. ತನ್ನೊಡೆಯನ ಆಜ್ಞೆಯಂತೆ ಕ್ರೀಡಾದ್ರಿಯನ್ನು ತಂದು ಸಪ್ತಗಿರಿಯಲ್ಲಿ ಸ್ಥಾಪಿಸಿದ ಕಾರಣ ಇದನ್ನು "ಗರುಡಾಚಲ, ಗರುಡಾದ್ರಿ" ಎಂದು ಪ್ರಸಿದ್ಧವಾಗುವಂತೆ ಆಯಿತು.

### ವೆಂಕಟಾದ್ರಿ

"ವೆಂ" ಅಂದರೆ ಸಮಸ್ತ ಪಾಪವನ್ನು "ಕಟ" ಎಂದರೆ ದಹಿಸುವುದು. ಪಾಪವೆಲ್ಲವನ್ನು ದಹಿಸುವುದರಿಂದ ಈ ಕ್ಷೇತ್ರವನ್ನು "ವೆಂಕಟಾಚಲ" ಎಂದು ಹೆಸರಿಸಲಾಗಿದೆ, ಅಲ್ಲದೆ

**ವೇಂಕರಾಽಮೃತ ಬೀಜಸ್ತು ಕಟಮೈಶ್ವರ್ಯಮುಚ್ಯತೇ,**
**ಅಮೃತೈಶ್ವರ್ಯ ಸಂಘತ್ವಾತ್ ವೆಂಕಟಾದ್ರಿರಿತಿ ಸ್ಮೃತಃ.".**

"ವೆಂ"ಅಮೃತತ್ವವನ್ನು, ಮತ್ತು "ಕಟಹ" ಸಂಪತ್ತನ್ನು ದಯಪಾಲಿಸುವುದರಿಂದ ಈ ಕ್ಷೇತ್ರವೂ "ವೆಂಕಟಾದ್ರಿ' ಎಂದೂ ಪ್ರಸಿದ್ಧಿ ಆಗಿದೆ. ಆದ್ದರಿಂದಲೇ ಈ ಸ್ವಾಮಿಯನ್ನು ವೆಂಕಟೇಶ್ವರ ಎಂದು ಕರೆಯುತ್ತಾರೆ.

### ನಾರಾಯಣಾದ್ರಿ

ಪೂರ್ವದಲ್ಲಿ ನಾರಾಯಣ ಎಂಬ ಭಕ್ತನೊಬ್ಬ ಈ ಕ್ಷೇತ್ರದಲ್ಲಿರುವ ಸ್ವಾಮಿಪುಷ್ಕರಣಿ ತೀರದಲ್ಲಿ ವೆಂಕಟೇಶನನ್ನು ಕುರಿತು ತಪಸ್ಸು ಮಾಡುತ್ತಿದ್ದನು. ಇವನ ಭಕ್ತಿಗೆ ಮೆಚ್ಚಿದ ಸ್ವಾಮಿ, ನಿನಗೆ ಏನು ವರಬೇಕೋ ಕೇಳುವಂಥವನಾಗು ಎನ್ನಲು ಈ ಸ್ಥಳವು ನನ್ನ ಹೆಸರಿನಿಂದ ಪ್ರಸಿದ್ಧವಾಗಲಿ, ನೀನು ಶ್ರೀನಿವಾಸನಾಗಿ ನಿನ್ನ ಭಕ್ತರಿಗೆ ದರ್ಶನವನ್ನು ಕೊಡು ಸ್ವಾಮಿ ಎಂದು ಪ್ರಾರ್ಥಿಸಿದನು. ಭಕ್ತನ ಆಶಯದಂತೆ ಈ ಗಿರಿ "ನಾರಾಯಣಾದ್ರಿ", "ನಾರಾಯಣಾಚಲ" ವಾಗಿ ಬೆಳಗುತ್ತಿದೆ.

### ವೃಷಭಾದ್ರಿ

ಪೂರ್ವದಲ್ಲಿ ವೃಷಭಾಸುರ ಎಂಬ ಶಿವಭಕ್ತನೊಬ್ಬ ತನಗೆ ಶಕ್ತಿಯಿದೆ ಎಂಬ ಗರ್ವದಿಂದ ಯಾರ ಹಂಗುಯಿಲ್ಲದೆ, ಸ್ವೇಚ್ಛೆಯಿಂದ ತಿರುಗಾಡುತ್ತಿದ್ದನು. ಹೀಗೆ, ದುಷ್ಟನೂ ಲೋಕಕಂಟಕನೂ ಆದ ವೃಷಭಾಸುರ ತಿರುಗಾಡುತ್ತಿದ್ದಾಗ, ಕಿರಾತವೇಷಧಾರಿ ಶ್ರೀಹರಿಯೊಡನೆ ಯುದ್ಧಕ್ಕೆ ನಿಂತನು. ಈ ಘೋರಯುದ್ಧದಲ್ಲಿ ಸ್ವಾಮಿಶ್ರೀನಿವಾಸ ಅಂತಿಮವಾಗಿ ತನ್ನ ಸುದರ್ಶನವನ್ನು ಪ್ರಯೋಗಿಸಿದನು. ಇದನ್ನು ಕಂಡ ವೃಷಭಾಸುರ ಸುದರ್ಶನದಿಂದ ತನಗೆ ಸಾವು ನಿಶ್ಚಿತ ಎಂದು ತಿಳಿದೊಡನೆ ಶ್ರೀಮಹಾವಿಷ್ಣುವಿಗೆ ಶರಣಾಗಿ ಪ್ರಾರ್ಥಿಸಿದನು.

**ಆದ್ಯಪ್ರಭೃತಿ ವಾಯಂವೇ ಗಿರಿರುಚ್ಚಿತಂ ಶಿಖಂ**
**ಮದಾಖ್ಯಯಾ ಪ್ರಥಾಂ ಯಾತು "ವೃಷಭಾಚಲ" ಇತ್ಯಪಿ**

"ಪರಂಧಾಮ! ನಾನು ನಿನಗೆ ಶರಣಾಗಿ ಬಂದಿದ್ದೇನೆ, ನನ್ನನ್ನು ಕ್ಷಮಿಸು ತಂದೆ. ಪರಮಾತ್ಮ, ನಿನ್ನೊಂದಿಗೆ ಯುದ್ಧಮಾಡಿ ಸಾಯುತ್ತಿದ್ದೇನೆ ಎಂದು ನನಗೆ ದುಃಖವಿಲ್ಲ. ಬದಲಿಗೆ, ನಿನ್ನಿಂದ ಅದರಲ್ಲಿಯೂ ನಿನ್ನ ಸುದರ್ಶನ ಚಕ್ರದಿಂದ ಸಾಯುತ್ತಿದ್ದೆನಲ್ಲಾ ಅದು ನಾನು ಮಾಡಿರುವ ಮಹಾಭಾಗ್ಯ. ಆದರೆ, ನನ್ನದೊಂದು ಕೋರಿಕೆ, ನನ್ನ ಕೋರಿಕೆಯನ್ನು ತೀರಿಸುವ ಕರುಣಾಮಯಿ ನೀನು. ದೇವಾ, ನೀನು ಸರ್ವದಾ ಈ ಬೆಟ್ಟಗಳಲ್ಲಿಯೇ ಇರುತ್ತಿರುವುದರಿಂದ, ನೀನಿರುವ ಈ ಏಳು ಬೆಟ್ಟಗಳಲ್ಲಿ "ವೃಷಭಾಚಲ" ಎಂದು ಹೆಸರಿನಿಂದ ಪ್ರಸಿದ್ಧಿಯಾಗಿ ನನ್ನ ಹೆಸರು ಚಿರಸ್ಥಾಯಿಯಾಗಿ ಇರುವಂತೆ ಮಾಡು ಎಂದು ಕಂಬನಿ ಸುರಿಸುತ್ತ ಭಕ್ತಿ, ವಿನಯ ಮತ್ತು ವಿನಮ್ರತೆಯಿಂದ ಬೇಡಿಕೊಂಡನು.

**ವೃಷಭಾಸುರ! ಮದ್ಭಕ್ತ್ಯಾ ವಿಮುಕ್ತಿಮ್ ಯಾನ್ಯಸಿ ಧ್ರುವಮ್**
**ಗಿರಿಶ್ಚಾಯಂ ಭವನ್ನಾಮ್ನಾ ಪ್ರಸಿದ್ಧಮಧಿಗಚ್ಛತು**

ವೃಷಭಾಸುರನ ಕೋರಿಕೆಯನ್ನು ಆಲಿಸಿದ ಭಗವಾನ್ ವಿಷ್ಣು "ವೃಷಭಾಸುರ! ನಿನ್ನ ಕೋರಿಕೆಯು ಈಡೇರುತ್ತದೆ. ಇಂದಿನಿಂದ ಈ ಪರ್ವತವು "ವೃಷಭಾದ್ರಿ" ಎನ್ನುವ ಹೆಸರಿನಿಂದ ಕರೆಯಲ್ಪಡುತ್ತದೆ ಎಂದು ಹೇಳಿ ತನ್ನ ಸುದರ್ಶನ ಚಕ್ರದಿಂದ ಸಂಹಾರ ಮಾಡಿದನೆಂದು ಬ್ರಹ್ಮಾಂಡ ಪುರಾಣದಲ್ಲಿ ಹೇಳಲಾಗಿದೆ. ಹಾಗೆಯೇ ವರಾಹಪುರಾಣದಲ್ಲಿ ಈ ಕಥೆಯನ್ನು ಇನ್ನೊಂದು ರೀತಿಯಲ್ಲಿ ಹೇಳಿದೆ. ಈಗ ಅದನ್ನು ಹೇಳುತ್ತೇನೆ ಗಮನವಿಟ್ಟು ಕೇಳಿ ಎಂದು ಮುಂದುವರಿಸಿದರು.

ಪೂರ್ವದಲ್ಲಿ ವೃಷಭಾಸುರ ಎಂಬ ರಾಕ್ಷಸನು, ಶೇಷಾಚಲ ಪರ್ವತವನ್ನು ಆಕ್ರಮಿಸಿಕೊಂಡು ಅಲ್ಲಿ ತಪಸ್ಸು, ಯಜ್ಞಯಾಗಾದಿಗಳನ್ನು ಮಾಡುತ್ತಿದ್ದ, ಯೋಗಿಗಳಿಗೆ, ಋಷಿಮುನಿಗಳಿಗೆ, ಮಾನವರಿಗೆ ಸಹಿಸಲಾರದ ಹಿಂಸೆಯನ್ನು ಕೊಡುತ್ತಿದ್ದನು. ಎಲ್ಲರು ಅವನ ಕಾಟವನ್ನು ತಡೆಯಲಾರದೆ ಸ್ವಾಮಿ ಶ್ರೀನಿವಾಸನ ಬಳಿಗೆ ತೆರಳಿ ಶರಣಾಗಿ ಆ ರಕ್ಕಸನ ಹಿಂಸೆಯನ್ನು ಹೇಳಿಕೊಂಡು ಆಶ್ರಯವನ್ನು ಬೇಡಿದರು.

**"ಭಗವನ್ನರವಿಂದಾಕ್ಷ! ವೃಷಭೋನಾಮ ರಾಕ್ಷಸಃ**
**ಸಮೃದ್ಧತೇ ಸದಾ ಕ್ರೂರಃ ತಪೋ ಭಂಗಕರಃ ಖರಃ**
**ತಸ್ಮಾದ್ರಕ್ಷಾ ಕ್ಷರಾತೀತ ಭಯದ್ರಾಕ್ಷಾಸ ಕಲ್ಪಿತಾತ್**

**ಬಾಢಮಿತ್ಯುಕ್ತವಾನ್ ಕೃಷ್ಣ ದುಷ್ಟಮಭ್ಯದ್ರವ ದ್ರುವೇ**
**ಸರಾಕ್ಷಸೋ ಮಹಾವೀರ್ಯ ಸಃ ತೀರ್ಥ ತುಂಬುರು ಸಂಜ್ಞಕೇ**
**ಸ್ನಾತ್ವಾ ತ್ರಿಷವಣಂ ಪುಣ್ಯಾಂ ಸಾಲಗ್ರಾಮ ಶಿಲಾಂ ನೃಪ!**
**ನಾರಸಿಂಹಾತ್ಮಿಕಾಂ ದಿವ್ಯಾಂ ಸಕರಾಲಾ ಮಧೋ ಮುಖಾಮ್,**
**ನಿತ್ಯ ಮಾರಾಧಯೇ ಯಾವಾಮಿತಿ ನಿಶ್ಚಿತ್ಯ ಪೂಜಯನ್,**
**ಪೂಜಾಂತೇ ಸ್ವಶಿರಃಪುಷ್ಪಂ ಖಡ್ಗೇ ನಹೃತ್ಯ ಭೂಪತೇ,**
**ಸಮರ್ಪಯಾಮಾಸ ತತಃ ತಚ್ಛಿರಃ ಪುನರಾಗತಮ್."**

"ಸ್ವಾಮೀ! ಶ್ರೀನಿವಾಸ! ತುಂಬುರು ತೀರ್ಥದಲ್ಲಿ **"ವೃಷಭಾಸುರ"** ನೆಂಬ ರಾಕ್ಷಸನು ನಮಗೆ ಅನೇಕ ತೊಂದರೆಗಳನ್ನುಂಟುಮಾಡುತ್ತಿದ್ದಾನೆ. ಅವನು ಈ ತೀರ್ಥದಲ್ಲಿ ಪ್ರತಿದಿನ ಶ್ರೀನೃಸಿಂಹ ಸಾಲಗ್ರಾಮವನ್ನು ಭಕ್ತಿಯಿಂದ ಪೂಜಿಸುತ್ತಾನೆ ಮತ್ತು ಪೂಜೆಯ ಕೊನೆಯಲ್ಲಿ ತನ್ನ ಶಿರವನ್ನು ತನ್ನ ಕತ್ತಿಯಿಂದ ಕತ್ತರಿಸಿ ಹೂವಿನಂತೆ ಅರ್ಪಿಸುತ್ತಾನೆ. ವಿಚಿತ್ರವೆಂದರೆ ಅವನ ಶಿರವು ಯಥಾವತ್ತಾಗಿ ಸೇರಿಕೊಳ್ಳುತ್ತದೆ. ಕಳೆದ ಐದುಸಾವಿರ ವರ್ಷಗಳಿಂದಲೂ ಹೀಗೆಯೇ ಇದೆ. ಇವನ ಹಿಡಿತದಿಂದ ಲೋಕಗಳನ್ನು ರಕ್ಷಿಸಬೇಕಾಗಿದೆ ಎಂದು ಋಷಿಮುನಿಗಳೆಲ್ಲರೂ ಪ್ರಾರ್ಥಿಸಿದರು. ಶ್ರೀನಿವಾಸನು ವಿಷಯವನ್ನು ತಕ್ಷಣವೇ ಅವನ ಬಳಿಗೆ ಹೋದನು.

ಅಂತಹ ವೃಷಭಾಸುರನು ತನ್ನೆದುರಿಗೆ ಪ್ರತ್ಯಕ್ಷನಾದ ಶ್ರೀನಿವಾಸನನ್ನು, **"**ಸ್ವಾಮಿ! ನಾನು ನಿನ್ನಲ್ಲಿ ಕೋರಿದ ವರವನ್ನು ತಪ್ಪದೆ ಕೊಡುತ್ತೀಯ ಅಲ್ವಾ, ಮತ್ತೆ ನನಗೆ ಯುದ್ಧವನ್ನು ಭಿಕ್ಷೆಯಾಗಿ ಕೊಡು ಎನ್ನುವುದು ನನ್ನ ಕೋರಿಕೆ.**"** ಎಂದು ಪ್ರಾರ್ಥಿಸಿದನು. ಶ್ರೀಹರಿಯು ಘೋರಯುದ್ಧದಲ್ಲಿ ಅವನನ್ನು ಎದುರಿಸಿ ಕೊನೆಗೆ ತನ್ನ ಸುದರ್ಶನ ಚಕ್ರಾಯುಧವನ್ನು ಬಳಸಿ ಅವನ ಶಿರಶ್ಛೇದ ಮಾಡಿದನು. ಈ ಪರ್ವತವನ್ನು ತನ್ನ ಹೆಸರಿನಿಂದ ಕರೆಯಬೇಕೆಂಬ ವೃಷಭಾಸುರನ ಕೋರಿಕೆಯನ್ನು ಸಮ್ಮತಿಸಿದ ಸ್ವಾಮಿ, ಅಂದಿನಿಂದ ಈ ಪರ್ವತವು **"ವೃಷಭಾದ್ರಿ"** ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿದೆ.

## ವೃಷಾದ್ರಿ

ವೃಷಭಾಸುರನ ಕಥೆಯಿಂದಾಗಿ ಈ ಹೆಸರುಗಳು ರೂಪುಗೊಂಡವು ಎಂದು ಕೆಲವರು ಹೇಳುತ್ತಾರೆ, 'ವೃಷಾದ್ರಿ' ಮತ್ತು 'ವೃಷಭಾದ್ರಿ' ಎರಡನ್ನು ಸಮಾನಾರ್ಥಕಗಳಾಗಿ ತೆಗೆದುಕೊಳ್ಳುತ್ತಾರೆ. ಆದರೆ ಈ ಪರ್ವತವನ್ನು ವಿಶೇಷವಾಗಿ 'ವೃಷಾದ್ರಿ' ಎಂಬ ಹೆಸರಿನಿಂದ ಕರೆಯಲಾಗುತ್ತದೆ.

'ವೃಷಂ' ಎಂದರೆ ಧರ್ಮ. ಒಂದಾನೊಂದು ಕಾಲದಲ್ಲಿ ಧರ್ಮದೇವತೆ ತನ್ನ ಅಭಿವೃದ್ಧಿಗಾಗಿ ಈ ಶೇಷಾಚಲ ಪರ್ವತದಲ್ಲಿ ತಪಸ್ಸು ಮಾಡಿದಳು.

**"ಗಿರಾವಾಸ್ಮಿ ಸ್ತವ ಸ್ತೇ ಪೇ ಧರ್ಮೋಽಪಿ ಸ್ವಾಭಿವೃದ್ಧಯೇ**

**ತಸ್ಮಾದಹು ವೃರ್ಷಾದ್ರಿಂ ತಂ ಮುನಯೋ ವೇದಪಾರಗಾಃ."**

ಅಂದಿನಿಂದ ಈ ಪರ್ವತವು "ವೃಷಾದ್ರಿ" ಎಂಬ ಹೆಸರಿನಿಂದ ಜನಪ್ರಿಯವಾಗಿದೆ.

**ಅಂಜನಾದ್ರಿ**

ಇದು ತ್ರೇತಾಯುಗದ ಕಥೆ. ಅಲ್ಲಿ ಕೇಸರಿ ಎಂಬ ವಾನರ ರಾಜನಿದ್ದ. ಆ ರಾಜನ ಪತ್ನಿ ಅಂಜನಾದೇವಿ. ಇವರಿಗೆ ಸಂತಾನವಿಲ್ಲದ ಕಾರಣ ತನ್ನ ನೋವನ್ನು ಹೋಗಲಾಡಿಸಲು ಚಿಂತಿಸಿ ಮತಂಗಋಷಿಗಳ ಆಶ್ರಮಕ್ಕೆ ಹೋದಳು. ಮತಂಗಮುನಿಗಳನ್ನು ಕಂಡು ಭಕ್ತಿಯಿಂದ ನಮಸ್ಕರಿಸಿ, ಸಂತಾನಪ್ರಾಪ್ತಿಗಾಗಿ ನಾನು ಏನು ಮಾಡಬೇಕು? ಎಂದು ದಯಮಾಡಿ ತಿಳಿಸಿ ಎಂದು ಪ್ರಾರ್ಥಿಸಿದಳು. ಕೂಡಲೇ ಮುನಿವರ್ಯರು ಯೋಚಿಸಿ ಹೀಗೆ ಹೇಳಿದರು.

"ಅಮ್ಮಾ! ಪಂಪಾನದಿಯ ಪೂರ್ವಕ್ಕೆ ಐನೂರು ಯೋಜನ ದೂರದಲ್ಲಿ ನರಸಿಂಹ ಕ್ಷೇತ್ರವಿದೆ. ಅದರ ದಕ್ಷಿಣ ದಿಕ್ಕಿನಲ್ಲಿ ನಾರಾಯಣಗಿರಿ ಕ್ಷೇತ್ರವಿದೆ. ಆ ಕ್ಷೇತ್ರದಲ್ಲಿ "ಸ್ವಾಮಿಪುಷ್ಕರಣಿ" ಎಂಬ ಪವಿತ್ರ ತೀರ್ಥವಿದೆ. ಅದಕ್ಕೆ ಉತ್ತರಕ್ಕೆ ಸ್ವಲ್ಪ ದೂರದಲ್ಲಿ 'ಆಕಾಶಗಂಗಾ' ಎಂಬ ಪವಿತ್ರ ತೀರ್ಥವಿದೆ. ಹನ್ನೆರಡು ವರ್ಷಗಳ ಕಾಲ ಪ್ರತಿದಿನ ಅದರಲ್ಲಿ ಸ್ನಾನಮಾಡಿ ಶುಚಿರ್ಭೂತಳಾಗಿ ಭಕ್ತಿಯಿಂದ ಸ್ವಾಮಿವೆಂಕಟೇಶನನ್ನು ಪೂಜಿಸು ನಿನಗೆ ಖಂಡಿತವಾಗಿ ಒಳ್ಳೆಯ, ಶ್ರೇಷ್ಠನಾದ, ಅನಂತಶಕ್ತಿಯುಳ್ಳ, ಸಕಲಲೋಕ ಪ್ರಸಿದ್ಧನಾದ ಪುತ್ರಪ್ರಾಪ್ತಿ ಆಗುತ್ತದೆ ಎಂದು ಆಶೀರ್ವದಿಸಿದರು.

ಮತಂಗಮುನಿಗಳ ಆಶೀರ್ವಾದ ಪಡೆದು ಅವರ ಆದೇಶದ ಮೇರೆಗೆ ಅಂಜನಾದೇವಿಯು ವೆಂಕಟಾಚಲ ಕ್ಷೇತ್ರವನ್ನು ತಲುಪಿ 'ಸ್ವಾಮಿಪುಷ್ಕರಣಿ'ಯಲ್ಲಿ ಸ್ನಾನ ಮಾಡಿ, ಪುಷ್ಕರಿಣಿ ತೀರದಲ್ಲಿರುವ ಅಶ್ವತ್ಥ ವೃಕ್ಷಕ್ಕೆ ಪ್ರದಕ್ಷಿಣ ನಮಸ್ಕಾರಮಾಡಿ ಅದರ ಪಕ್ಕದಲ್ಲಿರುವ ಶ್ರೀ ವರಾಹಸ್ವಾಮಿಯ ದರ್ಶನ ಮಾಡಿದಳು. ನಂತರ 'ಆಕಾಶ ಗಂಗೆ' ತೀರ್ಥವನ್ನು ತಲುಪಿ ಅಲ್ಲಿ ಉಪವಾಸವ್ರತ ಸಂಕಲ್ಪಮಾಡಿ ವ್ರತವನ್ನು ಆರಂಭಿಸಿದಳು. ಹೀಗೆ ಒಂದು ವರ್ಷ ಕಳೆದ ನಂತರ ಪ್ರತಿದಿನ ವಾಯುದೇವನು ಅವಳ ಕೈಯಲ್ಲಿ ಒಂದು ಹಣ್ಣನ್ನು ಇಡುತ್ತಿದ್ದನು. ಅವಳು ಅದನ್ನು ತಿಂದು ತನ್ನ ತಪಸ್ಸನ್ನು

ಮುಂದುವರೆಸಿದಳು. ಒಂದು ದಿನ ವಾಯುದೇವರು ಅಂಜನಾದೇವಿಗೆ ವೀರ್ಯ ತುಂಬಿದ ಹಣ್ಣನ್ನು ಕೊಟ್ಟರು. ಎಂದಿನಂತೆ ಅವಳು ಆ ಹಣ್ಣನ್ನು ತಿಂದು ಗರ್ಭವತಿಯಾದಳು. ಹತ್ತು ತಿಂಗಳ ನಂತರ ಅಂಜನಾದೇವಿ ಒಂದು ಪುತ್ರರತ್ನಕ್ಕೆ ಜನ್ಮ ನೀಡಿದಳು.

ಆತನೇ ಅಂಜನೀಪುತ್ರ ಆಂಜನೇಯ, ವಾಯುಪುತ್ರ ಹನುಮಂತ. ಚಿರಂಜೀವಿಯಾಗಿ, ಭಕ್ತಿಯೇ ಸಾಕಾರವಾಗಿರುವ ಶ್ರೀರಾಮದೂತ ಹನುಮಂತನೆಂದೇ ಪ್ರಖ್ಯಾತನಾಗಿರುವನು.

**ಅಂಜನಾವ್ರತ ಪುತ್ರಂ ಗಿರೀಶ್ವರ**
**ತನ್ಮೇದಂಜನ ಶೈಲೇಽಯಂ ಲೋಕೇ ವಿಖ್ಯಾತ ಕೀರ್ತಿಮಾನ್**

ಅಂದಿನಿಂದ ಈ ಪರ್ವತ "ಅಂಜನಾದ್ರಿ, ಅಂಜನಾಚಲ, ಅಂಜನಶೈಲ ಎಂದೇ ಪ್ರಸಿದ್ಧವಾಗಿದೆ.

ಈ ಪ್ರಸಿದ್ಧವಾದ ಏಳು ಹೆಸರುಗಳೊಂದಿಗೆ ಏಳು ಬೆಟ್ಟಗಳ ರಚನೆಯಿಂದಾಗಿ, ಈ ದೇವಾಲಯವನ್ನು 'ಸಪ್ತಗಿರಿ' ಶೈಲವೆಂದು, ಏಳುಬೆಟ್ಟಗಳ ಕ್ಷೇತ್ರ, ಏಡು ಕೊಂಡಲ ಕ್ಷೇತ್ರ ಎಂದು ಕರೆಯಲಾಗುತ್ತದೆ. ಈ ಮುಖ್ಯನಾಮಗಳಲ್ಲದೆ ಈ ವೆಂಕಟಾಚಲ ಕ್ಷೇತ್ರಕ್ಕೆ ಕಾಲಾಂತರದಲ್ಲಿ ಅನಂತನಾಮಗಳು ರೂಪುಗೊಂಡಿವೆ. ಅದನ್ನು ಲೆಕ್ಕಹಾಕಿ ಹೇಳಲು ಯಾರಿಂದಲೂ ಸಾಧ್ಯವಿಲ್ಲ.. ಹಾಗಾಗಿ ವೆಂಕಟಾಚಲ ಕ್ಷೇತ್ರದ ಅನಂತ ನಾಮ ವೈಭವಗಳನ್ನು ವಿವರಿಸುತ್ತಾ ಸೂತರು ಹೀಗೆ ಹೇಳಿದರು!

## ವಪಾಯಾಗಂ

ಇಷ್ಟು ಮಹಿಮಾನ್ವಿತವಾಗಿರುವ ಈ ಪುಣ್ಯಕ್ಷೇತ್ರದಲ್ಲಿ ಮಹಾವಿಷ್ಣುವು ಒಮ್ಮೆ ಮಹಾಲಕ್ಷ್ಮೀಯೊಂದಿಗೆ ವಿಹರಿಸುತ್ತಿದ್ದನು. ಸರಸ ಸಂಭಾಷಣೆಗಳೊಂದಿಗೆ ನಿಸರ್ಗದ ಸೊಬಗನ್ನು ಆಸ್ವಾದಿಸುತ್ತಾ, ಅಲ್ಲೊಂದು ಇಲ್ಲೊಂದು ಅರಳಿದ ಹೂಗಳ ಸವಿಯನ್ನು ಲಕ್ಷ್ಮೀಗೆ ತೋರಿಸುತ್ತಾ, ಕಾಡಿನಲ್ಲಿ ಸೊಂಪಾಗಿ ಬೆಳೆದ ಸೊಪ್ಪನ್ನು ವರ್ಣಿಸುತ್ತ ಸಂಚರಿಸುತ್ತಿದ್ದ ದಿವ್ಯ ದಂಪತಿಗಳಿಗೆ ಒಂದು ದೃಶ್ಯ ಗೋಚರವಾಯಿತು

ಆ ದಟ್ಟವಾದ ಕಾಡಿನ ಮಧ್ಯದ ವಿಶಾಲವಾದ ಸಮತಟ್ಟಾದ ಪ್ರದೇಶದಲ್ಲಿ ಕೆಲವು ಸನ್ಯಾಸಿಗಳು ವೇದ ಮಂತ್ರಗಳನ್ನು ಪಠಿಸುತ್ತಿದ್ದರು. ಇನ್ನು ಕೆಲವು ಋಷಿಗಳು ಬೇರೆ ಬೇರೆ ಹೋಮ ವೇದಿಕೆಯನ್ನು ಸ್ಥಾಪಿಸಿ ಅದರ ಸುತ್ತಲೂ ಕುಳಿತು ಯಜ್ಞ ಮಾಡುತ್ತಿದ್ದರು. ಕೆಲವು ಮುನಿಬಾಲಕರು ಯಜ್ಞಕ್ಕೆ ಬೇಕಾದ ಸಾಮಾಗ್ರಿ ಮತ್ತಿತರ

ಸಾಮಗ್ರಿಗಳನ್ನು ಒದಗಿಸುತ್ತಿದ್ದರು. ಪರಮಪವಿತ್ರವಾದ ವೆಂಕಟಾಚಲ ಕ್ಷೇತ್ರದ ಪರ್ವತದ ಇಳಿಜಾರುಗಳ ಮಧ್ಯೆ ಆ ಋಷಿಮುನಿಗಳು ಮಾಡಿದ ದಿವ್ಯಹೋಮದಿಂದಾಗಿ ಆ ಸ್ಥಳವು ಹೋಮಧೂಪದ ಸುಗಂಧದಿಂದ ಹೆಚ್ಚು ದೈವೀಕ ವಾತಾವರಣದಲ್ಲಿ ವಿಚಿತ್ರವಾದ ಮತ್ತು ವಿಲಕ್ಷಣವಾದ ಪ್ರಕಾಶಗಳಿಂದ ಹೊಳೆಯುತ್ತಿತ್ತು. ಎಲ್ಲರೂ ತಮ್ಮನ್ನು ತಾವು ಮರೆತು ಹೋಮ ಕಾರ್ಯದಲ್ಲಿ ಮಗ್ನರಾಗಿದ್ದರು. ಶ್ರೀಮಹಾವಿಷ್ಣುವು ತನ್ನೊಂದಿಗೆ ವಿಹರಿಸುತ್ತಿದ್ದ ಶ್ರೀಮಹಾಲಕ್ಷ್ಮಿಗೆ ಆ ಋಷಿಮುನಿಗಳು ನಡೆಸುತ್ತಿರುವ ಅದ್ಭುತವಾದ ಯಾಗಗಳನ್ನು ನೋಡುತ್ತ ಹೀಗೆ ಹೇಳಿದನು.

"ಪ್ರೀತಿಯ ಲಕ್ಷ್ಮೀ! ಆ ಮಹಾಯೋಗಿಗಳು ಮಾಡುತ್ತಿರುವ ಮಹಾಯಜ್ಞವನ್ನು ನೀನು ಗಮನಿಸಿದ್ದೀಯಾ! ನೋಡು. ಜಾಗರೂಕತೆಯಿಂದ ನೋಡು. ಅವರು ಬಹಳ ಶ್ರದ್ಧೆಯಿಂದ, ತಾಳ್ಮೆಯಿಂದ ಮತ್ತು ಕಟ್ಟುನಿಟ್ಟಾಗಿ ನಡೆಸುತ್ತಿರುವ ಯಾಗ ಅವರು ನಡೆಸುತ್ತಿರುವುದು ಯಾವ ಆಮಿಷಕ್ಕಾಗಿಯೂ ಅಲ್ಲ! ಆ ಹೋಮವನ್ನು ನಮ್ಮಿಬ್ಬರಿಗಾಗಿ ನಡೆಸಲಾಗುತ್ತಿದೆ. ಆದುದರಿಂದ ನಾವಿಬ್ಬರೂ ಅವರ ಬಳಿಗೆ ಹೋಗಿ ಅವರು ಮಾಡುವ ಯಾಗದ ಫಲವನ್ನು ಸ್ವೀಕರಿಸೋಣ. ಆದರೆ ಈ ರೂಪದಲ್ಲಿ ಬೇಡ, ವೇಷಮರೆಸಿಕೊಂಡು ಹೋಗಿ ಅವರನ್ನು ಸ್ವಲ್ಪ ಪರೀಕ್ಷಿಸೋಣ. ಪರೀಕ್ಷೆಯ ನಂತರ ಅವರ ಹೋಮವನ್ನು ಪೂರ್ಣಗೊಳಿಸೋಣ," ಭಗವಾನ್ ವಿಷ್ಣುವು ತಕ್ಷಣವೇ ತನ್ನ ವೇಷವನ್ನು ಬದಲಾಯಿಸಿದನು. ಸ್ವಾಮಿಯ ವಿಚಿತ್ರ ಉಡುಗೆಗೆ ಅನುಗುಣವಾಗಿ ಲಕ್ಷ್ಮೀದೇವಿ, ಅವಳು ತನ್ನ ರೂಪವನ್ನೂ ಬದಲಾಯಿಸಿದಳು.

ಶ್ರೀ ವೆಂಕಟೇಶ್ವರನು ಅತ್ಯಂತ ಮೋಹಕವಾದ (ವಟು) ಯುವಕನ ರೂಪದಲ್ಲಿ ಕಾಣಿಸಿಕೊಂಡನು. ಅವನು ತನ್ನ ಕಣ್ಣುಗಳ ಮೇಲೆ ಬಟ್ಟೆಗಳನ್ನು ಧರಿಸಿ, ತನ್ನ ಕೈಗಳಿಗೆ ಸುಂದರವಾದ ಪರಿಮಳಯುಕ್ತ ಹೂವಿನ ಮಾಲೆಗಳನ್ನು ಸುತ್ತಿದನು. ಕಾಮುಕನಂತೆ ಕೈಯಲ್ಲಿ ಹೂವನ್ನು ಧರಿಸುತ್ತಾನೆ. ಕಾಮೋದ್ರಕಿಯಂತೆ ವರ್ತಿಸುವ ಭಗವಂತನಿಗೆ ತಕ್ಕ ಹಾಗೆ ಲಕ್ಷ್ಮೀದೇವಿಯೂ ತನ್ನ ಮೈಮಾಟ ಕಾಣುವಹಾಗೆ ವಸ್ತ್ರಧರಿಸಿ ಹೂವು ಮುಂತಾದ ಸೂಕ್ಷ್ಮವಾದ ಮೋಹಕ ಆಭರಣಗಳಿಂದ ಅಲಂಕರಿಸಿಕೊಂಡಳು. ಮನ್ಮಥ ಲಾವಣ್ಯದಿಂದ ಕೂಡಿದ ಸಿರಿದೇವಿ ಭಗವಂತನನ್ನು ವೈಯ್ಯಾರದಿಂದ ತಬ್ಬಿಹಿಡಿದು ಪ್ರಕಾಶಮಾನವಾಗಿ ಹೊಳೆಯುತ್ತಿದ್ದರು. ಇಬ್ಬರೂ ಸುವಾಸನೆಯ ತಾಂಬೂಲವನ್ನು ಜಗಿದು, ಒಬ್ಬರನ್ನೊಬ್ಬರು ಪ್ರೀತಿಯಿಂದ, ಕೋಮಲವಾಗಿ ನೋಡುತ್ತಾ, ಒಬ್ಬರಿಗೊಬ್ಬರು ಮೃದುವಾಗಿ ಮಾತ ನಾಡುತ್ತಾ, ಸಣ್ಣ ನಗುವಿನೊಂದಿಗೆ ಆ ಮುನಿಗಳ ಹತ್ತಿರಕ್ಕೆ ಬಂದರು.

ಸನ್ಯಾಸಿಗಳೆಲ್ಲರೂ ಆನಂದನಿಲಯದಲ್ಲಿ ವಿಚಿತ್ರವಾಗಿ ಕಾಣುವ ಕಾಮುಕರನ್ನು, ವೇಶ್ಯೆಯರನ್ನು ನೋಡುತ್ತಾ ವಿಸ್ಮಿತರಾಗಿ ಸಂಭ್ರಮದಿಂದ ಎದ್ದು ನಿಂತರು. ಋಷಿಮುನಿಗಳು ಇವರಿಬ್ಬರ ವೇಷಭೂಷಣವನ್ನು, ಹೊಳೆಯುತ್ತಿರುವ ಅವರ ಸೌಂದರ್ಯವನ್ನು ನೋಡುತ್ತಾ, ಕಣ್ಣು ಮಿಟುಕಿಸದೆ ಅವರನ್ನೇ ನೋಡುತ್ತಾ ಹೇಳಿದರು, "ಇವರು ದೇವಲೋಕದ ಪುರುಷರಿರಬಹುದೇ! ಈ ನಿರ್ಜನಾರಣ್ಯದಲ್ಲಿ ಸಂಚರಿಸುತ್ತಿರುವ ಈ ಸುಂದರವಾದ ಎಳೆಯ ದೇಹಗಳು ನಿಜವಾಗಿಯೂ ಮನುಷ್ಯರೇ? ಸುಂದರವಾಗಿ ಅಲಂಕರಿಸಿಕೊಂಡು ಇಲ್ಲಿ ಸಂಚರಿಸುತ್ತಿರುವ ಇವರು ಯಾರು? ಯಾರಾದರೇನು?ಅವರ ವರ್ಚಸ್ಸು ನಮ್ಮನ್ನು ಆಶ್ಚರ್ಯಚಕಿತರನ್ನಾಗಿ ಮಾಡಿದೆ. ಇವರು ಕಾಮಿಗಳಾ ಅಥವಾ ದಂಪತಿಗಳಾ ಎಂದು ತಮ್ಮಲ್ಲಿಯೇ ಮಾತಾಡಿಕೊಳ್ಳುತ್ತಿದ್ದರು.

"ಅಯ್ಯಾ! ನೀವು ಯಾರು? ಚಕ್ರವರ್ತಿಯ ಮುಖಲಕ್ಷಣದಿಂದ ಬೆಳಗುತ್ತಿರುವ ನೀವು ರಾಜರೇ? ಹಾಗಿದ್ದಲ್ಲಿ ನೀವು ಯಾವ ದೇಶದವರು? ನಿಮ್ಮ ತಂದೆತಾಯಿಗಳು ಯಾರು? ನಿಮ್ಮ ಹೆಸರೇನು? ನೀವು ಬಂದ ಕಾರಣವೇನು? ಯಾವ ವಿಷಯವನ್ನೂ ಮುಚ್ಚಿಡದೆ ನಿಮ್ಮ ಎಲ್ಲಾ ವ್ಯವಹಾರಗಳನ್ನು ಬಹಿರಂಗಪಡಿಸಿ."

ಮಾಯಾವೇಷದಲ್ಲಿದ್ದ ಲಕ್ಷ್ಮೀನಾರಾಯಣರು "ಋಷಿವರ್ಯರೇ! ನಾನು ರಾಜನಲ್ಲ. ಬ್ರಾಹ್ಮಣನಲ್ಲ. ನನಗೆ ಜಾತಿಯಿಲ್ಲ. ತಂದೆ-ತಾಯಿಯಿಲ್ಲದವನು. ನನಗೆ ಸ್ಥಳವಿಲ್ಲ. ಎಲ್ಲೆಲ್ಲೂ ಇದ್ದೇನೆ. ನಾನು ಅನೇಕ ವೇಷಗಳನ್ನು ಧರಿಸುತ್ತೇನೆ. ನಿರ್ದಿಷ್ಟವಾದ ಯಾವುದೇ ನಿರ್ಣಯವಿಲ್ಲ. ಅಗಣಿತ ಹೆಸರು ನನ್ನದು. ನನ್ನಲ್ಲಿ ಯಾವುದೇ ಕೆಟ್ಟ ಗುಣಗಳಿಲ್ಲ.ನಾವು ನಿಮ್ಮನ್ನು ನೋಡಲು ಬಂದಿದ್ದೇವೆ. ನೀವೆಲ್ಲರೂ ಸೇರಿ ಒಂದಿಷ್ಟು ಯಾಗಗಳನ್ನು ಮಾಡುತ್ತಿದ್ದೀರಿ. ಏನೋ ಹೋಮ-ಹವನವನ್ನು ಮಾಡುತ್ತಿದ್ದೀರಾ, ಎಲ್ಲವು ಸರಿಯಾಗಿದೆ! ಅದರ ಪಕ್ಕದಲ್ಲಿ ಯಜ್ಞದ ಪಾತ್ರೆಯು ಸಂಪೂರ್ಣವಾಗಿ ಹುಲಿಯ ಚರ್ಮದಲ್ಲಿ ಸುತ್ತಿ ಇದೆ, ಅಲ್ಲವೇ? ವೇಪವನ್ನು ಯಾವಾಗ ಯಜ್ಞಕುಂಡಕ್ಕೆ ಸಮರ್ಪಿಸುತ್ತೀರ? ಕಾಲಯಾಪನ ಮಾಡದೆ ಅದನ್ನು ಸರಿಯಾದ ಶುಭಮಹೂರ್ತದಲ್ಲಿ ಅರ್ಪಿಸಿ. ಇಲ್ಲದ್ದಿದ್ದಲ್ಲಿ ಯಜ್ಞವಿಧಿಯು ಸಂಪನ್ನವಾಗುವುದಿಲ್ಲ." ಎಂದರು.

ಮುನಿಗಳೆಲ್ಲರೂ ಆ ಮಾಯಾವಿಯ, ಮಾತಿನಿಂದ ಬೆರಗಾಗಿ ತಮ್ಮ ತಪ್ಪನ್ನು ಅರಿತು, ತಡಮಾಡದೆ ವೇಪವನ್ನು (ಬಲಿ ಪ್ರಾಣಿಯ ಹೊಟ್ಟೆಯಲ್ಲಿ ತೆಳುವಾದ ಕೊಬ್ಬಿನ ಪದರ)ಸುಗಂಧ ಪಾತ್ರೆಯಲ್ಲಿ ಸುರಿದು ಯಜ್ಞಕುಂಡಕ್ಕೆ ಅರ್ಪಿಸುವುದರ ಮೂಲಕ ವೇಪಯಾಗವನ್ನು ಮುಂದುವರೆಸಿದರು.

ತಕ್ಷಣವೇ, ಮಾರುವೇಷದಲ್ಲಿದ್ದ ಶ್ರೀಲಕ್ಷ್ಮೀಸಮೇತನಾದ ವೆಂಕಟೇಶನು ಅದೃಶ್ಯನಾಗಿ ವಿಷ್ಣು ಲಕ್ಷ್ಮಿಯಾಗಿ ಕಾಣಿಸಿಕೊಂಡರು ಮತ್ತು ಯಜ್ಞಫಲವನ್ನು ಸ್ವೀಕರಿಸಿದರು. ಈ ಅದ್ಭುತ ಘಟನೆಯಿಂದ ವಿಸ್ಮಿತರಾದ ಮುನಿಗಳು ತಮಗೆ ದೊರೆತ ಸೌಭಾಗ್ಯ, ಶ್ರೀ ಸ್ವಾಮಿಯನ್ನು ತಮ್ಮ ಕಣ್ಣುಗಳಿಂದ ನೋಡಿ ಆನಂದಿಸಿದರು. ನಮ್ಮ ಯಜ್ಞವನ್ನು ಯಶಸ್ವಿಗೊಳಿಸಿದ್ದೇ ವಿಟುರೂಪಿದಲ್ಲಿದ್ದ ಶ್ರೀವೆಂಕಟೇಶ್ವರ! ಎಂದು ಸಂತೋಷಪಡುತ್ತಲೇ ಉಳಿದ ಯಾಗಕಾರ್ಯವನ್ನು ಮುಗಿಸಿದರು. ಮಹರ್ಷಿ ಜಾಬಾಲಿಯಿಂದ ಹಿಂದೆ ಕೇಳಿದ ಈ ಕಥೆಯನ್ನು ನಾನು ನಿಮಗೆ ಹೇಳಿದ್ದೇನೆ. ಇದಲ್ಲದೇ ಮುನೀಂದ್ರರು ನನಗೆ ಕುಮಾರಧಾರ ತೀರ್ಥದ ಬಗ್ಗೆ ತಿಳಿಸಿದರು. ಅದನ್ನೂ ಹೇಳುತ್ತೇನೆ.

## ಕುಮಾರಧಾರಾ ತೀರ್ಥ

ಒಮ್ಮೆ ಒಬ್ಬ ಮುದುಕ ಬ್ರಾಹ್ಮಣನು ತನ್ನ ಮಗ ಕೌಂಡಿನ್ಯನೊಂದಿಗೆ ಆ ದಿವ್ಯ ಸ್ಥಳಗಳನ್ನು ಸಂದರ್ಶಿಸುತ್ತಾ ದೇಶಾದ್ಯಂತ ಸುತ್ತಾಡುತ್ತಿದ್ದನು ಮತ್ತು ಅಂತಿಮವಾಗಿ ವೆಂಕಟಾಚಲಕ್ಷೇತ್ರವನ್ನು ತಲುಪಿದನು. ಆ ಸಮಯದಲ್ಲಿ ಮಗ ಕಾಣೆಯಾದುದರಿಂದ ಮುದುಕನು ಭೀತನಾಗಿ ಕಳವಳದಿಂದ "ಓ ಕೌಂಡಿನ್ಯ! ಮಗೂ! ಕೌಂಡಿನ್ಯ! ಎಲ್ಲಿಗೆ ಹೋದೆ ಮಗನೇ! ಈ ಮುದುಕನನ್ನು ಬಿಟ್ಟು ಹೋಗುವುದು ಸರಿಯೇ! ಕೌಂಡಿನ್ಯ! ಎಲ್ಲಿದ್ದೀಯ?" ಎಂದು ಅಳುತ್ತಾ ಜೋರಾಗಿ ಕೂಗುತ್ತಾ ಅಲೆದಾಡಿದನು.

**"ಪುರಾತು ವೆಂಕಟಾಧೀಶಃ ಚಚಾರ ಗಿರಿಮೂರ್ಧನಿ**
**ಕುಮಾರ ಸ್ವನ್ವಿಶಾಲಾಕ್ಷಃ ಕೋಮಲಾಂಗೇ ಮನೋಹರಃ"**

ಅದಕ್ಕೂ ಮುಂಚೆಯೇ ವೆಂಕಟಾಚಲಪತಿಯು ಆ ಪರ್ವತದ ಇಳಿಜಾರುಗಳಲ್ಲಿ ಸುಂದರವಾದ, ಅಗಲವಾದ ಕಣ್ಣುಗಳು, ತೆಳ್ಳಗಿನ ಅಂಗಗಳು ಮತ್ತು ಆಕರ್ಷಕ ಯುವಕನ ನೋಟವನ್ನು ಹೊಂದಿದ್ದನು. ವೆಂಕಟೇಶ್ವರನು ಅತ್ತಿಂದಿತ್ತ ತಿರುಗಾಡುತ್ತಿರುವಾಗ, ತನ್ನ ಮಗನಿಗಾಗಿ ಹಾತೊರೆಯುತ್ತಿರುವ ಬೆಕ್ಕಿನಂತೆ ಕಿರುಚುತ್ತಾ ಅಲೆದಾಡುತ್ತಿದ್ದ ವೃದ್ಧ ಬ್ರಾಹ್ಮಣನನ್ನು ಕಂಡನು. ತಕ್ಷಣವೇ ಶ್ರೀನಿವಾಸನು ಆ ವಿಪ್ರನ ಬಳಿಗೆ ಬಂದು, "ಓ ಮುದುಕನೇ! ನಿನ್ನ ಕಣ್ಣುಗಳು ಕಾಣುತ್ತಿಲ್ಲ. ನಿನ್ನ ಕಿವಿಗಳು ಕೇಳಿಸುವಂತೆ ಕಾಣುತ್ತಿಲ್ಲ. ಈ ಅರಣ್ಯದಲ್ಲಿ ನೀನು ಯಾರಿಗಾಗಿ ಕೂಗುತ್ತಿರುವೆ. ಇಲ್ಲಿ ನೀನು ಕೂಗುತ್ತಿರುವ ಹೆಸರಿನವರು ಯಾರೂ ಕಾಣುತ್ತಿಲ್ಲ!" ಎಂದು ವೆಂಕಟೇಶ್ವರನು ಅವನನ್ನು ಕೇಳಿದ.

"ಅಯ್ಯೋ ಸ್ವಾಮಿ! ನೀನು ಯಾರೇ ಆಗಿರು ನನ್ನನ್ನು ಆತ್ಮೀಯವಾಗಿ ಮಾತನ್ನಾಡಿಸುತ್ತಿದ್ದೀಯ. ನನ್ನ ಬಗ್ಗೆ ಆಸಕ್ತಿಯಿಂದ ಕೇಳುತ್ತಿದ್ದೀಯ ನನ್ನ ಮಗ ಕೌಂಡಿನ್ಯ. ಅವನು ನನ್ನನ್ನು ಬಿಟ್ಟು ಎಲ್ಲೋ ಹೋಗಿದ್ದಾನೆ. ನಾನು ದಾರಿ ತಪ್ಪಿದೆ ಮತ್ತು ಅವನಿಗಾಗಿ ಕೂಗುತ್ತಿದ್ದೇನೆ. ನನಗೆ ತುಂಬಾ ನೋವಾಗುತ್ತಿದೆ. ಬ್ರಹ್ಮದೇವ ಇನ್ನೂ ನನ್ನನ್ನು ಜೀವಂತವಾಗಿರು ಎಂದು ಹೇಳಿ ಇಟ್ಟಿರುವುದು ನನಗೆ ಬಹಳ ಹಿಂಸೆಯಾಗಿದೆ. ನನ್ನ ಮೇಲೆ ಕರುಣೆ ಇಟ್ಟು ನನ್ನನ್ನು ರಕ್ಷಿಸು" ಎಂದು ಆ ಬ್ರಾಹ್ಮಣನು ದೀನನಾಗಿ ಬೇಡಿಕೊಂಡನು.

**"ತವ ವಿಪ್ರ! ಶರೀರಂ ಚ ಜರಿತಂ ಫಲಿತಂ ತಥಾ**
**ಲಂಬತೇ ಪಕ್ಷ್ಮಣೀತ್ವಕ್ಚ ಸ ಚ ಪಶ್ಯಸಿ ಕಿಂಚನ**
**ಅಂತಃ ಪರಂ ಚ ವಿಪ್ರೇಂದ್ರ ಜೀವಸೇಚ್ಛಾ ತವಾಸ್ತಿ ಕಿ ಮೇ**
**ಸ ವಾ ಪೂರ್ವೋಕ್ತ ವಾಕ್ಯಂ ತು ಸತ್ಯಂ ವಾ ವದ ಸುವ್ರತ"**

"ಓ ಬ್ರಾಹ್ಮಣ! ನಿನ್ನ ದೇಹವು ವೃದ್ಧಾಪ್ಯದಿಂದಾಗಿ ಕೃಶವಾಗಿದೆ. ಶಕ್ತಿಯಿಲ್ಲದೆ ತೆಳ್ಳಗೆ, ಬಿಳಿಯಾಗಿದೆ. ನಿನ್ನ ಕಣ್ಣುಗಳು ಕಾಂತಿಹೀನವಾಗಿದೆ. ಚರ್ಮವಾದರೋ ಶುಷ್ಕ ಮತ್ತು ತೆಳುವಾಗಿದೆ. ನಿಮ್ಮ ಕಣ್ಣುಗಳ ದೃಷ್ಟಿ ಕುಂಠಿತವಾಗಿದೆ. ಆದರೂ ಇಂತಹ ಕೆಟ್ಟ ಸ್ಥಿತಿಯಲ್ಲಿಯೂ ನಿನಗೆ ನಿನ್ನ ಪುತ್ರ ವ್ಯಾಮೋಹ ಬಿಡುತ್ತಿಲ್ಲ ಅಲ್ಲವಾ ? ಬಾಲ್ಯ. ಯೌವ್ವನ, ವೃದ್ಧಾಪ್ಯ ಇದು ಮಾನವನಾಗಿ ಹುಟ್ಟಿದಮೇಲೆ ಅನುಭವಿಸಬೇಕಾಗಿರುವ ಮೂರು ಅವಸ್ಥೆಗಳು, ಅದು ಪ್ರಕೃತಿ ನಿಯಮ. ಇದು ನೀನು ಚಿಂತಿಸಬೇಕಾದ ವಿಷಯ. ಈಗಲಾದರೂ ನಿನ್ನ ಪುತ್ರವ್ಯಾಮೋಹವನ್ನು ಬಿಟ್ಟು ನಿಶ್ಚಿಂತೆಯಿಂದ ಇರು. ಇದಕ್ಕಿಂತ ಮೊದಲು ನೀನು ಯೋಚಿಸಬೇಕಾಗಿರುವುದು ನಿನ್ನ ಮುಕ್ತಿಗಾಗಿ. ನಿನ್ನ ಜೀವನದಲ್ಲಿ ಈಗಾಗಲೇ ನೀನು ಬದುಕಿನ ಎರಡು ಅವಸ್ಥೆಗಳನ್ನೂ ಕಂಡಿದ್ದಾಗಿದೆ, ಅದರ ಅನುಭವವಗಳನ್ನು ಪಡೆದಿದ್ದೀಯ. ಈ ಮುಪ್ಪಿನ ಕಾಲದಲ್ಲಿ ನೀನು ಅನುಭವಿಸ ಬೇಕಾಗಿರುವುದು, ವಾನಪ್ರಸ್ಥ. ನೀನು ಹೇಳಿದ ಮಾತು ನಿಜವೆಂದು ನಂಬಿದ್ದೇನೆ. ಆದುದರಿಂದ ನಿನಗೆ ಮುಕ್ತಿ ನೀಡುತ್ತೇನೆ. ಇದು ನಿನಗೆ ಸಮ್ಮತವೇ? ಎಂದು ಶ್ರೀಹರಿ ವಿಪ್ರನನ್ನು ಕೇಳಿದ. ಆಗ ವಿಪ್ರನು ಬದಲಾಗಿ ಹೀಗೆ ಹೇಳಿದನು.

**'ಇತ್ಯುಕ್ತಃ ಪ್ರಾಪಾ ವಿಪ್ರೋಽಪಿ**
**ನಾಸ್ತಿಚ್ಛಾ ಜೀವನೇ ಮಮ**
**ಕಿಂತು ನಿತ್ಯಾನಿ ಕರ್ಮಾಣಿ**
**ಜ್ಯೋತಿಷ್ಟೋಮ ಮಖಾನಿ ಚ**
**ನಾಽನುಷ್ಠಿತಾನಿ ದೇವಾನಾಂ**

**ಋಣೀ ಕಥಮಹಂ ಪುನಃ**
**ತ್ಯಕ್ಷ್ಯಮಿದೇಹಂವೀಮಿತೇ**

"ಓ ಮಹಾಪ್ರಭು! ನಿನಗೆ ನಾನು ನಿಜವನ್ನು ಹೇಳಲಾ, ಈ ವೃದ್ಧಾಪ್ಯದಲ್ಲಿಯೇ ನಾನು ಇನ್ನೂ ಬದುಕಿರಬೇಕು ಎಂಬ ಆಸೆ ನನಗೆ ಸ್ವಲ್ಪ ಮಾತ್ರವೂ ಇಲ್ಲ. ನಾನು, ನನ್ನ ಗತಜೀವನದಲ್ಲಿ ನಿತ್ಯಕರ್ಮವನ್ನಾಗಲಿ, ಜೋತಿಷ್ಟೋಮ ಒಂದು ಯಜ್ಞವನ್ನಾಗಲಿ ಏನನ್ನೂ ಮಾಡಲಿಲ್ಲ. ದೇವಾ! ಪಿತೃಯಜ್ಞಾದಿ ಕಾರ್ಯಗಳನ್ನು ಮಾಡದೆ ಋಣಿಯಾಗಿದ್ದೇನೆ. ದೇವತೆಗಳಿಗೆ, ಪಿತೃಗಳಿಗೆ ಪೂಜೆಯನ್ನು ಮಾಡಲಿಲ್ಲ. ಆದ್ದರಿಂದ ನಾನು ಇನ್ನೂ ಕೆಲವುಕಾಲ ಜೀವಿಸಿದ್ದು, ಆ ಎಲ್ಲ ಆಚರಣೆಯನ್ನು ಮಾಡಬೇಕೆಂಬ ಹಂಬಲವುಳ್ಳವನಾಗಿದ್ದೇನೆ. ಈ ಕಾರಣದಿಂದಾಗಿ ನಾನು ಈಗ ಸಾಯಲು ಇಷ್ಟವಿಲ್ಲ. ನಾನು ಸತ್ಯವನ್ನು ಹೇಳುತ್ತಿದ್ದೇನೆ. "ಪ್ರಭು! ದಯಮಾಡಿ ನನ್ನನ್ನು ರಕ್ಷಿಸು" ಎಂದು ವಿಪ್ರನು ಸ್ವಾಮಿಯಲ್ಲಿ ಪ್ರಾರ್ಥಿಸಿದನು.

ಸ್ವಾಮಿ ಶ್ರೀನಿವಾಸ, ಆತನ ಕೈಯ್ಯನ್ನು ಮೃದುವಾಗಿ ಹಿಡಿದುಕೊಂಡು ನಿಧಾನವಾಗಿ ನಡೆಸಿಕೊಂಡು ಅತಿ ಸಮೀಪದಲ್ಲಿಯೇ ಶಾಂತವಾಗಿ ಹರಿಯುತ್ತಿದ್ದ ಸ್ವಚ್ಛವಾದ ಜಲಧಾರೆಯನ್ನು ತೋರಿಸಿ ಮೊದಲು ಸ್ನಾನ ಮಾಡಿ ನಂತರ ನಿನ್ನ ಆಶ್ರಮಕ್ಕೆ ಹೋಗಬಹುದು ಎಂದು ಹೇಳಲು, ಆ ವಿಪ್ರ ಜಲಧಾರೆಯಲ್ಲಿ ಸ್ನಾನ ಮಾಡಿದನು. ಅಬ್ಬಾ ಏನಾಶ್ಚರ್ಯ, ಅದ್ಭುತ ಆ ವೃದ್ಧ ವಿಪ್ರ ಕ್ಷಣದಲ್ಲಿ ನೋಡು ನೋಡುತ್ತಿದಂತೆಯೇ ಹದಿನಾರು ವರ್ಷದ ಯುವಕನಾದನು. ಯುವಕನ ರೂಪದಲ್ಲಿದ್ದ ಸ್ವಾಮಿವೆಂಕಟೇಶ, ಸಹಸ್ರಾಕ್ಷನಾಗಿ, ಸಹಸ್ರಶೀರ್ಷಾ ವದನನಾಗಿ ತನ್ನ ವಿಶ್ವರೂಪದಲ್ಲಿ ಕಾಣಿಸಿಕೊಂಡನು. ಆ ದಿವ್ಯದರ್ಶನದಿಂದ ಸಂತೋಷಗೊಂಡ ದೇವತೆಗಳು ಪುಷ್ಪವೃಷ್ಟಿ ಮಾಡಿದರು. ಅನೇಕ ರೀತಿಯಲ್ಲಿ ಹಾಡಿ ಹೊಗಳಿ ವೈಭವೀಕರಿಸಿದರು. ಆ ಪುಣ್ಯವಂತ ವಿಪ್ರ ಭಕ್ತಿಯಿಂದ ನಮಸ್ಕಾರ ಮಾಡಿ ಪ್ರಾರ್ಥಿಸಿದನು.

"ಓ! ವಿಪ್ರೋತ್ತಮ, ಇನ್ನು ನೀನು ಸಕಲ ಸೌಕರ್ಯವನ್ನು, ಸೌಖ್ಯವನ್ನು ಅನುಭವಿಸುತ್ತ, ಇದುವರೆವಿಗೂ ಮಾಡದೆ ಇದ್ದ ದೇವತಾಕಾರ್ಯ, ಹೋಮ-ಹವನ, ಯಜ್ಞಯಾಗಾದಿ ಗಳನ್ನು ಪಿತೃಕಾರ್ಯವನ್ನು ಮಾಡುವವಂತನಾಗು, ಅದಕ್ಕಾಗಿಯೇ ನಾನು ನಿನಗೆ ಸಕಲ ಸಂಪದವನ್ನು ಅನುಗ್ರಹಿಸುತ್ತೇನೆ." ಎಂದು ಹೇಳಿ ಅದೃಶ್ಯನಾದನು.

ಹೀಗೆ ಮುಪ್ಪಿನ ಮುದುಕನನ್ನು, ಹದಿನಾರು ವರ್ಷದ ಯುವಕನನ್ನಾಗಿ ಮಾಡಿದ ಈ "ಜಲಧಾರಾತೀರ್ಥ"ವು ಅಂದಿನಿಂದ "ಕುಮಾರಧಾರಾತೀರ್ಥ" ಎಂದು ಪ್ರಸಿದ್ಧಿಯಾಯಿತು.

**ತ್ರಿಕಾಲಮತ್ರ ಯನ್ನಾತಿ ತ್ರಿಮಾಸಂ ವಿಜಿತೇಂದ್ರಿಯಃ**
**ಪರಿಪಲಿತ ನಿರ್ಮುಕ್ತ ವಜ್ರಕಾಯಾ ಭವೇನ್ನರಃ**
**ಸರ್ವಪಾಪ ವಿನಿರ್ಮುಕ್ತಾ ಯಾತಿ ವಿಷ್ಣುಃ ಪರಂಪದಮ್**

ಇಂದ್ರಿಯ ಸಂಯಮವನ್ನು ಪಾಲಿಸಿಕೊಂಡು ದಿನಕ್ಕೆ ಮೂರು ಬಾರಿ ಈ ಕುಮಾರ ಧಾರಾ ತೀರ್ಥದಲ್ಲಿ ಸ್ನಾನ ಮಾಡಬೇಕು. ಹಾಗಾಗಿ ಈ ತೀರ್ಥದಲ್ಲಿ ಮೂರು ತಿಂಗಳ ಕಾಲ ನಿತ್ಯ ಸ್ನಾನ ಮಾಡುವವರಿಗೆ ವೃದ್ಧಾಪ್ಯ ದೂರವಾಗುತ್ತದೆ. ಅಷ್ಟೇ ಅಲ್ಲ. ದೇಹವು ವಜ್ರದಂತೆ ದೃಢಕಾಯ ಆಗುತ್ತದೆ. ಎಲ್ಲಾ ಪಾಪಗಳು ದೂರವಾಗುತ್ತವೆ. ಎಲ್ಲಾ ಸಂಪತ್ತಿನ ಜೊತೆಗೆ ಸಂತೋಷವೂ ಬರುತ್ತದೆ. ಕೊನೆಗೆ ವಿಷ್ಣುವಿನ ಸಾಯುಜ್ಯ ಸಿಗುತ್ತದೆ. ಅದು ಮುಕ್ತಿಗೆ ಸೋಪಾನ ಎಂದು ಸೂತ ಮಹರ್ಷಿ ಹೇಳುತ್ತಾ ಜಾಬಾಲಿ ಋಷಿಯಿಂದ ಹಿಂದೆ ಕೇಳಿದ "ಕುಮಾರಧಾರ ತೀರ್ಥದ ಮಹಿಮೆ"ಯನ್ನು ಹೇಳುತ್ತಾ ಹೋದರು.

## ಕುಮಾರಧಾರಾ ತೀರ್ಥ ಮಹಿಮಾ

"ಷಣ್ಮುಖ" ನಾಗಿದ್ದ ಕುಮಾರಸ್ವಾಮಿ ದೇವಾನುದೇವತೆಗಳ ಪ್ರಾರ್ಥನೆಯ ಮೇರೆಗೆ ದೇವ ಸೇನಾಪತಿಯ ಮುಖ್ಯಸ್ಥಾನವನ್ನು ಸ್ವೀಕರಿಸಿದನು. ಅಷ್ಟರಲ್ಲಿ ದೇವತೆಗಳು ತಾರಕಾಸುರನೊಂದಿಗೆ ಘೋರ ಯುದ್ಧವನ್ನು ಮಾಡಿದನು. ಆ ಘೋರ ಯುದ್ಧದಲ್ಲಿ ತಾರಕಾಸುರನು ಲೀಲಾಜಾಲವಾಗಿ ಯುದ್ಧ ಮಾಡಿದನು. ಅವನದೇ ಮೇಲುಗೈ ಆದಾಗ, ದೇವಸೇನೆಯ ನಾಯಕ ಕುಮಾರಸ್ವಾಮಿ ತಾರಕಾಸುರನನ್ನು ಕೊಂದನು. ಹಾಗಾಗಿ ಬ್ರಹ್ಮಹತ್ಯಾದೋಷದ ಅಪರಾಧ ಕುಮಾರಸ್ವಾಮಿಗೆ ಉಂಟಾಯಿತು. ಅದನ್ನು ಹೋಗಲಾಡಿಸಿಕೊಳ್ಳುವ ಸಲುವಾಗಿ ಗೊತ್ತುಗುರಿಯಿಲ್ಲದೆ ಸಂಚರಿಸುತ್ತಲೇ ಇದ್ದನು. ಎಲ್ಲಾ ಕಡೆ ತಿರುಗಿ ಕೊನೆಗೆ ಕೈಲಾಸ ತಲುಪಿ ತನಗೆ ಸೂಕ್ತ ಪರಿಹಾರ ನೀಡುವಂತೆ ಪರಮಾತ್ಮನಲ್ಲಿ ಪ್ರಾರ್ಥಿಸಿದನು.

ಭೂಲೋಕದಲ್ಲಿ, ಭರತ ಖಂಡದಲ್ಲಿ ಇರುವ ವೆಂಕಟಾಚಲಕ್ಕೆ ಹೋಗು ಆ ಪ್ರದೇಶದಲ್ಲಿ ಜಗತ್ತಿನ ಪರಮ ಪವಿತ್ರವಾದ ತೀರ್ಥವಿದೆ, ಪ್ರತಿದಿನ ಆ ತೀರ್ಥದಲ್ಲಿ ಸ್ನಾನ ಮಾಡಿ, ಆ ದಿವ್ಯ ಸ್ಥಳದಲ್ಲಿ ವಿರಾಜಮಾನನಾಗಿರುವ ಶ್ರೀವೆಂಕಟೇಶನನ್ನು ಕುರಿತು ತಪಸ್ಸು ಮಾಡು ಹೋಗು ಎಂದು ಶಿವನು ಕುಮಾರಸ್ವಾಮಿಯನ್ನು

ಆಶೀರ್ವದಿಸಿದನು. ಕುಮಾರ ಸ್ವಾಮಿಯು ಈ ತೀರ್ಥದಲ್ಲಿ ಸ್ನಾನ ಮಾಡಿ ತನ್ನ ಪಾಪಗಳನ್ನು ತೊಲಗಿಸಿಕೊಂಡ ಕಾರಣ ಇದನ್ನು "ಕುಮಾರಧಾರ ತೀರ್ಥ" ಎಂದು ಕರೆಯಲಾಗುತ್ತಿದೆ.

**"ಕುಂಭ ಸಂಸ್ಥಾ ರವೌ ಮಾಘಂ ಪೂರ್ಣಮಾಸ್ಯಂ ಮಹಾ ತಿಥೌ,**
**ಮಹಾ ನಕ್ಷತ್ರ ಯುಕ್ತಾಯಾಂ ಭೂಧರೇಂದ್ರೇ ವಸುಂಧರೇ**
**ಕುಮಾರಧಾರಿಕಾ ನಾಮ ಸರಸಿ ಲೋಕಪಾವನೀ**
**ಯಾತ್ರಾಸ್ತೇ ಪಾರ್ವತೀಸೂನುಃ ಕಾರ್ತಿಕೇಯಾऽಗ್ನಿ ಸಂಭವಃ,**
**ದೇವ ಸೇನಾ ಸಮಾಯುಕ್ತಃ ಶ್ರೀನಿವಾಸಾರ್ಚಕೋऽಮಲೇ**
**ತಸ್ಯಾಂ ಯಃಸ್ನಾತಿ ಮಧ್ಯಾಹ್ನ ತಸ್ಯ ಪುಣ್ಯಫಲಂ ಶೃಣು,**
**ಗಂಗಾದಿ ಸರ್ವತೀರ್ಥೇಷು ಯಃ ಸ್ನಾತಿ ನಿಯಮಾತೆ ಧರೇ**
**ದ್ವಾದಶಾಬ್ದಂ ಜಗದ್ಧಾತ್ರೀ ತತ್ಫಲಂ ಸಮವಾಪ್ನುಯಾತ್,**
**ಯೇನ್ನಂ ದದಾತಿ ತತ್ತೀರ್ಥೇ ಶಕ್ತ್ಯಾ ದಕ್ಷಿಣಯಾನ್ವಿತಮ್,**
**ನ ತಾವತ್ ಫಲಮಾಪ್ನೋತಿ ಸ್ನಾನ ಸೂಕ್ತಂ ಫಲಂ ಯಥಾ."**

**– ವರಾಹ ಪುರಾಣಂ**

ಶ್ರೀವರಾಹಸ್ವಾಮಿಗಳು ಭೂದೇವಿಗೆ ಈ ಕುಮಾರಧಾರಾ ತೀರ್ಥ ಮಹಾತ್ಮೆಯನ್ನು ತಿಳಿಸಿದರು. "ಓ ಭೂದೇವಿಯೇ! ಪ್ರತಿಸಂವತ್ಸರದ ಮಾಘ ಮಾಸದಲ್ಲಿ ಸೂರ್ಯನು ಕುಂಭ ರಾಶಿಯಲ್ಲಿ ಸಂಚರಿಸುವ ಸಮಯದಲ್ಲಿ ಮಾಘ ನಕ್ಷತ್ರದ ಹುಣ್ಣಿಮೆಯಂದು ಮಧ್ಯಾಹ್ನ ಸಮಯದಲ್ಲಿ ಈ ಕುಮಾರಧಾರ ತೀರ್ಥದಲ್ಲಿ ನೇಮನಿಷ್ಠೆಯಿಂದ ಸ್ನಾನ ಮಾಡಬೇಕು. ಒಮ್ಮೆ ಶಿವಪಾರ್ವತಿಯರ ಪುತ್ರ, ಅಗ್ನಿಸಂಭವನಾದ ಕುಮಾರಸ್ವಾಮಿ ದೇವಸೇನಾ ಸಮೇತನಾಗಿ ಲೋಕಪಾವನಿಯಾದ ಈ ತೀರ್ಥದಲ್ಲಿ ಸ್ನಾನಮಾಡಿ ಪ್ರಭು ಶ್ರೀನಿವಾಸನನ್ನು ಪೂಜಿಸಿದನು. ಇಂತಹ ಪರಮಪವಿತ್ರವಾದ ಈ **"ಕುಮಾರಧಾರಾ"** ತೀರ್ಥದಲ್ಲಿ ಯಾರು ಸ್ನಾನ ಮಾಡುತ್ತಾರೋ ಅವರಿಗೆ ಗಂಗಾದಿತೀರ್ಥಗಳಲ್ಲಿ ಸ್ನಾನ ಮಾಡಿದ ಫಲವನ್ನು ಪಡೆಯುತ್ತಾರೆ. ಇದಲ್ಲದೆ, ಆ ನದಿ ತೀರ್ಥ ಸನ್ನಿಧಿಯಲ್ಲಿ ಭಕ್ತರು ಅನ್ನಸಂತರ್ಪಣೆ, ದಕ್ಷಿಣಾ ಸಮೇತ ತಾಂಬೂಲವನ್ನು ಸಮರ್ಪಣೆ ಮಾಡುತ್ತಾರೆ. ಇದರಿಂದ ಕುಮಾರಧಾರಾ ತೀರ್ಥದಲ್ಲಿ ಸ್ನಾನಮಾಡಿದ ಸಂಪೂರ್ಣ ಫಲ ಪ್ರಾಪ್ತವಾಗುವುದರಲ್ಲಿ ಸಂದೇಹವಿಲ್ಲ ಎಂದು ಸೂತಮಹರ್ಷಿಗಳು ವರಾಹಪುರಾಣ, ಮಾರ್ಕಂಡೇಯ ಪುರಾಣದಲ್ಲಿ ಹೇಳಿರುವ ಕುಮಾರಧಾರಾ ತೀರ್ಥಮಹಿಮೆಯನ್ನು ಶೌನಕಾದಿಗಳಿಗೆ ಹೇಳಿದರು.

**"ಅಸ್ಯ ತೀರ್ಥಸ್ಯ ಮಹಿಮಾ ಹ್ಯಹೋ! ವಾಚಾಮಗೋಚರಃ**
**ಕುಮಾರತೀರ್ಥೇ ಯಃ ಸ್ನಾತೋ ನಿಷ್ಪಾಪಃ ಸ ಸುಖೀ ಭವೇತ್**
**ಶ್ರೀವೇಂಕಟೇಶಃ ಪ್ರೀಯತಾಮಿತ್ಯೇವ ಕಥಯನ್ ಸದಾ**
**ದೃಷ್ಟಂ ಫಲಮವಾಪ್ಯಂತೇ ವಿಷ್ಣು ಲೋಕಂ ಜಗಾಮಪ**
**ಕುಮಾರಧಾರಿಕೇ ತ್ಯೇವ ವಿಷ್ಣುನಾಪ್ಯೇಕದೋದಿತಂ."**

ಆಹಾ! ಈ ಕುಮಾರತೀರ್ಥ ಮಹಿಮೆ ಬರಿಯ ಮಾತಿನಲ್ಲಿ ವರ್ಣಿಸಲು ಸಾಧ್ಯವಿಲ್ಲ, ಅದು ವರ್ಣನಾತೀತ. ಈ ತೀರ್ಥದಲ್ಲಿ ಸ್ನಾನ ಮಾಡುವುದರಿಂದ ಪಾಪಗಳು ನಿವಾರಣೆಯಾಗಿ ಸುಖಪ್ರಾಪ್ತಿ ಆಗುತ್ತದೆ. ಇಂತಹ ಮಹಿಮಾನ್ವಿತವಾದ ತೀರ್ಥ ಏಳುಗಿರಿಯೊಡೆಯನಿಗೆ ಅತ್ಯಂತ ಪ್ರಿಯವಾದುದು. ಸೂತಮಹರ್ಷಿಗಳು ಕುಮಾರಧಾರಾ ತೀರ್ಥವನ್ನು ಹಲವು ರೀತಿಯಲ್ಲಿ ವಿವರಿಸಿ ಶೌನಕಾದಿಗಳನ್ನು ನೋಡಿ ಸಂತೃಪ್ತಿಯಿಂದ ಈ ತೀರ್ಥದ ಮಹಿಮೆಯನ್ನು ಕೇಳಿದವರಿಗೆ, ನೋಡಿದವರಿಗೆ ಒಳ್ಳೆಯ ಫಲ ದೊರೆಯುವುದು ಅಲ್ಲದೆ ಆ ಭಕ್ತರಿಗೆ ವಿಷ್ಣುಲೋಕ ಪ್ರಾಪ್ತಿ ಆಗುವುದು ಎಂದು ಸೂತ ಮಹರ್ಷಿಗಳು ಕುಮಾರಧಾರಾ ತೀರ್ಥದ ಬಗ್ಗೆ ಹೇಳಿದರು. ಹಲವಾರು ಕಥೆಗಳ ಮೂಲಕ ವಿವರಿಸಿದರು.

ಆ ಋಷಿಗಳೆಲ್ಲರೂ ಸಂತೋಷದಿಂದ ಆರಾಧನ ಮನೋಭಾವನೆಯಿಂದ ಸೂತ ಮಹರ್ಷಿಯನ್ನು ನೋಡಿದರು ಮತ್ತು ಎಲ್ಲರೂ ಒಟ್ಟಾಗಿ ಹೀಗೆ ಹೇಳಿದರು. "ಓ ಮಹಾನುಭವ! ಸೂತಮಹಾಶಯ! ಮಹಾಮಹಿಮಾನ್ವಿತವಾದ, ಭವ್ಯವಾದ ಶ್ರೀ ವೆಂಕಟಾಚಲ ದಿವ್ಯಕ್ಷೇತ್ರದ ಬಗ್ಗೆ ನಮಗೆ ಇನ್ನೂ ಹೆಚ್ಚು ತಿಳಿಯಬೇಕಿದೆ. ತುಂಬಾ ಸ್ವಾರಸ್ಯಕರವಾಗಿ ಮಾತನಾಡುತ್ತಿದ್ದೀರಿ. ಆದ್ದರಿಂದ ನಮ್ಮ ಸಂದೇಹಗಳನ್ನು ನೀಗಿಸಿದರೆ ಒಳ್ಳೆಯದು. ನಿಮ್ಮ ಕಥೆಯ ಶೈಲಿಯನ್ನು ಕೇಳಲು ನಮಗೆಲ್ಲರಿಗೂ ಬಹಳ ಕುತೂಹಲವಿದೆ. ಅಂದರೆ ನೀವು ಈ ಹಿಂದೆ ಶ್ರೀ ವೆಂಕಟಪರ್ವತವನ್ನು ಹತ್ತಿದ್ದೀರಿ.ಪವಿತ್ರ "ಸ್ವಾಮಿ ಪುಷ್ಕರಿಣಿ"ಯ ಮಹಿಮೆಯ ಬಗ್ಗೆ ವಿವರಿಸಿದ್ದೀರಾ!ಆ ಸಂದರ್ಭದಲ್ಲಿ ನೀವು ಒಂದು ಮಾತು ಹೇಳಿದಿರಿ. ಆತ್ಮರಾಮನು ವೆಂಕಟಾಚಲ ಕ್ಷೇತ್ರವನ್ನು ದರ್ಶನಮಾಡಿ, ದಾರಿಯಲ್ಲಿ ಕಂಡಂತಹ ಹದಿನೇಳು ತೀರ್ಥಗಳನ್ನು ಸಂದರ್ಶಿಸಿ, ಭಕ್ತಿಯಿಂದ ತೀರ್ಥಸ್ನಾನ ಮಾಡಿ ಪುನೀತರಾದರುಎಂದು ಅಲ್ಲವೇ? ಆ ಕ್ಷೇತ್ರದಲ್ಲಿ ಇದಲ್ಲದೆ ಇನ್ನೂ ಎಷ್ಟು ತೀರ್ಥಗಳಿವೆ? ಅದರ ಮಹಿಮೆ ಪ್ರಯೋಜನವೇನು? ಆ ಕ್ಷೇತ್ರದಲ್ಲಿ ಇನ್ನೂ ಬೇರೆ ಬೇರೆ ಗುಡಿಗೋಪುರಗಳು ಏನಾದರು ಇದ್ದೆಯಾ? ದಯವಿಟ್ಟು ತಿಳಿಸಿ, ನಮಗೆ ತುಂಬಾ ಕುತೂಹಲವಿದೆ ಎಂದು ಪ್ರಾರ್ಥಿಸಿದರು.

ಮಹರ್ಷಿಗಳು ಕ್ಷಣಕಾಲವು ತಡಮಾಡದೆ "ಓ ತಪೋಧನರೇ! ನೀವು ಶ್ರದ್ಧಾಭಕ್ತಿಯಿಂದ, ಆಸಕ್ತಿಯಿಂದ ಕೇಳಲು ಬಯಸುತ್ತಿರುವ ವಿಷಯವನ್ನು ನಾನು ಸಂತೋಷದಿಂದ ಹೇಳುತ್ತೇನೆ ಎಂದು ಸೂತಮಹಾಮುನಿಗಳು ಶ್ರೀವೇಂಕಟೇಶನನ್ನು ಪ್ರಾರ್ಥಿಸಿದರು:–

**"ಯಾತ್ರಾ ಯಜ್ಞಾ ವ್ರತಾ ಧರ್ಮಾ ದಾನಾಸ್ಯನ್ಯಾನ್ಯಸಂಖ್ಯಯಾ**
**ತವ ನಾಮಸ್ಮೃತೇರ್ಭಕ್ತ್ಯಾ ಕಲಾಂ ನಾರ್ಹನ್ತಿ ಷೋಡಶಂ"**

ಪ್ರಭು! ಸಪ್ತಗಿರಿವಾಸ! ನಿಮ್ಮ ನಾಮವು ಅನನ್ಯ ಮತ್ತು ಅಸಾಮಾನ್ಯವಾಗಿದೆ. ಬದರಿಕಾಶ್ರಮದಂತಹ ಅನೇಕ ಕ್ಷೇತ್ರ ಪ್ರವಾಸಗಳು, ಯಜ್ಞಯಾಗಾದಿಗಳು, ವ್ರತಗಳು, ಧರ್ಮಕಾರ್ಯಗಳು, ಅನ್ನದಾನಗಳು ಮತ್ತು ಇತರ ಅಸಂಖ್ಯಾತ ದಾನಗಳನ್ನು ಮಾಡಿದಾಗ ಪ್ರಾಪ್ತವಾಗುವ ಫಲ, ಅವೆಲ್ಲವೂ ಒಮ್ಮೆ ಭಕ್ತಿಯಿಂದ ಒಂದುಸಾರಿ ನಿನ್ನ ನಾಮಸ್ಮರಣೆ ಮಾತ್ರದಿಂದ ಲಭಿಸುವ ಪುಣ್ಯಫಲದ ಹದಿನಾರನೇ ಒಂದು ಭಾಗಕ್ಕೆ ಸಮನಾಗಿ ತೂಗುವುದಿಲ್ಲ ಅಲ್ಲವಾ! ಅದಕ್ಕೇ ನಿನ್ನ ಹಿರಿಮೆಯನ್ನು ಪಾಡಿಪೊಗಳುವ, ಕಥೆಯನ್ನು ಹೇಳುವ ಮಹಾ ಭಾಗ್ಯ ನನಗೆ ಸಿಕ್ಕಿದೆ! ಎಂದು ಪ್ರಾರ್ಥಿಸಿದ ನಂತರ, ಸೂತ ಮಹರ್ಷಿಗಳು, ಶೌನಕಾದಿ ಋಷಿಗಳೊಂದಿಗೆ ಇದನ್ನು ಮುಂದುವರೆಸಿದರು.

ವೆಂಕಟಾದ್ರಿ ಪರ್ವತದಲ್ಲಿ ಇರುವ ಅನೇಕಾನೇಕ ಪುಣ್ಯತೀರ್ಥಗಳು, ಅದರಲ್ಲಿಯೂ ಪ್ರಧಾನವಾಗಿರುವ, ಮತ್ತೆಮತ್ತೆ ಸ್ಮರಿಸುವಂತಹ ಸುಮಾರು 365 ಪುಣ್ಯಪ್ರದವಾದತೀರ್ಥ ಕ್ಷೇತ್ರಗಳಿದೆ. ದೇವತೆಗಳು, ಯಕ್ಷರು, ಗಂಧರ್ವರು, ಕಿಂಪುರುಷರು, ದೇವಪುರುಷರು, ಯೋಗಿಗಳು, ಮುನಿಗಳು ಮುಂತಾದವರು ಈ ದಿವ್ಯ ತೀರ್ಥಗಳನ್ನು ಯಾವಾಗಲೂ ಅನೇಕ ರೀತಿಯಲ್ಲಿ ಸೇವಿಸುತ್ತಿದ್ದಾರೆ. ಆದರೆ ಅವುಗಳಲ್ಲಿ ಕೆಲವು ತೀರ್ಥಕ್ಷೇತ್ರಗಳು ಪ್ರಸ್ತುತ ಎಲ್ಲಿವೆ ಎಂಬುದು ತಿಳಿದಿಲ್ಲ. ಆದರೆ ತೀರ್ಥಗಳು ಮಾತ್ರ ಬಹಿರಂಗವಾಗಿವೆ. ಕೆಲವು ತೀರ್ಥಗಳು, ದೇಗುಲಗಳ ಹೆಸರುಗಳು ಮಾತ್ರ ಕೇಳಿಬರುತ್ತಿದೆ ಕಾಣಲು ಸಿಗುವುದಿಲ್ಲ. ಇವೆಲ್ಲವುಗಳಲ್ಲಿ ಆತ್ಮರಾಮನು ಪ್ರಧಾನವಾಗಿ ದರ್ಶಿಸಿ, ಪೂಜಿಸಿದ ಕಪಿಲತೀರ್ಥಾದಿ ಹದಿನೇಳು ತೀರ್ಥಗಳನ್ನು,ಇತರ ಕೆಲವು ಪ್ರಸಿದ್ಧ ಪವಿತ್ರ ತೀರ್ಥಗಳ ಬಗ್ಗೆ ನಾನು ನಿಮಗೆ ತಿಳಿಸುತ್ತೇನೆ.

## ಕಪಿಲತೀರ್ಥ

ಹಿಂದೆ ಭಗೀರಥ ಚಕ್ರವರ್ತಿಯ ಪ್ರಯತ್ನದಿಂದ ಪಾತಾಳಲೋಕವನ್ನು ತಲುಪಿದ ಪವಿತ್ರ ಗಂಗೆಗೆ 'ಭೋಗವತಿ' ಎಂಬ ಪ್ರಸಿದ್ಧ ಹೆಸರು ಬಂದಿದೆ. ಆ ಪಾತಾಳ ಲೋಕದಲ್ಲಿ 'ಭೋಗವತಿ' ಎಂದು ಕರೆಯಲ್ಪಡುವ ಗಂಗಾನದಿಯ ದಡದಲ್ಲಿ ಒಮ್ಮೆ

ಕಪಿಲ ಎಂಬ ಋಷಿಯು ಆಶ್ರಮವನ್ನು ನಿರ್ಮಿಸಿ ಅದರಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಿದ್ದನು.

ಕಪಿಲನಿಂದ ಪೂಜಿಸಲ್ಪಟ್ಟ ಮಹಾಶಿವಲಿಂಗವು ದಿನಕರನಂತೆ ಕಾಂತಿಯಿಂದ ಬೆಳಗುತ್ತಿತ್ತು. ಮಾತ್ರವಲ್ಲದೆ ದಿನದಿಂದ ದಿನಕ್ಕೆ ಶಿವಲಿಂಗವು ಅದ್ಭುತವಾಗಿ ಆಶ್ಚರ್ಯವಾಗುವ ರೀತಿಯಲ್ಲಿ ಊರ್ಧ್ವ ಮುಖವಾಗಿ ಎಲ್ಲೆ ಇಲ್ಲದೆ ಬೆಳೆಯುತ್ತಾ ಭೂಮಿಯನ್ನು ಭೇದಿಸಿ ಕೊನೆಗೆ ವೆಂಕಟಾಚಲ ಕ್ಷೇತ್ರದ ಮೂಲದಲ್ಲಿ ಸ್ವಯಂಭುವಾಗಿ ಬೆಳಗಿತು. ನಿರಂತರವಾಗಿ ಬೆಳೆಯುತ್ತಿರುವ ಶಿವಲಿಂಗದ ಬೆಳವಣಿಗೆಯನ್ನು ತಡೆಯಲು ನಿರ್ಧರಿಸಿದ ಶ್ರೀ ಮಹಾವಿಷ್ಣು ಗೋಪಾಲ ವೇಷಧಾರಿಯಾಗಿ ಅದನ್ನು ರಕ್ಷಿಸುತ್ತ, ಬ್ರಹ್ಮನು ಕಪಿಲ ಧೇನುವಾಗಿ ಮಾರ್ಪಟ್ಟು ಶಿವಲಿಂಗದ ಮೇಲೆ ಅನಂತವಾಗಿ ಹಾಲಿನ ಧಾರೆ ಸುರಿಸಿ, ಅಭಿಷೇಕ ಮಾಡುವುದಲ್ಲದೆ ಅನೇಕ ವಿಧದಲ್ಲಿ ಪೂಜಿಸುತ್ತ ಪ್ರಾರ್ಥಿಸುತ್ತಿದ್ದನು. ಅದರೊಂದಿಗೆ ವೆಂಕಟಾದ್ರಿ ಪರ್ವತದ ತಪ್ಪಲಿನಲ್ಲಿ ರೂಪುಗೊಂಡ ಗುಹೆಯಲ್ಲಿ ಪಾತಾಳಲೋಕದಿಂದ ಬೃಹದಾಕಾರವಾಗಿ ಬೆಳೆಯುತ್ತಿದ್ದ ಮಹಾ ಶಿವಲಿಂಗವು ಸ್ವಯಂಭುವಾಗಿ ನಿಂತಿದೆ.

ಪಾತಾಳಲೋಕದಿಂದ ಭೂಮಿಯನ್ನು ಭೇದಿಸಿಕೊಂಡು ಊರ್ಧ್ವಮುಖವಾಗಿ ಬೆಳೆದ ಶಿವಲಿಂಗದ ಜೊತೆಗೆ ಭಗೀರಥನಿಂದಾಗಿ ಪಾತಾಳ ಸೇರಿದ 'ಭೋಗವತಿ' ಗಂಗೆಯೂ ಜೊತೆಯಾಯಿತು. ಸ್ವಯಂಭುವಾಗಿ ಆವಿರ್ಭವಿಸಿದ ಪಾತಾಳ ಶಿವಲಿಂಗವನ್ನು, ಅಲ್ಲಿಯೇ ಉದ್ಭವಿಸಿದ ಭೋಗವತಿ ತೀರ್ಥದ ನೀರಿನಿಂದ ಪಾತಾಳದ ಶಿವಲಿಂಗಕ್ಕೆ ಸಕಲ ದೇವತೆಗಳು ಅಭಿಷೇಕ ಮಾಡಿ ಪೂಜೆ ಸಲ್ಲಿಸಿದರು.

ಈ ಶಿವಲಿಂಗವನ್ನು ಕಪಿಲ ಮಹರ್ಷಿಯು ಪಾತಾಳ ಲೋಕದಲ್ಲಿ ಮೊದಲು ಪೂಜಿಸಿದ್ದರಿಂದ 'ಕಪಿಲೇಶ್ವರ' ಮತ್ತು 'ಕಪಿಲೇಶ್ವರ ಮಹಾಶಿವಲಿಂಗ' ಎಂಬ ಜನಪ್ರಿಯ ಹೆಸರುಗಳಿವೆ. ಅಲ್ಲದೆ, ಕಪಿಲೇಶ್ವರನ ಸನ್ನಿಧಿಯಲ್ಲಿ ಸ್ನಾನ ಮಾಡಿದ ಈ 'ಭೋಗವತಿ' ಗಂಗೆಯನ್ನು 'ಕಪಿಲತೀರ್ಥ' ಎಂದು ಕರೆಯಲಾಗುತ್ತದೆ, ಇದರಲ್ಲಿ ಸ್ನಾನ ಮಾಡಿದವರ ಎಲ್ಲಾ ಪಾಪಗಳನ್ನು ತೊಳೆಯುತ್ತದೆ. ಕಪಿಲ ತೀರ್ಥದಲ್ಲಿ ಪ್ರಜ್ವಲಿಸುವ ಶ್ರೀ ಕಾಮಾಕ್ಷಿ ಸಮೇತ ಕಪಿಲೇಶ್ವರಸ್ವಾಮಿ ಭಕ್ತರಿಗೆ ಆರ್ತರಕ್ಷಕನಾಗಿ ಸಮಸ್ತ ದೇವತಾ ಪರಿವಾರಸಮೇತ ಸಕಲ ಸೌಭಾಗ್ಯವನ್ನು ಅನುಗ್ರಹಿಸುತ್ತಿದ್ದಾನೆ. ಅಷ್ಟೇ ಅಲ್ಲದೆ ಪೂರ್ವಕಾಲದಲ್ಲಿ ಒಮ್ಮೆ ದೂರ್ವಾಸಮಹರ್ಷಿಯು ಬ್ರಹ್ಮದೇವನಿಗೆ ಮಹಾಶಿವಲಿಂಗವನ್ನು ತೋರಿಸುತ್ತ ಈ ರೀತಿ ವಿವರಿಸಿದ್ದಾಗಿ ಪರಮೇಶ್ವರನು ಪಾರ್ವತಿ ದೇವಿಗೆ ಈ ವೃತ್ತಾಂತವನ್ನು ಈ ರೀತಿಯಾಗಿ ತಿಳಿಸಿದರು.

**"ಆದೌ ರಜತವರ್ಣಂಚ ಮಧ್ಯೇ ಸ್ವರ್ಣಪ್ರಭಂ ಮಹತ್**
**ಅಗ್ರೇsರುಣಾಭಂ ಸಂಭೂತಂ ಪಂಚವಕ್ತ್ರಂ ತ್ರಯಂಬಕಮ್**
**ಪಂಚವರ್ಣಮ್ ಮಹಾಭೀಮಂ ಪಾತಾಲಾಧಿಷ್ಠಿತಂ ಸದಾ**
**ಮಹರ್ಷಿಣಾ ಕೃತೇ ಪೂರ್ವಂ ಕಪಿಲೇನ ಪ್ರಪೂಜಿತಮ್**
**"ಕಪಿಲೇಶ್ವರ" ಇತ್ಯೇತತ್ ಕೃತೇ ಖ್ಯಾತಂ ಯುಗೇಪುರಾ**
**ತ್ರೇತಾಯಾಮಗ್ನಿನಾ ಪಶ್ಚಾತ್ "ಆಗ್ನೇಯ"ಮಿತಿ ಕೀರ್ತಿತಮ್**
**ನಾದ್ಯಂತಂ ಮಹಾಲಿಂಗಂ ದ್ವಾಪರೇ ಚಕ್ರಪೂಜಿತಂ**
**ಕಲೌಯುಗೇ ಭವಿಷ್ಯ ತತ್ ಕಪಿಲಾ ಪೂಜಿತಂ ಶಿವಮ್"**

ಮಹಾಶಿವಲಿಂಗವು ಮೂಲದಲ್ಲಿ ರಜತವರ್ಣ, ಬೆಳ್ಳಿಯ ಬಣ್ಣದಿಂದ ಬಿಳಿಯಾಗಿರುತ್ತದೆ ಮಧ್ಯ ಭಾಗದಲ್ಲಿ ಚಿನ್ನ, ಕನಕಪ್ರಭೆಯಿಂದ ಹೊಳೆಯುತ್ತಿದೆ. ಮತ್ತು ಅಗ್ರಭಾಗದಲ್ಲಿ ತಾಮ್ರವರ್ಣ, ಕೆಂಪುಬಣ್ಣದಿಂದ ಪ್ರಕಾಶಿಸುತ್ತಿದೆ.

ಈ ಶಿವಲಿಂಗವು ಕೃತಯುಗದಲ್ಲಿ ಮಹರ್ಷಿ ಕಪಿಲರಿಂದ ಪೂಜಿಸಲ್ಪಟ್ಟಿತು, ಆದ್ದರಿಂದ ಇದನ್ನು ಮಹಾ ಕಪಿಲ ಶಿವಲಿಂಗ ಎಂದು ಕರೆಯಲಾಗುತ್ತದೆ. ತ್ರೇತಾಯುಗದಲ್ಲಿ ಈ ಲಿಂಗವನ್ನು ಅಗ್ನಿಯು ಪೂಜಿಸಿದ್ದರಿಂದ ಅದಕ್ಕೆ 'ಆಗ್ನೇಯಲಿಂಗ' ಎಂಬ ಹೆಸರು ಬಂದಿದೆ. ಅಲ್ಲದೆ, ಆದಿಅಂತ್ಯವಿಲ್ಲದ ಈ ಮಹಾಲಿಂಗವನ್ನು, ದ್ವಾಪರ ಯುಗದಲ್ಲಿ ಈ ಶಾಶ್ವತ ಮಹಾಲಿಂಗವನ್ನು ಸುದರ್ಶನ ಚಕ್ರಧಾರಿ ಭಗವಂತ ಅರ್ಚಿಸಿದನು. ಕಪಿಲಧೇನು ಕಲಿಯುಗದಲ್ಲಿ ಈ ಶಿವಲಿಂಗಕ್ಕೆ ತನ್ನಹಾಲಿನಿಂದ ಕ್ಷೀರಾಭಿಷೇಕ ಮಾಡಿದೆ.

ಅತ್ಯಂತ ಪವಿತ್ರವಾದ ಈ ಕಪಿಲತೀರ್ಥ ಕ್ಷೇತ್ರದಲ್ಲಿ ಸ್ನಾನ ಮಾಡಿ ಇಲ್ಲಿನ ಶ್ರೀ ಕಾಮಾಕ್ಷಿ ಕಪಿಲೇಶ್ವರನ ಸೇವೆ ಮಾಡಿ ಈ ಕಪಿಲತೀರ್ಥದ ಜೊತೆಗೆ ಹದಿನೇಳು ಪುಣ್ಯ ತೀರ್ಥಗಳನ್ನು ಸಂದರ್ಶಿಸಿ ಕೊನೆಗೆ ವೆಂಕಟಾಚಲ ಕ್ಷೇತ್ರವನ್ನು ತಲುಪಿ ಇಷ್ಟಾರ್ಥ ಸಿದ್ಧಿಯನ್ನು ಪಡೆದ ಆತ್ಮರಾಮನ ಕಥೆಯನ್ನು ನಾವು ಈಗಾಗಲೇ ಕೇಳಿದ್ದೇವೆ ಅಲ್ಲವೇ! ಎಂದು ಕೇಳುತ್ತ ಸೂತಮಹರ್ಷಿ ಮುಂದುವರಿಸಿದರು.

ಹಿಂದೆ ಒಬ್ಬ ಬ್ರಾಹ್ಮಣ ದೇಶಾದ್ಯಂತ ಸಂಚರಿಸಿ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸುತ್ತಿದ್ದನು. ನಿಜ ಪ್ರಪಂಚದಲ್ಲಿ ಎಷ್ಟು ಪುಣ್ಯಕ್ಷೇತ್ರಗಳಿವೆಯೋ ಅವೆಲ್ಲದರಲ್ಲೂ ಸ್ನಾನ ಮಾಡೋಣ ಎನ್ನುವ ಹಂಬಲದಿಂದ ಅಲೆದಾಡಿದನು. ಹೀಗೆ ಸ್ಥಿರವಾಗಿ ನಿಲ್ಲದೆ ಚಂಚಲವಾಗಿ ತಿರುಗಾಡುತ್ತಿದ್ದಾಗ ಬಾಯಾರಿಕೆ, ಬಿಸಿಲಬೇಗೆಯಿಂದ ಬಳಲಿ ಸುಸ್ತಾಗಿ ನಿದ್ದೆಗೆ ಜಾರಿದ. ಆ ನಿದ್ರೆಯಲ್ಲಿ ಶ್ರೀನಿವಾಸನು ಕಾಣಿಸಿಕೊಂಡು ಹೀಗೆ ಹೇಳಿದನು.

**ಕಿಮರ್ಥಂ ಗಚ್ಛಾಸಿ ದ್ವಿಜ!**
**ಅಸ್ಮಿನ್ ಪುಷ್ಕರ ಶೈಲೇಂದ್ರೇ**
**ಸಂತಿ ದಿವ್ಯಾನಿ ಸಪ್ತ ಚ,**
**ದಶ ತೀರ್ಥಾನಿ ತತ್ರಾದ್ಯಂ,**
**ಕಾಪಿಲಂ ಸಾರಂ ಉತ್ತಮಂ,**
**ಸ್ನಾತ್ವಾಚೈತೇಷು ವಿಪ್ರೇಂದ್ರ,**
**ಶಾಸ್ತ್ರೋಕ್ತ ಜ್ಞಾನಪೂರ್ವಕಮ್,**
**ಕೃತ್ವಾ ತೀರ್ಥಫಲಂ ಪುಣ್ಯಂ,**
**ಪ್ರಾಪ್ಯಸಿ ತ್ವಂ ನ ಸಂಶಯಃ."**

ಓ ವಿಪ್ರೋತ್ತಮ! ನಿನ್ನ ಈ ಪ್ರಯತ್ನ ಅಸಾಧ್ಯವಾದುದು. ಯಾರೂ ಇದನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲ. ಇದು ಎಂದಿಗೂ ಈಡೇರುವುದಿಲ್ಲ, ಆದರೆ ವೆಂಕಟಾಚಲ ಕ್ಷೇತ್ರದಲ್ಲಿ 'ಕಪಿಲ ತೀರ್ಥ'ದಿಂದ ಪ್ರಾರಂಭವಾಗುವ ಹದಿನೇಳು ಪ್ರಮುಖ ಪವಿತ್ರ ಕ್ಷೇತ್ರಗಳಿವೆ. ಅವುಗಳಲ್ಲಿ ಶಾಸ್ತ್ರಾನುಸಾರವಾಗಿ, ಶ್ರದ್ಧಾಭಕ್ತಿಯಿಂದ ಸ್ನಾನ ಮಾಡಿದರೆ ಸಾಕು. ಜಗತ್ತಿನ ಎಲ್ಲಾ ಪುಣ್ಯಕ್ಷೇತ್ರಗಳಲ್ಲಿ ಸ್ನಾನ ಮಾಡಿದರ ಫಲ ಸಿಗುತ್ತದೆ. ಅದರಲ್ಲಿ ಯಾವುದೇ ಸಂಶಯವಿಲ್ಲ. ಆದುದರಿಂದ ನೀನು ಹಾಗೆ ಮಾಡಿದರೆ ನಿನ್ನ ಇಷ್ಟಾರ್ಥವು ನೆರವೇರುತ್ತದೆ" ಎಂದು ತಿರುಮಲೇಶ ಶ್ರೀನಿವಾಸನು ಹೇಳಲು, ವಿಪ್ರನು ನಿದ್ದೆಯಿಂದ ಎಚ್ಚೆತ್ತು ತನ್ನ ಹುಚ್ಚುತನವನ್ನು ಬಿಟ್ಟು, ನೇರವಾಗಿ ವೆಂಕಟಾಚಲ ಕ್ಷೇತ್ರವನ್ನು ತಲುಪಿ ಕಪಿಲತೀರ್ಥದಿಂದ ಆರಂಭಿಸಿ ಮುಖ್ಯವಾದ ಹದಿನೇಳು ತೀರ್ಥಗಳನ್ನು ಸೇವಿಸಿ, ಪೂಜಿಸಿ ಮುಕ್ತಿಯನ್ನು ಪಡೆದನು. ಕಪಿಲತೀರ್ಥದ ಬಗ್ಗೆ ವಿವರವಾಗಿ ತಿಳಿದುಕೊಂಡಿದ್ದೇವೆ! ಅಲ್ಲವೆ.

ಆ ಕಪಿಲತೀರ್ಥದ ಮೇಲೆ ಇರುವ ಹದಿನಾರು ತೀರ್ಥದ ಬಗ್ಗೆ ಹೇಳುತ್ತೇನೆ.

**ತದ್ಬಿಲಂ ಕಾಪಿಲಂ ತೀರ್ಥಂ ಸರ್ವಪಾಪ ಪ್ರಣಾಶನಮ್**
**ತದೂರ್ಧ್ವ ದೇಶೇ ಶಕ್ರಸ್ಯ ತೀರ್ಥಂ ಪರಮಪಾವನಮ್**
**ಅಹಲ್ಯಾ ಸಂಗ ಸಂಭೂತ ಶಾಪ ಮೋಕ್ಷಸ್ತು ಯತ್ರ ತತ್**
**ವಿಷ್ವಕ್ಸೆನನರಸ್ತನ್ಮಾ ದೂರ್ಧ್ವಂ ಪುಣ್ಯ ವಿವರ್ಧನಂ**
**ವರುಣನ್ಯಾತ್ಮಜೌ ಯತ್ರ ತಪಃ ಕೃತ್ವಾ ಸುದುಸ್ತರಮ್**
**ಸಾರೂಪ್ಯಮ್ ಚ ಪೂರಃ ಪ್ರಾಪ್ಯ ಸ್ತೇನಾಪತ್ಯ ಮವಾಪಹಃ....**
**ಪಂಚಾಯುಧಾನಾಂ ತೀರ್ಥಾನಿ ತದೂರ್ಧ್ವಂ ಭಾಂತಿ ಸತ್ತಮಾಃ**

**ತದೂರ್ಧ್ವಾಮಗ್ನಿಕುಂಡಂ ಸ್ಯಾತ್? ದುರಾತಾಮುಪರ್ಯತಃ**
**ಬ್ರಹ್ಮತೀರ್ಥಂ ಮಹಾಹತ್ಯಮೋಚನಂ ಪುಣ್ಯ ವರ್ಧನಂ**
**ಮುನೀನಾಂ ಚೈವ ಸಪ್ತನಾಂ ಪುಣ್ಯತೀರ್ಥಾನಿ ಸಂತ್ಯತಃ**

## ಶಕ್ರ ತೀರ್ಥ

ಕಪಿಲತೀರ್ಥದ ಮೇಲ್ಭಾಗದಲ್ಲಿ ಶಕ್ರ ತೀರ್ಥವಿದೆ. **"ಶಕ್ರ"** ಎಂದರೆ ಇಂದ್ರ. ದೇವೇಂದ್ರ ಗೌತಮ ಮಹರ್ಷಿಗಳ ಪತ್ನಿಯೊಂದಿಗೆ ಮೋಸದಿಂದ ಮಿಲನ ಹೊಂದಿದ ಕಾರಣ, ಆ ಅನಿಷ್ಟವನ್ನು ಹೋಗಲಾಡಿಸಿಕೊಳ್ಳುವ ಸಲುವಾಗಿ ತೀರ್ಥದಲ್ಲಿ ಸ್ನಾನ ಮಾಡಿ ಪಾಪಮುಕ್ತರಾದ ಕಾರಣ ಇದು ಶಕ್ರತೀರ್ಥ ಎಂದಾಯಿತು.

## ವಿಶ್ವಕ್ಸೇನ ತೀರ್ಥ

ವರುಣ ದೇವನ ಮಗ ವಿಶ್ವಕ್ಸೇನನು ಈ ತೀರ್ಥದ ಪಕ್ಕದಲ್ಲಿ ಕುಳಿತು ತಪಸ್ಸು ಮಾಡಿದನು. ಭಗವಾನ್ ವಿಷ್ಣುವು ಶಂಖಚಕ್ರ ಗಧಾದಾರಿಯಾಗಿ ಪ್ರತ್ಯಕ್ಷನಾಗಿ ಆಶೀರ್ವದಿಸಿದನು. ಮತ್ತು ವಿಶ್ವಕ್ಸೇನನನ್ನು ತನ್ನ ಸೇನಾ ಮುಖ್ಯಸ್ಥನನ್ನಾಗಿ ನೇಮಿಸಿದನು. ಆದ್ದರಿಂದ ಇದನ್ನು ವಿಶ್ವಕ್ಸೇನ ತೀರ್ಥ ಎಂದು ಜನಪ್ರಿಯವಾಗಿ ಕರೆಯಲಾಗುತ್ತದೆ. ಇದು ಶಕ್ರ ತೀರ್ಥದ ಮೇಲೆ ಇದೆ.

## ಪಂಚಾಯುಧ ತೀರ್ಥ

ವಿಶ್ವಕ್ಸೇನ ತೀರ್ಥದ ಮೇಲೆ ಪರ್ವತದ ಇಳಿಜಾರಿನಲ್ಲಿ ವೆಂಕಟಾಚಲವಿದೆ. ಶ್ರೀನಿವಾಸನ ಪಂಚಾಯುಧಗಳು – ಶಂಖ, ಚಕ್ರ, ಗದೆ, ಖಡ್ಗ, ಧನಸ್ಸು . ಭಗವಾನ್ ವಿಷ್ಣುವನ್ನು ವಿವಿಧ ಸ್ಥಳಗಳಲ್ಲಿ ತಪಸ್ಸು ಮಾಡಿದರು. ಆ ಪಂಚಾಯುಧ ತೀರ್ಥಗಳು ಶ್ರೀಹರಿಯು ಕಾಣಿಸಿಕೊಂಡು ಅನುಗ್ರಹಿಸಿದ ದಿವ್ಯ ಸ್ಥಳಗಳು. ಅವುಗಳೆಂದರೆ ಚಕ್ರತೀರ್ಥ, ಶಂಖತೀರ್ಥ, ಗದಾತೀರ್ಥ, ನಂದತೀರ್ಥ ಮತ್ತು ಧನುತೀರ್ಥ. ಶ್ರೀಹರಿಯು ಈ ಪಂಚಾಯುಧ ತೀರ್ಥಗಳಲ್ಲಿ ಸ್ನಾನ ಮಾಡಿದವರಿಗೆ ಪಾಪಗಳು ಮತ್ತು ಶತ್ರುಗಳ ಭಯವನ್ನು ತೊಡೆದುಹಾಕಲು ಅನುಗ್ರಹಿಸಿದನು.

## ಅನಲತೀರ್ಥ

ಹಿಂದೆ ಅಗ್ನಿದೇವನು ಈ ತೀರ್ಥದಲ್ಲಿ ಸ್ನಾನ ಮಾಡಿ ಹೊಟ್ಟೆನೋವು ನಿವಾರಿಸಿಕೊಂಡನು. ಅದಕ್ಕಾಗಿಯೇ ಇದು ಅನಲ ತೀರ್ಥ ಮತ್ತು ಅಗ್ನಿ ತೀರ್ಥ ಎಂದು ಜನಪ್ರಿಯವಾಗಿದೆ. ಇದು ಪಂಚಾಯುಧ ತೀರ್ಥಗಳ ಮೇಲೆ ನೆಲೆಗೊಂಡಿದೆ.

## ಬ್ರಹ್ಮ ತೀರ್ಥ

ಅಗ್ನಿತೀರ್ಥದ ಮೇಲೆ ಬ್ರಹ್ಮತೀರ್ಥವಿದೆ. ಇಲ್ಲಿ ಬ್ರಹ್ಮದೇವನು ಶ್ರೀಹರಿಯನ್ನು ಕುರಿತು ತಪಸ್ಸು ಮಾಡಿ ತನ್ನ ಸೃಷ್ಟಿಕಾರ್ಯವನ್ನು ಸುಲಭವಾಗಿ ಮುಂದುವರಿಸುವ ವರವನ್ನು ಪಡೆದನು! ಇಲ್ಲಿ ಬ್ರಹ್ಮಹತ್ಯಾ ಪಾಪಗಳು ನಿವಾರಣೆಯಾಗುತ್ತದೆ ಎಂದು ತಿಳಿದುಬರುತ್ತದೆ.

## ಸಪ್ತರ್ಷಿ ತೀರ್ಥ

ಬ್ರಹ್ಮತೀರ್ಥದ ಮೇಲ್ಭಾಗದಲ್ಲಿ ಸಪ್ತ ಋಷಿಗಳು ನೆಲೆಸಿರುವ ಏಳು ಪವಿತ್ರ ತೀರ್ಥಗಳಿವೆ. ಇವುಗಳನ್ನು ಅತ್ಯಂತ ವೈಭವೋಪೇತ ತೀರ್ಥಗಳೆಂದು ಕರೆಯಲಾಗುತ್ತದೆ. ದಿವ್ಯವಾದ ಶ್ರೀ ವೆಂಕಟಾಚಲ ಪರ್ವತದ ಇಳಿಜಾರಿನ ಬದಿಯಲ್ಲಿ ಕಪಿಲ ತೀರ್ಥ, ಈ ಹದಿನೇಳು ತೀರ್ಥಗಳ ಜೊತೆಗೆ ಇತರ ಕೆಲವು ಪವಿತ್ರ ತೀರ್ಥಗಳ ಬಗ್ಗೆ ತಿಳಿಯೋಣ.

## ಪಾಂಡವ ತೀರ್ಥ

ಇದು ದ್ವಾಪರ ಯುಗದ ಕಥೆ. ಪಾಂಡವರು ಮಾಯಾ ಜೂಜಿನಲ್ಲಿ ತಮ್ಮ ರಾಜ್ಯವನ್ನು ಕಳೆದುಕೊಂಡು ವನವಾಸಕ್ಕೆ ತೆರಳಿದರು. ಕಡುಕಷ್ಟದಿಂದ, ತಾಳಲಾರದ ಸಂಕಟದಲ್ಲಿದ್ದ ಪಾಂಡವರನ್ನು ಭೇಟಿ ಮಾಡಲು ಶ್ರೀಕೃಷ್ಣನು ಬಂದನು. ಆ ಸಮಯದಲ್ಲಿ ಅವರೆಲ್ಲರೂ ತಮ್ಮ ನೋವಿನಿಂದ ದುಃಖಿತರಾಗಿದ್ದರು. ಆಗ ಶ್ರೀ ಕೃಷ್ಣನು ಅವರನ್ನು ಸಾಂತ್ವನಗೊಳಿಸಿ, "ನಿಮ್ಮ ಪಾಪಗಳನ್ನು ಸುಟ್ಟು ಎಲ್ಲಾ ದುಃಖಗಳನ್ನು ತೊಡೆದುಹಾಕಲು ವೆಂಕಟಾಚಲಕ್ಕೆ ಪ್ರಯಾಣಿಸಿ. ಆ ದಿವ್ಯವಾದ ನಿವಾಸದಲ್ಲಿ "ಕ್ಷೇತ್ರಪಾಲಕ ತೀರ್ಥ" ಎಂಬ ಮಹಾಮಹಿಮಾನ್ವಿತವಾದ ಪುಣ್ಯತೀರ್ಥವಿದೆ. ಆ ತೀರ್ಥದಲ್ಲಿ ಒಂದು ವರ್ಷ ಪುಣ್ಯಸ್ನಾನ ಮಾಡಿ. ಅಲ್ಲಿ ವೆಂಕಟಾಚಲಪತಿಯನ್ನು ವ್ರತಗಳಿಂದ ಪೂಜಿಸು. ನಿಮಗೆ ಶುಭವಾಗುವುದು. ಬರುವೆ" ಎಂದು ಉಪದೇಶಿಸಿದನು.

ಶ್ರೀಕೃಷ್ಣನ ಆದೇಶದಂತೆ ಪಾಂಡವರು ದ್ರೌಪದಿಯ ಸಮೇತ ಆನಂದ ನಿಲಯದ ಈಶಾನ್ಯ ಮೂಲೆಯಲ್ಲಿರುವ ಕ್ಷೇತ್ರಪಾಲಕ ತೀರ್ಥದಲ್ಲಿ ಶ್ರೀನಿವಾಸ ದೇವರನ್ನು ಒಂದು ವರ್ಷ ಪೂಜಿಸಿದರು. ಹೀಗಿರುವಾಗ –

**"ತದಾ ಕದಾಚಿತ್‌ಧರ್ಮೋಽಪಿ ದದರ್ಶ ಸ್ವಪ್ನಮುತ್ತಮಮ್**
**ಯಸ್ಮಾದಸ್ಮಿನ್ಮಹಾ ತೀರ್ಥೇ ಸ್ಥಿತಂ ವತ್ಸರ ಮಾತ್ರಕಮ್**

**ಅನೇನ ಪುಣ್ಯ ಯೋಗೇನ ಭವನ್ತಃ ಕ್ಷಣ ಕಲ್ಮಷಾಃ**
**ಯುದ್ಧೇ ಜಯಂ ತಥಾ ರಾಜ್ಯಂ ಗಮಿಷ್ಯಂತಿ ಕ್ರಮಾಗತಮ್".**

ಒಂದು ದಿನ ಧರ್ಮರಾಜನು ದಿವ್ಯವಾದ ಕನಸನ್ನು ಕಂಡನು. ಆ ಕನಸಿನಲ್ಲಿ, "ನಿನ್ನ ಪಾಪಗಳೆಲ್ಲವೂ ನಶಿಸಿಹೋಗಿದೆ. ನಿನ್ನ ಸಂಕಟಗಳೆಲ್ಲವೂ ಸುಲಭವಾಗಿ ತೊಲಗಿದೆ. ನೀನು ಕೂಡಲೇ ಹೋಗಿ ಯುದ್ಧಮಾಡು. ನೀನು ಆ ಯುದ್ಧವನ್ನು ಖಂಡಿತವಾಗಿ ಗೆಲ್ಲುವೆ. ನಿನ್ನ ರಾಜ್ಯ, ಸಿರಿಸಂಪತ್ತು ಎಲ್ಲವೂ ಮರಳಿ ನಿನ್ನದಾಗುವುದು" ಎಂದು ಒಂದು ಅವ್ಯಕ್ತ ದಿವ್ಯವಾಣಿ ಕೇಳಿಸಿತು.

ಆಶ್ಚರ್ಯ ಮತ್ತು ಸಂತೋಷದಿಂದ ಅವರು ಮತ್ತೆ ಮತ್ತೆ ನಮಸ್ಕರಿಸಿ ವೆಂಕಟಾ ಚಲಪತಿಯನ್ನು ಸ್ತುತಿಸಿ ಸಂತುಷ್ಟರಾದರು. ಧರ್ಮರಾಯನು ಹಿಂತಿರುಗಿ ಯುದ್ಧದಲ್ಲಿ ಶತ್ರುಗಳನ್ನು ಸೋಲಿಸಿದನು ಮತ್ತು ಸಾಮ್ರಾಜ್ಯಲಕ್ಷ್ಮಿಯನ್ನು ಪಡೆದನು. ತೀರ್ಥದಲ್ಲಿ ಪಾಂಡವರು ವೆಂಕಟಾಚಲಪತಿಯನ್ನು ಕೆಲಕಾಲ ಪೂಜಿಸಿ ಸಿದ್ಧಿಯನ್ನು ಪಡೆದಿದ್ದರಿಂದ ಆ ಕ್ಷೇತ್ರಪಾಲತೀರ್ಥವನ್ನು

**"ತದಾ ಪ್ರಭೃತಿ ತತ್‌ತೀರ್ಥಂ ಪಾಂಡವಂ ಚ ವಿದುರ್ಬುಧಾಃ"**

ಇದನ್ನು ವಿಬುಧಗಳು "ಪಾಂಡವತೀರ್ಥ" ಎಂದು ಕರೆಯುತ್ತಾರೆ ಮತ್ತು ಅಂದಿನಿಂದ ಇದನ್ನು ಪಾಂಡವತೀರ್ಥ ಪರಮಪಾವನ ತೀರ್ಥರಾಜ ಎಂದು ಕರೆಯಲಾಗುತ್ತಿದೆ.

## ಪಾಂಡವತೀರ್ಥ ಮಹಾತ್ಮೆ

**ವೃಷಭಸ್ಥೇ ರವೌ ರಾಧೇ ದ್ವಾದಶ್ಯಾಂ ರವಿವಾಸರೇ**
**ಶುಕ್ಲೇ ವಾಪ್ಯಥ ವಾಕೃಷ್ಣೇ ಪಕ್ಷೇ ಭೌಮ ಸಮನ್ವಿತೇ**
**ತೀರ್ಥ ಪಾಂಡವಾಮೃತ ಸಂಗಮೇ ಸ್ನಾತಿ ಯೋನರಃ**
**ನೇಽಹಾ ದುಃಖಮವಾಪ್ನೋತಿ ಪರತ್ರ ಸುಖಮಶ್ನುತೇ**

ಸೂರ್ಯ ಭಗವಂತನು ವೃಷಭರಾಶಿಯಲ್ಲಿ ಸಂಚರಿಸುವ ಸಮಯದಲ್ಲಿ ಶುಕ್ಲ ಪಕ್ಷದಲ್ಲಿ ದ್ವಾದಶಿ ತಿಥಿಯನ್ನು ಒಳಗೊಂಡ ಆದಿವಾರದಂದು ಅಥವಾ ಕೃಷ್ಣಪಕ್ಷದ ಮಂಗಳವಾರ ದಂದು ಈ ಪಾಂಡವತೀರ್ಥದಲ್ಲಿ ಸ್ನಾನಮಾಡಿದರೆ ಈ ಇಹಲೋಕದಲ್ಲಿ ದುಃಖವನ್ನು ಅನುಭವಿಸುವುದಿಲ್ಲ,ಹಾಗೆಯೇ ಪರಲೋಕದಲ್ಲಿಯೂ ಸಕಲಸುಖವನ್ನು ಅನುಭವಿಸುತ್ತಾನೆ ಎಂದು ಸೂತ ಮಹರ್ಷಿಗಳು ಶೌನಕಾದಿಗಳಿಗೆ ವೆಂಕಟಾಚಲ ಕ್ಷೇತ್ರದ ಹಿರಿಮೆಯನ್ನು ವಿವರಿಸಿದರು.

ಈ ಶೇಷಾಚಲ ಪರ್ವತದಲ್ಲಿ ಜರಾಹರ ತೀರ್ಥ, ವಲಿಘ್ನ ತೀರ್ಥ, ಕಾಯ ರಸಾಯನ ತೀರ್ಥ ಮುಂತಾದ ಅನೇಕ ತೀರ್ಥಗಳು ಗೋಚರಿಸುತ್ತವೆ. ಆ ಪುಣ್ಯಕ್ಷೇತ್ರಗಳು ಕೆಲವು ಪುಣ್ಯಾತ್ಮರಿಗೆ ದರ್ಶನ ನೀಡಿ ಇಷ್ಟಾರ್ಥ ಸಿದ್ಧಿಯನ್ನು ನೀಡುತ್ತಿವೆ. ಆದರೆ, ಈ ವೆಂಕಟಾಚಲ ಕ್ಷೇತ್ರದ ಭವ್ಯತೆ ಮತ್ತು ವೈಭವವನ್ನು ವರ್ಣಿಸಲು ಅಸಾಧ್ಯ. ಈ ಪರ್ವತದಲ್ಲಿ ಅನೇಕ ನಿಧಿ ನಿಕ್ಷೇಪಗಳು ಇದರ ಗರ್ಭದಲ್ಲಿ ಅಡಗಿದೆ. ಸಪ್ತಗಿರಿ ಎಂದು ಕರೆಯಲ್ಪಡುವ ಈ ಪರ್ವತದ ಇಳಿಜಾರಿನಲ್ಲಿ ಪ್ರತಿ ಹೆಜ್ಜೆ ಹೆಜ್ಜೆಯಲ್ಲೂ ಪ್ರತಿ ಅಣು ಅಣುವಿನಲ್ಲಿ, ಅನೇಕ ವೈಭವಗಳು ಅರಳುತ್ತಿವೆ.

**"ಪಂಗುರ್ಜರ್ಘಂಪೂಲ ಏವಾಸ್ಯಾತ್ ಅಚಕ್ಷುಃ ಪದ್ಮಲೋಚನಃ**
**ಮೂಕೋ ವಾಚಸ್ಪತಿರ್ದೂರಶ್ರಾವಿ ತು ಬಧಿರೋ ಭವೇತ್,**
**ವಂಧ್ಯಾತು ಬಹುಪುತ್ರಾ ಚ ನಿರ್ಧನ ಸ್ವಧನೋ ಭವೇತ್,**
**ಮಾತ್ರಣ್ಯೇವ ಗಿರೌ ಭಕ್ತಿ ಏತತ್ಸರ್ವಂ ಭವದ್ರುವಮ್**
**ತತ್ತ್ವತೋ ವೇಂಕಟದ್ರೇಸ್ತು ಸ್ವರೂಪಂ ವೇತ್ತಿ ಕಃ ಪುಮಾನ್**
**ಶ್ರೀನಿವಾಸ ಗಿರಿಶ್ಚಾಯಂ ಕದಾಚಿತ್ಕನಕಾಚಲಃ**
**ಕದಾಚಿತ್ ಜ್ಞಾನ ರೂಪೋಽಯಂ ಕದಾ ಚಿದ್ರತ್ನರೂಪಕಃ**
**ಶ್ರೀನಿವಾಸ ಇವಾಭಾತಿ ಕದಾಚಿದ್ಭೂಷಣೋಜ್ವಲಃ.**
**ಕಲಾ ಭೇದೇನ ಕೇಶಾಂಚಿತ್ ಪ್ರಾಕೃತಾಚಲ ರೂಪಧೃತ್**
**ತಸ್ಮಾದಸ್ಯ ಗಿರಿಃ ಪುಣ್ಯಂ ಮಾಹಾತ್ಮ್ಯಂ ವೇತ್ತಿ ಕಃ ಪುಮಾನ್."**

ಅದರಲ್ಲೂ ಅತ್ಯಂತ ಶ್ರದ್ಧಾ ಭಕ್ತಿಯಿಂದ ಮುಖ್ಯವಾಗಿ ವಿಶ್ವಾಸದಿಂದ ಈ ವೆಂಕಟಾದ್ರಿ ಪರ್ವತವನ್ನು ಹತ್ತಿದರೆ ಅನೇಕ ಸಿದ್ಧಿಗಳು ಪ್ರಾಪ್ತಿಯಾಗುತ್ತವೆ. ಕುಂಟನಾದವನು ಕಾಲು ಇಲ್ಲದೆಯೇ ಓಡಬಲ್ಲ ಅಲ್ಲದೆ ವೆಂಕಟಾದ್ರಿಯನ್ನು ಹತ್ತಬಲ್ಲ . ಕುರುಡನಿಗೆ ಕಮಲದಂತಹ ಕಣ್ಣುಗಳು ಬರುತ್ತದೆ. ಮತ್ತು ಮೂಕ ಮಾತನಾಡಬಲ್ಲ., ವಿದ್ವಾಮ್ಸರಂತೆ ಹಾಡಬಲ್ಲವ ನಾಗುತ್ತಾನೆ. ಕಿವುಡ ವ್ಯಕ್ತಿಗೆ ಕೇಳಲು ಮಾತ್ರವಲ್ಲ, ದೂರಶ್ರವಣ, ಕೇಳುವ ಕೌಶಲ್ಯವನ್ನೂ ಪಡೆಯುತ್ತಾನೆ.

ಪುಟ್ಟೇಗೌಡರ ಮನೆಯಾಕೆಗೆ ಮಕ್ಕಳಾಗುವುದಿಲ್ಲ ಅವಳು ಬಂಜೆ ಎಂದು ಜನ ಮಾತಾಡಲು, ಅವಳು ಭಕ್ತಿಯಿಂದ ಸಪ್ತಗಿರಿಯನ್ನು ಹತ್ತಿ ಶ್ರೀನಿವಾಸನ ದರ್ಶನಮಾಡಿದ್ದರ ಫಲವಾಗಿ ಬಹುಸಂತಾನವನ್ನು ಪಡೆದಳು. ದರಿದ್ರನೂ ಧನಿಕನಾಗುತ್ತಾನೆ. ಇಂತಹ ಪಾವನಕ್ಷೇತ್ರದ ಮಹಿಮೆಯನ್ನ, ಅನಂತ ಹಿರಿಮೆಯನ್ನು ಮಾನವರು ತಿಳಿದು ಕೊಳ್ಳಲೇಬೇಕು. ಎಲ್ಲಿಯವರೆಗೆ ತಿಳಿದುಕೊಳ್ಳದೆ ಇರಲುಸಾಧ್ಯ?

ಒಮ್ಮೊಮ್ಮೆ ಈ ಪರ್ವತ ಅಕ್ಷರಶಃ ಚಿನ್ನದ ಮೇರು ಪರ್ವತದಂತೆ ಸಾಕಾರಗೊಳ್ಳುತ್ತದೆ. ಒಂದು ಕಾಲದಲ್ಲಿ ಜ್ಞಾನದ ರೂಪವಾಗಿ, ಇನ್ನೊಂದು ಸಮಯದಲ್ಲಿ ರತ್ನವಾಗಿ, ಇನ್ನೊಂದು ಸಮಯದಲ್ಲಿ ಏಳುಗಿರಿಯೊಡೆಯ ಸಾಕ್ಷಾತ್ ಶ್ರೀನಿವಾಸ ಭಗವಂತನಾಗಿ, ಇನ್ನೊಂದು ಸಮಯದಲ್ಲಿ ಅನೇಕ ವಜ್ರಗಳು, ವೈಢೂರ್ಯಗಳು, ಪಚ್ಚೆಗಳು ಮತ್ತು ಮಾಣಿಕ್ಯಗಳಿಂದ ಕೂಡಿದ ಆಭರಣಗಳಿಂದ ಅಲಂಕರಿಸಲ್ಪಟ್ಟಿದೆ. ಆದರೆ ಈ ವೆಂಕಟಾಚಲ ಪರ್ವತವು ಯಾವುದೇ ಪುಣ್ಯಾತ್ಮರು, ಗಣ್ಯರು ಮತ್ತು ಸಾಧಕರು ಹೊರತುಪಡಿಸಿ ತನ್ನ ಹಿರಿಮೆಯನ್ನು ಮರೆಮಾಚುವ ಕಲ್ಲು ಮತ್ತು ಬಂಡೆಗಳಿಂದ ತುಂಬಿರುವ ಸಾಮಾನ್ಯ ಬೆಟ್ಟದಂತಿದೆ. ಹೀಗೆ ಹಲವಾರು ಪ್ರಾಕಾರದಲ್ಲಿ ರೀತಿಯಲ್ಲಿ ಆನಂದ ನಿಲಯ ಕಾಣುತ್ತಿದೆ. ಆದುದರಿಂದ ಆ ಮಹಿಮಾನ್ವಿತವಾದ ಬೆಟ್ಟದ ಹಿರಿಮೆಯನ್ನು ಯಾರೂ ತಿಳಿಯಲಾರರು. ಮೀನುಗಾರರು ಮೀನಿನ ಜಾಡನ್ನು ತಿಳಿಯಲು ಹೇಗೆ ಸಾಧ್ಯವಿಲ್ಲವೋ ಹಾಗೆ ಏಳುಗಿರಿಯ ರತ್ನಗರ್ಭವನ್ನು ತಿಳಿಯಲು ಸಾಧ್ಯವಿಲ್ಲ.

ನಾನೇ, ನನ್ನ ಕಿವಿಯಾರ ಕೇಳಿದ್ದೇನೆ, ಕೆಲವನ್ನು ನಾನೇ ಕಂಡು ಅನುಭವಿಸಿ ಆನಂದಿಸಿದ್ದೇನೆ. ಇಷ್ಟುಮಾತ್ರ ಹೇಳಬಲ್ಲೆ ಎಂದು ಸೂತರು ಶೌನಕಾದಿಗಳಿಗೆ ಹೇಳಿ ಕಣ್ಣುಮುಚ್ಚಿ ಧ್ಯಾನಸಕ್ತರಾದರು.

**ವೆಂಕಟಾದ್ರೇಸ್ತು ಮಾಹಾತ್ಮ್ಯಂ ಜನಕರ್ಣ ರಸಾಯನಮ್**
**ಶೃಣ್ವತಾಂ ನಾಸ್ತಿ ತೃಪ್ತಿಸ್ತು ಮುನೀನಾಂ ನ ಬುಧೋತ್ತಮ**
**ಭೂಯಃ ಕಥಯ ವೃತ್ತಾಂತಂ ಶ್ರುತಂ ಕಿಂಚಿತ್ತ್ವಯಾ ಪುರಾ**
**ಇತ್ಯುಕ್ತಃ ಪ್ರಾಹ ಸೂತೋಽ ಪಿ ಶ್ರುತಂ ಚ ಮುನಿ ಪುಂಗವಾನ್**

ಕೂಡಲೇ "ಓ ಸೂತ ಮಹರ್ಷೀ! ವೆಂಕಟಾದ್ರಿಯ ಮಹಿಮೆಯನ್ನು ತಮ್ಮಿಂದ ಕೇಳಿ ನಮ್ಮ ಕಿವಿಗಳು ಪಾವನವಾಗಿದೆ. ಮತ್ತೆ ಮತ್ತೆ ಕೇಳಬೇಕೆಂಬ ಹಂಬಲವನ್ನು ಉಂಟುಮಾಡುತ್ತಿದೆ. ತಮ್ಮಿಂದ ನಾವು ಹೆಚ್ಚು ಕೇಳಲು ಬಯಸುತ್ತೇವೆ. ಆದ್ದರಿಂದ, ಓ ಯೋಗಿವರ್ಯಾ! ನೀವು ಹಿಂದೆ ಕೇಳಿದ್ದನ್ನು ನಮಗೆ ತಿಳಿಸಿ ನಮ್ಮನ್ನು ಕೃತಾರ್ಥರನ್ನಾಗಿ ಮಾಡಿ ಎಂದು ಸೂತಮಹರ್ಷಿ ಅವರನ್ನು ವಿನಂತಿಸಿಕೊಂಡರು. ವೆಂಕಟಾಚಲಪತಿಯ ಹಿರಿಮೆ, ಮಹಿಮೆ, ಅನಂತವಾದದ್ದು. ಆದರೂ ನಾನು ನನ್ನ ಶಕ್ತಿಮೀರಿ ಪ್ರಯತ್ನಿಸಿ ನಿಮಗೆ ಹೇಳುತ್ತೇನೆ ಎಂದು ಪ್ರಾರಂಭಿಸಿದರು.

## ವೈಕುಂಠ ಗುಹೆ

ಇದು ತ್ರೇತಾಯುಗದಲ್ಲಿ ನಡೆದ ದಿವ್ಯ ಕಥೆ. ಶ್ರೀರಾಮಚಂದ್ರನು ವನವಾಸದಲ್ಲಿ ಇದ್ದಾಗ ರಾವಣಾಸುರನಿಂದ ಅಪಹರಣಕ್ಕೊಳಗಾದ ಸೀತಾದೇವಿಯನ್ನು ಹುಡುಕುತ್ತಾ

ಶ್ರೀರಾಮ ಲಕ್ಷ್ಮಣರು ವಾನರ ಸೇನೆಯೊಂದಿಗೆ ವೆಂಕಟಾದ್ರಿ ಪುಣ್ಯಕ್ಷೇತ್ರವನ್ನು ತಲುಪಿದರು.

ಆ ಸಮಯದಲ್ಲಿ ಆಂಜನೇಯನ ತಾಯಿ ಅಂಜನಾದೇವಿಯು ಆ ಪರ್ವತದ ತಪ್ಪಲಿನಲ್ಲಿ ತಪಸ್ಸು ಮಾಡುತ್ತಿದ್ದಳು. ಅಲ್ಲಿಗೆ ಬಂದ ಶ್ರೀರಾಮಚಂದ್ರನನ್ನು ಕಂಡು ಅಂಜನಾದೇವಿಯು ಬಹಳ ಸಂತೋಷಪಟ್ಟಳು.

**"ನಮಸ್ಕೃತ್ಯ ಮಹಾಭಾಗ ವಚನಂ ಪದಮಬ್ರವೀತ್**
**ಪ್ರತಿಕ್ಷಸ್ತಿ ಮಹಾಬಾಹೋ ತ್ವದಾಗಮನಮಾದ್ಭುತಮ್**
**ತಿಷ್ಠಾಮ್ಯಸ್ಮಿನ್ ಗಿರೌ ರಾಮ ಮುನಯೋಽಪಿ ಚ ಕಾನನೇ**
**ತಪಃ ಕುರ್ವನ್ತಿ ಸತತಂ ತ್ವದಾಗಮನ ಕಾಂಕ್ಷಯಾ**
**ತ್ವಾಮ್ಸರ್ವನಮನುಜ್ಞಾಪ್ಯ ಗಂತುಮರ್ಹಸಿ ಸುವ್ರತ!**
**ಇತ್ಯುಕ್ತಃ ಪ್ರಾಹ ರಾಮೋಽಪಿ ಹನೂಮನ್ಮಾತರಂ ಪ್ರತಿ"**

ಎರಡೂ ಕೈಗಳನ್ನು ಜೋಡಿಸಿ ನಮಸ್ಕರಿಸುತ್ತ ಓ ಮಹಾನುಭಾವ, ನಿಮ್ಮ ಅದ್ಭುತವಾದ ಆನಂದದಾಯಕ ಆಗಮನಕ್ಕಾಗಿ ನಾನು ಎದುರು ನೋಡುತ್ತಿದ್ದೇನೆ. ಇದಲ್ಲದೆ, ಈ ಪರ್ವತದ ಮೇಲೆ ಅನೇಕ ಋಷಿಗಳು ಸಹ ನಿನ್ನ ಆಗಮನಕ್ಕಾಗಿ ಕಾಯುತ್ತ, ಯಾವಾಗ ನಿನ್ನ ದರ್ಶನಭಾಗ್ಯ ಸಿಗುವುದೋ ಎಂದು ಉತ್ಸಾಹದಿಂದ ಕಾಯುತ್ತಿದ್ದಾರೆ. ದೀಕ್ಷೆತೊಟ್ಟು ತಪಸ್ಸುಗಳನ್ನು ಮಾಡುತ್ತಿದ್ದಾರೆ, ನಿನ್ನ ಕೃಪಾದೃಷ್ಟಿಗಾಗಿ ಕಾಯುತ್ತಿದ್ದಾರೆ. ನೀನು ನಮ್ಮೆಲ್ಲರ ಕೋರಿಕೆಯನ್ನು ಮನ್ನಿಸಿ ನಮ್ಮ ಆತಿಥ್ಯವನ್ನು ಸ್ವೀಕರಿಸಿ ನಮ್ಮೆಲ್ಲರನ್ನೂ ಕೃತಾರ್ಥರನ್ನಾಗಿ ಮಾಡು ಎಂದು ಪ್ರಾರ್ಥಿಸಿದಳು.

ಅದಕ್ಕೆ ಒಪ್ಪಿದ ಶ್ರೀರಾಮನು, ಹನುಮದಾದಿ ವಾನರ ವೀರರ ಸಮೇತ ವೆಂಕಟಾಚಲವನ್ನು ಹತ್ತುತ್ತಿದ್ದನು. ಮಾರ್ಗದಲ್ಲಿ ಅನೇಕ ಋಷಿಮುನಿಗಳು ಶ್ರೀರಾಮನ ದರ್ಶನಮಾಡಿ ವೇಳೆಯ ಪರಿವೆ ಇಲ್ಲದೆ ಕೊಂಡಾಡಿದರು. ತಮ್ಮ ಜನ್ಮಸಾರ್ಥಕವಾಯಿತು ಧನ್ಯರಾದೆವು ಎಂದು ಕೊಂಡಾಡಿದರು. ಹೀಗೆ ಎಲ್ಲರನ್ನೂ ಸಂತೋಷಪಡಿಸಿ ರಾಮ ಲಕ್ಷ್ಮಣರು ಆ ಪರ್ವತದ ಮೇಲಿರುವ ಆಕಾಶಗಂಗಾ ತೀರ್ಥದ ಹತ್ತಿರ ಇರುವ ಅಂಜನಾದೇವಿಯ ಆಶ್ರಮಕ್ಕೆ ಹೋಗಿ ಆಕೆಯನ್ನು ಸಂತೋಷಪಡಿಸಿದರು

ಮುಂದೆ ರಾಮ ಲಕ್ಷ್ಮಣ, ಹನುಮಂತ, ಸುಗ್ರೀವ, ಅಂಗದ ಜಾಂಬವಾದಿ ಎಲ್ಲ ವಾನರರು ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ವಿಶ್ರಾಂತಿ ಪಡೆದರು. ಏತನ್ಮಧ್ಯೆ, ಎಲ್ಲಾ ವಾನರರು ಅವರ ಸಹಜಗುಣ, ಚಾಪಲ್ಯದಿಂದ, ವೆಂಕಟಾದ್ರಿಯ ಬೆಟ್ಟಗಳು

ಮತ್ತು ಇಳಿಜಾರುಗಳಲ್ಲಿ ಅಲೆದಾಡುತ್ತಿರುವಾಗ, ಅವರು ಶ್ರೀ ಸ್ವಾಮಿಪುಷ್ಕರಿಣಿಯ ಈಶಾನ್ಯ ದಿಕ್ಕಿನಲ್ಲಿ ಒಂದು ಕತ್ತಲೆಯಾದ ಗುಹೆಯನ್ನು ಕಂಡರು. ಗುಹೆಯಲ್ಲಿ ಏನಿದೆ ಎಂದು ನೋಡುವ ಕುತೂಹಲದಿಂದ ಕೆಲವು ಕೋತಿಗಳು ಅದರೊಳಗೆ ಪ್ರವೇಶಿಸಿದವು. ಅವುಗಳು ಒಳಗೆ ಸ್ವಲ್ಪ ದೂರ ಹೋದಾಗ, ಒಂದು ದೊಡ್ಡ ನಗರವನ್ನು, ದೊಡ್ಡ ಬೆಳಕನ್ನು ಕಂಡರು.. ಆ ನಗರದಲ್ಲಿ ಅನೇಕ ಪುರುಷರು ಮತ್ತು ಮಹಿಳೆಯರು ಕಾಣಿಸಿಕೊಂಡರು. ಇವರೆಲ್ಲರೂ ವಿಷ್ಣುವಿನಂತೆ ಶಂಖ ಚಕ್ರಗಳನ್ನು ಧರಿಸಿ ಶ್ವೇತ ವಸ್ತ್ರಗಳನ್ನು ಧರಿಸಿ ಓಡಾಡುತ್ತಿರುವುದನ್ನು ಕಂಡರು. ಇನ್ನೂ ಒಳಗೆ ಹೋದಂತೆ, ಅವರು ನಗರದ ಮಧ್ಯದಲ್ಲಿ ಸೂರ್ಯನಿಂದ ಹೊರಹೊಮ್ಮುವ ದಿವ್ಯಪ್ರಭೆಯ ವಿಮಾನವನ್ನು ನೋಡಿದರು. ವಿಮಾನವು ಮೇರುವಿನ ಶಿಖರದಂತೆ ಕಾಣುತ್ತ, ಅನೇಕ ನವರತ್ನಮಣಿ ವಜ್ರ ವೈಢೂರ್ಯದ ಅನೇಕ ಮಂಟಪಗಳಿಂದ ಕೂಡಿತ್ತು.

**"ಚತುರ್ಬಾಹು ಮುದಾರಾಗ್ನಮ್ ಶಂಖ ಚಕ್ರಧರಂ ಪರಮ್**
**ಪೀತಾಂಬರಧರಂ ಸೌಮ್ಯಮಾಸಿನಂಕಾಂಚನಾನನೇ**
**ಫಣಾಮಣಿ ಮಹಾಕಾಂತಿ ವಿರಾಜಿತ ಕಿರೀಟಿನಮ್**
**ಭೋಗೆ ಭೋಗೇ ಸಮಾಸೀನಂ ಸರ್ವಾಭರಣಭೂಷಿತಮ್**
**ಆಸನೋಪರಿ ವಿನ್ಯಸ್ತ ವಾಮೇತರ ಕರಾಂಬುಜಮ್**
**ಪ್ರಸಾರ್ಯಾ ದಕ್ಷಿಣಂ ಪಾದಮುದ್ಧೃತೇ ವಾಮಜಾನುನಿ**
**ಪ್ರಸಾರ ವಾಮಹಸ್ತಾಬ್ಜಂ ಶ್ರೀಭೂಮಿಭ್ಯಾಂ ನಿಷೇವಿತಮ್**
**ಸೇವಿತಂ ವೀಳಯ ದೇವ್ಯಾ ವೈಜಯಂತ್ಯಾ ವಿರಾಜಿತಮ್**
**ಶ್ರೀವತ್ಸ ಕೌಸ್ತುಭೋರಸ್ಯಮ್ ವನಮಾಲಾ ವಿಭೂಷಿತಮ್**
**ಕೃಪಾರಸ ತರಂಗೌಪು ಪೂರ್ಣ ನೇತ್ರಾಂಬುಜ ದ್ವಯಮ್**
**ಶಶಿಪ್ರಭಾ ಸಮಚ್ಛತ್ರಂ ಚಾಮರವ್ಯಜನೇ ಶುಭೇ!**
**ಹಸ್ತಾಭ್ಯಾಮ್ ಧಾರಯಂತಿಭಿಃ ನಾರಿಭಿಃ ಸೇವಿತಂ ಮುದಾ"**

ಕೋಟಿ ಸೂರ್ಯಪ್ರಭೆಯಿಂದ ಬೆಳಗುತ್ತಿದ್ದ ಸ್ವರ್ಣ ವಿಮಾನದ ನಡುಭಾಗದಲ್ಲಿ ಆದಿಶೇಷನ ಸಾವಿರ ಪಾದಗಳ ಮೇಲೆ ಚಿನ್ನದ ನಕ್ಷತ್ರಗಳು ಬೆಳಗುತ್ತಿದ್ದವು. ಆ ಶೇಷನ ಮೇಲೆ ಮಲಗಿರುವ ಚತುರ್ಭುಜಧಾರಿ ಶ್ರೀಮಹಾವಿಷ್ಣುವು ಕಾಣಿಸಿಕೊಂಡನು. ಶ್ರೀ ಮಹಾಲಕ್ಷ್ಮೀಯು ತನ್ನ ಎದೆಯ ಮೇಲೆ ವಿಶ್ರಮಿಸುತ್ತಿರುವಾಗ, ಭೂದೇವಿ ನೀಲಾದೇವಿಯು ಅವನಿಗೆ ಪಾದಸೇವೆಯನ್ನು ಮಾಡುತ್ತಿದ್ದರು. ನಾರದಾದಿ ಯೋಗಿಗಳು ಆ ಭಗವಂತನನ್ನು ಅನೇಕ ರೀತಿಯಲ್ಲಿ ಹಾಡಿ ಕೊಂಡಾಡುತ್ತಿದ್ದರು.

ವೈಜಯಂತಿ ಮಾಲೆ ಮತ್ತು ಶ್ರೀಕೌಸ್ತುಭಾದಿ ಮಣಿಹಾರಗಳು ಕೊರಳಲ್ಲಿದ್ದವು. ಅವನ ದೃಷ್ಟಿಯಲ್ಲಿ ಕರುಣೆ ಉಕ್ಕಿ ಹರಿಯಿತು. ಆ ಶ್ರೀಮನ್ನಾರಾಯಣನ ಎರಡೂ ಕಡೆಗಳಲ್ಲಿ ಸೇವಕರು ಬಿಳಿಯ ಚಾಮರಗಳಿಂದ ಬೀಸುತ್ತಿದ್ದರೆ ಇನ್ನು ಕೆಲವು ಸೇವಕರು ಕೊಡೆಗಳನ್ನು ಹಿಡಿದಿದ್ದರು. ಕೆಲವು ಪುಣ್ಯಸ್ತ್ರೀಯರು ಸಂತೋಷದಿಂದ ಭಗವಂತನ ಮೇಲೆ ಪರಿಮಳಯುಕ್ತ ಸುಗಂಧವನ್ನು ಸುರಿಯುತ್ತಿದ್ದರು ಮತ್ತು ಇಡೀ ವಾತಾವರಣವು ಅನಂತ ಮತ್ತು ಅದ್ಭುತವಾದ ಆಧ್ಯಾತ್ಮಿಕ ಪ್ರಕಾಶದಿಂದ ತುಂಬಿತ್ತು. ಒಳಗೆ ಹೋದ ಕೋತಿಗಳು ಈ ಸಂಪೂರ್ಣ ದೃಶ್ಯವನ್ನು ನೋಡಿ ಆಶ್ಚರ್ಯ ಚಕಿತರಾದರು.

ಅಷ್ಟರಲ್ಲಿ ಚತುರ್ಭುಜಗಳಲ್ಲಿ ಶಂಖ ಚಕ್ರಧಾರಿಯಾದ ವನಮಾಲಿ, ವ್ಯಕ್ತಿಯೊಬ್ಬ ವಿಚಿತ್ರವಾಗಿ ನೋಡುತ್ತಿದ್ದ ವಾನರರನ್ನು ಬೆದರಿಸಿದನು. ಮಂಗಗಳು ಹೆದರಿ ಗುಹೆಯಿಂದ ಹೊರಗೆ ಓಡಿಹೋದವು. ಗುಹೆಯ ಹೊರಗಿರುವ ಇತರ ಕೋತಿಗಳಿಗೆ ತಾವು ನೋಡಿದ ಅದ್ಭುತ ಸಂಗತಿಗಳನ್ನು ವಿವರಿಸಿದರೆ, ಉಳಿದವರು ನಡಿಯಿರಿ ನಾವು ಹೋಗಿ ಆ ಆಶ್ಚರ್ಯವನ್ನು ನೋಡೋಣ. ಎಂದು ಅವರು ತೋರಿಸಿದ ಕಡೆ, ಎವೆಯಿಟ್ಟು ಗುಹೆಯನ್ನೇ ನೋಡುತ್ತಿದ್ದರು. ನಂತರ ಅವರು ಭಯದಿಂದಲೇ ಎರಡು ಹೆಜ್ಜೆ ಮುಂದೆ ಇಟ್ಟು ಹೆಚ್ಚು ವಿಸ್ಮಯಗೊಂಡರು. ಅವರು ಹಿಂದೆ ನೋಡಿದ ಮಹಾನಗರ ಮತ್ತು ಆ ದಿವ್ಯ ಪುರುಷರ ಕುರುಹುಗಳು ಕಾಣಿಸಲೇಯಿಲ್ಲ. ಅವರು ಪ್ರವೇಶಿಸಿದ ಗುಹೆ ಅಲ್ಲಿ ಕಾಣಲೇಯಿಲ್ಲ. ಈ ಮೊದಲು ಅವರು ಕಂಡ ದೃಶ್ಯವೆಲ್ಲ ಸ್ವಪ್ನವೇ? ಅಥವಾ ಭ್ರಮೆಯೇ? ಎಂದು ವಿಧವಿಧವಾಗಿ ಯೋಚಿಸಿದರು, ಅವರಿಗೆ ಎಲ್ಲವೂ ವಿಚಿತ್ರವಾಗಿ ಆಶ್ಚರ್ಯವಾಗಿ ಕಂಡಿತು. ನಂತರ, ಅವರು ಈ ವಿಷಯವನ್ನು ತಮ್ಮ ಭಗವಾನ್ ಶ್ರೀರಾಮಚಂದ್ರ ಮೂರ್ತಿಗೂ ಹೇಳಿದರು.

ಅನಂತ ಪುಣ್ಯಪ್ರದವಾದ ಈ ವೆಂಕಟಾಚಲ ಪುಣ್ಯಕ್ಷೇತ್ರದಲ್ಲಿ ಸಾಕ್ಷಾತ್ ವೈಕುಂಠಾಧಿಪತಿ ಯಾದ ಶ್ರೀಮನ್ನಾರಾಯಣನು ಲೀಲಾಮಾನುಷ ರೂಪದಲ್ಲಿ ವಿಹರಿಸುತ್ತಾನೆ. ಆದ್ದರಿಂದಲೇ ಈ ಪುಣ್ಯಕ್ಷೇತ್ರವು ಭೂಲೋಕ ವೈಕುಂಠವೆಂದು ಪ್ರಸಿದ್ಧವಾಗಿದೆ. ಈ ಬೆಟ್ಟದ ಮಹಿಮೆ ಅನಂತ ಅವ್ಯಕ್ತ. ದೇವತೆಗಳು ಈ ಬೆಟ್ಟವನ್ನು ಎಷ್ಟು ಒಳಹೊಕ್ಕು ನೋಡಿದರು ಅದರ ವಿಶೇಷತೆಯನ್ನು ಗ್ರಹಿಸಲಾರರು. ಆದರೆ ಪೂರ್ವಜನ್ಮದ ಪುಣ್ಯವೋ, ಭಾಗ್ಯವೋ ಸಾಕ್ಷಾತ್ ಶ್ರೀಮನ್ನಾರಾಯಣನ ದರ್ಶನವಾಯಿತು. ಆ ಸ್ವಾಮಿಯ ದರ್ಶನ, ಶ್ರೀದೇವಿ, ಭೂದೇವಿಯರೊಡನೆ, ಅವರ ಕಿಂಕರರ ದರ್ಶನವನ್ನೂ ಮಾಡಿದರು. ವಿಶೇಷವಾಗಿ ನೀವು ಪ್ರವೇಶಿಸಿದ ಗುಹೆಯು

'ವೈಕುಂಠ ಗುಹಾ', ಈ ಸ್ಥಳವು ಶ್ರೀ ಮಹಾ ವಿಷ್ಣುವಿಗೆ ಶ್ರೀ ವೈಕುಂಠ ಹೇಗೆ ಪ್ರಿಯವೋ ಹಾಗೆಯೇ ಈ ಕ್ಷೇತ್ರವು ಅಷ್ಟೇ ಪ್ರಿಯವಾಗಿದೆ. ಸ್ವಾಮಿಗೆ ಈ ಸ್ಥಳವು ಪ್ರಿಯವಾದ ಕಾರಣ ಇಲ್ಲಿ ವಿಹರಿಸುತ್ತಿದ್ದಾನೆ. ಹಾಗೆಯೇ ಪುಣ್ಯಪುರುಷರಿಗೆ, ಮಹನೀಯರಿಗೆ ದರ್ಶನಭಾಗ್ಯವನ್ನು ಕಲ್ಪಿಸಿ ಕೊಟ್ಟಿದ್ದಾನೆ ಎಂದು ಪ್ರಭು ಶ್ರೀರಾಮಚಂದ್ರ ವೈಕುಂಠಗುಹೆ, ಮತ್ತು ಭೂಲೋಕದ ವೈಕುಂಠ ಎಂದೆನಿಸಿರುವ ವೆಂಕಟಾಚಲದ ಮಹತ್ವವನ್ನು, ಪ್ರಾಶಸ್ತ್ಯವನ್ನು ಸಂಗ್ರಹವಾಗಿ ವಾನರಸೇನೆಗೆ ಅರ್ಥೈಸಿದರು. ತದನಂತರ ರಾಮಲಕ್ಷ್ಮಣರು ವಾನರ ಸೈನ್ಯದ ಸಹಾಯದಿಂದ ಲಂಕೆಯನ್ನು ಪ್ರವೇಶಿಸಿ, ಸೀತಾಮಾತೆಯನ್ನು ಅಪಹರಿಸಿದ ಲಂಕಾಧಿಪತಿ ರಾವಣನನ್ನು ಸಂಹರಿಸಿ ಸೀತಾದೇವಿ ಸಮೇತನಾಗಿ ಅಯೋಧ್ಯೆಗೆ ಹಿಂದಿರುಗಿದನು ಎಂದು ಸೂತಮಹರ್ಷಿಗಳು, ತಮ್ಮ ಶಿಷ್ಯರಿಗೆ ಹೇಳುತ್ತಾ....

**ಯದಾ ಯದಾ ಕಲಿಃ ಕಾಲೌ ಯದಾ ವಾ ಜನತಾ ಗಿರೌ,**
**ತದಾ ಗುಹಾಯಾಂ ತಸ್ಯಾಂತು ವಶಿಷ್ಯಸ್ತಿತಿ ನಃ ಶ್ರುತಮ್,**
**ಏವಂ ಪ್ರಭಾವಃ ಶೇಷಾದ್ರಿಃ ವಸತ್ಯಸ್ಮಿನ್ ಜಗನ್ಮಯಃ,**
**ನೀಲಮೇಘನಿಭಂ ಶ್ಯಾಮಂ ನೀಲೋತ್ಪಲ ವಿಲೋಚನಂ,**
**ನೀಲಾದ್ರಿ ಶಿಖರಸ್ಥಂ ತಂ ಭಜಾಮ್ಯಸ್ತವ ಸುಸ್ಥಿತಮ್**

ಕಲಿಕಾಲವು ಪ್ರಾರಂಭವಾದ ಸಮಯದಲ್ಲಿ ಜನರ ಸಾಮರ್ಥ್ಯ ಹೆಚ್ಚಾದ ಸಂಧರ್ಭದಲ್ಲಿ ಶ್ರೀಮನ್ನಾರಾಯಣನು ಆ ಗುಹೆಯಲ್ಲಿ ರಹಸ್ಯವಾಗಿ ಇರುತ್ತಾನೆ. ಹಾಗೆಯೆ ಶೇಷಾಚಲ ಮಹಾತ್ಮೆಯು ಪವಿತ್ರ ಅನಂತವಾದುದು. ಆದುದರಿಂದಲೇ ಸರ್ವಂತರ್ಯಾಮಿಯಾಗಿ ಆ ವೈಕುಂಠವಾಸಿಯು ಲೀಲಾಮಾನುಷ ಸ್ವರೂಪದಲ್ಲಿ ನಿರಂತರವಾಗಿ, ನಿತ್ಯ ನೂತನವಾಗಿ ವಿಹರಿಸುತ್ತಿರುತ್ತಾನೆ.

ಆ ನೀಲಮೇಘಶ್ಯಾಮ, ಕಣ್ಮನ ಸೆಳೆಯುವ, ಶ್ಯಾಮವರ್ಣ ಕಪ್ಪುಬಣ್ಣದ ಕಣ್ಣುಗಳಿಂದ ಹೊಳೆಯುತ್ತ, ನೀಲಾದ್ರಿಯಾದ ವೆಂಕಟಾಚಲದಲ್ಲಿ ನೆಲೆಸಿರುವ ಆ ವೆಂಕಟನನ್ನು ಸ್ಮರಿಸುತ್ತಾ ಇಲ್ಲಿಂದ ಪ್ರಾರ್ಥಿಸುತ್ತೇನೆ. ಓ ಶ್ರೇಷ್ಠರೇ! ನಿಮ್ಮ ಭಾಗ್ಯದಿಂದ 'ವೈಕುಂಠ ಗುಹ'ದ ದಿವ್ಯ ಕಥೆಯನ್ನು ಕೇಳಿದ್ದೀರಿ? ಈ ಕಥೆಯನ್ನು ಕೇಳಿದವರಿಗೂ, ಕೇಳಿಸಿದವರಿಗೂ ಕಲಿದೇವನು ಎಲ್ಲರಿಗೂ ಸಕಲ ಸೌಭಾಗ್ಯವು ಉಂಟು ಮಾಡುತ್ತಾನೆ. ಹಿರಿಯರಿಂದ, ಪರಮಯೋಗಿಗಳಿಂದ ನಾನು ಕೇಳಿದ್ದನ್ನು ಹೇಳುವ ಭಾಗ್ಯ ನನಗೆ ದೊರೆಯಿತು. ನನಗೂ ಪರಮಾನಂದವಾಗಿದೆ ಎಂದು ಸೂತರು ತಮ್ಮ ಕಣ್ಣುಗಳನ್ನು ಮುಚ್ಚಿ ಶ್ರೀ ವೆಂಕಟೇಶ್ವರ ಸ್ವಾಮಿಯ ದಿವ್ಯ ಮಂಗಳರೂಪವನ್ನು ಧ್ಯಾನಿಸುತ್ತ ಅವ್ಯಕ್ತವಾದ ದಿವ್ಯ ಭಾವನೆಯನ್ನು ಆನಂದವನ್ನು ಅನುಭವಿಸಿದರು.

"ಬಧಿರಾಣಾಂ ಚ ಶ್ರೋತ್ರಾಣಿ ತ್ವತ್ಕಥಾ ಶ್ರವಣಂ ಪರಮ್,
ಜಡಂ ಮೂಕಂ ಚ ವಾಚಾಲಂ ಕರೌऽಪ್ಯಧ್ಯಯನಾನ್ವಿತಮ್,
ಮಂದಬುದ್ಧಿಂ ಪ್ರಾಜ್ಞತಮಂ ಸಾಂಖ್ಯಯೋಗ ಸಮಾಧಿಗಮ್,
ಅಕರಸ್ಯ ಕರೌ ದತ್ವಾ ಕರೋಷಿ ತವ ಪೂಜಕಮ್,
ಅಪದಸ್ಯ ಪದೇ ದತ್ವಾ ತ್ವತೀರ್ಕ್ತೀರ್ಥ ಕ್ಷೇತ್ರಗಾಮಿನಮ್,
ಯದ್ಯದ್ದುಃಖಂ ಭವೇದ್ಭಕ್ತ್ಯ ತತ್ತತ್ಸದ್ಯಾ ಪಾರಿಷ್ಯಸಿ,
ಕುಬ್ಜತ್ವಂ ಕುಷ್ಠತಾಂ ನಾನಾರೋಗಾನವ್ಯಾಭಿಚಾರಿಕಾನ್,
ಹೃತ್ವಾ ದದಾಸ್ಯಂಗದಾರ್ಢ್ಯಮ್ ಸೌಂದರ್ಯಂ ತ್ವದಯಾದ್ಭುತಾ,
ಶ್ರೀನಿವಾಸಬಹುಕ್ತ್ಯಾ ಕಿಂ ಭಕ್ತ ಸರ್ವಾರ್ತಿನಾಶನೇ,
ಸರ್ವಾರ್ಥ ಪೂರಣೇ ಚಾಪಿ ತ್ವತ್ಸಮಾಂऽಡೇ ನ ಕುತ್ರಚಿತ್."

"ಶ್ರೀ ಸ್ವಾಮಿ ವೆಂಕಟೇಶ ಕಿವುಡರಿಗೆ ನಿಮ್ಮ ಮಂಗಳಕರವಾದ ದಿವ್ಯ ಕಥೆಯನ್ನುಕೇಳಲು ಕಿವಿಗಳನ್ನು ಅನುಗ್ರಹಿಸುತ್ತೀಯ. ಹಾಗೆಯೇ ಮೂಕರಿಗೆ ಮಾತನಾಡುವ ಶಕ್ತಿಯನ್ನು ಕರುಣಿಸಿ ಮಹೋನ್ನತವಾದ ವೇದಗಳನ್ನು ಪಠಿಸಲು ವಾಕ್ ಶಕ್ತಿಯನ್ನು ನೀಡುತ್ತೀಯ! ಓ ಶ್ರೀನಿವಾಸ! ಕೈಯಿಲ್ಲದವರಿಗೆ ಸಾಧನೆ ಮಾಡಲು, ನಿನ್ನ ಪೂಜೆ ಮಾಡಲು ಕೈ ನೀಡುವವನು ನೀನು. ಮತ್ತು ಕುಂಟನಿಗೆ ನಡೆಯಲು ಅನುಗ್ರಹಿಸಿ, ಅವನನ್ನು ಕ್ಷೇತ್ರಕ್ಕೆ ಭೇಟಿ ನೀಡುವಂತೆ ಮಾಡುವವನು ನೀನೇ! ಇದಲ್ಲದೆ ವೃದ್ಧಾಪ್ಯ, ಕುಷ್ಠ, ವಿಷ ಇತ್ಯಾದಿ ದುಷ್ಪರಿಣಾಮಗಳನ್ನು ತೊಡೆದುಹಾಕುವ ಮತ್ತು ವಜ್ರಕಾಯವನ್ನು ದಯಪಾಲಿಸುವ ಭಗವಂತ ನೀನಲ್ಲವೇ ಸ್ವಾಮೀ.

ಅಷ್ಟೇಅಲ್ಲ ಓ ನನ್ನ ಸ್ವಾಮಿ! ನೀನು ಮಹಾದಾನಿ. ನಿನ್ನ ಭಕ್ತರು ಏನನ್ನು ಕೇಳದೆಯೇ ಎಲ್ಲವನ್ನು ಕೊಡುತ್ತೀಯ, ಅನುಗ್ರಹಿಸುತ್ತೀಯ ಎಂದು ಸುಮ್ಮನೆ ಕೈಕಟ್ಟಿ ಕುಳಿತರೆ ಏನು ಪ್ರಯೋಜನವಿಲ್ಲ. ಇದರ ಒಟ್ಟು ಸಾರಾಂಶ, ಅರ್ಥ ಏನು? ಈ ಬ್ರಹ್ಮಾಂಡದಲ್ಲಿರುವ ಭಕ್ತರ ದುಃಖವನ್ನು ಹೋಗಲಾಡಿಸಿ, ಅವರ ಸಕಲ ಕೋರಿಕೆಗಳನ್ನು ಈಡೇರಿಸುವ ನಿನ್ನಂಥವನನ್ನು ಬಿಟ್ಟರೆ ಬೇರೊಬ್ಬರು ಇರಲು ಸಾಧ್ಯವೇಯಿಲ್ಲ. ಅಂತಹ ಮಹಾಮಹಿಮಾನ್ವಿತವಾದ ನಿನ್ನ ದಿವ್ಯಮಹಿಮೆಯನ್ನು ಸ್ಮರಿಸುವ ಭಾಗ್ಯ ನನ್ನದಾಗಿದೆ ಅಲ್ಲವೇ? ಎಂದು ಸೂತಮಹರ್ಷಿಗಳು ಶ್ರೀನಿವಾಸನನ್ನು ಭಕ್ತಿಯಿಂದ ಪ್ರಾರ್ಥಿಸಿದರು.

## ಇಂದ್ರಾದಿದೇವತೆಗಳಿಂದ ವಿಷ್ಣುವಿನ ಹುಡುಕಾಟ

ಒಮ್ಮೆ ಸನಕ ಸನಂದನ ಸನತ್ಕುಮಾರ ಸನತ್ಸುಜಾತರರು ನಾಲ್ವರು ಮುನಿಗಳು ಶ್ರೀ ವೈಕುಂಠಕ್ಕೆ ಹೋದರು. ಶ್ರೀಮನ್ನಾರಾಯಣನ ದಿವ್ಯ ಸಂದರ್ಶನಕ್ಕಾಗಿ ಬಂದ

ಮಹಾಯೋಗಿಗಳನ್ನು ವೈಕುಂಠದ ದ್ವಾರಪಾಲಕರಾದ ಜಯ ಮತ್ತು ವಿಜಯರು ಅವರನ್ನು ಒಳಕ್ಕೆ ಪ್ರವೇಶಿಸದಂತೆ ತಡೆದರು. ಒಳಗೆ ಶ್ರೀ ಲಕ್ಷ್ಮೀನಾರಾಯಣರು ಏಕಾಂತದಲ್ಲಿ ಇದ್ದಾರೆ. ಈ ವೇಳೆ ಅವರ ಏಕಾಂತಕ್ಕೆ ಸ್ವಲ್ಪವೂ ತೊಂದರೆಯಾಗಬಾರದು ಎಂದು ಅವರನ್ನು ಸ್ವಾಮಿಯ ಅನುಮತಿ ಇಲ್ಲದೆ ಒಳಕ್ಕೆ ಬಿಡುವಂತಿಲ್ಲ ಎಂದು ಅವರನ್ನು ಒಳಗೆ ಬಿಡಲಾಗಲಿಲ್ಲ. ತಮಗಾದ ಅವಮಾನದಿಂದ ತೀವ್ರ ಕೋಪಗೊಂಡ ಮಹಾ ಯೋಗಿಗಳು ತಮಗೆ ಒಳಗೆ ಹೋಗಲು ಅಡ್ಡಿಪಡಿಸಿದ ಜಯ ವಿಜಯರನ್ನು ನೀವು ರಾಕ್ಷಸರಾಗಿ ಹುಟ್ಟಿ ಎಂದು ಶಪಿಸಿ ಹೊರಟು ಹೋದರು. ಆ ಶಾಪದ ಫಲವಾಗಿ ಆ ದ್ವಾರಪಾಲಕರಾದ ಜಯ–ವಿಜಯರು ಒಂದು ಜನ್ಮದಲ್ಲಿ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪುಗಳಾಗಿ ಹುಟ್ಟಿ ಲೋಕಕಂಠಕರಾಗಿ ಎಲ್ಲೆಡೆ, ಎಲ್ಲರಿಗೂ ತೊಂದರೆ ಮಾಡುತ್ತಿದ್ದರು.ಆ ಸಂದರ್ಭದಲ್ಲಿ ಶ್ರೀಹರಿಯು ಆದಿವರಾಹ ಮತ್ತು ಉಗ್ರನರಸಿಂಹನಾಗಿ ಅವತರಿಸಿ ಆ ರಾಕ್ಷಸರನ್ನು ಸಂಹರಿಸಿದನು.

ಮತ್ತೊಂದು ಜನ್ಮದಲ್ಲಿ ಆ ಜಯ–ವಿಜಯರು ರಾವಣ ಕುಂಭಕರ್ಣರಾಗಿ ಹುಟ್ಟಿ ಲೋಕಗಳನ್ನು ಪೀಡಿಸುತ್ತಲೇ ಇದ್ದರು. ಅವರಿಂದ ಹಿಂಸೆ, ನೋವು, ಸಂಕಟಗಳನ್ನು ಸಹಿಸಲಾರದೆ ಲೋಕಗಳೆಲ್ಲ ತತ್ತರಿಸಿದವು. ಅಂತಿಮವಾಗಿ, ಈ ರಾಕ್ಷಸರ ಹಿಂಸೆಯನ್ನು ನೋವುಗಳನ್ನು ಸಹಿಸಲಾರದೆ, ಇಂದ್ರಾದಿದೇವತೆಗಳು, ಅನೇಕ ಋಷಿಗಳು ಮತ್ತು ಯೋಗಿಗಳು ತಮ್ಮನ್ನು ರಕ್ಷಿಸುವಂತೆ ಶ್ರೀಮನ್ನಾರಾಯಣನಲ್ಲಿ ಮೊರೆಯಿಡಲು ವೈಕುಂಠಕ್ಕೆ ಹೋದರು. ಅನೇಕ ವಿಧಗಳಲ್ಲಿ ಪ್ರಾರ್ಥಿಸುತ್ತಾ, ಸ್ವಾಮಿಯ ದರ್ಶನಕ್ಕಾಗಿ ಹಂಬಲಿಸುತ್ತಾ ಪ್ರಾರ್ಥಿಸಿದರು. ಆ ಸಮಯದಲ್ಲಿ ಅವರಿಗೆ ಒಂದು ದಿವ್ಯವಾದ ಧ್ವನಿಯು ಕೇಳಿಸಿತು,

"ಓ ಮಹಾಮಹಿಮರೇ! ಈ ವಿಷಯವನ್ನು ಎಚ್ಚರಿಕೆಯಿಂದ ಆಲಿಸಿ! ಶ್ರೀ ಮಹಾವಿಷ್ಣುವು ವೈಕುಂಠದಲ್ಲಿ ಇಲ್ಲವೇ ಇಲ್ಲ. ಪ್ರಸ್ತುತ, ಭೂಲೋಕದಲ್ಲಿ ದಿವ್ಯವಾದ "ಪರ್ವತದ ಮೇಲೆ" ವಿಹರಿಸುತ್ತಿದ್ದಾನೆ" ಎಂಬುದಾಗಿ ಆ ದೈವವಾಣಿ ನುಡಿಯಿತು.

ಇದರಿಂದ ಆಶ್ಚರ್ಯಗೊಂಡ ಇಂದ್ರಾದಿಗಳು ಭೂಲೋಕಕ್ಕೆ ಹೋಗಿ ಭಗವಾನ್ ವಿಷ್ಣು ಎಲ್ಲಿದ್ದಾನೇ ಎಂದು ಎಲ್ಲರನ್ನು ಕೇಳಿದರು. ಆದರೆ ಅವರಿಗೆ ಭೂಲೋಕದಲ್ಲಿ ಶ್ರೀಹರಿಯು ಕಾಣದ ಕಾರಣ ಮತ್ತೆ ವೈಕುಂಠಕ್ಕೆ ಹೊರಟರು. ಅಷ್ಟರಲ್ಲಿ ಆ ದಾರಿಯಲ್ಲಿ ದೇವರ್ಷಿ ನಾರದರನ್ನು ಕಂಡರು. ದೇವೇಂದ್ರಾದಿಗಳು ನಾರದರ ಬಳಿ ತಾವು ವಿಷ್ಣುವಿನ ದರ್ಶನಕ್ಕಾಗಿ ಎಲ್ಲಾ ಲೋಕಗಳನ್ನು ಹುಡುಕುತ್ತಿದ್ದೇವೆ ಎಂದು ಹೇಳಿದರು. ನಾರದನು ಸಹ ಶ್ರೀಹರಿ ವೈಕುಂಠದಲ್ಲಿ ಇರಲಿಲ್ಲ ಮತ್ತು ಅವನು ಎಲ್ಲಿದ್ದಾನೆಂದು ಯಾರಿಗೂ ತಿಳಿದಿಲ್ಲ, ಆದ್ದರಿಂದ ನಾರದರು ಎಲ್ಲರನ್ನು ಬ್ರಹ್ಮ

ದೇವರು ಇರುವ ಸತ್ಯಲೋಕಕ್ಕೆ ಕರೆದುತಂದರು. ಎಲ್ಲರೂ ಬ್ರಹ್ಮ ದೇವರನ್ನು ವಿವಿಧ ರೀತಿಯಲ್ಲಿ ಪ್ರಾರ್ಥಿಸಿದರು, ತಾವು ಬಂದ ಕಾರಣವನ್ನು ವಿವರಿಸಿದರು ಮತ್ತು ಭಗವಾನ್ ವಿಷ್ಣುವಿನ ದರ್ಶನ ಮಾಡಿಸಬೇಕೆಂದು ಅನೇಕ ವಿಧದಲ್ಲಿ ಪ್ರಾರ್ಥಿಸಿದರು. ಆಗ ಬ್ರಹ್ಮದೇವರು ಎಲ್ಲರಿಗೂ ಸಾಂತ್ವನ ಹೇಳಿದರು, "ವಿಷ್ಣುಮಾಯ ಅಗಮ್ಯಗೋಚರಂ. ಅವನು ಎಲ್ಲಿದ್ದಾನೆ ಎಂದು ಯಾರಿಗೂ ಗೊತ್ತಾಗುವುದಿಲ್ಲ. ಭೂಲೋಕದಲ್ಲಿ ಅಯೋಧ್ಯೆಯನ್ನು ಆಳುತ್ತಿರುವ ದಶರಥ ಮಹಾರಾಜನು ಸಂತಾನ ಪ್ರಾಪ್ತಿಗಾಗಿ ಶ್ರೀಮಹಾವಿಷ್ಣುವನ್ನು ಬೇಡಿಕೊಳ್ಳಲು ಪರಮ ಪವಿತ್ರವಾದ ವೆಂಕಟಾಚಲದ ಪುಣ್ಯಕ್ಷೇತ್ರಕ್ಕೆ ಬರಲಿದ್ದಾನೆ. ಆ ಪರ್ವತದ ಮೇಲಿರುವ ಶ್ರೀ ಹರಿಯ ದರ್ಶನಕ್ಕಾಗಿ ತಪಸ್ಸು ಮಾಡುತ್ತಿದ್ದಾನೆ. ಆ ಚಕ್ರವರ್ತಿಗೆ ವರವನ್ನು ಕೊಡಲು ಶ್ರೀಮಹಾವಿಷ್ಣುವು ದರ್ಶನ ನೀಡುತ್ತಾನೆ. ಅಲ್ಲಿಯವರೆಗೆ ಆ ದಿವ್ಯ ಕ್ಷೇತ್ರ ವೆಂಕಟಾದ್ರಿಗೆ ಹೋಗಿ ದಶರಥ ಚಕ್ರವರ್ತಿಯೊಡನೆ ನಾವೆಲ್ಲರೂ ಒಟ್ಟಿಗೆ ಸೇರಿ ಶ್ರೀಹರಿಯ ದರ್ಶನಕ್ಕಾಗಿ ತಪಸ್ಸು ಮಾಡೋಣ" ಎಂದು ಹೇಳುತ್ತ ದೇವೇಂದ್ರಾದಿಗಳೊಂದಿಗೆ ಬ್ರಹ್ಮದೇವರು ವೆಂಕಟಾದ್ರಿಯನ್ನು ತಲುಪಿದರು. ಆ ಕ್ಷೇತ್ರದ ಮೇಲಿರುವ ಪುಣ್ಯಪ್ರದವಾದ ಪರಮಪೂಜ್ಯ ಸ್ವಾಮಿಪುಷ್ಕರಿಣಿಯ ಪುಣ್ಯಜಲದಲ್ಲಿ ಸ್ನಾನ ಮಾಡುತ್ತಾ ದೇವತೆಗಳೆಲ್ಲರೂ ಭಗವಾನ್ ವಿಷ್ಣುವಿನ ದಿವ್ಯ ದರ್ಶನಕ್ಕಾಗಿ ಪ್ರಾರ್ಥಿಸುತ್ತ, ಅವನ ಬರುವಿಕೆಗಾಗಿ ಕಾಯುತ್ತಾ ತಪಸ್ಸು ಮಾಡಲು ಆರಂಭಿಸಿದರು. ಇದು ಸ್ವಲ್ಪ ಕಾಲದವರೆಗೆ ನಡೆಯಿತು.

## ದಶರಥನ ವೆಂಕಟಾಚಲಯಾತ್ರೆ

ರಾಜ ಪುರೋಹಿತರಾದ ವಶಿಷ್ಠ ಮಹಾಮಹಿಮರ ಆದೇಶದ ಮೇರೆಗೆ ದಶರಥ ಮಹಾರಾಜನು ಸಂತಾನ ಪ್ರಾಪ್ತಿಗಾಗಿ ವೆಂಕಟಾಚಲ ದಿವ್ಯಕ್ಷೇತ್ರವನ್ನು ತಲುಪಿದನು. ಆ ಪುಣ್ಯಕ್ಷೇತ್ರದಲ್ಲಿ ಬ್ರಹ್ಮಾದಿದೇವತೆಗಳೂ ಅನೇಕ ಪರಮಯೋಗಿಗಳೂ ನಾನಾ ರೀತಿಯಲ್ಲಿ ತಪಸ್ಸನ್ನು ಮಾಡುತ್ತಿದ್ದುದನ್ನು ಕಂಡು ದಶರಥನಿಗೆ ಆನಂದವಾಯಿತು. ಈ ಮಹನೀಯರ ದರ್ಶನದಿಂದ ಜನ್ಮಧನ್ಯವಾಯಿತು. ತನ್ನ ತಪಸ್ಸಿಗೆ ಅಲ್ಲದಿದ್ದರು, ಈ ಮಹನೀಯರ ತಪಸ್ಸಿಗಾದರೂ ಶ್ರೀಹರಿಯು ಖಂಡಿತವಾಗಿ ಪ್ರತ್ಯಕ್ಷನಾಗುತ್ತಾನೆ ನನ್ನ ಕೋರಿಕೆಯು ನೆರವೇರುತ್ತದೆ ಎಂದು ಸಂತೋಷಗೊಂಡ ದಶರಥನು ತನ್ನ ತಪಸ್ಸನ್ನು ಪ್ರಾರಂಭಿಸಿದನು. ಹೀಗೆ ಸ್ವಲ್ಪಕಾಲ ಕಳೆಯಿತು. ಒಂದುದಿನ ಸುಪ್ರಭಾತ ಸಮಯದಲ್ಲಿ ಕೋಟಿ ಸೂರ್ಯರ ಪ್ರಭೆಯಿಂದ ಪ್ರಕಾಶಮಾನವಾಗಿ ಬೆಳಗುತ್ತಿದ್ದ ಬಂಗಾರದ ದಿವ್ಯ ವಿಮಾನ ಸಿಡಿಲು ಗುಡುಗು ಶಬ್ದದೊಡಗೂಡಿ ಪ್ರತ್ಯಕ್ಷವಾಯಿತು. ಆ ಸ್ವರ್ಣ ವಿಮಾನವು ಅದ್ಭುತ, ಮತ್ತು ಆಶ್ಚರ್ಯಕರವಾಗಿ ಅನೇಕ

ಚಿನ್ನದ ಶಿಖರಗಳಿಂದ ಅಲಂಕರಿಸಲ್ಪಟ್ಟ ಶುದ್ಧ ಬೆಳಕಿನಿಂದ ಆವೃತವಾದ ಬಿಳಿಮೋಡದಂತೆ ಮನೋಹರವಾಗಿತ್ತು.

ಇಂತಹ ಆಶ್ಚರ್ಯಕರವಾದ ವಿಮಾನವು ಅನೇಕ ಬೆಲೆಬಾಳುವ ಮುತ್ತುರತ್ನ, ವಜ್ರವೈಢೂರ್ಯಗಳಿಂದ ಶೋಭಾಯಮಾನವಾಗಿ ಅಲಂಕರಿಸಲ್ಪಟ್ಟಿತ್ತು. ಬೆರಗುಗೊಳಿಸುವ ಈ ದಿವ್ಯವಿಮಾನವನ್ನು ಎಷ್ಟು ನೋಡಿದರು ಮನತಣಿಯದಾಯಿತು.

ಆದರೆ, ಆ ಪರ್ವತದಲ್ಲಿ ಸಂಚರಿಸುತ್ತಿದ್ದ ಮಹರ್ಷಿಗಳಾಗಲೀ, ಮಹಾಮಹಿಮರಾಗಲಿ, ಇಂದ್ರಾದಿದೇವತೆಗಳೇ ಆಗಲಿ ಅದುವರೆವಿಗೂ ಅಂತಹ ವಿಸ್ಮಯವಾದ ವಿಮಾನವನ್ನು ಹಿಂದೆಂದೂ ನೋಡಿರಲಿಲ್ಲ.

ಆ ಮುನಿಗಳೆಲ್ಲರೂ ಪರ್ವತದ ಮಧ್ಯದಲ್ಲಿ ಶೋಭಾಯಮಾನವಾಗಿ ಬೆಳಗುತ್ತಿದ್ದ ಪುರುಷೋತ್ತಮನ ದರ್ಶನ ಮಾಡಿದರು. ಆ ಸ್ವಾಮಿ ತನ್ನ ವಕ್ಷಸ್ಥಳವಾಸಿನಿಯಾದ ಶ್ರೀಲಕ್ಷ್ಮೀ, ಹಾಗು ಭೂದೇವಿ ಸಮೇತನಾಗಿ, ಶಂಖಚಕ್ರ, ಗದಾಧಾರಿಯಾದ, ಅಲಂಕಾರಪ್ರಿಯ ವಜ್ರವೈಢೂರ್ಯದ ಆಭರಣಗಳಿಂದ ಅಲಂಕೃತನಾಗಿ ಪದ್ಮಪೀಠದಮೇಲೆ ಕಟಿವರದ ಹಸ್ತದೊಂದಿಗೆ ಅಲ್ಲಿದ್ದ ತನ್ನ ಭಕ್ತರಿಗೆ ದರ್ಶನಕೊಟ್ಟನು.

ಬ್ರಹ್ಮೇಂದ್ರಾದಿ ದೇವತೆಗಳು ತಮಗೆ ದಿವ್ಯ ದರ್ಶನ ನೀಡಿದ ಶ್ರೀದೇವಿ,ಭೂದೇವೀ ಸಹಿತನಾದ ಶ್ರೀನಿವಾಸನನ್ನು ಹಲವು ರೀತಿಯಲ್ಲಿ ಪ್ರಾರ್ಥಿಸಿದರು. ಲೋಕಕಂಠಕರಾದ ರಾವಣ ಕುಂಭಕರ್ಣರನ್ನು ಸಂಹರಿಸಿ ಲೋಕದ ಸಂಕಟಗಳನ್ನು ಹೋಗಲಾಡಿಸು ಎಂದು ಭಕ್ತಿಯಿಂದ ಪ್ರಾರ್ಥಿಸಿದರು.

ಇದೇ ಸಂದರ್ಭದಲ್ಲಿ ದಶರಥ ಮಹಾರಾಜರು ಶ್ರೀ ಸ್ವಾಮಿಯನ್ನು ಸ್ತುತಿಸಿ ತನಗೆ ಸಂತಾನಭಾಗ್ಯವನ್ನು ನೀಡುವಂತೆ ಬೇಡಿಕೊಂಡನು. ಶ್ರೀಹರಿಯು ತಕ್ಷಣವೇ ದಶರಥ ಮಹಾ ರಾಜನ ಪ್ರಾರ್ಥನೆಯನ್ನು ಮನ್ನಿಸಿ ದಶರಥನಿಗೆ, "ಓ ರಾಜ! ನೀನು ಅಯೋಧ್ಯೆಗೆ ಹೋಗು. ಸಂತಾನಕ್ಕಾಗಿ ಪುತ್ರಕಾಮೇಷ್ಟಿಯಾಗವನ್ನು ಮಾಡಬೇಕು. ಆ ಯಜ್ಞದ ಫಲ ದಿಂದಾಗಿ ನಿನಗೆ ಸರಿಸಾಟಿಯಾದ ನಾಲ್ವರು ಪುತ್ರರು ಹುಟ್ಟುತ್ತಾರೆ. ತಕ್ಷಣ ಹೊರಡು. ನಿಮ್ಮ ಆಸೆ ಈಡೇರುತ್ತದೆ. ಅಭೀಷ್ಟ ಸಿದ್ಧಿರಸ್ತು!" ಎಂದು ಆಶೀರ್ವಾದ ಮಾಡಿ ಕಳುಹಿಸಿದನು.

ನಂತರ ಶ್ರೀಮಹಾವಿಷ್ಣುವು ಬ್ರಹ್ಮೇಂದ್ರಾದಿ ದೇವಾನುದೇವತೆಗಳನ್ನು ನೋಡಿದ ವಿಷ್ಣುವು ಅವರನ್ನು ಉದ್ದೇಶಿಸಿ"ನಾನು ದಶರಥನಿಗೆ ನೀಡಿದ ವರದಿಂದ ನಿಮ್ಮ

ಇಷ್ಟಾರ್ಥಗಳೂ ನೆರವೇರುತ್ತವೆ. ನಾನು ದಶರಥನ ಮಗನಾಗಿ ಮಾನವನಾಗಿ ಅವತರಿಸುತ್ತೇನೆ ಮತ್ತು ದುಷ್ಟ ರಾಕ್ಷಸರಾದ ರಾವಣ ಕುಂಭಕರ್ಣರನ್ನು ಸಂಹರಿಸುತ್ತೇನೆ. ಲೋಕಕಂಠಕರಾದ ಅವರಿಗೆ ಮನುಷ್ಯರಿಂದ ಮಾತ್ರ ಸಾವೆಂಬ ವರವಿದೆ. ಈ ಕಾರಣಕ್ಕಾಗಿ ನಾನು ಪುರುಷೋತ್ತಮನಾಗಿ ಮಾನವನಾಗಿ ಅವತಾರತಾಳಿ ರಾವಣಕುಂಭಕರ್ಣರನ್ನು ಸಂಹರಿಸಿ ಲೋಕಕ್ಕೆ ಬಂದಿರುವ ಕಂಟಕವನ್ನು ನಿವಾರಣೆ ಮಾಡುತ್ತೇನೆ. ಇನ್ನು ನೀವೆಲ್ಲರೂ ನಿಮ್ಮ ನಿಮ್ಮ ಸ್ಥಳಕ್ಕೆ ತೆರಳಿ ನಿಮ್ಮ ತಪವನ್ನು ಮುಂದುವರಿಸಿ ಎಂದು ಹೇಳಿ ಅಂತರ್ಧಾನನಾದನು.

ಅಷ್ಟರಲ್ಲಿ ಬ್ರಹ್ಮದೇವನು ಸಂತೋಷದಿಂದ, ವಿಷ್ಣುವಿಗೆ ಕೈ ಜೋಡಿಸಿ ಮನಸಾರ ಪ್ರಾರ್ಥಿಸುತ್ತ "ನನಗೆ ಒಂದು ಸಂದೇಹವಿದೆ. ತಂದೆ! ನೀನು ಶ್ರೀ ವೈಕುಂಠವನ್ನು ತೊರೆದು ಇಲ್ಲಿ ಲೀಲಾ ಮಾನುಷ ರೂಪದಲ್ಲಿ ಈ ವೆಂಕಟಾಚಲದಲ್ಲಿ ವಿಹರಿಸುತ್ತಿದ್ದೀಯ. ಕೆಲವರಿಗೆ ಮಾತ್ರ ನಿನ್ನ ದಿವ್ಯ ದರ್ಶನದ ವರವನ್ನು ದಯಪಾಲಿಸುತ್ತಿರುವೆ. ಮತ್ತು ಈ ಭೂಲೋಕದಲ್ಲಿ ಸಂಚರಿಸುತ್ತಿರುವ ನಿನ್ನನ್ನು ಈ ಎಲ್ಲಾ ಮನುಷ್ಯರು ನೋಡಲು ಅಶಕ್ತರಾಗಿದ್ದಾರೆ. ಇಲ್ಲವಾದಲ್ಲಿ ಭೂಲೋಕದಲ್ಲಿರುವ ಸಕಲ ಮಾನವರು ಸುಲಭಾತಿ ಸುಲಭವಾದ ರೀತಿಯಲ್ಲಿ ನಿನ್ನ ದರ್ಶನವನ್ನು ಪಡೆಯುವಂತೆ ಅನುಗ್ರಹಿಸಿ ಹಾಗೆಯೇ ಈ ಭೂಲೋಕದಲ್ಲಿ ಸುಖ-ಶಾಂತಿ ವರ್ಧಿಸುವಂತೆ ವರವನ್ನು ದಯಪಾಲಿಸು"ಎಂದು ಪ್ರಾರ್ಥಿಸಿದನು.

ತಕ್ಷಣವೇ ಶ್ರೀ ಹರಿಯು ಹೇಳಿದನು, "ಮಗನೇ, ನಾನು ಸಂಕಲ್ಪ ಮಾಡಿ, ನೀವು ಪ್ರಾರ್ಥಿಸಿದ ರೀತಿಯಲ್ಲಿ ನಾನು ಮಾನವರೆಲ್ಲರಿಗೂ ದರ್ಶನವನ್ನು ಕೊಡುವುದಕ್ಕೆ ಸ್ವಲ್ಪ ಸಮಯ ಬೇಕು. ಅಲ್ಲಿಯವರೆಗೆ ನಾನು ಈ ಕ್ರೀಡಾದ್ರಿಯಲ್ಲಿ, ಲೀಲಾ ಮಾನುಷ ರೂಪದಲ್ಲಿ ಸಂಚರಿಸುತ್ತ ಬೇಡಿ ಬಂದ ಭಕ್ತರಿಗೆ, ಮಹನೀಯರಿಗೆ ಮಾತ್ರ ನನ್ನ ದರ್ಶನಭಾಗ್ಯವನ್ನು ಕೊಡುತ್ತೇನೆ. ಆದ್ದರಿಂದ, ನಿಮ್ಮ ಇಷ್ಟಾರ್ಥವು ಈಡೇರಲು ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ನಂತರ ನಾನು ಸ್ವಯಂ ವ್ಯಕ್ತರೂಪದಲ್ಲಿ ಈ ದಿವ್ಯ ಕ್ಷೇತ್ರದಲ್ಲಿ ವಕ್ಷಸ್ಥಳದಲ್ಲಿ ಮಹಾಲಕ್ಷ್ಮಿ ಸಮೇತನಾಗಿ ಭಕ್ತರಿಗೆ ದಿವ್ಯದರ್ಶನವನ್ನು ಅನುಗ್ರಹಿಸಿ ಅವರ ಎಲ್ಲಾ ಇಷ್ಟಾರ್ಥಗಳನ್ನು ಪೂರೈಸುತ್ತೇನೆ. ಎಲ್ಲರನ್ನೂ ಸಂತೋಷ, ತೃಪ್ತಿಪಡಿಸುತ್ತೇನೆ. ಅದರಲ್ಲಿ ಯಾವುದೇ ಸಂದೇಹವಿಲ್ಲ" ಎಂದು ಬ್ರಹ್ಮ ದೇವರಿಗೆ ಹೇಳಿ ಮನಸಾರ ಆಶೀರ್ವದಿಸಿದರು.

ಶ್ರೀನಿವಾಸನು ತೋರಿದ ಅನಂತವಾದ ಕರುಣೆಗೆ ಬ್ರಹ್ಮದೇವನು ಅಪರಿಮಿತ ಆನಂದವನ್ನು ಹೊಂದಿ, "ಸ್ವಾಮಿ! ಶ್ರೀಹರಿಯೇ! ನೀವು ನಮ್ಮ ಇಷ್ಟಾರ್ಥಗಳನ್ನು ಪೂರೈಸಿದ್ದಕ್ಕಾಗಿ ನಮಗೆ ತುಂಬಾ ಸಂತೋಷವಾಗಿದೆ. ಈ ಶುಭ ಸಂದರ್ಭದಲ್ಲಿ ನಿನಗೆ

ನಾವೆಲ್ಲರೂ ರಥೋತ್ಸವವನ್ನು ಅತ್ಯಂತ ವೈಭವದಿಂದ ಆಯೋಜಿಸಲು ಉತ್ಸುಕರಾಗಿದ್ದೇವೆ. ಉತ್ಸವಗಳ ಜೊತೆಗೆ, ನಮ್ಮ ಉತ್ಸಾಹವನ್ನು ಪ್ರೋತ್ಸಾಹಿಸುತ್ತಾ, ಉತ್ಸವಗಳನ್ನು ನಡೆಸಲು ಒಪ್ಪಿಕೊಂಡು, ನಮಗೆ ಆನಂದವನ್ನು ಕರುಣಿಸು ಎಂದು ಪ್ರಾರ್ಥಿಸಿದ ನಂತರ ವಿಷ್ಣುವು ಒಪ್ಪಿಕೊಂಡರು.

## ಬ್ರಹ್ಮೋತ್ಸವಗಳು

ಬ್ರಹ್ಮದೇವನು, ಭಕ್ತವತ್ಸಲನಾದ ಶ್ರೀನಿವಾಸನು ಅವರ ಪ್ರಾರ್ಥನೆಯನ್ನು ಅಂಗೀಕರಿಸಿದ್ದರಿಂದ ಪರಮಾನಂದವನ್ನು ಅನುಭವಿಸುತ್ತ ದೇವ-ಶಿಲ್ಪಿ ವಿಶ್ವಕರ್ಮನನ್ನು ಸ್ಮರಿಸಿ ಕರೆಸಿದನು. ಶ್ರೀಭೂದೇವಿ ಸಮೇತನಾದ ಶ್ರೀನಿವಾಸನ ಮೆರವಣಿಗೆಗೆ ನವರತ್ನಖಚಿತವಾದ ಚಿನ್ನದ ದಿವ್ಯರಥವನ್ನು ಮಾಡಬೇಕು, ಹಾಗೆಯೇ ಮಹೋನ್ನತವಾದ ರಥೋತ್ಸವದ ಜೊತೆಗೆ ವಿವಿಧ ವಾಹನ ಸೇವೆಗಳನ್ನು ನಡೆಸಲು ವಿವಿಧ ಸ್ವರ್ಣ ವಾಹನಗಳನ್ನು ನಿರ್ಮಿಸಬೇಕು ಮತ್ತು ದೈವಿಕ ಕಟ್ಟಡಗಳೊಂದಿಗೆ ಮಹಾನಗರವನ್ನು ನಿರ್ಮಿಸಬೇಕು ಎಂದು ವಿನಂತಿಸಿದನು. ಈ ಮಹೋತ್ಸವಗಳನ್ನು ವೀಕ್ಷಿಸಲು ಬರುವ ದೇವತೆಗಳು, ದಾನವರು, ಯಕ್ಷರು ಮತ್ತು ಗಂಧರ್ವರು ವಾಸಿಸಲು ಬೇಕಾದ ಸೌಲಭ್ಯಗಳನ್ನು ಮಾಡಿದನು. ವಿಶ್ವಕರ್ಮನು ಎಲ್ಲರ ಆಶಯವನ್ನು ತಿಳಿದು ಬ್ರಹ್ಮನ ಆಜ್ಞೆಯನ್ನು, ಯಾರೂ ಊಹಿಸದ ರೀತಿಯಲ್ಲಿ ಮಹೋನ್ನತವಾಗಿ ನೆರವೇರಿಸಿದನು.

ಏತನ್ಮಧ್ಯೆ, ಶ್ರೀವಿಷ್ಣುವಿನ ಅಂಶಸಂಭೂತನಾದ ವೈಖಾನಸ ಮಹರ್ಷಿಗಳು, ಶ್ರೀಮಹಾ ವಿಷ್ಣುವು ಶ್ರೀವೈಕುಂಠದಿಂದ ಕನ್ಯಾ ಮಾಸದ ಶುಕ್ಲ ಪಕ್ಷದಲ್ಲಿ ಶ್ರವಣ ನಕ್ಷತ್ರದಲ್ಲಿ ಭೂಲೋಕಕ್ಕೆ ಅವತರಿಸಿ ಬಂದ ಶುಭಲಗ್ನಕ್ಕೆ ಸರಿಯಾಗಿ ಕನ್ಯಾ ಮಾಸದ ಶುಕ್ಲ ಪಕ್ಷದ ಶ್ರವಣ ನಕ್ಷತ್ರದಲ್ಲಿ ಮಂಗಲಪ್ರದವಾದ ಅವಬೃಥ ನಡೆಯುತ್ತದೆ ಎಂದು ನಿರ್ಧರಿಸಿದರು. ಅದಕ್ಕೆ ಮೊದಲು ಒಂಬತ್ತು ದಿನಗಳ ಕಾಲ ಧ್ವಜಾರೋಹಣ ಕಾರ್ಯಕ್ರಮವನ್ನು ಏರ್ಪಡಿಸಿ, ಆ ದಿನದಿಂದ ಒಂಭತ್ತು ದಿನಗಳ ಕಾಲ ಉತ್ಸವಗಳು ವೈಭವದಿಂದ ನಡೆಸಲು ವೈಖಾನಸ ಮುನಿಗಳು ಶುಭಮಹೂರ್ತವನ್ನು ನಿಶ್ಚಯ ಮಾಡಿದರು. ಸೇನಾಧಿಪತಿಯಾದ ವಿಶ್ವಕ್ಸೇನನು ತಾನೇ ಎಲ್ಲ ದಿಕ್ಕುಗಳಿಗೂ ತೆರಳಿ ಶ್ರೀನಿವಾಸನಿಗೆ ಆಚರಿಸುವ ಬ್ರಹ್ಮೋತ್ಸವಕ್ಕೆ ಎಲ್ಲರನ್ನೂ ಆಹ್ವಾನಿಸಿದನು.

ಸಪ್ತಗಿರಿಯೊಡೆಯನ ಬ್ರಹ್ಮೋತ್ಸವವು ಪ್ರತಿದಿನ ಸಂಭ್ರಮದಿಂದ ನಡೆಯುತ್ತದೆ. ಅದಕ್ಕೂ ಮುಂಚಿತವಾಗಿ ಪ್ರತಿ ಉತ್ಸವಕ್ಕೂ ಮೊದಲು, ಉತ್ಸವಕ್ಕೆ ಯಾವುದೇ ತೊಂದರೆ ಯಾಗದಂತೆ ಶ್ರೀಮನ್ನಾರಾಯಣನ ಪ್ರಧಾನ ಆಯುಧವಾದ,

ಸರ್ವರಕ್ಷಕನಾದ ಶ್ರೀಸುದರ್ಶನ ಭಗವಂತ ಎಲ್ಲ ವ್ಯವಸ್ಥೆ, ಮೇಲ್ವಿಚಾರಣೆಯನ್ನು ವಹಿಸಿಕೊಂಡನು.

ಬ್ರಹ್ಮೋತ್ಸವದ ಆರಂಭದ, ಮುನ್ನಾದಿನದಂದು ದಿವ್ಯಮಹೂರ್ತದಲ್ಲಿ ವಿಷ್ವಕ್ಸೇನರ ನೇತೃತ್ವದಲ್ಲಿ ಮೃತ್ತಿಕೆ ಸಂಗ್ರಹಣ, (ಮಣ್ಣು) ಹಾಗು ನವಧಾನ್ಯಗಳ ಅಂಕುರಾರ್ಪಣ ಅಂದರೆ ಮೊಳಕೆಯೊಡೆಯುವ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.

ಎರಡನೆಯದಿನ ವೈಖಾನಸ ಮಹರ್ಷಿಗಳ ನೇತೃತ್ವದಲ್ಲಿ ಪುಣ್ಯಾಹ, ಶಾಂತಿಹೋಮ, ಗರುಡಹೋಮ, ಕಂಕಣಧಾರಣೆ, ದತ್ತಂ (ಇಚ್ಛೆ) ಮೊದಲಾದ ಸಕಲ ವೈದಿಕ ವಿಧಿವಿಧಾನಗಳು ನೆರವೇರಿದ ಬಳಿಕ ಶ್ರೀದೇವಿ ಭೂದೇವಿ ಸಮೇತ ಶ್ರೀನಿವಾಸನಿಗೆ ನೂತನ ವಸ್ತ್ರ, ವಿಶೇಷ ಆಭರಣಗಳಿಂದ ಅಲಂಕಾರ ಮಾಡಲಾಯಿತು. ವಜ್ರ ವೈಢೂರ್ಯ, ಪಚ್ಚೆ ಮಾಣಿಕ್ಯ, ಮುತ್ತುರತ್ನ ಖಚಿತವಾದ ಮಾಲೆಗಳು. ಹೂವಿನ ಮಾಲೆಗಳಿಂದ ಅಲಂಕರಿಸಲಾಯಿತು. ಬ್ರಹ್ಮದೇವನ ಸಾರಥ್ಯದಲ್ಲಿ ಶ್ರೀದೇವಿ, ಭೂದೇವಿ ಸಮೇತ ಶ್ರೀನಿವಾಸನನ್ನು ಚಿನ್ನದ ಪಲ್ಲಕ್ಕಿಯಲ್ಲಿ ದೇವಾಲಯದ ಸುತ್ತಲೂ ಉತ್ಸವವನ್ನು ಮಾಡುತ್ತಿದ್ದರೆ, ಅದನ್ನು ಆನಂದದಿಂದ ವೀಕ್ಷಿಸುತ್ತಿದ್ದ ದೇವ, ದಾನವ, ಯಕ್ಷ, ಕಿನ್ನರ, ಗಂಧರ್ವ, ಮಹಾಮಹಿಮರು ಜಯಕಾರ ಮಾಡಿದರು.

ಸುಮುಹೂರ್ತದಲ್ಲಿ ಬ್ರಹ್ಮದೇವನು ಚಿನ್ನದ ಧ್ವಜಸ್ತಂಭದ ಮೇಲೆ ವೈಭವದಿಂದ ಗರುಡ ಧ್ವಜವನ್ನು (ಏರಿಸಿದನು) ಆರೋಹಣ ಮಾಡಿ, ಸಕಲ ದಿಕ್ಕಿನಲ್ಲಿರುವ, ತ್ರಿಲೋಕದ ಜನರನ್ನು ಆಹ್ವಾನಿಸಿ ಬ್ರಹ್ಮೋತ್ಸವವನ್ನು ಪ್ರಾರಂಭಿಸಿದನು. ಅಲ್ಲಿಂದ ಆರಂಭವಾಗಿ ಒಂಬತ್ತು ದಿನಗಳ ಕಾಲ ದೊಡ್ಡಶೇಷವಾಹನ, ಚಿಕ್ಕಶೇಷವಾಹನ, ಹಂಸವಾಹನ, ಸಿಂಹವಾಹನ, ಕಲ್ಪವೃಕ್ಷ, ಮೋಹಿನಿ ಅವತಾರ, ಗರುಡವಾಹನ, ಹನುಮದ್ವಾಹನ, ಗಜವಾಹನ, ಸೂರ್ಯಪ್ರಭ ವಾಹನ, ಚಂದಪ್ರಭ ವಾಹನರಥೋತ್ಸವವನ್ನು ಬ್ರಹ್ಮದೇವನು ಅತ್ಯಂತ ವೈಭವಯುಕ್ತವಾಗಿ ನೆರವೇರಿಸಿದನು. ಕೊನೆಯದಿನ ಭೂದೇವಿ ಸಮೇತನಾದ ಶ್ರೀಶ್ರೀನಿವಾಸನಿಗೆ ಮಂಗಳ ಸ್ನಾನವಾದನಂತರ, ಸ್ವಾಮಿಯ ಸುಪುತ್ರನಾದ ಶ್ರೀಸುದರ್ಶನನಿಗೆ ಶ್ರವಣ ನಕ್ಷತ್ರದ ದಿನ ಸುಮುಹೂರ್ತದಲ್ಲಿ ಸ್ವಾಮಿಪುಷ್ಕರಣಿಯಲ್ಲಿ ಮಂಗಳಸ್ನಾನ "ಅವಬೃಥ" ಕಾರ್ಯಕ್ರಮ ನೆರವೇರಿಸಲಾಯಿತು. ಅಂದು ಸುದರ್ಶನ ಸಮೇತರಾಗಿ ಭಕ್ತರೆಲ್ಲರು ಸ್ವಾಮಿಪುಷ್ಕರಣಿಯಲ್ಲಿ ಪುಣ್ಯಸ್ನಾನ ಮಾಡಿದರು. ಈ ಚಕ್ರಸ್ನಾನ ಕಾರ್ಯಕ್ರಮದೊಂದಿಗೆ ಬ್ರಹ್ಮೋತ್ಸವವು ಅದ್ದೂರಿಯಾಗಿ ಮುಕ್ತಾಯವಾಯಿತು.

ಬ್ರಹ್ಮದೇವರು ಆಯೋಜಿಸಿದ ಈ ಉತ್ಸವಗಳು "ಬ್ರಹ್ಮೋತ್ಸವ" ಎಂದು ಜಗತ್ಪ್ರಸಿದ್ಧವಾಗಿದೆ. ಈ ಉತ್ಸವದಲ್ಲಿ ಭಾಗವಹಿಸುವವರ ಎಲ್ಲ ಇಷ್ಟಾರ್ಥಗಳು ಖಂಡಿತವಾಗಿ ನೆರವೇರುತ್ತದೆ. ಹಾಗೆಯೇ, ಶ್ರವಣ ನಕ್ಷತ್ರದದಿನ ಸುದರ್ಶನ ಸಮೇತವಾದ ಸ್ವಾಮಿಪುಷ್ಕರಣಿಯಲ್ಲಿ ಸ್ನಾನ ಮಾಡುವವರಿಗೆ, ಅವರ ಎಲ್ಲ ಪಾಪಗಳು ನಾಶವಾಗುತ್ತದೆ. ಎಲ್ಲ ಶುಭಫಲವು ಉಂಟಾಗುತ್ತದೆ ಎಂದು ವಿಷ್ಣುವು ಹೇಳುತ್ತ ಇನ್ನು ಮುಂದೆ ಈ ಬ್ರಹ್ಮೋತ್ಸವವು ಯಾವ ಅಡ್ಡಿಯೂ ಇಲ್ಲದೆ, ನಿರಾತಂಕವಾಗಿ ನಡೆಯುತ್ತದೆ ಎಂದು ಹೇಳಿ ಅಲ್ಲಿ ಸೇರಿದ್ದವರೆಲ್ಲರನ್ನು ಅವರವರ ಸ್ಥಾನಗಳಿಗೆ ತೆರಳುವಂತೆ ಹೇಳಿದನು.

ಬ್ರಹ್ಮದೇವರು ಬಹಳ ಸಂತೋಷಪಟ್ಟು ಶ್ರೀನಿವಾಸನಿಗೆ, "ಸ್ವಾಮಿ! ಜಗತ್ಕಲ್ಯಾಣಕ್ಕೆ ನೀವು ಎಲ್ಲರಿಗೂ ದರ್ಶನ ನೀಡಿದರೆ ಒಳ್ಳೆಯದು. ಅದಕ್ಕಾಗಿ ನೀವು ಇಲ್ಲಿಯೇ ನೆಲೆಸಿ ಎಲ್ಲರಿಗೂ ದರ್ಶನವನ್ನು ಅನುಗ್ರಹಿಸಿ" ಎಂದು ಪ್ರಾರ್ಥಿಸಿದನು.

ಭಗವಾನ್ ವಿಷ್ಣುವು "ನಿನ್ನ ಆಸೆ ಖಂಡಿತ ಈಡೇರುತ್ತದೆ. ಆದರೆ ಅದಕ್ಕಾಗಿ ಸ್ವಲ್ಪ ಸಮಯ ಕಾಯಬೇಕು" ಎಂದನು. ಎಲ್ಲರೂ ನೋಡುತ್ತಿರುವಾಗಲೇ ಶ್ರೀನಿವಾಸನು ತನ್ನ ಸ್ವರ್ಣ ವಿಮಾನದೊಂದಿಗೆ ಅದೃಶ್ಯನಾದನು. ಶ್ರೀನಿವಾಸನ ಅದೃಶ್ಯವಾದ ದಿಕ್ಕಿನತ್ತ ಆಶ್ಚರ್ಯದಿಂದ ನೋಡುತ್ತ ಆ ಸ್ವಾಮಿ ಲೀಲೆಗಳು ಅಗಮ್ಯಗೋಚರ! ಅಲ್ಲವೇ? ಎಂದು ಮನಸ್ಸಿನಲ್ಲಿಯೇ ಹೇಳಿಕೊಳ್ಳುತ್ತ ಬ್ರಹ್ಮಾದಿದೇವತೆಗಳು ಅವರವರ ಸ್ಥಳಕ್ಕೆ ತೆರಳಿದರು ಎಂದು ಸೂತಮಹರ್ಷಿಗಳು, ವಿಸ್ಮಯದಿಂದ ಆಸಕ್ತಿಯಿಂದ, ಮೌನವಾಗಿ ಕೇಳುತ್ತಿದ್ದ ಶೌನಕಾದಿಗಳಿಗೆ ಶ್ರೀನಿವಾಸನ ದಿವ್ಯ ಕಥೆಯನ್ನು ಹೇಳುತ್ತಾ ಸಂಭ್ರಮಿಸಿದರು.

"ಸ್ವಾಮಿ! ಸೂತಮಹರ್ಷಿ! ಶ್ರೀ ವೆಂಕಟೇಶನ ದಿವ್ಯಕಥೆ ಸರ್ವಪಾಪಹರ ! ಪರಮ ಪವಿತ್ರ! ಆ ಮಹಿಮಾನ್ವಿತವಾದ ಕಥೆಯನ್ನು ಮುಂದುವರಿಸಿ ಸಕಲ ಜನರೂ ಕೃತಾರ್ಥರಾಗಿ ತಮ್ಮ ಕೃತಜ್ಞತೆ ಸಲ್ಲಿಸುವಂತೆ ಮುನಿಗಳೆಲ್ಲರೂ ವಿನಂತಿಸಿಕೊಂಡರು.

ಸೂತಾಮಹರ್ಷಿಗಳು ಶೌನಕಾದಿಗಳ ಪ್ರಾರ್ಥನೆ ತಮಗೆ ಒಪ್ಪಿಗೆ ಎನ್ನುವಂತೆ ತಲೆದೂಗಿ ಮುಂದುವರಿಸಿದರು.

ಶ್ರೀಮಹಾವಿಷ್ಣು, ಶ್ರೀದೇವಿ, ಭೂದೇವಿ ಸಮೇತನಾಗಿ ವೆಂಕಟಾಚಲ ಪರ್ವತದ ತಪ್ಪಲಿನಲ್ಲಿ ಲೀಲಾಮಾನುಷ ರೂಪಧಾರಿಯಾಗಿ ವಿಹರಿಸುತ್ತಿದ್ದನ್ನು. ಹೀಗೆ ಪರ್ವತದಲ್ಲಿ ಸಂಚರಿಸುತ್ತ ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುತ್ತ ಎಲ್ಲ ಕ್ಷೇತ್ರಗಳನ್ನು ನೋಡುತ್ತ, ಅಲ್ಲಿರುವ ಪವಿತ್ರ ತೀರ್ಥಗಳಲ್ಲಿ ಜಲಕ್ರೀಡೆ ಆಡುತ್ತಿದ್ದರು. ಹಾಗೆಯೇ ಅಲ್ಲಿ

ನೆಲಸಿದ್ದಂತಹ ಮಾನವರಿಗೆ, ತಪಸ್ಸು ಮಾಡುತ್ತಿದ್ದಂತಹ ಋಷಿ ಮುನಿಗಳಿಗೆ ಸ್ವರ್ಣಮಯವಾದ "ಆನಂದನಿಲಯ" ಎನ್ನುವ ದಿವ್ಯವಿಮಾನದಲ್ಲಿ ನೆಲಸಿ ದರ್ಶನವನ್ನು ಕೊಡುತ್ತ ಕೋರಿಕೆಗಳನ್ನು ಈಡೇರಿಸುತ್ತಿದ್ದಾನೆ. ಯಾರು ತನ್ನ ದರ್ಶನವನ್ನು ಮಾಡಿ ಪ್ರಾರ್ಥನೆ ಮಾಡುತ್ತಾರೋ ಅವರ ಕೋರಿಕೆಗಳನ್ನು ನೆರವೇರಿಸುತ್ತಿದ್ದಾನೆ. ಆ ಸ್ವಾಮಿಯು ಪ್ರಸನ್ನನಾದಾಗ ಮಾತ್ರ ಪ್ರತ್ಯಕ್ಷನಾಗಿ ಭಕ್ತರಿಗೆ ದರ್ಶನಕೊಟ್ಟು, ಬೇಡಿದ ಭಕ್ತರಿಗೆ ಬಂಗಾರವಾಗಿ, ಅರ್ಥ ಮಾಡಿಕೊಂಡವರಿಗೆ ಅಂಗೈಯ್ಯಲ್ಲಿ ಮಾಣಿಕ್ಯವಾಗಿ, ಅಳೆದವರಿಗೆ ಕೋಟಿ ವರಾಲರಾಯನಾಗಿ ಉಳಿದ ಸಮಯದಲ್ಲಿ ಅದೃಶ್ಯನಾಗಿ ಲೀಲಾಮಾನುಷ ರೂಪನಾಗಿ ಆ ವೆಂಕಟಾಚಲ ಕ್ಷೇತ್ರದಲ್ಲಿ ವಿಹರಿಸುತ್ತಿದ್ದಾನೆ ಆ ಸ್ವಾಮಿ.

ಶ್ರೀವೈಕುಂಠದಲ್ಲಿ ಶೇಷಶಾಯಿಯಾದ ಶ್ರೀಮನ್ನಾರಾಯಣ ಶ್ರೀದೇವಿ ಭೂದೇವಿ ಸಮೇತನಾಗಿ ಕ್ಷೀರಸಮುದ್ರದಲ್ಲಿ ಸೇವೆಮಾಡಿಸಿಕೊಳ್ಳುವ ಶ್ರೀಹರಿಗೆ, ಭೂಲೋಕದಲ್ಲಿ ಈ ವೆಂಕಟಾಚಲ ಕ್ಷೇತ್ರರಾಜ ಸ್ವಾಮಿಯ ಅತ್ಯಂತ ಅಚ್ಚುಮೆಚ್ಚಿನ ದೈವಿಕ ಸ್ಥಳವಾಗಿ ಜನಪ್ರಿಯವಾಗಿರುವ ಈ ಸ್ಥಳವನ್ನು ಭೂವೈಕುಂಠ ಎಂದು ಕರೆಯಲಾಗುತ್ತಿದೆ. ಅಂತಹ ದಿವ್ಯ ಸ್ಥಳವಾಗಿರುವ ವೆಂಕಟಾಚಲವನ್ನು ಆಯಾ ಕಾಲಗಳಲ್ಲಿ ಅನೇಕ ಹೆಸರುಗಳಿಂದ ಕರೆಯಲಾಗುತ್ತಿತ್ತು, ಮುಖ್ಯವಾಗಿ ಕೃತಯುಗ, ತ್ರೇತಾಯುಗ ಮತ್ತು ದ್ವಾಪರಯುಗದಲ್ಲಿ, ಸಾಕ್ಷಾತ್ ಬಂಗಾರ ಪರ್ವತವಾಗಿ ಅನಂತವೂ, ರತ್ನ ಮಣಿಮಯವಾದ ಮತ್ತು ವೈಢೂರ್ಯದ ಶಿಖರಗಳನ್ನು ಹೊಂದಿದ್ದು, ಕನಕಶಿಖರದಲ್ಲಿ ಭಕ್ತರಿಗೆ ದರ್ಶನವನ್ನು ಕೊಡುತ್ತ ದಿವ್ಯಾನಂದವನ್ನು ನೀಡುತ್ತ, ದರ್ಶನ ಮಾತ್ರದಿಂದಲೇ ಶುಭಫಲವನ್ನು ಕೊಟ್ಟು ಅವರ ಜೀವನವನ್ನು ಸಾರ್ಥಕಗೊಳಿಸಿದ್ದಾನೆ.

ಶ್ರೀಮನ್ನಾರಾಯಣನು, ಹಿರಣ್ಯಾಕ್ಷನನ್ನು ಸಂಹರಿಸಲು ಶ್ವೇತರೂಪದಲ್ಲಿ ಆದಿವರಾಹ ಸ್ವಾಮಿಯಾಗಿ ಅವತರಿಸಿ ಲೀಲಾಮನುಷ ರೂಪದಲ್ಲಿ ಈ ವೆಂಕಟಾಚಲದಲ್ಲಿ ವಿಹರಿಸುತ್ತ, ಇನ್ನೊಂದೆಡೆ ಸಾಕ್ಷಾತ್ ಶ್ರೀ ಮಹಾವೈಕುಂಠದಲ್ಲಿ ಶೇಷಶಯನನಾಗಿ ವಿರಾಜಮಾನನಾಗಿ ತುಂಬುರ ನಾರದಾದಿ ಮಹಾಭಕ್ತರಿಂದ ನಿರಂತರವಾಗಿ ಸೇವೆ ಮಾಡಿಸಿಕೊಳ್ಳುತ್ತಿದ್ದಾನೆ.

## ಹುಣಸೆ ಮರದ ನೆರಳಿನಲ್ಲಿ ಹುತ್ತ

ಶ್ರೀ ಮಹಾವಿಷ್ಣುವಿನ ಮಹಿಮಾನ್ವಿತವಾದ, ಅಮೋಘ, ಅನಂತವಾದ ಲೀಲೆಗಳನ್ನು ವೀಕ್ಷಿಸುತ್ತಿದ್ದ ನಾರದ ಮಹರ್ಷಿ ಒಮ್ಮೆ ಸತ್ಯಲೋಕಕ್ಕೆ ಹೋಗಿ ತನ್ನ ತಂದೆಯಾದ ಬ್ರಹ್ಮದೇವನನ್ನು ಕಂಡು ಪ್ರಾರ್ಥಿಸಿದನು "ತಂದೆಯೇ! ನಾವು

ಶ್ರೀಮಹಾವಿಷ್ಣುವನ್ನು ವೆಂಕಟಾಚಲ ಕ್ಷೇತ್ರದಲ್ಲಿ ಪ್ರತ್ಯಕ್ಷವಾಗಿ ದರ್ಶನ ಮಾಡಿದ ಭಕ್ತರನ್ನು ಅನುಗ್ರಹಿಸುವಂತೆ ಪ್ರಾರ್ಥಿಸಿ ಬಹಳ ಕಾಲವಾಗಿದೆ ಅಲ್ಲವೇ! ಮತ್ತೆ ಇಷ್ಟು ಕಾಲವಾದರೂ ಈ ನಿಮ್ಮ ಬೇಡಿಕೆಯನ್ನು ಆ ಸ್ವಾಮಿ ನೆರವೇರಿಸಿದಂತೆ ಕಾಣಲಿಲ್ಲ ಅಲ್ಲವೇ? ಹಾಗಾದರೆ ಈ ನಿಮ್ಮ ಕೋರಿಕೆ ನೆರವೇರುವುದು ಯಾವಾಗ? ಈ ಭೂಲೋಕದ ಮನುಷ್ಯರು ಯಾವಾಗ ಶ್ರೀಮನ್ನಾರಾಯಣನ ಪ್ರತ್ಯಕ್ಷ ದರ್ಶನವನ್ನು ಪಡೆಯುತ್ತಾರೆ. ಅವರು ಆ ದಿವ್ಯಕ್ಷಣಕ್ಕಾಗಿ ಇನ್ನೂ ಎಷ್ಟು ದಿನ ಕಾಯಬೇಕು! ಎಂಬುದಾಗಿ ಪ್ರಶ್ನಿಸಿ ತಮ್ಮ ಸಂದೇಹವನ್ನು ವ್ಯಕ್ತಪಡಿಸಿದರು.

ಕೂಡಲೇ ಬ್ರಹ್ಮದೇವರು "ಹೌದು ನಾರದ! ನೀನು ಸರಿಯಾದ ಸಮಯದಲ್ಲಿ ನನಗೆ ನೆನಪು ಮಾಡಿರುವೆ. ತುಂಬಾ ಒಳ್ಳೆಯದು. ನಿಜವಾಗಿ ಶ್ರೀಮನ್ನಾರಾಯಣನು ಈ ಭೂಲೋಕದಲ್ಲಿ, ಮುಖ್ಯವಾಗಿ ಕಲಿಯುಗದ ಮಾನವರಿಗಾಗಿ ಪ್ರತ್ಯಕ್ಷವಾಗಿ ದರ್ಶನವನ್ನು ಕೊಡುತ್ತ, ಕೋರಿದವರಿಗೆ "ವರಾಲರಾಯ"ನಾಗಿ "ಕಲೌ ವೆಂಕಟ ನಾಯಕ" ಎಂಬ ಕೀರ್ತಿಯನ್ನು ಪಡೆದು ವರವನ್ನು ಕೊಡುತ್ತೇನೆ ಎಂದು ದೇವತೆಗಳಿಗೆ ವರವನ್ನು ನೀಡಿ ಬಹಳ ಕಾಲವೇ ಕಳೆದಿದೆ. ನಾನು ಆ ವಿಷಯದ ಬಗ್ಗೆಯೇ ಅನೇಕ ರೀತಿಯಲ್ಲಿ ಯೋಚಿಸುತ್ತಿದ್ದೆ. ಅದೇ ಸಮಯಕ್ಕೆ ಸರಿಯಾಗಿ ನೀನು ನನ್ನ ಬಳಿಗೆ ಬಂದು ಅದರ ಬಗ್ಗೆ ನೆನಪು ಮಾಡಿದೀಯ, ಅಲ್ಲದೆ ಬಿಡದೆ ಪ್ರಯತ್ನ ಮಾಡಲು ಪ್ರೇರೇಪಿಸಿದ್ದೀಯಾ. ಈ ಮಹತ್ಕಾರ್ಯವನ್ನು ಸಾಧಿಸಲು, ನನಗೆ ನಿನ್ನ ಸಹಾಯ ಬೇಕು, ನಾರದ! ಅದಕ್ಕೆ ನೀನು ಸದಾ ಸಿದ್ಧನಿರುವೆ ಅಲ್ಲವೇ ನಾರದ!" ಎಂದು ಪ್ರಶ್ನೆಗಳ ಮಳೆಸುರಿಸಿ ನಿರಾಳವಾಗಿ ಉಸಿರು ಬಿಡುವವನಂತೆ ನಾರದನನ್ನು ನೋಡಿದನು. ಆಗ ನಾರದ ಮಹರ್ಷಿಯು "ನಾರಾಯಣ! ನಾರಾಯಣ!! ಎಂತಹ ಮಾತು! ಲೋಕಕಲ್ಯಾಣಕ್ಕಾಗಿಯೇ ನಾನು ಕಂಕಣ ಕಟ್ಟಿಕೊಂಡು ಹರಿನಾಮಸ್ಮರಣೆ ಮಾಡುತ್ತಾ ತ್ರಿಲೋಕಗಳಲ್ಲಿ ಸಂಚರಿಸುತ್ತಿದ್ದೇನೆ ಅಲ್ಲವೇ ತಂದೆ! ಜಗತ್ಕಲ್ಯಾಣಮೂರ್ತಿಯಾಗಿರುವ ಶ್ರೀನಿವಾಸನು ಭೂಮಿಯಲ್ಲಿ ಪ್ರತ್ಯಕ್ಷನಾಗಿ, ಪ್ರತ್ಯಕ್ಷನಾಗುವಂತೆ ಕೋರುವ ಭಕ್ತರೆಲ್ಲರಿಗೂ ಸುಲಭವಾಗಿ ದರ್ಶನ ದೊರಕುವಂತೆ ನಾನೇನು ಮಾಡಬೇಕು, ನಾನು ಯಾವರೀತಿ ಪಾತ್ರವನ್ನು ನಿರ್ವಹಿಸಬೇಕು ಹೇಳು ತಂದೆಯೇ! ಅದು ನನ್ನ ಮಹದ್ಭಾಗ್ಯ ಎಂದು ಭಾವಿಸುತ್ತೇನೆ. ನಾನು ಅದನ್ನು ಆಶೀರ್ವಾದ ಎಂದು ಪರಿಗಣಿಸುತ್ತೇನೆ. ಕೂಡಲೇ ಅಪ್ಪಣೆ ಕೊಡು ತಂದೆಯೇ!" ಎಂದು ಪ್ರಾರ್ಥಿಸಿದನು.

ತಕ್ಷಣವೇ ಬ್ರಹ್ಮದೇವನು ನಾರದನಿಗೆ ಹೇಳಿದನು, "ನಾನು ಶೇಷಾದ್ರಿ ಪರ್ವತದ ತಪ್ಪಲಿನಲ್ಲಿರುವ ಸ್ವಾಮಿ ಪುಷ್ಕರಿಣಿಯ ದಡದಲ್ಲಿರುವ ದಿವ್ಯ ಸ್ಥಳದಲ್ಲಿ ತ್ರೇತಾಯುಗದ

ದಶರಥ ಮಹಾರಾಜನ ಅಂಶದಿಂದ, ಹಾಗು ದ್ವಾಪರಯುಗದ ವಸುದೇವನ ಅಂಶವನ್ನು ಒಳಗೊಂಡ ಹುಣಿಸೆಗಿಡವನ್ನು ಸೃಷ್ಟಿಸುತ್ತೇನೆ. ಆ ಗಿಡವು ದೊಡ್ಡ ಮರವಾಗಿ ಬೆಳೆದು ಹಲವಾರು ರೆಂಬೆಕೊಂಬೆಗಳಿಂದ ಅರಳಿ ಆಕರ್ಷಕವಾದ ಮಹಾವೃಕ್ಷವಾಗಿ ಬೆಳೆಯುತ್ತದೆ. ಆ ವೃಕ್ಷದ ಕೆಳಗೆ ಶ್ರೀರಾಮಚಂದ್ರನ ತಾಯಿಯಾದ ಕೌಸಲ್ಯಾದೇವಿ ಅಂಶದಿಂದ, ಜೊತೆಗೆ ಶ್ರೀಕೃಷ್ಣನ ಮಾತೆ, ದೇವಕಿದೇವಿ ಅಂಶದಿಂದ ವಿಶಾಲವಾದ ಒಂದು ಹುತ್ತವನ್ನು ಸೃಷ್ಟಿ ಮಾಡುತ್ತೇನೆ. ಓ ನಾರದಾ ಮಹರ್ಷಿಯೇ! ನೀನು ಚೆನ್ನಾಗಿ ಆಲೋಚನೆ ಮಾಡಿ, ಶ್ರೀವೈಕುಂಠದಲ್ಲಿ ವಿರಾಜಮಾನನಾಗಿರುವ ಶ್ರೀಮನ್ನಾರಾಯಣನು, ವೆಂಕಟಾದ್ರಿಯಲ್ಲಿ ಸ್ವಾಮಿಪುಷ್ಕರಣಿಯ ಹತ್ತಿರ ಇರುವ ಹುಣಿಸೇಮರದ ಕೆಳಗೆ ಸೃಷ್ಟಿಯಾಗಿರುವ ಹುತ್ತವನ್ನು ಸೇರುವಂತೆ ಪ್ರಯತ್ನಮಾಡು. ನೀನು, ಯಾವ ಕಾರಣಕ್ಕೂ ತಡಮಾಡದೆ ಈ ಕಾರ್ಯವನ್ನು ಆದಷ್ಟು ಬೇಗ ನಿರ್ವಹಿಸು. ಹಾಗೆ ಮಾಡಿದರೆ ಮಾತ್ರ ನಮ್ಮ ಕೋರಿಕೆ ನೆರವೇರುತ್ತದೆ. ಹಾಗೆಯೇ ಭೂಲೋಕವಾಸಿಗಳಾದ ಮಾನವರಿಗೆ ಸಕಲಭಾಗ್ಯವು ಉಂಟಾಗುತ್ತದೆ. ಅವರಿಗೆ ಸ್ವಾಮಿಯನ್ನು ಪ್ರತ್ಯಕ್ಷವಾಗಿ ದಿವ್ಯದರ್ಶನ ಪಡೆಯುವ ಶುಭಸಮಯ ಆದಷ್ಟುಬೇಗನೆ ಬರುತ್ತದೆ." ಎಂದು ಬ್ರಹ್ಮದೇವನು ಸ್ವಾಮಿಪುಷ್ಕರಣಿ ತೀರದಲ್ಲಿ ಒಂದು ಹುಣಿಸೇಸಸಿಯನ್ನು ಅದರ ಕೆಳಗೆ ಒಂದು ಹುತ್ತವನ್ನು ಸೃಷ್ಟಿಸಿದನು.

ಬ್ರಹ್ಮದೇವನು ಸೃಷ್ಟಿಮಾಡಿದ ಆ ದಿವ್ಯವೃಕ್ಷವನ್ನು, ಆ ಮರದ ಕೆಳಗೆ ಉದ್ಭವಿಸಿದ ವಲ್ಮೀಕವನ್ನು ಸಂಭ್ರಮ, ಆಶ್ಚರ್ಯದಿಂದ ಕಂಡು ಅದಕ್ಕೆ ಅತ್ಯಂತ ಭಕ್ತಿಯಿಂದ ನಮಸ್ಕರಿಸಿದನು. ನಂತರ ಬ್ರಹ್ಮದೇವನನ್ನು ಕುರಿತು "ಚರಾಚರ ಸೃಷ್ಟಿಗೆ ಕಾರಣನಾದ ತಂದೆಯೇ! ನೀವು ಸೃಷ್ಟಿಸಿದ ಈ ವೃಕ್ಷರಾಜ, ಅದರ ನೆರಳಿನಲ್ಲಿ ವಲ್ಮೀಕ ಅದ್ಭುತವಾದ ತೇಜಸ್ಸಿನಿಂದ ಹೊಳೆಯುತ್ತಿದೆ, ಇದು ತುಂಬಾ ಅದ್ಭುತವಾಗಿದೆ! ಆದರೆ ಜಗತ್ಕಲ್ಯಾಣಕ್ಕಾಗಿ ಶ್ರೀಮಹಾವಿಷ್ಣುವನ್ನು ಭೂಲೋಕಕ್ಕೆ ಬರಮಾಡಿಕೊಂಡು ಈ ವಲ್ಮೀಕದೊಳಗೆ ಪ್ರವೇಶಮಾಡುವಂತೆ ಮಾಡಬೇಕು ಅಲ್ಲವೇ? ಅದು ನನ್ನಿಂದ ಆಗುವ ಕಾರ್ಯವೇ? ಸಾಧ್ಯವೇ? ಅದೇನೇ ಇರಲಿ, ದ್ವಾಪರ ಯುಗ ಮುಗಿಯುತ್ತಿದೆ! ಭೂಲೋಕದಲ್ಲಿ ಎಲ್ಲಿ ನೋಡಿದರೂ ಪಾಪವು ಬೆಳೆಯುತ್ತಿದೆ. ಅವತಾರಪುರುಷನಾದ ಸ್ವಾಮಿ, ತನ್ನ ದಿವ್ಯಲೀಲೆಯನ್ನು ತೋರುತ್ತ, ದುಷ್ಟರನ್ನು ಶಿಕ್ಷಿಸಲು ಶಿಷ್ಟರನ್ನು ರಕ್ಷಿಸಲು ಕಲಿಯುಗದಲ್ಲಿ ಅದಕ್ಕಾಗಿಯೇ ಸಾಕ್ಷಾತ್ ಪರಂಧಾಮನು ಭುವಿಯಲ್ಲಿ ಅವನಿಗೆ ಅವನೇ ಅವತರಿಸಲು ಸಂಕಲ್ಪ ಮಾಡಬೇಕು. ಅವನಲ್ಲದೆ ಇದು ಇತರರಿಗೆ ಸಾಧ್ಯವಿಲ್ಲ, ಆದರೆ ನಾವು ಅದನ್ನು ಬೆಂಬಲಿಸಬೇಕು. ಆದರೂ ನಿನ್ನ ಆಣತಿಯಂತೆ ಖಂಡಿತವಾಗಿ ಪ್ರಯತ್ನಿಸುತ್ತೇನೆ ಎಂದು ನಾರದನು ಬ್ರಹ್ಮದೇವನಿಗೆ ನಮಸ್ಕರಿಸಿ ಹೊರಟನು.

ಶ್ರೀವೈಕುಂಠವಾಸನು ಲೋಕಕಲ್ಯಾಣಕ್ಕಾಗಿ ಭೂಲೋಕದಲ್ಲಿ ಯಾವಾಗ ಅವತರಿಸುವನೋ, ಆಗ ತಾನು ನಾರಾಯಣನಿಗೆ ಯಾವಾಗ ಯಾವ ಯಾವ ರೀತಿಯಲ್ಲಿ ಸಹಾಯ ಮಾಡಬೇಕೆಂದು ಯೋಚಿಸುತ್ತ, ನಾರದನು ಅದಕ್ಕಾಗಿ ಮಾರ್ಗವನ್ನು ಹುಡುಕುತ್ತ ನಾರಾಯಣ! ನಾರಾಯಣ! ಎಂದು ಹರಿನಾಮ ಸ್ಮರಣೆ ಮಾಡುತ್ತಾ ಲೋಕಸಂಚಾರ ಮಾಡುತ್ತಿದ್ದನು. ಹೀಗೆ ಬಹಳ ಸಮಯವಾಯಿತು.

## "ಯಾಗ" ಯಾರಿಗಾಗಿ

ಕೊನೆಗೆ ದ್ವಾಪರಯುಗವು ಪೂರ್ಣವಾಗುವ ಸಮಯವೂ ಬಂತು, ದ್ವಾಪರ ಯುಗದ ಕೊನೆಯ ದಿನಗಳಲ್ಲಿ ಅಲ್ಲಿ ಇಲ್ಲಿ ಅಲ್ಪಸ್ವಲ್ಪ ಉಳಿದಿದ್ದ ಧರ್ಮವು ನಿಧಾನವಾಗಿ ನಶಿಸುತ್ತಾ ಕೊನೆಗೆ ಮರೆಯಾಗುತ್ತಿದೆ. ಎಲ್ಲಿ ನೋಡಿದರೂ ದುಷ್ಟತನ, ದುರುದ್ದೇಶ, ಅಶಾಂತಿ, ನಿರ್ಲಿಪ್ತತೆ. ಅಧರ್ಮವು ತಾಂಡವವಾಡುತ್ತಿರುವ ದಿನಗಳು. ಇದಲ್ಲದೆ ಕಾಮ, ಮೋಹ, ಪ್ರಣಯ ಲೋಕದಾದ್ಯಂತ ಪಸರಿಸಿತು. ಧನಕನಕಕ್ಕೆ ಪ್ರಾಧಾನ್ಯತೆ. ಮಾಂಸ ಮದ್ಯ ಸೇವನೆಗೆ ಎಲ್ಲೆ ಇಲ್ಲದಂತಾಗಿ ಹಿಂಸಾಚಾರ ಪ್ರಾರಂಭವಾಯಿತು. ದುರ್ಭರ ಪರಿಸ್ಥಿತಿಯಲ್ಲಿ ಬದುಕುವ ದಿನವಾಯಿತು. ಪ್ರಜೆಗಳು ಭಗವಂತನ ಅನುಗ್ರಹಕ್ಕಾಗಿ ಕಾತರಿಸಿ ಕಾಯುತ್ತಿದ್ದರು.

ಅಂತಹ ಸಮಯದಲ್ಲಿ ಋಷಿಮುನಿಗಳು, ಪರಮಯೋಗಿಗಳು, ಮುನೀಶ್ವರರು ಎಲ್ಲರೂ ಗಂಗಾನದಿಯ ದಡದಲ್ಲಿ ಒಂದೆಡೆ ಸೇರಿದರು. ಲೋಕದಲ್ಲಿ ಉಂಟಾಗಿರುವ ಅಶಾಂತಿಯನ್ನು ಹೋಗಲಾಡಿಸಲು ಲೋಕಕಲ್ಯಾಣ ಮತ್ತು ಶಾಂತಿಯ ಬಗ್ಗೆ ಹಲವಾರು ರೀತಿಯಲ್ಲಿ ಚರ್ಚಿಸಿ, ಯೋಚಿಸಿ ತಕ್ಷಣದಲ್ಲಿಯೇ ಲೋಕಕಲ್ಯಾಣಾರ್ಥವಾಗಿ ಯಜ್ಞಯಾಗಾದಿಗಳನ್ನು ಮಾಡುವ ತೀರ್ಮಾನವಾಯಿತು. "ಯಜ್ಞ"ವು ಸುಲಭ ಸಾಧನ ಮಾರ್ಗ ಎಂಬ ನಿರ್ಣಯಕ್ಕೆ ಬಂದರು. ಜಗತ್ತಿನ ಶಾಂತಿಗಾಗಿ ಮಾಡಲಿರುವ ಮಹಾ ಯಾಗಕ್ಕೆ ಬೇಕಾದ ಸಾಮಗ್ರಿಗಳನ್ನೆಲ್ಲ ಸಿದ್ಧಪಡಿಸಿಕೊಳ್ಳುತ್ತಿದ್ದಾರೆ. ಒಂದು ಶುಭ ದಿನದಂದು, ಶುಭ ಮುಹೂರ್ತದಲ್ಲಿ, ಅವರು ಯಜ್ಞವನ್ನು ಮಾಡಲು ನಿರ್ಧರಿಸಿದರು.

ಅಲ್ಲಿ ಸೇರಿದ್ದವರೆಲ್ಲ ಅತ್ಯಂತ ಭಕ್ತಿಯಿಂದ ಪ್ರಪತ್ತಿಯಿಂದ ಲೋಕದ ಅಶಾಂತಿಯನ್ನು ಹೋಗಲಾಡಿಸಿ ವಿಶ್ವಶಾಂತಿಯನ್ನು ಸಾಧಿಸುವ ಸಂಕಲ್ಪದೊಂದಿಗೆ ಯಜ್ಞವನ್ನು ಆರಂಭಿಸುತ್ತಿದ್ದ ಶುಭ ಮುಹೂರ್ತದಲ್ಲಿ ನಾರದ ಮುನೀಂದ್ರನು ಅಲ್ಲಿಗೆ ಬಂದನು. ಋಷಿಗಳೆಲ್ಲ ಬೆರಗಾದರು. ತಾವು ಆರಂಭಿಸಲಿರುವ ಯಾಗಕ್ಕೆ ನಾರದ

ದೇವರ್ಷಿಗಳು ಬರುವುದು ಶುಭ ಶಕುನವೆಂದೂ ತಮ್ಮ ಕಾರ್ಯ ಖಂಡಿತ ನೆರವೇರುವುದೆಂದು ಭಾವಿಸಿ ನಾರದ ಮಹರ್ಷಿಗಳನ್ನು ಗೌರವಪೂರ್ವಕವಾಗಿ ಆಹ್ವಾನಿಸಿದರು. ಅವರಿಗೆ ಅರ್ಘ್ಯ ಪಾದ್ಯಾದಿಗಳನ್ನು ಕೊಟ್ಟು ಸತ್ಕರಿಸಿದರು.

ನಾರದ ಮಹರ್ಷಿಗಳು ಅವರ ಪ್ರೀತಿ, ಆದರಕ್ಕೆ ತೃಪ್ತರಾಗಿ, "ಮಹನೀಯರೇ! ನೀವು ಶುಭಪ್ರದವಾದ ಮಹತ್ಕಾರ್ಯವನ್ನು ಮಾಡುವಂತವರಾಗಿದ್ದೀರಿ. ನೀವು ಏನು ಮಾಡುತ್ತಿದ್ದೀರಾ? ಯಾವ ಕಾರಣಕ್ಕಾಗಿ ಮಾಡುತ್ತಿದ್ದೀರಾ? ಎಂದು ಪ್ರಶ್ನಿಸಿದರು. ಮಹರ್ಷಿಗಳೆಲ್ಲರೂ ಒಂದುಕಡೆ ಸೇರಿ ಲೋಕಕಲ್ಯಾಣಕ್ಕಾಗಿ ಅದಕ್ಕೆ ಸಂಬಂಧಪಟ್ಟ ಯಜ್ಞವನ್ನು ಮಾಡುತ್ತಿದ್ದೇವೆ ಎಂದು ವಿನಂತಿಸಿದರು. ನಾರದರು ಸಂತೋಷದಿಂದ ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೀರ. ನೀವು ಮಾಡುತ್ತಿರುವ ಈ ಯಜ್ಞ ಕಾರ್ಯದ ಸಂಕಲ್ಪ  ಶುಭಸಂಕೇತವಾಗಿದೆ. ನಿಮ್ಮ ಇಷ್ಟಾರ್ಥವು ಈಡೇರಲಿ! ಅದು ನೆರವೇರುತ್ತದೆ. ಆದರೆ ಯಾರಿಗಾಗಿ ಈ ಯಾಗವನ್ನು ಮಾಡಲಾಗುತ್ತಿದೆ. ಈ ಯಜ್ಞವು ಯಾವ ದೇವನನ್ನು ಕುರಿತು ಮಾಡಲಾಗುತ್ತಿದೆ? ನಿಮ್ಮ ದೃಷ್ಟಿಯಲ್ಲಿ ಯಾರಿದ್ದಾರೆ" ಎಂದು ವಿವರವಾಗಿ ಕೇಳಿದರು. ತಮ್ಮ ತಮ್ಮ ಕೆಲಸದಲ್ಲಿ ನಿರತರಾಗಿದ್ದ ಋಷಿಮುನಿಗಳೆಲ್ಲ ಒಬ್ಬರ ಮುಖವನ್ನು ಒಬ್ಬರು ಪ್ರಶ್ನಾರ್ಥಕವಾಗಿ ನೋಡಿಕೊಂಡರು. ಹೌದು, ಯಾರಿಗಾಗಿ, ಯಾವ ದೇವರನ್ನು ಕುರಿತು ಈ ಯಜ್ಞವನ್ನು ಮಾಡುತ್ತಿದ್ದೇವೆ! ಎಂದು ಹೇಳುತ್ತಾ ಮುಖಭಾವದಿಂದ ಪರಸ್ಪರ ಅನುಮಾನಗಳನ್ನು ಪ್ರಶ್ನಿಸಿದರು. ಅಷ್ಟರಲ್ಲಿ ನಾರದನು ಮಾತನಾಡುತ್ತ ಹೀಗೆ ಹೇಳಿದರು.

**ಆಪದ್ಭಾಂದವರು ಯಾರು?**

ದೇವತೆಗಳಲ್ಲಿ ಬ್ರಹ್ಮ, ವಿಷ್ಣು ಮತ್ತು ಪರಮೇಶ್ವರರು ಪ್ರಮುಖರು ಅಲ್ಲವೇ? ಈ ಮೂವರಲ್ಲಿ ಕಷ್ಟದಲ್ಲಿ ಇರುವವರಿಗೆ, ನೊಂದವರಿಗೆ ಬೆಂಬಲವಾಗಿ ನಿಲ್ಲುವ ಆ ಆಪದ್ಭಾಂದವರು ಯಾರು? ಭಕ್ತರು ಬೇಡಿದ ವರವನ್ನು ನೀಡಿ ಸಂತೈಸುವವರು ಯಾರು? ಆ ದೇವಾಧಿದೇವ, ಸರ್ವೋತ್ತಮ ಯಾರು? ಎಂದು ಮೊದಲು ಪರೀಕ್ಷಿಸಿ ನಿರ್ಣಯಿಸೋಣ. ಸರಿ ಎನ್ನಿಸಿದವರನ್ನು ಮೂಲ ಯಜ್ಞದೇವತೆಯಾಗಿ ಮಾಡಿ ಪ್ರಾರ್ಥಿಸುವುದರಿಂದ ಜಗತ್ಕಲ್ಯಾಣ ಖಂಡಿತ ಸಿದ್ಧಿಸುತ್ತದೆ. ಆದ್ದರಿಂದ ಈ ಯಜ್ಞಕಾರ್ಯಕ್ಕೆ ಮೊದಲು ಇದನ್ನು ತಿಳಿಯಬೇಕಾಗಿದೆ, ಈ ಕಾರ್ಯವು ಮೊದಲು ಆಗಬೇಕಾಗಿದೆ ಎಂದು ಹೇಳಲು, ಅದನ್ನು ಕೇಳಿದ ಎಲ್ಲ ಮುನಿಗಳು ಯೋಚಿಸುವಂತೆ ಆಯಿತು.

## ಯಾರು ಶ್ರೇಷ್ಠರು?

ಋಷಿಗಳೆಲ್ಲರೂ ನಾರದನ ಸಲಹೆಯನ್ನು ಕುರಿತು ಯೋಚಿಸಿದರು. ಅವನು ಹೇಳಿದ್ದು ನಿಜ! ಯಾರನ್ನು ಕುರಿತು ಈ ಯಜ್ಞವನ್ನು ಮಾಡಬೇಕು! ಆ ಋಷಿ ಹೇಳಿದ ಹಾಗೆ ಮೊದಲು ತ್ರಿಮೂರ್ತಿಗಳಾದ ಬ್ರಹ್ಮ ವಿಷ್ಣುವು ಮಹೇಶ್ವರರಲ್ಲಿ ಯಾರು ಶ್ರೇಷ್ಠರು ಎಂಬುದನ್ನು ತಿಳಿದು, ನಂತರ ಅವರಿಗಾಗಿ ಈ ಯಾಗವನ್ನು ಮಾಡೋಣ ಎಂದು ನಿರ್ಧರಿಸಿದರು. ಆದರೆ ಸಾಮಾನ್ಯ ಜನರಾದ ನಾವು ತ್ರಿಮೂರ್ತಿಗಳನ್ನು ಪರೀಕ್ಷಿಸಿ ಅವರಲ್ಲಿ ಯಾರು ಶ್ರೇಷ್ಠರು ಎಂದು ನಿರ್ಧರಿಸಲು ಸಾಧ್ಯವೇ? ಖಂಡಿತ ಸಾಧ್ಯವಿಲ್ಲ. ಹಾಗಾದರೆ ಈಕೆಲಸವನ್ನು ಯಾರಿಗಾದರೂ ಒಪ್ಪಿಸುವುದು ಒಳ್ಳೆಯದು. ಈ ಕಾರ್ಯವನ್ನು ಯಾರು ಹೆಚ್ಚು ಸಮರ್ಥವಾಗಿ, ಪರಿಣಾಮಕಾರಿಯಾಗಿ ನಿರ್ವಹಿಸಬಹುದು? ಹಲವು ಬಗೆಯಲ್ಲಿ ಚರ್ಚಿಸಿದ ನಂತರ ಮಹಾತಪಸ್ವಿಗಳಾದ ಭೃಗುಮಹರ್ಷಿಗಳು ತಾವು ಈ ಕಾರ್ಯವನ್ನು ಮಾಡುವುದಾಗಿ ಸಮ್ಮತಿ ಸೂಚಿಸಿದರು. ಸೇರಿದ್ದ ಮುನಿವರ್ಯರೆಲ್ಲ ಸಂತೋಷದಿಂದ ಅವರಿಗೆ ವೀಳ್ಯವನ್ನು ಕೊಟ್ಟು, ಕಂಕಣವನ್ನು ಕಟ್ಟಿದರು, ಎಂದು ಮಹರ್ಷಿ ಸೂತರು ಹೇಳಿದರು.

## ಸತ್ಯಲೋಕಕ್ಕೆ ಪಯಣ

ನಾರದ ಮಹರ್ಷಿಗಳ ಆಜ್ಞಾನುಸಾರ ಮತ್ತು ಋಷಿಗಳ ಪ್ರಾರ್ಥನೆಯಂತೆ ಭೃಗುಮಹರ್ಷಿಗಳು, ಮೊದಲು ಸತ್ಯಲೋಕಕ್ಕೆ ಹೊರಟರು. ದಾರಿಯಲ್ಲಿ ಹೋಗುತ್ತ ಭೃಗುವಿನ ಮನಸ್ಸು ಹಲವಾರು ವಿಧದಲ್ಲಿ ಯೋಚಿಸುತ್ತಿತ್ತು. ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣರಾದ ತ್ರಿಮೂರ್ತಿಗಳನ್ನು ಪರೀಕ್ಷಿಸಿ, ಅವರಲ್ಲಿ ಯಾರು ಪರಮ ಸತ್ಯಸಂಪನ್ನರು, ಯಾರು ಲೋಕಕಲ್ಯಾಣ ಕಾರ್ಯವನ್ನು ನಿರ್ವಹಿಸಲು ಅರ್ಹರಾಗಿದ್ದಾರೆ, ಯಾರು ಭೂಲೋಕವಾಸಿಗಳ ಕಷ್ಟವನ್ನು ನಿವಾರಿಸಬಲ್ಲರು ಎಂದು ಪರೀಕ್ಷಿಸಿ ನಿರ್ಧರಿಸಬೇಕು. ಇದು ಎಂತಹ ಜವಾಬ್ದಾರಿಯುತ, ಕಷ್ಟದ ಕೆಲಸ. ಅಷ್ಟೇ ಅಲ್ಲ ತುಂಬ ಅಪಾಯಕಾರಿಯಾದ ಕೆಲಸ. ಆದರೂ ಈ ನನ್ನ ಪ್ರಯತ್ನದಲ್ಲಿ ಮುಂದೆ ನಡೆಯಬಹುದಾದ ಜಗತ್ಕಲ್ಯಾಣದ ಮಹತ್ಕಾರ್ಯದ ಮುನ್ಸೂಚನೆ ಕಾಣುತ್ತಿದೆ. ಅಲ್ಲದೆ ಈ ಪವಿತ್ರವಾದ ಕಾರ್ಯದಲ್ಲಿ ನಾನು ಪಾತ್ರವಹಿಸುತ್ತಿರುವುದು ನನ್ನ ಸುಕೃತ ಅಲ್ಲವೇ? ಎಂದೆಲ್ಲ ಯೋಚಿಸುತ್ತ ಭೃಗುಮಹರ್ಷಿ ಸತ್ಯಲೋಕವನ್ನು ಪ್ರವೇಶಿಸಿದರು.

ಆ ಸತ್ಯಲೋಕದಲ್ಲಿ ವೈಭವದಿಂದ ಕೂಡಿದ ದಿವ್ಯವೂ, ವಿಶಾಲವು ಆದ ಸಭಾಭವನದಲ್ಲಿ ಬ್ರಹ್ಮದೇವನು ವಿದ್ಯಾಧಿದೇವತೆಯಾದ ಸರಸ್ವತಿಯೊಡಗೂಡಿ ತನ್ನ ಚತುರ್ಮುಖದಿಂದ ನಾಲಕ್ಕು ವೇದಗಳನ್ನು ಪಠಿಸುತ್ತಿದ್ದರೆ, ವೀಣಾಪಾಣಿ ಸರಸ್ವತಿಯು

ಮೈಮರೆತು ವೀಣೆಯನ್ನು ನುಡಿಸುತ್ತಿದ್ದಳು. ಹಾಗೆಯೇ ತನ್ನ ಸಂಕಲ್ಪಮಾತ್ರದಿಂದಲೇ ಚರಾಚರ ಜಗತ್ತಿನ ಸೃಷ್ಟಿಕಾರ್ಯವನ್ನು ನಿರಂತರವಾಗಿ ನಡೆಸುತ್ತಿದ್ದನು.

ತನ್ನನ್ನು ಅನೇಕ ರೀತಿಯಲ್ಲಿ ಕೊಂಡಾಡುತ್ತಿರುವ ವಿವಿಧ ದೇವತೆಗಳನ್ನು ನೋಡುತ್ತಾ, ತನ್ನ ನೋಟದಿಂದಲೇ ಅನುಗ್ರಹಿಸುತ್ತಿದ್ದನು. ಅಂತಹ ಶುಭಪ್ರದವಾದ ವೇಳೆಯಲ್ಲಿ ಮಂಗಳಕರವಾದ ದಿವ್ಯಸಭೆಯನ್ನು ಪ್ರವೇಶಿಸಿದ ಭೃಗುಮಹರ್ಷಿಯು ಜಗತ್ಪತಿ ಬ್ರಹ್ಮದೇವ ಮತ್ತು ಸರಸ್ವತಿದೇವಿಯವರ ದರ್ಶನ ಪಡೆದು ಭಕ್ತಿಯಿಂದ ನಮಸ್ಕರಿಸಿ, ವಿಧವಿಧವಾಗಿ ಸ್ತೋತ್ರಮಾಡಿದನು.

ತಾಯಿ ಸರಸ್ವತಿಯ ವೀಣಾವಾದನವನ್ನು ಆಲಿಸುತ್ತ, ಸಂಗೀತ ಸಾಹಿತ್ಯದ ರಸಾಸ್ವಾದನೆಯಲ್ಲಿ ಮೈಮರೆತ್ತಿದ್ದ ಬ್ರಹ್ಮದೇವ, ಸಭೆಯಲ್ಲಿದ್ದ ದೇವತೆಗಳು, ಭೃಗುಮಹರ್ಷಿಗಳು ಬಂದದ್ದನ್ನು ಗಮನಿಸಲೇ ಇಲ್ಲ. ಭೃಗುವಿನ ಪ್ರಾರ್ಥನೆಯೂ ಅವರಿಗೆ ಕೇಳಿಸದಾಯಿತು, ಕಣ್ಣೆತ್ತಿಯೂ ಮಹರ್ಷಿಯನ್ನು ನೋಡಲಿಲ್ಲ. ಆದರೂ ತನ್ನ ಇರವನ್ನು ತೋರಿಸಲು ಎಷ್ಟೇ ಪ್ರಯತ್ನಪಟ್ಟರು ಫಲಪ್ರದ ಆಗಲಿಲ್ಲ. ಇದು ಬ್ರಹ್ಮದೇವನು ತನಗೆ ಬೇಕೆಂದೇ ಮಾಡುತ್ತಿರುವ ಅವಮಾನ ಎಂದು ತುಂಬಾ ಕೋಪ ಮಾಡಿಕೊಂಡನು. ಆ ಅತಿಯಾದ ಕೋಪವನ್ನು ತಾಳಲಾರದೆ "ಸೃಷ್ಟಿಕರ್ತನಾದರೆ ಏನು? ಬ್ರಹ್ಮನು ವೇದಗಳಲ್ಲಿ ಎಷ್ಟೇ ಶ್ರೀಮಂತನಾಗಿದ್ದರೂ ರಜೋಗುಣ ಅವನಲ್ಲಿ ತುಂಬಿದೆ. ಯಾವ ರೀತಿಯಲ್ಲಿ ನೋಡಿದರು, ಪರೀಕ್ಷಿಸಿದರೂ ಅವನಲ್ಲಿ ಕಿಂಚಿತ್ತು ಸತ್ವಗುಣ ಇಲ್ಲ! ಹೀಗಿರುವಾಗ ಅವನು ಜಗತ್ತಿಗೆ ಏನು ಉಪಕಾರ ಮಾಡಬಲ್ಲ? ಆದ್ದರಿಂದ ದೇವತೆಗಳಲ್ಲಿ ಅತ್ಯುನ್ನತ ಸ್ಥಾನವನ್ನು ಪಡೆಯಲು, ಜಗತ್ಕಲ್ಯಾಣಕ್ಕಾಗಿ ಮಾಡಲಿರುವ ಯಜ್ಞದ ಹವಿರ್ಭಾಗವನ್ನು ಪಡೆಯಲು ಅರ್ಹನಲ್ಲ." ಎಂದು ಅಲ್ಲಿಂದ ಹೊರಟವನೇ ಕೋಪದಿಂದ "ಅಹಂಕಾರದಿಂದ ಮೆರೆಯುತ್ತಿರುವ ರಜೋಗುಣವೇ ಪ್ರಧಾನ ಆಗಿರುವ ಬ್ರಹ್ಮನಿಗೆ ಭೂ ಲೋಕದಲ್ಲಿ ಯಾವುದೇ ಪೂಜೆ, ಪ್ರಾರ್ಥನೆ ನಡೆಯದಿರಲಿ" ಎಂದು ಶಪಿಸಿ ಕೈಲಾಸದ ಕಡೆಗೆ ಹೊರಟನು.

## ಕೈಲಾಸ ಸಂದರ್ಶನ

ಸತ್ಯಲೋಕದಲ್ಲಿ ಬ್ರಹ್ಮನು, ದೇವತೆಗಳ ಸಮ್ಮುಖದಲ್ಲಿ ಸಾಕ್ಷಾತ್ ತನಗೆ ಮಾಡಿದ ತೀವ್ರ ಅವಮಾನದ ಬಗ್ಗೆ ಯೋಚಿಸುತ್ತ ಚಂಚಲ ಮನಸ್ಸಿನಿಂದ ಕೈಲಾಸದ ಕಡೆಗೆ ಹೊರಟನು. ಸತ್ಯಲೋಕದಲ್ಲಿ ತನಗೆ ಉಂಟಾದ ಅವಮಾನ, ಅಶಾಂತಿ ದೂರವಾಗಲಿ ಎಂದು ಆಶಿಸುತ್ತ ಪಾರ್ವತೀ ಪರಮೇಶ್ವರರ ಆವಾಸ ಸ್ಥಾನವಾದ ಮಂಗಳಕರವಾದ ಕೈಲಾಸಕ್ಕೆ ಬಂದನು. ಅಲ್ಲಿಯೂ ಅವಮಾನ ನಿರಾಸೆಯಾಯಿತು.

ಜಗತ್ತಿನ ತಾಯಿತಂದೆಯರಾದ ಪಾರ್ವತಿಪರಮೇಶ್ವರರ ಏಕಾಂತ ಸಮಯ. ಅಂತಹ ಸಮಯದಲ್ಲಿ ಯಾರೂ ಪ್ರವೇಶಿಸಬಾರದು, ಪ್ರವೇಶಿಸಕೂಡದು ಎಂದು ಕೈಲಾಸದ ದ್ವಾರಪಾಲಕನಾದ ನಂದೀಶ್ವರನು ಭೃಗುವನ್ನು ಒಳಕ್ಕೆ ಪ್ರವೇಶಿಸದಂತೆ ತಡೆದನು. ಮೊದಲಿಗೆ ಏಕಾಂತ ಸಮಯಾಸಮಯವನ್ನು ಅರಿಯದ ಭೃಗು, ನಂದಿಯನ್ನು ಪಕ್ಕಕ್ಕೆ ತಳ್ಳಿ ಒಳಕ್ಕೆ ನುಗ್ಗಿದನು. ಒಳಗೆ ಯಾರೂ ಪ್ರವೇಶಿಸಬಾರದು ಎಂಬ ನಿಯಮವಿರುವ ಅಭ್ಯಂತರ ಮಂದಿರದಲ್ಲಿ ಶಿವ–ಶಕ್ತಿಯರು ಸರಸ ಸಲ್ಲಾಪದಲ್ಲಿ ತೊಡಗಿ ಆನಂದದಲ್ಲಿ ಇರುವಾಗ ಅತಿಯಾದ ಕೋಪದಿಂದ ಅಲ್ಲಿಗೆ ಆಗಮಿಸಿದ ಭೃಗುವನ್ನು ಅವರು ನೋಡಲೇಯಿಲ್ಲ. ಆದರೂ ಭೃಗುಮಹರ್ಷಿ ಪಾರ್ವತಿಪರಮೇಶ್ವರರನ್ನು ಅನೇಕ ವಿಧದಲ್ಲಿ ಹಾಡಿ ಸ್ತುತಿಸಿದನು. ಋಷಿಯ ಸ್ಥಿತಿಯನ್ನು, ಅವನ ಆಗಮನವನ್ನು ಕಂಡ ಮಾತೆಪಾರ್ವತಿ ಪರಶಿವನಿಗೆ ಹೇಳಿದಳು. ತಮ್ಮ ಏಕಾಂತಕ್ಕೆ ಅಡ್ಡಿಮಾಡಿದ ಅಪ್ಪಣೆಯಿಲ್ಲದೆ ಪ್ರವೇಶಮಾಡಿದ ಭೃಗುವನ್ನು ನೋಡಿದ ಶಿವ, ಕೋಪದಿಂದ ತ್ರಿಶೂಲವನ್ನು ಹಿಡಿದು ನಟರಾಜನಾಗಿ ತಾಂಡವನೃತ್ಯ ಮಾಡುತ್ತ ಅದೇ ತ್ರಿಶೂಲದಿಂದ ಅವನನ್ನು ಸಂಹರಿಸಲು ಮುಂದಾದನು. ತಕ್ಷಣವೇ ಸತಿಪಾರ್ವತಿ ಪರಶಿವನನ್ನು ತಡೆದು"ಪ್ರಭೂ! ವಿವೇಕ ಹೀನನಾಗಿ ಜ್ಞಾನವಿಲ್ಲದೆ ವರ್ತಿಸಿದ ಈ ಋಷಿಯನ್ನು ದಯೆಯಿಂದ, ನಿನ್ನ ವಿಶಾಲ ಹೃದಯದಿಂದ ಕ್ಷಮಿಸಿ ಮನ್ನಿಸಿ ಬಿಟ್ಟುಬಿಡು" ಎಂದು ಪ್ರಾರ್ಥಿಸಿದಳು.

ಪಾರ್ವತಿದೇವಿ, ತ್ರಿಶೂಲಧಾರಿಯಾದ ಶಿವನನ್ನು ತಡೆದದ್ದರಿಂದ ನನ್ನ ಪ್ರಾಣ ಉಳಿಯಿತು. ಬದುಕಿದ್ದೇನೆ. ಆದರೂ ಈ ಪರಮೇಶ್ವರ ತಾಮಸ ಗುಣವನ್ನು ಹೊಂದಿದ್ದಾನೆ. ಇಂತಹ ದೇವರು, ದೇವತೆಗಳ ದೇವನಾಗಲು ಹೇಗೆ ಸಾಧ್ಯ, ಅಲ್ಲದೆ ನಾವು ಮಾಡುತ್ತಿರುವ ಯಜ್ಞದ ಹವಿಸ್ಸನ್ನು ಪಡೆಯಲು ಹೇಗೆ ಸಾಧ್ಯ? ಆ ಅರ್ಹತೆ ಶಿವನಿಗಿಲ್ಲ. ಇಂತಹವವನನ್ನು ಭೂಲೋಕದಲ್ಲಿ ಸ್ಥಾಣವ,ಲಿಂಗಾಕಾರದಲ್ಲಿ ಮಾತ್ರವೇ ಪೂಜಿಸುವಂತಾಗಲಿ" ಎಂದು ಶಪಿಸಿ ಹಿಂದಿರುಗಿದನು.

## ಶ್ರೀವೈಕುಂಠ ಪ್ರವೇಶ

ಕೈಲಾಸದಲ್ಲಿ ಆದ ಅನುಭವದಿಂದ ಮನನೊಂದ ಭೃಗುಮಹರ್ಷಿ ಮತ್ತೆ ಮತ್ತೆ ಯೋಚಿಸುತ್ತ ಶ್ರೀವೈಕುಂಠಕ್ಕೆ ಬಂದನು.

ಶ್ರೀವೈಕುಂಠದಲ್ಲಿ, ಕ್ಷೀರಸಮುದ್ರದಲ್ಲಿ ಆದಿಶೇಷನು ತನ್ನ ಶರೀರವನ್ನೇ ಶ್ರೀಮನ್ನಾರಾ ಯಣನು ಮಲಗಲು ಶಯನವನ್ನಾಗಿ ಮಾಡಿ, ಸ್ವಾಮಿಯ ಶಿರೋಭಾಗದಲ್ಲಿ ತನ್ನ ಹೆಡೆ ಯನ್ನು ಅರಳಿಸಿ ಛತ್ರಿಯಾಗಿ ನಿಂತು ಸೇವೆಸಲ್ಲಿಸುತ್ತಿದ್ದಾನೆ. ಸದಾಕಾಲವು ಸ್ವಾಮಿಯ ಕೃಪಾ ದೃಷ್ಟಿ ಅವನದಾಗಿದೆ.

ಶ್ರೀಮಹಾವಿಷ್ಣು ಆದಿಶೇಷನ ಮೇಲೆ ಮಲಗಿಕೊಂಡಿದ್ದಾನೆ. ಸ್ವಾಮಿಯ ಹೃದಯೇಶ್ವರಿ ಶ್ರೀಮಹಾಲಕ್ಷ್ಮಿ, ಸ್ವಾಮಿಯ ಎದೆಯಮೇಲೆ ತಲೆಯಿಟ್ಟು ಮಲಗಿ ಕೊಂಡು ಕಣ್ಣಿನರೆಪ್ಪೆ ಮಿಟುಕಿಸದೆ, ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ ಸವಿಮಾತನಾಡುತ್ತಿದ್ದ ಲಕ್ಷ್ಮೀ ದೇವಿಯ ಮಾತನ್ನು ಆಲಿಸುತ್ತ ಮಧುರ ಕ್ಷಣವನ್ನು ಆನಂದಿಸುತ್ತಿದ್ದನು. ಅಂತಹ ರಸಮಯ ಸನ್ನಿ ವೇಶದ ಸಮಯದಲ್ಲಿ ಭೃಗುಮಹರ್ಷಿ ವೈಕುಂಠವನ್ನು ಪ್ರವೇಶಿಸಿದನು. ಆ ದಿವ್ಯ ದಂಪತಿಗಳ ದರ್ಶನಮಾಡಿ ಅನೇಕ ರೀತಿಯಲ್ಲಿ ಸ್ತುತಿಸಿ ಕೊಂಡಾಡಿದರು ಹಾಡಿ ಹೊಗಳಿದನು.

**"ಪ್ರಸನ್ನ ನೀಲಮೇಘ ಸ್ತ್ವಂ ಶ್ರೀ ಭೂವಿದ್ಯುತ್ಸಮನ್ವಿತಃ,**
**ಹೃದ್ವ್ಯೋಮಗಸ್ತ್ರೀ ತಾಪಘ್ನೋ ಭಕ್ತ ಸರ್ವೇಷ್ಟವಾರ್ಷುಕಃ,**
**ಅಭೀಷ್ಟಾಷ್ಟಮ ವಾರಾಶಾ ನಿಮಜ್ಯೋನ್ಮಜ್ಜಿತಂ ನಿಜಮ್,**
**ಆನಂದಾಷ್ಟ ಮನು ದ್ವೀಪೇ ಸಂಸ್ಥಾಪಯಸಿ ಚಾದರಾತ್,**
**ಸರ್ವ ಸೌಖ್ಯ ಮಿಹಾಮುತ್ರ ಸ್ವರ್ಮುಕ್ತ್ಯಾ ನನ್ದವರ್ಧನಃ"**

"ಓ ಸ್ವಾಮಿ! ಶ್ರೀಹರೀ! ನೀನು ಅತ್ಯಂತ ಪ್ರಸನ್ನನ್ನಾಗಿ ಭಕ್ತರಿಗೆ 'ಸರ್ವಭೀಷ್ಟ'ಗಳೆಂಬ ವರ್ಷಧಾರೆಯನ್ನು ಸುರಿಸುತ್ತಿರುವೆ. ಮತ್ತು ಮಳೆಯನ್ನು ಸುರಿಸುವ ಮೋಡಗಳಂತೆ ನೀನು ಇಂದ್ರನ ನೀಲಮಣಿಯಂತೆ ದೇವಕಾಂತಿಯಿಂದ ಪ್ರಕಾಶಿಸುತ್ತಿರುವೆ. ಹೊಳೆಯುತ್ತಿ ರುವೆ. ಶ್ರೀದೇವಿ ಭೂದೇವಿಯರು ನಿಮ್ಮ ಹೃದಯದ ಆಕಾಶದಲ್ಲಿ ಕಾಂತಿಯಿಂದ ಹೊಳೆ ಹೊಳೆಯುವ ಮಿಂಚಿನಂತೆ ಸಾವಿರ ದೀಪಗಳಿಂದ ಪ್ರಕಾಶಿಸುತ್ತ ಇದ್ದಾರೆ. ಭಕ್ತರಿಗೆ ನಿನ್ನ ಸಂದರ್ಶನವು, ಯಾವುದೇ ತಾಪತ್ರಯವಿಲ್ಲದೆ ಆಧ್ಯಾತ್ಮಿಕ, ಆದಿಭೌತಿಕ ಮತ್ತು ದೈವಿಕವಾದ ಅವರ ಎಲ್ಲಾ ಆಸೆಗಳನ್ನು ವರ್ಷಧಾರೆಯಂತೆ ಸುರಿಸುತ್ತಿದ್ದೀರಾ ಅಲ್ಲವೇ ಪ್ರಭು! ಮೇಲಾಗಿ ನೀನು ನಿನ್ನ ಭಕ್ತರನ್ನು ಸಪ್ತಸಮುದ್ರಗಳಾಚೆ ಇರುವ ಎಂಟನೆಯ ಮಹಾಸಾಗರವೆಂದು ಪ್ರಸಿದ್ಧಿಯಾಗಿರುವ ಅನಂತಾನಂತವಾಗಿರುವ ಕೃಪಾಸಾಗರದಲ್ಲಿ ಮುಳುಗಿಸಿ ಅವರ ಇಷ್ಟಾರ್ಥಗಳನ್ನು ಪೂರೈಸಿ ಮಹಾವಾತ್ಸಲ್ಯ ಸಮೇತ ಮಹದಾನಂದವಾದ ಎಂಟನೆಯ ದ್ವೀಪದಲ್ಲಿ ವಾತ್ಸಲ್ಯದಿಂದ ಅವರಿಗೆ ಸ್ಥಾನವನ್ನು ಕೊಡುತ್ತೀಯ. ಅರ್ಥಾತ್ ಇಹಪರ ಲೋಕದ ಸುಖವನ್ನು ದಯಪಾಲಿಸುವ ಮೂಲಕ ಅಲೌಕಿಕ ಸುಖವನ್ನು ಆನಂದವನ್ನು ದಯಪಾಲಿಸುತ್ತಿದ್ದೀರಿ ಅಲ್ಲವೇ ಪ್ರಭು!" ಎಂದು ಭೃಗುವು ಅನೇಕ ವಿಧಗಳಲ್ಲಿ ಸ್ತುತಿಸಿ ಸಾಷ್ಟಾಂಗ ಪ್ರಣಾಮವನ್ನು ಮಾಡಿದನು.

ಭೃಗು ಆರ್ಭಟಿಸುತ್ತ ಅಟ್ಟಹಾಸದಿಂದ ಹಲವು ರೀತಿಯಲ್ಲಿ ಸ್ತುತಿಸಿ ಕೀರ್ತಿಸಿದರು. ಜಗನ್ನಾಟಕ ಸೂತ್ರಧಾರಿಯು ಸುತ್ತಲಿನ ಪರಿಸರ ಮತ್ತು ಬಾಹ್ಯ

ಪ್ರಪಂಚವನ್ನು ಸಂಪೂರ್ಣ ವಾಗಿ ಮರೆತು ಶ್ರೀ ಮಹಾಲಕ್ಷ್ಮಿಯೊಂದಿಗೆ ಸರಸ ಸಲ್ಲಾಪದಿಂದ ಸಂಭಾಷಣೆಯಲ್ಲಿ ಮುಳುಗಿರುವಂತೆ ಗೋಚರಿಸುತ್ತಾನೆ. ಜಗನ್ನಾಟಕ ಸೂತ್ರಧಾರಿಯಾದ ಭಗವಾನ್ ಮಹಾವಿಷ್ಣು ಏನೂ ಗೊತ್ತಿಲ್ಲದವನಂತೆ ಇದ್ದನು. ಭೃಗುಮಹರ್ಷಿಯ ಆಗಮನವನ್ನಾಗಲಿ, ಪ್ರಾರ್ಥನೆಯನ್ನಾಗಲಿ ಗಮನಿಸದ ಹಾಗೆ ಮಹಾಲಕ್ಷ್ಮಿಯನ್ನು ಬರಸೆಳೆದು ಎದೆಯ ಮೇಲೆ ಮಲಗಿಸಿಕೊಂಡನು.

ಸತ್ಯಲೋಕದಲ್ಲಿ ಬ್ರಹ್ಮದೇವನಿಂದ, ಕೈಲಾಸದಲ್ಲಿ ಪಾರ್ವತೀಪರಮೇಶ್ವರಿಂದ ಆಗಲೇ ಘೋರವಾಗಿ ಅವಮಾನಿತನಾಗಿದ್ದ ಭೃಗುವು ತುಳಿದ ಹಸುವಿನ ಬಾಲದಂತಾಗಿದ್ದ.

ಆವೇಶದಿಂದ ಭೃಗುವಿನ ಕೋಪ ಭುಗಿಲೆದ್ದಿತು. ಪರಮಾತ್ಮ ಪರಂಧಾಮ ಎಂದರೇನು? ಎಂಬುದನ್ನು ಯೋಚಿಸದೆ, ಅವನು ತನ್ನ ವಿವೇಚನೆಯನ್ನೂ ಕಳೆದುಕೊಂಡನು. ಇಲ್ಲಿ ತೋರಿದ ಅನಾದರ, ಅವಮಾನ, ನಿರಾಕರಣೆಯಿಂದ ಹೊರಬರಲು ಸಾಧ್ಯವಾಗಲಿಲ್ಲ. ಕೈಲಾಸದಲ್ಲಿ, ಸತ್ಯಲೋಕದಲ್ಲಿ ಕೋಪಿಷ್ಠರಾಗಿ ಶಾಪಕೊಟ್ಟು ತೃಪ್ತನಾದ ಮುನಿಯು ಇಲ್ಲಿ ಈ ವೈಕುಂಠದಲ್ಲಿ ದುಷ್ಕೃತ್ಯಗಳನ್ನು ಮಾಡಿದನು. ಅಂತಹ ತೀವ್ರವಾದ ಕೋಪ, ಭಾವೋದ್ರೇಕ, ಆವೇಶದಿಂದ ಓಡಿಹೋಗಿ ಭಗವಾನ್ ವಿಷ್ಣುವಿನ ಎದೆಯ ಪ್ರದೇಶದಲ್ಲಿ ಒದೆಯಲು ತನ್ನ ಕಾಲನ್ನು ಎತ್ತಿದನು. ಏಕಾಂತದಲ್ಲಿ ಅತ್ಯಂತ ಶಾಂತಿಯುತ ವಾತಾವರಣದಲ್ಲಿ ಶ್ರೀಪತಿಯ ವಕ್ಷಸ್ಥಳದ ಮೇಲೆ ತಲೆಯಿಟ್ಟಿದ್ದ ಶ್ರೀಮಹಾಲಕ್ಷ್ಮೀದೇವಿ ಈ ಹಠಾತ್ ಘಟನೆಯಿಂದ ಬೆಚ್ಚಿಬಿದ್ದು ತೀವ್ರ ಆತಂಕದಿಂದ ಪಕ್ಕಕ್ಕೆ ಸರಿದಳು. ಆಗ ಋಷಿಯ ಪಾದವು ಲಕ್ಷ್ಮಿದೇವಿಯ ನಿರಂತರ ಆವಾಸಸ್ಥಾನವಾದ ವಿಷ್ಣುವಿನ ಎದೆಯನ್ನು ಬಲವಾಗಿ ತಾಕಿತು. ಈ ಅನಿರೀಕ್ಷಿತ, ವಿಪರೀತ ಘಟನೆಯಿಂದ ಚೇತರಿಸಿಕೊಂಡ ಶ್ರೀಹರಿಯು ತಕ್ಷಣವೇ ಶೇಷತಲ್ಪದಿಂದ ಎದ್ದು ನಿಂತನು. ಕೋಪಗೊಂಡ ಋಷಿಯನ್ನು ನಗುತ್ತಾ ನೋಡಿದನು. ನಮ್ರತೆಯಿಂದ ಎರಡೂ ಕೈ ಜೋಡಿಸಿ ನಮಸ್ಕರಿಸಿ, ಮಹರ್ಷಿಗಳ ಆಗಮನವನ್ನು ಗಮನಿಸದೆ ಇದುದ್ದಕ್ಕಾಗಿ ಕ್ಷಮೆಯಾಚಿಸಿ, ಕ್ಷಮಿಸಿ ಎಂದು ಪ್ರಾರ್ಥಿಸುತ್ತ ಎರಡೂ ಕೈಹಿಡಿದು ಗೌರವದಿಂದ ಶೇಷತಲ್ಪದಲ್ಲಿ ಕೂರಿಸಿ ಅನೇಕ ವಿಧದಲ್ಲಿ ಸತ್ಕರಿಸಿ ಮನವೊಲಿಸಿದನು. ಮಹರ್ಷಿಯ ಪಾದದ ಬಳಿ ಕುಳಿತು, ತಾವು ಬಹಳ ದೂರ ಪ್ರಯಾಣಮಾಡಿ ದಣಿದಿದ್ದೀರ, ನಿಮ್ಮ ಈ ಪಾದಗಳು ನೋವುತ್ತಿರಬಹುದು. ನಾನು ನಿಮ್ಮ ಪಾದಸೇವೆಮಾಡಿ ಉಪಶಮನ ಗೊಳಿಸುತ್ತೇನೆ ಎಂದೆನ್ನುತ್ತ ಕಾಲನ್ನು ಒತ್ತಲು ಪ್ರಾರಂಭ ಮಾಡಿದನು. ಹಾಗೆಯೇ ಭೃಗುವಿನ ಪಾದವನ್ನು ಒತ್ತುತ್ತ ಅವನ ಪಾದದಲ್ಲಿದ್ದ "ವಿಚಿತ್ರವಾದ ಕಣ್ಣನ್ನು" ಗಟ್ಟಿಯಾಗಿ ಅದುಮಿ ಪುಡಿ ಮಾಡಿದನು.

ಅದರೊಂದಿಗೆ ಭೃಗುವಿನ ಅಹಂಕಾರವು ಅಳಿಯಿತು. ತನ್ನ ಆವೇಶ ಅಜ್ಞಾನದಿಂದ ಮಾಡಿದ ಅಪರಾಧವನ್ನು ಮನ್ನಿಸು ಎಂದು ಹಲವಾರು ವಿಧದಲ್ಲಿ ಪ್ರಾರ್ಥಿಸಿದನು.

**"ಶ್ರೀವತ್ಸ ವಕ್ಷಸಂ ಶ್ರೀಶಂ ಶ್ರೀಲೋಲಂ ಶ್ರೀಕರ ಗ್ರಹಂ**
**ಶ್ರೀಮಂತಂ ಶ್ರೀನಿಧಿಮ್ ಶ್ರೀಡ್ಯಮ್ ಶ್ರಿನಿವಾಸಂ ಭಜೇ ಅನಿಶಮ್"**

"ಸ್ವಾಮೀ! ಸರ್ವಜಗತ್ಪ್ರಭು "ಶ್ರೀವತ್ಸ" ಎನ್ನುವ ನಿನ್ನ ನಾಮ, ನಿನ್ನ ವಕ್ಷಸ್ಥಳದಲ್ಲಿಯೇ ಸಾಕಾರವಾಗಿದೆ. ಲಕ್ಷ್ಮೀದೇವಿಯ ಹಾವಭಾವ ಲಲಿತ ಶೃಂಗಾರದಲ್ಲಿ ಆಸಕ್ತನಾಗಿರುವೆ. ಕಮಲಸ್ಥಿತೆಯಾದ ಶ್ರೀಲಕ್ಷ್ಮಿಯನ್ನು ವಕ್ಷಸ್ಥಳದಲ್ಲಿ ಆಲಂಗಿಸಿಕೊಂಡಿದ್ದೀಯ ಋಗ್ವೇದಾದಿ ಚತುರ್ವೇದಾದಿ ಪರಿಪೂರ್ಣನು ಸರ್ವಸಂಪತ್ತಿನ ಒಡೆಯನು ನೀನೇ ಆಗಿರುವೆ. ತ್ರಿಮೂರ್ತ್ಯಾತ್ಮಿಕ ಶಕ್ತಿದೇವಿಯರಾದ ಶ್ರೀಮಹಾಲಕ್ಷ್ಮಿ, ಶ್ರೀಮಹಾಸರಸ್ವತೀ, ಶ್ರೀಪಾರ್ವತೀ ದೇವಿಯರಿಗೆ ಪ್ರಕಾಶವನ್ನು ಕೊಟ್ಟು ತಾನೇ ಮೂಲಭೂತವಾಗಿ ಪ್ರಕಾಶಿಸುತ್ತಿರುವ ಸಾಕ್ಷಾತ್ ರಮಾದೇವಿಯಿಂದ ನಿತ್ಯವೂ ಸ್ತುತಿಸಿ ಕೊಳ್ಳುತ್ತಿರುವ ಓ ಶ್ರೀನಿವಾಸ! ನಿನ್ನನ್ನು ನಾನೇ ನಿರಂತರವಾಗಿ ಭಜಿಸುತ್ತೇನೆ ಎಂದು ವಿಧ ವಿಧವಾಗಿ ರಮಾದೇವಿ ಸಮೇತನಾದ ಶ್ರೀಮಹಾವಿಷ್ಣುವನ್ನು ಪ್ರಾರ್ಥಿಸಿದನು.

ತ್ರಿಮೂರ್ತಿಗಳಲ್ಲಿ ಮಹಾವಿಷ್ಣು ಒಬ್ಬನೇ ಸರ್ವೋತ್ತಮ, ಪರಮಾತ್ಮ, ಪರಮಶ್ರೇಷ್ಠ, ಸದ್ಗುಣಸಂಪನ್ನ ಶ್ರೀಮಂತನಾದ ವಿಷ್ಣುವು ಒಬ್ಬನೇ ಎಂದು ನಿರ್ಧರಿಸಿ ಯಾಗಫಲವನ್ನು ಹವಿಸ್ಸನ್ನು ಸ್ವೀಕರಿಸಲು ಅವನೊಬ್ಬನೇ ಅರ್ಹನೆಂದು ನಿರ್ಧರಿಸಿದನು. ಈ ರೀತಿಯಾಗಿ ಭೃಗುಮಹರ್ಷಿ, ಅನೇಕ ವಿಧದಲ್ಲಿ ಯೋಚಿಸುತ್ತ ಪುರುಷೋತ್ತಮನಾದ, ಶ್ರೀಲಕ್ಷ್ಮೀಸಮೇತ ನಾದ ಶ್ರೀಮಹಾವಿಷ್ಣುವಿಗೆ ಭಕ್ತಿಯಿಂದ ನಮಿಸುತ್ತ ವೈಕುಂಠದಿಂದ ತೆರಳಿ ಭೂಲೋಕಕ್ಕೆ ಹೊರಟನು.

ನಾರದನ ಕೋರಿಕೆಯಂತೆ, ಭೃಗುಮಹರ್ಷಿ ಋಷಿಗಳ ಪ್ರಾರ್ಥನೆಯ ಮೇರೆಗೆ ಮೂರುಲೋಕವನ್ನು ಸಂಚರಿಸಿ, ತ್ರಿಮೂರ್ತಿಗಳನ್ನು ಪರೀಕ್ಷಿಸಿ, ವೈಕುಂಠಾಧಿಪತಿಯಾದ ಶ್ರೀಮಹಾವಿಷ್ಣುವೇ ಸರ್ವೋತ್ತಮನು, ದೇವಾಧಿದೇವನು, ಅವನೇ ಯಜ್ಞದೇವತೆ. ಓ! ಮುನಿಗಳಿರಾ ನೀವೆಲ್ಲರೂ ಶ್ರೀಮನ್ನಾರಾಯಣನನ್ನು ಕುರಿತು ಯಜ್ಞವನ್ನು ಪ್ರಾರಂಭಿಸಿ, ಯಜ್ಞದಫಲವನ್ನು ಅವನಿಗೆ ಸಮರ್ಪಿಸಿ ಕೃತಾರ್ಥರಾಗಿ ಎಂದು ಆಶೀರ್ವದಿಸಿದರು.

## ಆದಿಲಕ್ಷ್ಮಿಯ ಕೋಪ

ಪರಮ ಕೋಪಿಷ್ಠನಾದ ಭೃಗುಮಹರ್ಷಿ, ತನ್ನ ಆವಾಸಸ್ಥಾನವಾದ ತನ್ನ ಸ್ವಾಮಿಯ ವಕ್ಷಸ್ಥಲವನ್ನು ಅವನ ಪಾದಸ್ಪರ್ಶದಿಂದ ಅಪವಿತ್ರ ಮಾಡಿದ್ದಾನೆ. ಶ್ರೀಮಹಾಲಕ್ಷ್ಮಿಯು ತನ್ನ ಸ್ವಾಮಿಯನ್ನು ಅಪವಿತ್ರ ಮಾಡಿದ ಋಷಿಯ ಕೃತ್ಯವನ್ನು ಸಹಿಸಲಾರದೆ, "ಯಾವುದೇ ವಿವೇಚನೆಯಿಲ್ಲದೆ ನಿರಂತರವಾಗಿ ಸ್ವಾಮಿಯ ವಕ್ಷಸ್ಥಳದಲ್ಲಿರುವ ತನ್ನನ್ನು ಈ ಮೂರ್ಖನು ಅವಮಾನಿಸಿದನು. ಇಂತಹ ದುಷ್ಕೃತ್ಯವನ್ನು ಮಾಡಿದ ಆ ಮುನಿಯನ್ನು ದಂಡಿಸುವುದನ್ನು ಬಿಟ್ಟು, ಅವನನ್ನು ಕೈಹಿಡಿದು ಕರೆತಂದು, ಶೇಷತಲ್ಪದಲ್ಲಿ ಕೂರಿಸಿ ಕಾಲನ್ನು ಒತ್ತಿ ಸೇವೆಮಾಡಿದ. ಇದನ್ನು ನಾನು ಹೇಗೆ ಸಹಿಸಲಿ ಎಂದು ಅವಮಾನದಿಂದ ದುಃಖಿತಳಾದಳು. ಆ ಅಜ್ಞಾನಿಯಾದ ಮಹರ್ಷಿಯ ಕಾಲು ತನ್ನ ಆವಾಸಸ್ಥಾನವಾದ ಶ್ರೀಪತಿಯ ವಕ್ಷಸ್ಥಲವನ್ನು ಸೋಂಕಿ ಅಪವಿತ್ರವಾಗಿದೆ. ಕಲುಷಿತವಾದ ಸ್ಥಳದಲ್ಲಿ ಇನ್ನು ನನಗೆ ಜಾಗವಿಲ್ಲ ಎಂದು ಅತೀವ ಅಸಮಾಧಾನದಿಂದ ವೈಕುಂಠವನ್ನು ತೊರೆದಳು.

"ದಯವಿಟ್ಟು ನನ್ನನ್ನು ಬಿಟ್ಟು ಹೋಗಬೇಡ, ನನ್ನನ್ನು ಕ್ಷಮಿಸು. ಈ ವೈಕುಂಠವನ್ನು ಬಿಟ್ಟು ಎಲ್ಲಿಗೂ ಹೋಗಬೇಡ, ಆ ಮುನಿಯು ಮಹಾತಪಸ್ವಿ, ಅಲ್ಲದೆ ಅವನು ನನ್ನ ಅಂತರಂಗ ಭಕ್ತ. ಮೇಲಾಗಿ ಅಜ್ಞಾನದಿಂದ ಮಾಡಿದ ತಪ್ಪನ್ನು ಕ್ಷಮಿಸುವುದು ತಪ್ಪಲ್ಲ. ಮಹರ್ಷಿಯ ಕಾಲನ್ನು ನಾನು ಒತ್ತಿದ್ದು ನಿನ್ನನ್ನು ಅವಮಾನ ಮಾಡಬೇಕೆಂದು ಅಲ್ಲ ಅವನ ಮೇಲಿನ ಗೌರವದಿಂದ ಅಲ್ಲ. ಆ ಕಾರ್ಯದಿಂದ ನಾನು ಅವನ ಪಾದದಲ್ಲಿದ್ದ ಅಹಂಕಾರದ ಕಣ್ಣನ್ನು ಇಲ್ಲವಾಗಿಸಿ ಮಾಡಿದ ತಪ್ಪನ್ನು ಅರಿಯುವಂತೆ ಮಾಡಿದೆ. ಆದ್ದರಿಂದಲೇ ಆ ಋಷಿಯು ನಿನ್ನನ್ನು, ನನ್ನನ್ನೂ ತನ್ನ ತಪ್ಪನ್ನು, ಮಾಡಿದ ಅಪರಾಧವನ್ನು ಮನಿಸುವಂತೆ ಅನೇಕವಿಧವಾಗಿ ಪ್ರಾರ್ಥಿಸಿದನು. ಆದ್ದರಿಂದ ಲಕ್ಷ್ಮೀ ನೀನು ಅವನನ್ನು ಮನ್ನಿಸಿ, ನನ್ನನ್ನೂ ಈ ವೈಕುಂಠವನ್ನು ಬಿಟ್ಟು ಎಲ್ಲಿಯೂ ಹೋಗಬೇಡ ಎಂದು ವಿಷ್ಣುವು ಪರಿಪರಿಯಾಗಿ ಮಹಾಲಕ್ಷ್ಮಿಯನ್ನು ಬೇಡಿಕೊಂಡನು. ಆದರೆ ಲಕ್ಷ್ಮಿಯು ಎಷ್ಟು ಮಾತ್ರಕ್ಕೂ ಒಪ್ಪದೆ, ಹಿಡಿದ ಹಠವನ್ನು ಬಿಡದೆ ತೀವ್ರಕೋಪದಿಂದ ಅತಿಯಾದ ದುಃಖದಿಂದ ಶ್ರೀಹರಿಯ ಪ್ರಾರ್ಥನೆಯನ್ನು ನಿರ್ಲಕ್ಷಿಸಿ ವೈಕುಂಠವನ್ನು ಬಿಟ್ಟು ಭೂಲೋಕಕ್ಕೆ ಬಂದಳು.. ಭೂಲೋಕದಲ್ಲಿ ಪರಮಪವಿತ್ರವೂ, ಪುಣ್ಯಸ್ಥಳವಾದ ಕೊಲ್ಹಾಪುರಕ್ಕೆ ಬಂದು ನೆಲಸಿ ಒಬ್ಬಳೆ ತಪಸ್ಸು ಮಾಡುತ್ತಾ ಕಾಲ ಕಳೆಯುತ್ತಿದ್ದಳು.

## ವಿಷ್ಣು ದೇವನ ನಡೆ

ಶ್ರೀವೈಕುಂಠದಲ್ಲಿ ಅನುದಿನವು ತನ್ನ ಸೇವೆ ಮಾಡುತ್ತ, ಆನಂದವನ್ನು ಉಂಟುಮಾಡುತ್ತಿದ್ದ, ಸಿರಿದೇವಿಯೊಂದಿಗೆ ತಾನೂ ಸಂತೋಷದಿಂದ, ಪರಮಾನಂದದಿಂದ ಇದ್ದ ಈ ವೈಕುಂಠ, ಮನೆಯೊಡತಿ ಜಗದೇಕಮಾತೆ ಇಲ್ಲದೆ ಕಳಾಹೀನವಾಗಿದೆ. ಆ ತಪಸ್ವಿಯ ಕಾರಣದಿಂದಾಗಿ ಮಹಾಲಕ್ಷ್ಮಿಯು ತನನ್ನು ಬಿಟ್ಟು ಹೊರಟುಹೋದಳು. ಲಕ್ಷ್ಮಿ ಇಲ್ಲದ ವೈಕುಂಠ, ವೈಕುಂಠವೇ ಅಲ್ಲ. ಅವಳಿಲ್ಲದ ಈ ವೈಕುಂಠದಲ್ಲಿ ನನಗೇನು ಕೆಲಸ? ಎಂದು ವಿರಹವೇದನೆ ಇಂದ ನೊಂದ ಲಕ್ಷ್ಮೀಪತಿ ಹತಾಶನಾಗಿ ಹುಚ್ಚನಂತೆ ಲಕ್ಷ್ಮೀ! ಲಕ್ಷ್ಮಿ! ಎಂದು ಜಪಿಸುತ್ತ ಅವಳನ್ನು ಹುಡುಕುತ್ತ ಹೊರಟನು. ಲೋಕ, ಲೋಕದಲ್ಲಿ ಅವಳನ್ನು ಹುಡುಕುತ್ತ ಹೊರಟನು. ಅವಳು ಎಲ್ಲಿ ಇದ್ದಾಳೆ ಎಂದು ತಿಳಿಯದೆ ಹುಡುಕುತ್ತಲೇ ಇದ್ದನು. ಎಲ್ಲಿಯೂ ಸಿಗಲಿಲ್ಲ. ಶ್ರೀಲಕ್ಷ್ಮಿ ಇಲ್ಲದ ವೈಕುಂಠಕ್ಕೆ ಮರಳಿ ಹೋಗಲು ಬೇಸರಿಸಿ ಅಲೆದಾಡುತ್ತ ಕಡೆಗೆ ವೆಂಕಟಾಚಲ ಪರ್ವತವನ್ನು ತಲುಪಿದನು.

## ವಿಚಿತ್ರವಾದ ಗಿಡ! ಆಶ್ಚರ್ಯಕರವಾದ ಹುತ್ತ

ಮಹಾಮಹಿಮೆಯುಳ್ಳ ಪರ್ವತ, ಶ್ರೀವೆಂಕಟಾಚಲ ಪರ್ವತದ ತಪ್ಪಲು ಪ್ರದೇಶದಲ್ಲಿ ಲೋಕಮಾತೆ ಶ್ರೀಲಕ್ಷ್ಮೀಯನ್ನು ಹುಡುಕುತ್ತ ಹುಡುಕುತ್ತಾ ಅಲೆದಾಡುತ್ತಿರುವಾಗ ಶ್ರೀಹರಿಗೆ ಪವಿತ್ರವಾದ ಒಂದು ಪುಷ್ಕರಣಿ ಕಾಣಿಸಿತು. ಆ ಪವಿತ್ರ ಪುಷ್ಕರಣಿ ತೀರದಲ್ಲಿ ಅತಿಸಮೀಪದಲ್ಲಿ ದಕ್ಷಿಣ ದಿಕ್ಕಿನಲ್ಲಿ ಒಂದು ವಿಶಾಲವಾದ ಹುಣಿಸೇಮರ ಸ್ವಾಮಿಗೆ ಗೋಚರಿಸಿತು. ಆ ಮರದ ಕಾಂಡವು ತುಂಬಾ ದಪ್ಪವಾಗಿದ್ದು ಅದರ ರೊಂಬೆಕೊಂಬೆಗಳು ದಶದಿಕ್ಕುಗಳಲ್ಲಿಯೂ ಚಾಚಿಕೊಂಡು ಚಿಗುರೊಡೆದು ಹಚ್ಚಹಸಿರಿನಿಂದ ಕೂಡಿದ್ದು ವಿಸ್ತಾರವಾಗಿ ಹರಡಿಕೊಂಡಿತ್ತು. ಆ ಮರದ ನೆರಳು ಎಲ್ಲಿಯೂ ತಿರುಗದೆ ಸಸ್ಯದ ಮೂಲದಲ್ಲಿ ಸ್ಥಿರವಾಗಿತ್ತು. "ಚಟ್ಟುನೀಡ ತಿರುಗನಿ ಚಿಂತಚೆಟ್ಟು" ಎಂದೇ ಪ್ರಸಿದ್ಧವಾಗಿತ್ತು. ಅಲ್ಲದೆ ಅದು ನಿದ್ರೆಯಿಲ್ಲದ (ತಿಂತ್ರಿಣಿ ವೃಕ್ಷಮ್) ಚಿಂತಾವೃಕ್ಷವಾಗಿ ನಿಂತಿದೆ. ಇದರ ಕೆಲವು ಕೊಂಬೆಗಳು ಚಿಗುರಿದರೆ, ಮತ್ತೆ ಕೆಲವು ಶಾಖೆಗಳು ಹೂ ಬಿಟ್ಟರೆ ಇನ್ನು ಕೆಲವು ಕೊಂಬೆಗಳಲ್ಲಿ ಕಾಯಿ, ಹಣ್ಣುಗಳು ಬಿಡುತ್ತಿವೆ. ಈ ರೀತಿಯಾಗಿ, ಮರವು ಎಲ್ಲಾ ಋತುಗಳಲ್ಲಿ ವಿಶ್ರಾಂತಿಯನ್ನು ತಿಳಿಯದೆ ನಿರಂತರವಾಗಿ ಚಿಗುರೊಡೆಯುತ್ತದೆ, ಅದರ ಹೂವು, ಹಣ್ಣು, ಕಾಯಿ ಯಥೇಚ್ಛವಾಗಿ ಬಿಡುತ್ತಿದ್ದ ಕಾರಣ, ಇದನ್ನು "ಎಂದಿಗೂ ನಿದ್ರಿಸದ ಮರ" ಎಂದು ಕರೆಯಲಾಗುತ್ತದೆ.

ದಿಕ್ಕು ಕಾಣದೆ, ತೋಚದೆ ಅಲೆದಾಡುತ್ತಿದ್ದ ಶ್ರೀನಿವಾಸ ತುಂಬಾ ಸುಸ್ತಾಗಿದ್ದ. ತುಂಬಾ ದಣಿದಿದ್ದ ವಿಷ್ಣುವಿಗೆ ಹುಣಸೆ ಮರದ ತಂಪು ನೆರಳಿನಲ್ಲಿ ವಿಶ್ರಮಿಸಲು

ಕರೆಯುತ್ತಿರುವಂತೆ ತೋರಿತು. ಅವನು ತನ್ನ ಆಯಾಸ ಪರಿಹಾರಕ್ಕಾಗಿ ಸಂತೋಷದಿಂದ ಆ ವಿಶಾಲವಾದ ಹುಣಸೆ ಮರದ ಬಳಿಗೆ ಬಂದನು. ಅಲ್ಲಿ ಆ ಮರದ ಕೆಳಗೆ ಒಂದು ಅಗಲವಾದ ಹುತ್ತದ ಮೇಲೆ ತಲೆ ಇಟ್ಟು ಮಲಗಿಕೊಂಡನು. ಬ್ರಹ್ಮದೇವನು ಆ ಹುಣಿಸೆಮರವನ್ನು, ಮತ್ತು ಆ ಮರದ ಕೆಳಗಿರುವ ಹುತ್ತವನ್ನು ಸ್ವಾಮಿಶ್ರೀನಿವಾಸನಿಗಾಗಿಯೇ ಸೃಷ್ಟಿಸಿದನು. ಬ್ರಹ್ಮನು ಸೃಷ್ಟಿಸಿದ ಪವಿತ್ರವಾದ ಆ ಮರದ ಬುಡದಲ್ಲಿದ್ದ ಹುತ್ತದಲ್ಲಿ ಶ್ರೀಹರಿಯು ಹಲವಾರು ವರ್ಷಗಳ ಕಾಲ ಯಾರಿಗೂ ಕಾಣದಂತೆ ಅಜ್ಞಾತವಾಸದಲ್ಲಿ ಇದ್ದನು ಎಂದು ಸೂತಮುನಿ ಗಳು ವಿವರಿಸುತ್ತಿದ್ದಾಗ ಶೌನಕಾದಿಗಳು ಕುತೂಹಲದಿಂದ "ಮಹರ್ಷಿಗಳೇ! ಸ್ವಾಮಿ ಶ್ರೀನಿವಾಸನು ಯಾವ ಕಾರಣಕ್ಕಾಗಿ ಆ ಹುಣಿಸೇಮರದ ಬುಡದಲ್ಲಿ ಅಜ್ಞಾತವಾಸದಲ್ಲಿ ಇದ್ದನು? ಎಂದು ಕೇಳಿದರು.

ಸೂತಮಹರ್ಷಿಗಳು, ಮುನಿವರರೇ ಅದೊಂದು ವಿಚಿತ್ರವಾದ ಕಥೆ. ನಾನು ಈ ಮೊದಲೇ ಪವಿತ್ರವಾದ ಹುಣಿಸೇಮರದ ಬಗ್ಗೆ ಹೇಳಿದ್ದೆ, ಆದರೂ ಈಗ ನೀವು ಕೇಳುತ್ತಿರುವುದಕ್ಕಾಗಿ ಮತ್ತೊಮ್ಮೆ ಹೇಳುತ್ತೇನೆ ಇದು ಸಾಮಾನ್ಯವಾದ ಹುಣಿಸೇಮರವಲ್ಲ. ಈ ಮರದ ಕೆಳಗಿರುವ ಹುತ್ತ ಯಾವುದೇ ಸಾಧಾರಣವಾದ ಇರುವೆಯ ಗೂಡು ಅಲ್ಲ, ಹಾವಿನ ಹುತ್ತವೂ ಅಲ್ಲ.

ತ್ರೇತಾಯುಗದಲ್ಲಿ ಸ್ವಾಮಿಯ ರಾಮಾವತಾರದ ಸಮಯದಲ್ಲಿ ಶ್ರೀರಾಮಚಂದ್ರನ ಅಗಲಿಕೆಯಿಂದ ತಂದೆ ದಶರಥ ದುಃಖಿಸಿ ದುಃಖಿಸಿ ಮರಣ ಹೊಂದಿದನು. ತಾಯಿಯಾದ ಕೌಸಲ್ಯೆ ಮಗನ ಅಗಲುವಿಕೆಯಿಂದ ದುಃಖಿಸುತ್ತಲೇ ಇದ್ದಳು. ಅವರಿಬ್ಬರಿಗೂ ಶ್ರೀರಾಮ ಚಂದ್ರನ ಬಗ್ಗೆ ಮಮಕಾರ ಹೆಚ್ಚಾಯಿತೇ ವಿನಃ ಕಡಿಮೆ ಆಗಲಿಲ್ಲ. ಈ ಕಾರಣದಿಂದ ಸಾಕ್ಷಾತ್ ಶ್ರೀಮನ್ನಾರಾಯಣನು ದ್ವಾಪರಯುಗದಲ್ಲಿ ಶ್ರೀಕೃಷ್ಣನಾಗಿ ಅವತರಿಸಿದನು. ಆದರೂ ಪರಿಸ್ಥಿತಿ ಯಿಂದಾಗಿ ಕೃಷ್ಣಾವತಾರದಲ್ಲಿಯೂ ಜನ್ಮಕೊಟ್ಟ ತಂದೆತಾಯಿಯರಿಗೆ ಮಗನ ಅಗಲಿಕೆಯ ನೋವು. ಸ್ವಾಮಿಯು ಹೆತ್ತವರಿಂದ ದೂರವಾಗಿ ಯಶೋಧೆಯ ಮಗನಾಗಿ ಗೋಕುಲದಲ್ಲಿ ಬೆಳೆದನು. ವಸುದೇವ ದೇವಕಿಯರಿಗೆ ಮಗನ ಮೇಲಿನ ಮಮಕಾರ ತೀರಲಿಲ್ಲ.

ಅದಕ್ಕಾಗಿಯೇ ಅಲ್ಲಿ ತ್ರೇತಾಯುಗದ ಕೌಸಲ್ಯ ದಶರಥರಿಗಾಗಿ, ದ್ವಾಪರಯುಗದಲ್ಲಿನ ದೇವಕಿ ವಸುದೇವರ ಅಗಲಿಕೆಯ ನೋವನ್ನು ಪರಿಹರಿಸಲು, ಮಗನ ಸುಖವನ್ನು ಅನುಭವಿಸಲಿ ಎಂದು ಬ್ರಹ್ಮದೇವನು ಸಂಕಲ್ಪಿಸಿದನು. ಸಂಕಲ್ಪ ನೆರವೇರಲು ಬ್ರಹ್ಮದೇವನು, ದಶರಥ ವಸುದೇವರ ಅಂಶದಿಂದ ಹುಣಿಸೇ ಮರವನ್ನು,

ಕೌಸಲ್ಯಾದೇವಿ, ದೇವಕಿಮಾತೆಯ ಅಂಶದಿಂದ ಆ ಮರದ ಕೆಳಗೆ ಒಂದು ಹುತ್ತವನ್ನು ಸೃಷ್ಟಿಸಿದನು. ಜಗತ್ಕಲ್ಯಾಣಕ್ಕಾಗಿ ಭುವಿಗೆ ಬಂದ ಶ್ರೀ ಮಹಾವಿಷ್ಣು ವೆಂಕಟಾಚಲ ಪರ್ವತದ ತಪ್ಪಲಲ್ಲಿ ಇರುವ ಪವಿತ್ರ ಪುಷ್ಕರಣಿಯ ತೀರದಲ್ಲಿರುವ ಮರದಡಿಯಲ್ಲಿ ನೆಲೆಸಿ ತಂದೆ ತಾಯಿಯ ಋಣ ತೀರಿಸುತ್ತಾನೆ.

## ಗೋಪಾಲಿಕಾ! ಹಸು! ಕರು!

ಕೊಲ್ಲಾಪುರದಲ್ಲಿ ನೆಲಸಿರುವ ಶ್ರೀಮಹಾಲಕ್ಷ್ಮಿಯು, ಶ್ರೀ ವೈಕುಂಠಪತಿಯು ಯಾವುದೇ ಆಶ್ರಯವಿಲ್ಲದೆ ಹುಣಿಸೇಮರದ ಆಶ್ರಯದಲ್ಲಿ ಮರದ ಕೆಳಗೆ ಒಂದು ದೊಡ್ಡ ಹುತ್ತ ದಲ್ಲಿ ಅಡಗಿಕೊಂಡು ಹಸಿವಿನಿಂದ ಬಳಲುತ್ತಿರುವುದನ್ನು ಬ್ರಹ್ಮಾದಿ ದೇವತೆಗಳಿಂದ ಕೇಳಿ ಬಹಳ ದುಃಖಿತಳಾದಳು. ಆದರೆ ಪತಿಯಾದ ಮಹಾವಿಷ್ಣುವಿನ ಬಳಿಗೆ ಹೋಗಲು ಅವಳ ಸ್ವಾಭಿಮಾನ ಅಡ್ಡಬಂದಿತ್ತು. ಇದನ್ನರಿತ ಭಗವಾನ್ ಬ್ರಹ್ಮ ಮತ್ತು ಶಿವನು ಶ್ರೀನಿವಾಸನ ಹಸಿವನ್ನು ನೀಗಿಸಲು ಪ್ರಾರ್ಥಿಸಿದರು. ಲಕ್ಷ್ಮಿದೇವಿಯು ಒಪ್ಪಿ ಅವರ ಕೋರಿಕೆಯ ಮೇರೆಗೆ ಗೋಪಾಲಕಿಯಾದಳು. ಭಗವಾನ್ ಬ್ರಹ್ಮನು ಹಸುವಾಗಿ ಮತ್ತು ಶಿವನು ಕರುವಾಗಿ ಮಾರ್ಪಟ್ಟರು. ಹಸು ಕರುವಿನೊಂದಿಗೆ, ಗೋಪಾಲಕಿ ಲಕ್ಷ್ಮಿದೇವಿ ಆ ಪ್ರಾಂತ್ಯವನ್ನು ಪಾಲಿಸುತ್ತಿದ್ದ ಚೋಳರಾಜನ ಆಸ್ಥಾನಕ್ಕೆ ಬಂದರು. ಚೋಳರಾಜನಿಗೆ ಈ ಹಸುಕರು ಸಾಧಾರಣವಾದುದಲ್ಲ ದೈವಾಂಶ ಸಂಭೂತವಾದದ್ದು ಎಂದು ಮನಮುಟ್ಟುವಂತೆ ವರ್ಣಿಸಿ, ಇಂತಹ ಅಪರೂಪದ ಹಸು–ಕರು ನಿಮ್ಮಲ್ಲಿದ್ದರೆ ಶೋಭೆ ಎಂದು ಹೇಳಿ, ಅದನ್ನು ರಾಜನಿಗೆ ಮಾರಿ ಶ್ರೀದೇವಿಯು ತನ್ನ ವಾಸಸ್ಥಾನವಾದ ಕೊಲ್ಲಾಪುರಕ್ಕೆ ಹಿಂದಿರುಗಿದಳು.

## ಶ್ರೀನಿವಾಸನ ಕ್ಷೀರವಾಸ

ಅರಮನೆಯ ಗೋಪಾಲಕನು ಹೊಸದಾಗಿ ಬಂದ ಹಸುಕರುವನ್ನು ಉಳಿದೆಲ್ಲ ಹಸುಕರುಗಳ ಜೊತೆಯಲ್ಲಿ ಮೇಯಿಸಲು ಅಡವಿಗೆ ಕರೆದುಕೊಂಡು ಹೋಗುತ್ತಿದ್ದನು. ಹೊಸದಾಗಿ ಬಂದಿದ್ದ ಹಸುಕರುಹುಲ್ಲನ್ನು ಮೇಯುತ್ತ ಮೇಯುತ್ತಾ ಗೋವಳನಿಗೆ ಗೊತ್ತಾಗದಂತೆ ಸ್ವಾಮಿಯು ಅಡಗಿದ್ದ ಹುತ್ತದ ಬಳಿಗೆ ಬಂದು ಧಾರಾಕಾರವಾಗಿ ಹಾಲನ್ನು ಶ್ರೀನಿವಾಸನಿಗಾಗಿ ಹರಿಸುತ್ತಿದ್ದವು. ಹುತ್ತದಲ್ಲಿದ್ದ ಸ್ವಾಮಿಯು ಅದನ್ನು ಕುಡಿದು ತೃಪ್ತನಾಗುತ್ತಿದ್ದನು. ಹಾಲು ಕರೆದನಂತರ ಹಸುಕರು ಹಿಂಡಿನೊಂದಿಗೆ ಸೇರಿಕೊಂಡು ಅರಮನೆಯ ಕೊಟ್ಟಿಗೆಯನ್ನು ಸೇರುತ್ತಿದ್ದವು. ಹೀಗೆ ಕೆಲಕಾಲ ನಡೆಯಿತು.

## ಚೋಳರಾಜನಿಗೆ ಶಾಪ

ಮಹಾರಾಣಿಯು ತನ್ನ ಮಕ್ಕಳಿಗೆ ಅರಮನೆಗೆ ಹೊಸದಾಗಿ ಬಂದಿರುವ ಹಸು ಹಾಲನ್ನು ಕೊಡದೆ ಇರುವುದನ್ನು ನೋಡಿ ಗೋಪಾಲಕನ ಮೇಲೆ ಕೋಪಗೊಂಡು, ರಾಜನಿಗೆ ದೂರುಕೊಟ್ಟಳು. ರಾಜನು ಆತನನ್ನು ಶಿಕ್ಷಿಸುವುದಲ್ಲದೆ ಚಾಟಿಯೇಟು ನೀಡಿ ಹಸು ಮತ್ತು ಕರುವನ್ನು ಜಾಗರೂಕತೆಯಿಂದ ನೋಡಿಕೊಳ್ಳುವಂತೆ ತಾಕೀತು ಮಾಡಿದನು. ಅಡವಿಯಲ್ಲಿ ಮೇಯಲು ಬಿಟ್ಟಿದ್ದ ಹೊಸ ಹಸು ಮತ್ತು ಕರುವನ್ನು ಜೀವಭಯದಿಂದ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಗೋವಳನಿಗೆ ಒಂದು ವಿಚಿತ್ರ ದೃಶ್ಯ ಕಂಡಿತು.

ಎಂದಿನಂತೆ ಮರುದಿನ ಹಸು ನಿಧಾನವಾಗಿ ಹಿಂಡನ್ನು ಬಿಟ್ಟು, ಬೆಟ್ಟಗಳನ್ನು ದಾಟಿ, ಪುಷ್ಕರಿಣಿ ಬಳಿಯ ಹುತ್ತದ ಬಳಿ ಬಂದು ಹುತ್ತದ ರಂಧ್ರದಲ್ಲಿ ಹಾಲನ್ನು ಧಾರಾಕಾರವಾಗಿ ಸುರಿಯಿತು. ಗೋಪಾಲಕನು, ತನ್ನ ಪ್ರಾಣಕ್ಕೆ ಕುತ್ತುತಂದಿದ್ದ ಹಸು ವಿಚಿತ್ರವಾಗಿ ಹುತ್ತದ ಮೇಲೆ ನಿಂತು ಹಾಲು ಕೊಡುತ್ತಿರುವುದನ್ನು ಕಂಡು ಕೋಪಗೊಳ್ಳದೆ ಕದ್ದುಮುಚ್ಚಿ ಹೋದನು, ತನ್ನೆಲ್ಲ ಶಕ್ತಿಯನ್ನು ಪ್ರಯೋಗಿಸಿ ಹಸುವಿನ ಮೇಲೆ ಕೊಡಲಿ ಎತ್ತಿ ಹೊಡೆದನು. ಹಸು, ಬೆದರಿ ಭಯದಿಂದ ಪಕ್ಕಕ್ಕೆ ಸರಿಯಿತು. ಗಲಾಟೆಯ ದನಿಕೇಳಿ ಹುತ್ತದಲ್ಲಿ ಅಡಗಿದ್ದ ಶ್ರೀನಿವಾಸ ಚೀರುತ್ತಾ ಎದ್ದುನಿಂತ. ಇದರಿಂದ ಹಸುವಿಗೆ ಬೀಳಬೇಕಿದ್ದ ಹರಿತವಾದ ಕೊಡಲಿ ಏಟು, ಶ್ರೀನಿವಾಸನ ಹಣೆಗೆ ತಗುಲಿ ರಕ್ತಸಿಕ್ತವಾಯಿತು. ಶ್ರೀನಿವಾಸನಿಗೆ ಕೊಡಲಿಯ ಹೊಡೆತದಿಂದಾಗಿ ರಕ್ತ ಬರುತ್ತಿದ್ದುದನ್ನು ಕಂಡ ಕಾವಲುಗಾರ ಗಾಬರಿಯಿಂದ ದಿಕ್ಕು ತಪ್ಪಿ ಸ್ಥಳದಲ್ಲೇ ಮೃತಪಟ್ಟನು.

ಕೂಡಲೇ ಹಸು ಚೋಳರಾಜನ ಅರಮನೆಗೆ ಧಾವಂತದಿಂದ ಬಂದು ಕಣ್ಣೀರು ಸುರಿಸುತ್ತ ಗೋಳಿಡುತ್ತ ಅವಾಂತರ ಮಾಡಿತು. ಹಸುವಿನ ಪರಿಸ್ಥಿತಿಯನ್ನು ಗಮನಿಸಿದ ಚೋಳರಾಜನು, ಗೋಪಾಲಕನಿಗೆ ಏನೋ ದುರ್ಘಟನೆ ಸಂಭವಿಸಿರಬಹುದು ಎಂದು ಹಸುವನ್ನು ಹಿಂಬಾಲಿಸಿದನು. ಅದು ಹುತ್ತದ ಹತ್ತಿರ ಬಿದ್ದಿರುವ ಗೋಪಾಲಕನ ಸಮೀಪಕ್ಕೆ ಬಂದುನಿಂತಿತು. ಆ ಸಮಯಕ್ಕೆ ಸರಿಯಾಗಿ ಹುತ್ತದಲ್ಲಿದ್ದ ವೆಂಕಟೇಶ ಹೊರಗೆ ಬಂದು "ಅಯ್ಯೋ, ಪಾಪಿ! ನೀನು ಘೋರವಾದ ತಪ್ಪು ಮಾಡಿದ್ದೀಯ. ನನ್ನನ್ನು ಪಾಲಿಸಿ, ರಕ್ಷಿಸುತ್ತಿದ್ದ ಪವಿತ್ರವಾದ ಗೋವನ್ನು ಆ ನಿನ್ನ ಸೇವಕ ಕೊಡಲಿಯಿಂದ ಹೊಡೆದು ನೋವುಮಾಡಿದ್ದಾನೆ. ನಾನು ಅವನಿಂದ ಅದನ್ನು ರಕ್ಷಿಸಲು ಹೋಗಿ ನನ್ನ ಹಣೆಗೆ ಬಲವಾದ ಪೆಟ್ಟಾಗಿದೆ. ಈ ದುರ್ಘಟನೆಗೆ ಕಾರಣ ನೀನು. ಗೋಪಾಲಕನನ್ನು ಬೈದು ಬೆದರಿಸಿದ್ದರಿಂದ ಅವನು ಮೃತಪಟ್ಟನು. ರಾಜ್ಯದಲ್ಲಿ

ರಾಜನ ಪ್ರಜೆಗಳು, ಸೇವಕರು, ಹೆಂಡತಿ, ಮಕ್ಕಳು ಮಾಡಿದ ಪಾಪಗಳೆಲ್ಲವು ರಾಜನ ಪಾಲಾಗುತ್ತದೆ. ಆದ್ದರಿಂದ ನೀನು ಇದರ ಫಲವನ್ನು ಅನುಭವಿಸಬೇಕು. ಮಾಡಿರುವುದು ಸಾಮಾನ್ಯ ಕೃತ್ಯವಲ್ಲ, ದುಷ್ಕೃತ್ಯ. ಆದ್ದರಿಂದ ಈ ಕ್ಷಣದಿಂದಲೇ ನೀನು ಪ್ರೇತರೂಪವನ್ನು ಪಡೆಯುತ್ತೀಯ" ಎಂದು ಭುವಿಯೊಡೆಯ ಶ್ರೀವೆಂಕಟೇಶನು ಘೋರವಾಗಿ ಶಪಿಸಿದನು.

ಚೋಳರಾಜನಿಗೆ ತನ್ನ ತಪ್ಪಿನ ಅರಿವಾಗಿ ತಕ್ಷಣವೇ ಸ್ವಾಮಿಯ ಪಾದದ ಮೇಲೆ ಬಿದ್ದು ಹೊರಳಾಡಿದನು. "ದೇವಾಧಿದೇವ! ಸ್ವಾಮಿ ನನಗೆ ಗೊತ್ತಿಲ್ಲದೆ ನಾನು ಮಾಡಿರುವ ತಪ್ಪಿಗ್ಗೆ ಈ ರೀತಿಯ ಶಾಪವನ್ನು ಕೊಡುವುದು ಸರಿಯೇ ಸ್ವಾಮಿ!" ಎಂದು ಅನೇಕ ವಿಧದಲ್ಲಿ ಬೇಡಿಕೊಂಡನು. ಆಶ್ರಿತವತ್ಸಲನೂ, ಕರುಣಾಮಯಿಯು ಆದ ಸ್ವಾಮಿ ಶ್ರೀನಿವಾಸ ಚೋಳರಾಜನಿಗೆ "ರಾಜನೇ! ಸ್ವಲ್ಪ ಸಮಯದ್ದಲ್ಲಿಯೇ ಆಕಾಶರಾಜನು ಅವನ ಮಗಳಾದ ಪದ್ಮಾವತಿಯನ್ನು ನನಗೆ ಕೊಟ್ಟು ವಿವಾಹ ಮಾಡುವನು. ಆಗ ಅಳಿಯನಾದ ನನಗೆ ಆ ರಾಜನು ವಜ್ರ ವೈಢೂರ್ಯದಿಂದ ಕೂಡಿದ ಒಂದು ಬಂಗಾರದ ಕಿರೀಟವನ್ನು ಉಡುಗೊರೆಯಾಗಿ ಕೊಡುತ್ತಾರೆ. ನಾನು ಅದನ್ನು ಧರಿಸಿದಾಗ ನಿನಗೆ ಶಾಪ ವಿಮೋಚನೆಯಾಗುತ್ತದೆ," ಎಂದು ವರವನ್ನು ಕೊಟ್ಟನು. ಅದರಂತೆ ಚೋಳರಾಜನು ಪ್ರೇತವಾಗಿ ಅಲೆದಾಡಿದನು.

ಅಷ್ಟರಲ್ಲಿ ಅಲ್ಲಿಯೇ ಸಾವನ್ನಪ್ಪಿದ್ದ ಗೋಪಾಲಕನ ಸಂಬಂಧಿಕರು ಆಗಮಿಸಿ, ಸ್ವಾಮಿಗೆ ಭಕ್ತಿಯಿಂದ ನಮಸ್ಕರಿಸಿ ಗೋಪಾಲಕನಿಗೆ ಆದ ಶಿಕ್ಷೆಯ ಬಗ್ಗೆ ಹೇಳಿಕೊಂಡು ಅವನಿಗೆ ಪ್ರಾಣಭಿಕ್ಷೆ ನೀಡುವಂತೆ ಪ್ರಾರ್ಥಿಸಿದರು. ಸ್ವಾಮಿ ಶ್ರೀನಿವಾಸ ಅವರಿಗೆ ಅಭಯವನ್ನು ನೀಡುತ್ತ 'ಭೂಮಿಯಲ್ಲಿ ನನ್ನನ್ನು ಮೊದಲು ಭೇಟಿ ಮಾಡಿದ ವ್ಯಕ್ತಿ ಆ ಗೋಪಾಲಕ. ಇನ್ನು ಮುಂದೆ ಕಲಿಯುಗ ಮುಗಿಯುವವರೆಗೂ ಅವರ ವಂಶಸ್ಥರಾದ ನಿಮಗೆ ಪ್ರತಿದಿನ ಪ್ರಥಮ ದರ್ಶನ ಮಾಡುವ ವರವನ್ನು ನೀಡುತ್ತೇನೆ," ಎಂದು ಹೇಳಿ ಆಶೀರ್ವದಿಸಿದನು. ಗೋಪಾಲಕನು ಮೂರ್ಛೆಯಿಂದ ಎದ್ದವನಂತೆ ಎದ್ದನು.

ಗೋವಳನಿಗೆ ಉಂಟಾದ ಗಾಯ ವಾಸಿಯಾಗಲು ಗಿಡಮೂಲಿಕೆಗಳನ್ನು ಹುಡುಕುತ್ತಿದ್ದ ಶ್ರೀನಿವಾಸನಿಗೆ ಆದಿವರಾಹಸ್ವಾಮಿ ಪ್ರತ್ಯಕ್ಷನಾದ. ಅದಕ್ಕೂ ಬಹಳ ಹಿಂದೆಯೇ ಈ ವರಾಹಸ್ವಾಮಿ ಆ ಪ್ರದೇಶದಲ್ಲಿ ನೆಲೆಸಿದ್ದ. ವರಾಹಸ್ವಾಮಿ, ಅವರಿಗೆ ತನ್ನ ಪುಣ್ಯ ಕಥೆಯನ್ನು ಹೇಳುತ್ತಾ ಶ್ರೀನಿವಾಸನು ತಾನೂ ಆ ಕ್ಷೇತ್ರದಲ್ಲಿ ಉಳಿಯಲು ನೂರು ಅಡಿ ಜಾಗವನ್ನು ದಾನ ಮಾಡುವಂತೆ ಪ್ರಾರ್ಥಿಸಿದನು.

ವರಾಹಸ್ವಾಮಿ ಶ್ರೀನಿವಾಸನ ಕೋರಿಕೆಯನ್ನು ಈಡೇರಿಸುವ ಸಲುವಾಗಿ, ಒಪ್ಪಿ ತಾನು ಕೊಡುವ ನೂರು ಅಡಿ ಭೂಮಿಗಾಗಿ ನನಗೆ ಯಾವುದೇ ತರಹವಾದ ಹಣಬೇಡ. ಬದಲಿಗೆ ನಿನ್ನ ದರ್ಶನಕ್ಕೆ ಬರುವ ಭಕ್ತರು, ಯಾತ್ರಾರ್ಥಿಗಳು ಮೊದಲು ನನ್ನ ದರ್ಶನವನ್ನು ಮಾಡಬೇಕು. ಕಾರಣ ನಾನು ಹಲವಾರು ವರ್ಷಗಳಿಂದ ಇಲ್ಲಿ ನೆಲಸಿದ್ದರು ನನಗೆ ಮಾನ್ಯತೆ ಇಲ್ಲ. ಅದಕ್ಕಾಗಿ "ನನಗೆ ಪ್ರಥಮ ಪೂಜೆ, ಪ್ರಥಮ ನೈವೇದ್ಯ, ಪ್ರಥಮ ಕಾಣಿಕೆ ಸಲ್ಲಿಸುವಂತಾಗಲಿ" ಎಂದು ವರವನ್ನು ಕೇಳಿದನು. ಸ್ವಾಮಿ ಶ್ರೀನಿವಾಸನು, ವರಾಹಸ್ವಾಮಿಯ ಎಲ್ಲ ಕೋರಿಕೆಗಳನ್ನು ನಡೆಸಿಕೊಡುವುದಾಗಿ ವಾಗ್ದಾನವಿತ್ತನು. ಅಲ್ಲದೆ ದಾನಪತ್ರದಲ್ಲಿಯೂ ಅದನ್ನು ಬರೆಸಿದನು. ನಂತರ ವರಾಹಸ್ವಾಮಿ ಸ್ವಾಮಿಪುಷ್ಕರಣಿಯ ದಕ್ಷಿಣ ತೀರದಲ್ಲಿ ಶ್ರೀವೆಂಕಟೇಶನಿಗೆ ಸ್ಥಳವನ್ನು ದತ್ತಿಯಾಗಿ ಕೊಟ್ಟನು.

## ವರಾಹಸ್ವಾಮಿ ಯಾರು?

ಪೂರ್ವದಲ್ಲಿ ಒಮ್ಮೆ ಜಲಪ್ರಳಯವಾಯಿತು. ಆ ಮಹಾಪ್ರಳಯದ ಸಂದರ್ಭದಲ್ಲಿ ಲೋಕವೇ ಜಲಾವೃತವಾಯಿತು. ಆ ಸಮಯದಲ್ಲಿ ಮಹಾದುಷ್ಟನು ಶಕ್ತಿಶಾಲಿಯೂ ಆದ ಅಸುರ ಹಿರಣ್ಯಾಕ್ಷನು ಭೂಮಂಡಲವನ್ನು ಚೆಂಡಿನಂತೆ ಮಾಡಿಕೊಂಡು ಅಲ್ಲೋಲಕಲ್ಲೋಲ ಮಾಡಿ ಆಟವಾಡಿದನು. ಭೂದೇವಿಯನ್ನು ಪಾತಾಳ ಲೋಕಕ್ಕೆ ಎಳೆದೊಯ್ದು ಹಿಂಸಿಸುತ್ತಿದ್ದನ್ನು ಅವನ ಅಸುರೀವೃತ್ತಿಯನ್ನು ತಾಳಲಾರದೆ ದೇವತೆಗಳು ವೈಕುಂಠಪತಿ ಶ್ರೀಮಹಾವಿಷ್ಣುವನ್ನು ಕಂಡು ಭೂದೇವಿಯನ್ನು ರಕ್ಷಿಸುವಂತೆ ಪ್ರಾರ್ಥಿಸಿದರು. ಅವರ ಪ್ರಾರ್ಥನೆಯಂತೆ ಸ್ವಾಮಿಯು ಶ್ವೇತವರಾಹ ರೂಪನಾಗಿ ಧರೆಗಿಳಿದು ತನ್ನ ಕೋರೆಹಲ್ಲಿನಿಂದ ಭೂದೇವಿಯನ್ನು ಪಾತಾಳದಿಂದ ಮೇಲಕ್ಕೆ ತಂದು ಅಸುರನಿಂದ ಕಾಪಾಡಿ, ಅವನನ್ನು ಸಂಹರಿಸಿದನು. ಆಗ ಸಂತಸದಿಂದ ಯಕ್ಷ, ಕಿನ್ನರ, ಗನ್ಧರ್ವ, ದೇವಾನುದೇವತೆಗಳು ಪುಷ್ಪವೃಷ್ಟಿ ಮಾಡಿ ವಿಧ ವಿಧವಾಗಿ ಸ್ತುತಿಸಿದರು.

ಈ ವೆಂಕಟಾಚಲಕ್ಷೇತ್ರದಲ್ಲಿ ಭೂದೇವಿ ಸಮೇತನಾಗಿ ಶ್ವೇತವರಾಹರೂಪದಲ್ಲಿ ನೆಲಸಿ ಕೆಲಕಾಲ ದುಷ್ಟರನ್ನು ಶಿಕ್ಷಿಸಿ ಸತ್ಪುರುಷರನ್ನು ರಕ್ಷಿಸಲಿ ಎಂದು ಎಲ್ಲರೂ ನಾನಾ ರೀತಿಯಲ್ಲಿ ಪ್ರಾರ್ಥಿಸಿದರು. ಶ್ರೀವರಾಹಸ್ವಾಮಿ ಎಲ್ಲರ ಇಷ್ಟಾರ್ಥಗಳನ್ನು ಮನ್ನಿಸಿ, ಅವರ ಕೋರಿಕೆಯನ್ನು ಈಡೇರಿಸುವುದಾಗಿ ಶ್ರೀವರಾಹಸ್ವಾಮಿ ಅಲ್ಲಿ ನೆಲಸಿದನು. ಅಂದಿನಿಂದ ಶ್ವೇತ ವರಾಹಕಲ್ಪ ಆರಂಭವಾಗಿರುವುದು. ಇದಲ್ಲದೆ, ಈ ದಿವ್ಯಕ್ಷೇತ್ರವನ್ನು ಆದಿವರಾಹಕ್ಷೇತ್ರವೆಂದು ಕರೆಯಲಾಗುತ್ತದೆ, ಇಲ್ಲಿ ಭಗವಾನ್ ಆದಿವರಾಹಸ್ವಾಮಿ

ಭೂದೇವಿಯೊಂದಿಗೆ ನೆಲೆಸಿದ್ದಾರೆ ಮತ್ತು ಕೊಲುವೈಗೆ ಭೇಟಿ ನೀಡುತ್ತಿದ್ದಾರೆ. ಅಲ್ಲಿ ಆ ಕ್ಷೇತ್ರದಲ್ಲಿ ನಿಂತಿದ್ದ ಆದಿ ವರಾಹಸ್ವಾಮಿಯನ್ನು ವಕುಳಮಾಲಿಕಾ ಎಂಬ ಯೋಗಿನಿಯು ಸೇವೆ ಮಾಡುತ್ತಾ ಕಾಲ ಕಳೆಯುತ್ತಿದ್ದಳು.

ಹೀಗೆ ಸ್ವಲ್ಪ ಸಮಯವಾಯಿತು. ಅಷ್ಟರಲ್ಲಿ ವೃಷಭಾಸುರನೆಂಬ ಕ್ರೂರ ರಾಕ್ಷಸನು ಆ ಬೆಟ್ಟಗಳ ಇಳಿಜಾರುಗಳಲ್ಲಿ ಸಂಚರಿಸಿ ಅಲ್ಲಿ ತಪಸ್ಸು ಮಾಡುತ್ತಿದ್ದ ಋಷಿ,ಮುನಿಗಳನ್ನು ಸನ್ಯಾಸಿಗಳನ್ನು ಪೀಡಿಸುತ್ತಿದ್ದನು. ಸಜ್ಜನರನ್ನು ಹಿಂಸಿಸುತ್ತಿದ್ದನು. ಆ ರಕ್ಕಸನ ಅಟ್ಟಹಾಸ ಹಿಂಸೆಯನ್ನು ತಾಳಲಾರದೆ ಋಷಿ ಮುನಿಗಳೆಲ್ಲರೂ ಸೇರಿ ವರಾಹಸ್ವಾಮಿಯನ್ನು ಆ ವೃಷಭಾಸುರನಿಂದ ತಮ್ಮನ್ನು ರಕ್ಷಿಸುವಂತೆ ಬೇಡಿಕೊಂಡರು. ಸರಿಯಾದ ಸಮಯಕ್ಕಾಗಿ ಕಾದಿದ್ದ ಶ್ವೇತವರಾಹಸ್ವಾಮಿ ಅವನೊಡನೆ ಯುದ್ಧಮಾಡಿ ಸಂಹರಿಸಿದನು. ವಿಜಯ ಶಾಲಿಯಾಗಿ ಆ ಕ್ಷೇತ್ರದಲ್ಲಿ ಸಂಚರಿಸುತ್ತಿರುವಾಗ, ತೀವ್ರಗಾಯದಿಂದ ನರಳುತ್ತಿದ್ದ ಗೋಪಾಲಕನಿಗಾಗಿ ಗಿಡಮೂಲಿಕೆಯನ್ನು ಹುಡುಕುತ್ತಿದ್ದ ಶ್ರೀನಿವಾಸನನ್ನು ಕಂಡನು.

ಶ್ರೀನಿವಾಸನ ಕಥೆಯನ್ನು ಕೇಳಿದ ವರಾಹಸ್ವಾಮಿ, ವಕುಳಮಾಲಿಕೆಯನ್ನು ಕರೆದು ಶ್ರೀನಿವಾಸನಿಗೆ ಬೇಕಾದ ಸಹಾಯಮಾಡಿ ಅವನ ಸೇವೆಮಾಡು ಎಂದು ಆದೇಶಿಸಿದನು. ವರಾಹಸ್ವಾಮಿಯ ಆಣತಿಯಂತೆ ವಕುಳಮಾಲಿಕೆ ಆ ಕ್ಷಣದಿಂದ ಶ್ರೀನಿವಾಸನನ್ನು ಹೆತ್ತಮಗನಂತೆ ಭಕ್ತಿ ಪ್ರೀತಿಯಿಂದ ಸೇವೆಮಾಡಿದಳು.

## ಈ ವಕುಳಾದೇವಿ ಯಾರು?

ದ್ವಾಪರಯುಗದ ಕಥೆಯಿದು. ದ್ವಾಪರ ಯುಗದಲ್ಲಿ ಲೋಕೋದ್ಧಾರಕ ಶ್ರೀಮಹಾವಿಷ್ಣು, ಶ್ರೀಕೃಷ್ಣನಾಗಿ ಅವತರಿಸಿದನು. ಆ ಯುಗದಲ್ಲಿ ಯಶೋದೆ ಕೃಷ್ಣನನ್ನು ಹೆತ್ತಿಲ್ಲದಿದ್ದರೂ, ಲಾಲಿಸಿ, ಪಾಲಿಸಿ, ಪೋಷಿಸಿದವಳು ಮಾತೆಯಶೋದ. ಪುಟ್ಟಕೃಷ್ಣನನ್ನು ತನ್ನ ಕಣ್ಣರೆಪ್ಪೆಯೆಂತೆ ಬಾಲ್ಯದಿಂದ ಸಾಕಿಸಲುಹಿ ಬೆಳೆಸಿದ ತಾಯಿ ಯಶೋದೆ. ಶ್ರೀಕೃಷ್ಣನನ್ನು ಅವನ ಬಾಲ್ಯದಿಂದ ಕೊಲ್ಲಲ್ಲು ಬಂದವರು ಹಲವಾರು ರಾಕ್ಷಸರು. ಅವರನ್ನು ಸಂಹರಿಸಿದ ಅವನ ಲೀಲೆಯನ್ನು ಕಣ್ಣಾರೆ ಕಂಡು ಆನಂದಿಸಿದವಳು. ಅವನನ್ನು ಮತ್ತೆ ಮತ್ತೆ ಮುದ್ದಿಸಿದರೂ, ಪ್ರೀತಿ ಮಾಡಿದರೂ ಅವಳಿಗೆ ತೃಪ್ತಿ ಇರಲಿಲ್ಲ. ಶ್ರೀಕೃಷ್ಣ, ಸಾಕ್ಷಾತ್ ವಿಷ್ಣು ಎಂದು ತಿಳಿಯದ ಯಶೋಧೆ ಪುತ್ರಪ್ರೇಮದಿಂದ ತನ್ನ ಮುದ್ದು ಬಾಲಕೃಷ್ಣನಿಗೆ ರಾಕ್ಷಸರು ಎಲ್ಲಿ ಹಾನಿ ಮಾಡಿಬಿಡುತ್ತಾರೋ ಎಂದು ಅವಳ ಮನಸ್ಸು ತಲ್ಲಣಗೊಂಡು ಸದಾ ಕಾಲ ಪ್ರೀತಿಯಿಂದ ನರಳುತ್ತಿದ್ದು, ಎಲ್ಲ ಕಷ್ಟಗಳ ನಡುವೆ ಬೆಳಸಿ ದೊಡ್ಡವನನ್ನಾಗಿ ಮಾಡಿದಳು ಮಾತೆಯಶೋಧೆ.

ಕಂಸನನ್ನು ಕೊಂದ ನಂತರ ಕೃಷ್ಣನು ತನ್ನ ಹೆತ್ತವರಾದ ದೇವಕಿ ವಸುದೇವನನ್ನು ಸೇರಿಕೊಂಡನು. ಶ್ರೀಕೃಷ್ಣನ ಮದುವೆ ಸಮಾರಂಭಗಳೆಲ್ಲ ಅವರ ಬಳಿಯೇ, ಅವರ ಕಣ್ಣ ಮುಂದೆಯೇ ನಡೆದು ಅವರು ಆ ಸಂತೋಷವನ್ನು ಅನುಭವಿಸಿದರು. ಬಾಲ್ಯದಿಂದ ಬೆಳೆಸಿದವಳಿಗೆ ಶ್ರೀಕೃಷ್ಣನ ಮದುವೆಯನ್ನು ಕಣ್ಣಾರೆ ಕಾಣುವ ಸುಖ ಸಿಗಲಿಲ್ಲ! ಚಿಂತಾಕ್ರಾಂತಳಾದ ಯಶೋದಾ ಮಾತೆಯ ಮನಸ್ಸನ್ನು ತಿಳಿದು ಶ್ರೀಕೃಷ್ಣನು "ಅಮ್ಮಾ! ನೀನು ಚಿಂತಿಸಬೇಡ. ಮಾತೃಮೂರ್ತಿಯಾದ ನೀನು ನರಳಿದರೆ ಈ ಕೃಷ್ಣನು ಉಳಿಯುವುದಿಲ್ಲ. ಈಗ ನನ್ನನ್ನು ಬೆಳೆಸಿ ದೊಡ್ಡವನನ್ನಾಗಿ ಮಾಡಿದ ಈ ಕೈಗಳಿಂದ ನೀನೇ ನನ್ನ ಮದುವೆಯನ್ನು ಮಾಡಿ ನೋಡುವ ಸಂತೋಷ, ಭಾಗ್ಯವನ್ನು ನಿನಗೆ ಕೊಡುತ್ತಿದ್ದೇನೆ. ಆದರೆ ಅದು ಈ ದ್ವಾಪರಯುಗದಲ್ಲಿ ಅಲ್ಲ. ಮುಂದಿನ ಕಲಿಯುಗದಲ್ಲಿ ನಾನು ವೆಂಕಟಾಚಲದ ಶಿಖರದಲ್ಲಿ ನೆಲೆಸಿ ಯೋಗಿನಿಯಾದ ನಿನ್ನನ್ನು ಶ್ರೀನಿವಾಸನೆಂಬ ಹೆಸರಿನಲ್ಲಿ ಸಮೀಪಿಸುತ್ತೇನೆ ಆಗ ದ್ವಾಪರ ಯುಗದ ಶ್ರೀಕೃಷ್ಣ, ವೆಂಕಟಾದ್ರಿಯಲ್ಲಿ ನಿನ್ನ ಕೃಷ್ಣನಾಗಿ ಬರುತ್ತೇನೆ. ಆ ಸಮಯದಲ್ಲಿ ನೀನು ನನ್ನ ತಾಯಿಯಾಗಿ ನನ್ನ ಸೇವೆ ಮಾಡುವ ಸುಖವನ್ನು ಅನುಭವಿಸುವೆ ಎಂದು ಆಶೀರ್ವದಿಸಿದನು. ದ್ವಾಪರ ಯುಗದ ಮಾತೆಯಶೋದೆ ಶ್ರೀಕೃಷ್ಣನ ವರದಿಂದಾಗಿ ವಕುಳಾದೇವಿಯಾಗಿ ಜನ್ಮತಾಳಿದಳು.

ಅಂತಹ ಭಕ್ತಪ್ರಿಯ ಭಗವಂತ ಶ್ರೀಕೃಷ್ಣ , ಶ್ರೀನಿವಾಸನಾಗಿ ಅವತರಿಸಿ ವೆಂಕಟಾಚಲದಲ್ಲಿ ಶ್ವೇತವರಾಹಸ್ವಾಮಿಯಿಂದ ಭೂಮಿಯನ್ನು ದಾನವಾಗಿ ಪಡೆದು ಸ್ಥಿರವಾಗಿ ನೆಲೆಸಿದನು. ಅಂದಿನಿಂದ ತಾಯಿಯಶೋದೆ ವಕುಳಾದೇವಿಯಾಗಿ ಶ್ರೀನಿವಾಸನ ಲಾಲನೆ ಪಾಲನೆಯನ್ನು ಮಾಡುತ್ತ , ಸ್ವಾಮಿಯ ಬೇಕುಬೇಡವನ್ನು ಅರಿತು ನಡೆಯುತ್ತಾ, ಅವನ ಹಸಿವನ್ನು ನೀಗಿಸುತ್ತ ಸಂತೃಪ್ತಳಾಗಿ ಜೀವನ ಸಾಗಿಸಿದಳು.

## ಶ್ರೀನಿವಾಸನ ಬೇಟೆ

ಹೀಗಿರುವ ಸಂದರ್ಭದಲ್ಲಿ ವರಾಹಕ್ಷೇತ್ರದಲ್ಲಿ ತಾಯಿ ವಕುಳಾದೇವಿ ಪ್ರೀತಿ ವಾತ್ಸಲ್ಯದಿಂದ ಸ್ವಾಮಿ ವೆಂಕಟೇಶ್ವರನ ಸೇವೆಮಾಡುತ್ತಿರಲು, ಆ ತಾಯಿಯ ಮಮತೆ ಶ್ರೀನಿವಾಸನನ್ನು ತನ್ನನ್ನು ಬಿಟ್ಟುಹೋಗಿರುವ ಶ್ರೀಮಹಾಲಕ್ಷ್ಮೀಯನ್ನು ಸ್ವಲ್ಪ ಸ್ವಲ್ಪವಾಗಿ ಮರೆಯುವಂತೆ ಆಯಿತು. ಬೆಟ್ಟ, ಬೆಟ್ಟದ ತಪ್ಪಲಿನಲ್ಲಿರುವ ಕಾಡಿನಲ್ಲಿ ಸಂಚರಿಸುತ್ತ ಆ ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸುತ್ತ ಎಲ್ಲವನ್ನು ಮರೆತು ಕೆಲಕಾಲ ನೆಮ್ಮದಿಯಿಂದ ಇದ್ದನು.

ಒಂದಾನೊಂದುದಿನ ಶ್ರೀನಿವಾಸನು ಬಿಲ್ಲುಬಾಣವನ್ನು ಧರಿಸಿ ಕುದುರೆ ಏರಿ ಬೇಟೆಯಾಡಲು ಹೊರಟನು. ದಾರಿಯಲ್ಲಿ ಕಂಡ ಪ್ರಕೃತಿಯ ಸೊಬಗು, ಕಣ್ಣಿಗೆ ಹಿತವನ್ನು ಉಂಟುಮಾಡುವ ಹರಿದ್ವರ್ಣ, ಜಲಪಾತ, ಮಯೂರ ನರ್ತನ, ಹಕ್ಕಿಗಳ ಚಿಲಿಪಿಲಿ ನಾದ, ಕೋಗಿಲೆಯ ಇಂಪಾದ ಶ್ರುತಿ ಸುಮಧುರ ದನಿಯನ್ನು ಕೇಳುತ್ತಾ ಹೊರಟನು. ಆ ದಟ್ಟಡವಿಯಲ್ಲಿ ಪ್ರಶಾಂತವಾದ ವಾತಾವರಣದಲ್ಲಿ ಕಾಪಾಡಿ! ಕಾಪಾಡಿ ಎಂಬ ಆರ್ತನಾದದ ಕೂಗು ಶ್ರೀನಿವಾಸನಿಗೆ ಕೇಳಿಸಿತು. ತಕ್ಷಣವೇ, ಶ್ರೀನಿವಾಸನು ದಿಗ್ಭ್ರಮೆಗೊಂಡು ತನ್ನ ಬಿಲ್ಲುಬಾಣವನ್ನು ಸಿದ್ಧಪಡಿಸಿಕೊಂಡು ಕೂಗು ಕೇಳಿಬಂದ ದಿಕ್ಕಿನಲ್ಲಿ ಬಿಲ್ಲುಬಾಣದ ಗುರಿ ಇಟ್ಟುಕೊಂಡು, ತನ್ನ ಕುದುರೆಯನ್ನು ಓಡಿಸಿದನು. ಮದವೇರಿದ ಭಯಂಕರವಾದ ಆನೆಯೊಂದು ಅಲ್ಲಿ ಸಂತೋಷದಿಂದ ಆಟವಾಡುತ್ತಿದ್ದ ಕನ್ಯಾಮಣಿಗಳನ್ನು ಅಟ್ಟಿಸಿಕೊಂಡು ಆರ್ಭಟ ಮಾಡುತ್ತಿತ್ತು. ರಕ್ಷಣೆಗಾಗಿ ಆರ್ತನಾದ ಮಾಡುತ್ತಾ ಓಡುತ್ತಿರುವ ಕನ್ಯಾಮಣಿಯರು ಶ್ರೀನಿವಾಸನ ಕಣ್ಣಿಗೆ ಬಿದ್ದರು. ಕೂಡಲೇ ಶ್ರೀನಿವಾಸನು "ಗಜೇಂದ್ರಾ" ಎಂದು ಘರ್ಜಿಸಿ ಆನೆಯ ಕಡೆಗೆ ಧನುಸ್ಸನ್ನು ಗುರಿಯಿಟ್ಟನು ಘರ್ಜನೆಗೆ ಹೆದರಿದ ಆನೆಯು ಯಾರಿಗೂ ಕಾಣದೆ ಆ ದಟ್ಟಡವಿಯಲ್ಲಿ ಓಡಿಹೋಗಿ ಮಾಯವಾಯಿತು.

ಭಯಂಕರ ಪ್ರಾಣಾಪಾಯದಿಂದ ಸ್ವಲ್ಪದರಲ್ಲೇ ಪಾರಾಗಿ ದಿಕ್ಕು ತೋಚದೆ ಅದೇ ಭಯದ ಗುಂಗಿನಲ್ಲಿ ನಿಂತಿದ್ದ ಯುವತಿಯರ ಬಳಿ ಹೋದ ಶ್ರೀನಿವಾಸ, ಇವರು ಅಪ್ಸರೆಯರೋ! ಅಥವಾ ಗಂಧರ್ವ ಕನ್ಯೆಯರೋ ಎಂದು ಆಶ್ಚರ್ಯಪಟ್ಟ ಶ್ರೀನಿವಾಸನು, ಆ ಕನ್ಯಾಮಣಿಗಳ ನಡುವೆ ಚಂದ್ರನಂತೆ ಕಾಂತಿಯಿಂದ ಶೋಭಿಸುತ್ತಿದ್ದ ಒಬ್ಬ ಕನ್ಯೆಯನ್ನು ನೋಡಿ ದಿಗ್ಭ್ರಮೆಗೊಂಡು ಅವಳ ಸೌಂದರ್ಯಕ್ಕೆ ಮಣಿದು ಆನಂದ ಪರವಶನಾಗಿ ಅವಳನೇ ತದೇಕ ದೃಷ್ಟಿಯಿಂದ ನೋಡಿ ವಿಚಲಿತನಾದನು. ಆ ಕನ್ಯಾಮಣಿಯ ಸ್ಥಿತಿಯೂ ಅದೇ ಆಗಿತ್ತು. ತಮ್ಮನ್ನು ಮದದಾನೆಯಿಂದ ಕಾಪಾಡಿ, ಪ್ರಾಣವನ್ನು ರಕ್ಷಿಸಿದ ಆ ಯುವಕನನ್ನು ನೋಡಿ ಬೆರಗಾಗಿ ನಿಂತಳು. ಆ ಆಜಾನುಬಾಹು, ಸ್ಫುರದ್ರೂಪ, ಶರೀರ ತೇಜಸ್ಸನ್ನು ಕಂಡು ಆಶ್ಚರ್ಯಪಡುತ್ತ, ಕಣ್ಣಗಲಿಸಿ ಮೈಮರೆತು ನೋಡುತ್ತ ಕಲ್ಲಿನ ಮೂರ್ತಿಯಂತೆ ನಿಂತಳು.

## ಪ್ರೇಮಾನುರಾಗ

ಈ ಇಬ್ಬರನ್ನು ನೋಡಿದ ಸಖಿಯರು ಆತಂಕದಿಂದ ಭಯಪಡುತ್ತ ಎದುರಿಗೆ ನಿಂತಿರುವ ಯುವಕನನ್ನು ನೋಡಿ ಜೋರಾದ ಧ್ವನಿಯಲ್ಲಿ "ಯಾರಯ್ಯಾ ನೀನು? ನಮ್ಮ ಒಡತಿಯನ್ನು ಯಾಕೆ ಹಾಗೆ ನೋಡುತ್ತಿದ್ದೀಯಾ? ನಿನಗೆ ಸ್ವಲ್ಪವಾದರು ಸಂಸ್ಕೃತಿ ಇದೆಯಾ? ನೀನು ಅವಳನ್ನು ಯಾರೆಂದು ತಿಳಿದಿರುವೆ, ನಮ್ಮ

ಆಕಾಶರಾಜನ ಮಗಳು ಪದ್ಮಾವತಿದೇವಿ. ಇನ್ನೊಂದು ವಿಷಯ, ನಮ್ಮ ಅರಮನೆಯ ರಾಣಿಯರು, ರಾಜಕುಮಾರಿಯರು ಮಾತ್ರ ಸಂಚರಿಸುವ ಈ ಪ್ರದೇಶದಲ್ಲಿ ಪರಪುರುಷರ ಪ್ರವೇಶ ನಿಷಿದ್ಧವಾಗಿದೆ. ಅದರಲ್ಲಿಯೂ ಈ ನಮ್ಮ ರಾಜಕುಮಾರಿಯನ್ನು ನೋಡುವುದು ತುಂಬಾ ತಪ್ಪು, ಶಿಕ್ಷಾರ್ಹ. ಹೋಗು ಹೋಗು ಇಲ್ಲಿಂದ ಆದಷ್ಟು ಬೇಗ ತಡಮಾಡದೆ ದೂರ ಹೊರಟುಹೋಗು. ಇಷ್ಟುಹೇಳಿದರು ಇನ್ನು ಇಲ್ಲಿಯೇ ನಿಂತು ಏನನ್ನು ನೋಡುತ್ತಿದ್ದೀಯ? ನಾವು ಹೇಳುತ್ತಿರುವುದು ನಿನಗೆ ಕೇಳಿಸುತ್ತಿಲ್ಲವೇ? ಅರ್ಥ ಆಗುತ್ತಿದೆಯೋ ಇಲ್ಲವೋ? ಇನ್ನು ಸ್ವಲ್ಪಕಾಲ ಈ ಭೂಮಿಯಲ್ಲಿ ಬದುಕಬೇಕೆಂಬ ಆಸೆ ಇದೆಯೋ ಇಲ್ಲವೋ? ನಮ್ಮ ರಾಜಭಟರು ಬಂದು ನಿನ್ನ ನೋಡಿದರೆ ಅನರ್ಥವಾಗುತ್ತದೆ. ಏನದು ಇಷ್ಟುಹೇಳಿದರೂ ಸ್ವಲ್ಪವೂ ಕದಲದೆ ನಿಂತಿದ್ದೀಯ ಎಂದು ಶ್ರೀನಿವಾಸನನ್ನು ತಿವಿದು ತಿವಿದು ಪ್ರಶ್ನೆಗಳ ಸರಮಾಲೆಯನ್ನೇ ಸುರಿಸಿ ಬೆದರಿಸಿದರು.

ಇತ್ತ ಪದ್ಮಾವತಿ, ತನ್ನ ಪ್ರಾಣವನ್ನು ಲೆಕ್ಕಿಸದೆ ಮದವೇರಿದ ಆನೆಯಿಂದ ನಮ್ಮನ್ನು ರಕ್ಷಿಸಿದ ಆಪದ್ಬಾಂಧವ. ಆತನನ್ನು ಹೀಗೆ ಪ್ರಶ್ನೆಗಳಿಂದ ನೋಯಿಸಬೇಡಿ. ಬದಲಿಗೆ ಆತ ಯಾರು? ಎಲ್ಲಿಂದ ಬಂದಿರುವರು? ಇಲ್ಲಿಗೆ ಬರಲು ಕಾರಣವೇನು? ಎಂಬುದನ್ನು ಕೇಳಿ ತಿಳಿದುಕೊಳ್ಳಿ ಎಂದು ತನ್ನ ಸಖಿಯರಿಗೆ ಹೇಳಿದಳು. ಪದ್ಮಾವತಿಯ ಮಾತಿನಿಂದ ಆಶ್ಚರ್ಯಪಟ್ಟ ಅವಳ ಸಖಿಯರು "ಯಾರಯ್ಯ ನೀನು? ನಿನ್ನ ಹೆಸರೇನು? ನಿನ್ನ ಊರುಯಾವುದು? ನಿನ್ನ ತಂದೆ ತಾಯಿ ಯಾರು? ನಿನ್ನ ಜಾತಿ ಕುಲಗೋತ್ರ ಯಾವುದು? ಎಂದೆಲ್ಲ ಪ್ರಶ್ನಿಸಿದರು.

ಸಖಿಯರ ಎಲ್ಲ ಪ್ರಶ್ನೆಗೆ ಉತ್ತರವೆಂಬಂತೆ ಸ್ವಾಮಿ ಶ್ರೀನಿವಾಸ ಮುಗುಳ್ನಗುತ್ತ ನಿಮ್ಮ ರಾಜಕುಮಾರಿ ಪದ್ಮಾವತಿಗೆ ನನ್ನ ಬಗ್ಗೆ ತಿಳಿಯುವ ಕುತೂಹಲ ಬಂದಿದೆ ಅಲ್ಲವೇ? ಇದು ನನಗೆ ಆನಂದವನ್ನು ಉಂಟುಮಾಡಿದೆ. ನೀವು ನನ್ನ ವಿವರವನ್ನು ಕೇಳಿದಿರಿ ಅಲ್ಲವೇ? ಹಾಗಾದರೆ ಕೇಳಿ, ನನ್ನ ತಂದೆ ವಸುದೇವ, ತಾಯಿ ದೇವಕಿದೇವಿ. ಬಲರಾಮ ನನ್ನ ಸಹೋದರ. ನನ್ನ ಹೆಸರು ಶ್ರೀಕೃಷ್ಣ. ವಶಿಷ್ಠ ಮಹರ್ಷಿ ಗೋತ್ರಕ್ಕೆ ಸೇರಿದವನು. ನಾನು, ನನ್ನ ಮೊದಲ ನೋಟದಲ್ಲೇ ಈ ಸೌಂದರ್ಯವತಿಯನ್ನು ಮನಸಾರೆ ಇಷ್ಟಪಟ್ಟಿದ್ದೀನಿ. ನೀವೆಲ್ಲರು ಒಪ್ಪಿದರೆ ನಾನು ಪದ್ಮಾವತಿಯನ್ನು ಮದುವೆ ಆಗುತ್ತೇನೆ ಎಂದು ಹೇಳುತ್ತ ಪದ್ಮಾವತಿಯ ಕಡೆಗೆ ನಡೆದು ಅವಳನ್ನು ಆಲಂಗಿಸಿಕೊಳ್ಳಲು ತನ್ನ ತೋಳನ್ನು ಚಾಚಿದನು.

ಆಗಂತುಕನ ಮಾತು, ನಿಲುವು, ನಡೆ ಎಲ್ಲವೂ ಪದ್ಮಾವತಿಯ ಸಖಿಯರಿಗೆ ವಿಚಿತ್ರವಾಗಿ ಕಾಣಿಸಿತು. ಅವನನ್ನು ಹಲವು ರೀತಿಯಲ್ಲಿ ಪರೀಕ್ಷಿಸಿದರು. ಅವನ

ನಿಲುವು ಮಾತಿಗೆ ತಕ್ಕಂತೆ ಇರುವುದನ್ನು ಗಮನಿಸಿದರು. ಆ ಪರಪುರುಷನಿಂದ ತಮ್ಮ ರಾಜಕುಮಾರಿಗೆ ಬರಲಿರುವ ಅಪಾಯವನ್ನು ನೆನೆದು ತಡಮಾಡದೆ ಶ್ರೀನಿವಾಸನನ್ನು ಅಟ್ಟಿಸಿಕೊಂಡು ಹೋಗಿ ಕಲ್ಲುಗಳಿಂದ ಚೆನ್ನಾಗಿ ಹೊಡೆದರು. ಶ್ರೀನಿವಾಸನಾದರೋ, ಪದ್ಮಾವತಿಯ ಧ್ಯಾನದಲ್ಲಿ ಇದ್ದನು. ಈ ಹಠಾತ್ ಘಟನೆಯಿಂದ ದಿಗ್ಭ್ರಮೆಗೊಂಡನು. ಕಲ್ಲಿನ ಹೊಡೆತದಿಂದಾಗಿ ಗಾಯಗಳಾಗಿ ರಕ್ತಸ್ರಾವ ಆಗುತ್ತಿದ್ದರೂ ಹೃದಯ ದುಃಖ ತಪ್ತವಾಗಿದ್ದರು ಮೊದಲ ನೋಟದಲ್ಲಿಯೇ ಪದ್ಮಾವತಿಯನ್ನು ಪ್ರೀತಿಸಿದ ಶ್ರೀನಿವಾಸ ಅವಳನ್ನೇ ನೋಡುತ್ತ, ಅವಳ ಧ್ಯಾನದಲ್ಲಿಯೆ ವೆಂಕಟಾದ್ರಿಯನ್ನು ತಲುಪಿದನು.

## ವಕುಳಮಾತಾ ಪರಾಮರ್ಷ!

ಈ ದಿನ ಬೆಳಗ್ಗೆ ಶ್ರೀನಿವಾಸ ಬೆಣ್ಣೆ ಮೊಸರು ತಿನ್ನದೆ ಮನೆಯಿಂದ ಹೊರಗೆ ಹೋದವನು ಎಲ್ಲಿಗೆ ಹೋಗಿದ್ದಾನೋ ಎಂದು ಯೋಚಿಸುತ್ತ ವಕುಳಮಾತೆ ಶ್ರೀನಿವಾಸನಿಗಾಗಿ ಎದುರು ನೋಡುತ್ತಿದ್ದಳು. ಏತನ್ಮಧ್ಯೆ, ದೇಹದಾದ್ಯಂತ ಗಾಯಗಳು ಮತ್ತು ರಕ್ತದ ಕಲೆಗಳೊಂದಿಗೆ ನೋವಿನಿಂದ ನರಳುತ್ತ ಬಂದ ಶ್ರೀನಿವಾಸನನ್ನು ನೋಡಿ ವಕುಳಮಾಲಿಕಾ ಆತಂಕಗೊಂಡಳು. ತಕ್ಷಣವೇ ಎದ್ದು ಅವನ ಮುಂದೆ ಹೋಗಿ ಶ್ರೀನಿವಾಸನ ಕೈ ಹಿಡಿದು ನಿಧಾನವಾಗಿ ನಡೆಸಿ ಕರೆದುಕೊಂಡು ಹೋಗುತ್ತ ದೇಹದ ತುಂಬಾ ತೀವ್ರವಾದ ಗಾಯಗಳಾಗಿದೆ. ಮಗುವೇ! ನಿಜವಾಗಿ ಏನಾಯಿತು ಯಾರು ಏನು ಮಾಡಿದರು? ಹೇಳಪ್ಪ ಮಗುವೇ! ಎಂದುಕಣ್ಣೀರು ಸುರಿಸುತ್ತ ತನ್ನ ಸೀರೆಯ ಸೆರಗಿನ ಮೂಲೆಯನ್ನು ಹರಿದು ಗಾಯಗಳಿಗೆ ಕಟ್ಟುತ್ತ ಅಳುತ್ತಲೇ ಇದ್ದಳು.

ನೋವಿನಿಂದ ನರಳುತ್ತಿದ್ದ ಶ್ರೀನಿವಾಸ ವಕುಳಮಾಲಿಕಾ ಅಮ್ಮನಿಗೆ ನಡೆದದ್ದನ್ನು ಹೇಳದೆ ಸುಮ್ಮನೆ ಇರುವುದು ಸರಿ ಅಲ್ಲ ಎಂದೆನಿಸಿ, ನಡೆದ ಕಥೆಯನ್ನು ಯಥಾವತ್ತಾಗಿ ಹೇಳಿದನು.

ನಾರಾಯಣವನದ ಸುತ್ತ ಮುತ್ತ ತೋಟದಲ್ಲಿ ಓಡಾಡುತ್ತಿದ್ದ ಆಕಾಶರಾಜನ ಮಗಳು ಪದ್ಮಾವತಿ ದೇವಿಯನ್ನು ನೋಡಿದೆ. ನೋಡಿದ ಆಕ್ಷಣದಿಂದಲೇ ನನಗೆ ಅವಳಲ್ಲಿ ಪ್ರೀತಿ ಮೂಡಿದೆ, ಅವಳಿಗೂ ಪ್ರೀತಿ ಮೂಡಿದೆ, ಇನ್ನು ನಾನು ಮದುವೆ ಆದರೆ ಅವಳನ್ನೆ ಇಲ್ಲದಿದ್ದರೆ ನಾನು ಬೇರೆಯಾರನ್ನೂ ಮದುವೆ ಆಗುವುದಿಲ್ಲ ಎಂದು ತಾಯಿಗೆ ಹೇಳಿದ.

"ಮಗನೇ! ಶ್ರೀನಿವಾಸ! ನೀನು ಸಾಕ್ಷಾತ್ ಶ್ರೀಮನ್ನಾರಾಯಣ ಎಂಬುದನ್ನು ಮರೆತಂತೆ ತೋರುತ್ತಿದೆ. ಶ್ರೀವರಾಹಸ್ವಾಮಿ ನನ್ನನ್ನು, ನಿನ್ನ ಸೇವೆಮಾಡಲು ಹೇಳಿ ನಿನ್ನ ಬಗ್ಗೆ ಎಲ್ಲ ವಿವರವನ್ನು ಹೇಳಿ, ಸರಿಯಾಗಿ ನಿನ್ನ ಸೇವೆಯನ್ನು ಮಾಡಲು ಹೇಳಿದ್ದಾನೆ.

ಅಂತಹ ದಿವ್ಯಪುರುಷ ನೀನು. ಸಾಮಾನ್ಯ ಮಾನವನಂತೆ ಕುಲಗೋತ್ರ ತಿಳಿಯದ ಮನುಷ್ಯನಂತೆ ಅವಳನ್ನು ಪ್ರೀತಿಸುತ್ತಿದ್ದೀನಿ, ಅವಳಿಲ್ಲದೆ ನಾನು ಬದುಕುವುದಿಲ್ಲ ಎಂದು ಹೇಳುತ್ತಿದ್ದೀಯ, ಇದೆಲ್ಲವೂ ವಿಚಿತ್ರವಾಗಿದೆ. ನಿನ್ನಂತಹ ದಿವ್ಯ ಪುರುಷ ಹೇಳುವ ಮಾತಾ ಇದು. ಎಷ್ಟು ಸಮಂಜಸ? ನೀನೇ ಚೆನ್ನಾಗಿ ಯೋಚಿಸು. ನಿನ್ನ ಸ್ಥಾನ, ಘನತೆ ಎಲ್ಲವನ್ನೂ ಮನಸ್ಸಿನಲ್ಲಿ ಇಟ್ಟುಕೊಂಡು ನಿನ್ನ ಗೌರವಕ್ಕೆ ಕುಂದುಬಾರದಂತೆ ಚೆನ್ನಾಗಿ ಯೋಚಿಸಿ ಸರಿಯಾದ ನಿರ್ಧಾರವನ್ನು ತೆಗೆದುಕೋ. ಇದರಿಂದ ನನಗೂ ಒಳ್ಳೆಯದು, ನಿನಗೂ ಒಳ್ಳೆಯದು ಹಾಗೆಯೇ ಲೋಕಕ್ಕೂ ಒಳ್ಳೆಯದು ಎಂದು ತಾಯಿ ವಕುಳಾದೇವಿ ಶ್ರೀನಿವಾಸನಿಗೆ ಬುದ್ಧಿಮಾತು ಹೇಳಿ ಸಮಾಧಾನ ಮಾಡಿದಳು.

ತಾಯಿ! ನೀನು ನುಡಿದ ಮಾತುಗಳೆಲ್ಲ ಪರಮಸತ್ಯ. ನಾನು ಯಾವ ಸಂದರ್ಭದಲ್ಲೂ ಅನೈತಿಕವಾಗಿ ನಡೆದುಕೊಳ್ಳುವುದಿಲ್ಲ ತಾಯಿ! ಕನಿಷ್ಠ ಅದರ ಬಗ್ಗೆ ಕನಸಿನಲ್ಲಿಯೂ ಯೋಚಿಸುವುದಿಲ್ಲ. ನಾನು ಕಂಡ ಆಕಾಶರಾಜನ ಮಗಳು ಪದ್ಮಾವತಿ ಸಾಮಾನ್ಯ ಮಹಿಳೆ ಕನ್ಯೆಯಲ್ಲ. ಅವಳು ಸಾಕ್ಷಾತ್ ಶ್ರೀಮಹಾಲಕ್ಷ್ಮೀ ಅಂಶದಿಂದ ಈ ಭುವಿಯಲ್ಲಿ ನನಗಾಗಿಯೇ ಅವತರಿಸಿದ್ದಾಳೆ. ನನ್ನನ್ನು ವಿವಾಹವನ್ನು ಮಾಡಿಕೊಳ್ಳುವುದಕ್ಕಾಗಿಯೇ ಜನ್ಮತಾಳಿದ್ದಾಳೆ. ಅಮ್ಮಾ! ಆ ಪದ್ಮಾವತಿ ಜನ್ಮರಹಸ್ಯವನ್ನು ವಿವರವಾಗಿ ಅರ್ಥವಾಗುವ ರೀತಿಯಲ್ಲಿ ನಿನಗೆ ಹೇಳುತ್ತೇನೆ ಎಂದು ವಿಷ್ಣುವು ಮಾತನ್ನು ಮುಂದುವರಿಸಿದನು.

## ವೇದವತಿ, ಮಾಯಾಸೀತ

ಇದು ತ್ರೇತಾಯುಗದಲ್ಲಿ ನಡೆದ ದಿವ್ಯ ಕಥೆ. ರಾಮಾವತಾರದ ಸಮಯದಲ್ಲಿ ದುಷ್ಟ ರಾಕ್ಷಸನನ್ನು ಕೊಲ್ಲಲು ಶ್ರೀರಾಮನು ಸೀತಾ ಲಕ್ಷ್ಮಣ ಸಮೇತನಾಗಿ ಹದಿನಾಲ್ಕು ವರ್ಷಗಳನ್ನು ಅರಣ್ಯದಲ್ಲಿ ಕಳೆದನು. ಆ ಸಂದರ್ಭದಲ್ಲಿ ರಾವಣಾಸುರನು ಸೀತೆಯನ್ನು ಅಪಹರಿಸಿದನು. ಅದೇ ಸಮಯದಲ್ಲಿ ಭಗವಾನ್ ಅಗ್ನಿಯು ರಾವಣಾಸುರನನ್ನು ತಡೆದು, "ರಾವಣಾಸುರ! ನೀನು ನಿಜವಾದ ಸೀತೆಯನ್ನು ಕರೆದುಕೊಂಡು ಹೋಗುತ್ತಿಲ್ಲ. ಶ್ರೀರಾಮನ ನಿಜವಾದ ಹೆಂಡತಿ ನನ್ನ ಬಳಿ ಇದ್ದಾಳೆ. ನೀನು, ನಿನಗೆ ಬೇಕಾದರೆ ನನ್ನ ಬಳಿಯಲ್ಲಿ ಇರುವ ಸೀತೆಯನ್ನು ಕರೆದುಕೊಂಡು ಹೋಗು, ಅವಳನ್ನು ಬಿಟ್ಟುಬಿಡು" ಎಂದು ನಿಜಸೀತೆಯನ್ನು ಅಗ್ನಿಪ್ರವೇಶ ಮಾಡಿಸಿ ತನ್ನ ಬಳಿಯಲ್ಲಿಯೇ ಯಾವ ತೊಂದರೆಯೂ ಆಗದಂತೆ ರಕ್ಷಿಸಿದನು. ನಿಜಸೀತೆಯ ಬದಲಿಗೆ ತನ್ನಲ್ಲಿದ್ದ ವೇದವತಿಯನ್ನು "ಇವಳೇ" ಸೀತೆ ಎಂದು ನಂಬಿಸಿ ಅವನ ಜೊತೆಯಲ್ಲಿ ಕಳಿಸಿದನು. ರಾವಣಾಸುರನು, ಅಗ್ನಿದೇವನ ಮಾತನ್ನು ನಂಬಿ,

ಮಾಯಾಸೀತೆಯಾದ ವೇದವತಿಯನ್ನು ಲಂಕೆಗೆ ಕರೆದುಕೊಂಡು ಹೋಗಿ ಬಂಧನದಲ್ಲಿ ಇಟ್ಟನು.

ರಾಮರಾವಣರ ಯುದ್ಧದಲ್ಲಿ ಶ್ರೀರಾಮಚಂದ್ರನು ರಾವಣಾಸುರನನ್ನು ಸಂಹರಿಸಿ ಬಳಿಕ ಲಂಕೆಯಲ್ಲಿ ಸೆರೆಯಾಗಿದ್ದ ಸೀತಾದೇವಿಯನ್ನು ಸ್ವೀಕರಿಸಿದನು. ಆದರೆ ಮುಂದೆ ಲೋಕನಿಂದೆಗೆ ಗುರಿಯಾಗಬಾರದು ಎಂಬ ಕಾರಣಕ್ಕಾಗಿ ಸೀತೆಯನ್ನು "ಅಗ್ನಿಪ್ರವೇಶ" ಮಾಡು ಎಂದು ಹೇಳಿದನು. ಆ ಸಮಯದಲ್ಲಿ ಎಲ್ಲರೂ ನೋಡುತ್ತಿರುವಾಗಲೇ ಅಗ್ನಿಕುಂಡದಿಂದ ಇಬ್ಬರು ಸೀತೆಯರು ಪ್ರತ್ಯಕ್ಷರಾದರು. ಈ ದೃಶ್ಯವನ್ನು ನೋಡಿ ಶ್ರೀರಾಮಚಂದ್ರ ಆಶ್ಚರ್ಯಪಡುತ್ತ ಅಗ್ನಿದೇವನನ್ನು ಇಲ್ಲಿ ಏನಾಗುತ್ತಿದೆ? ಈ ಇಬ್ಬರಲ್ಲಿ ನಿಜವಾದ ಸೀತೆ ಯಾರು? ಎಂದು ಪರಿ ಪರಿಯಾಗಿ ಪ್ರಶ್ನಿಸಿದನು.

ಕೂಡಲೇ ಅಗ್ನಿದೇವನು "ಶ್ರೀರಾಮಚಂದ್ರ! ಲಂಕಾಧಿಪತಿ ರಾವಣನು ಸೀತೆಯನ್ನು ಅಪಹರಿಸಿದ ಸಮಯದಲ್ಲಿ ನಿಜವಾದ ಸೀತೆಯನ್ನು ನನ್ನ ಬಳಿಯಲ್ಲಿ ಇಟ್ಟುಕೊಂಡು, ಮಾಯಾಸೀತೆಯಾದ ವೇದವತಿಯನ್ನು ರಾವಣನ ಜೊತೆಯಲ್ಲಿ ಕಳಿಸಿದೆ. ಈ ವೇದವತಿ ಲಂಕೆಯಲ್ಲಿ ಸೀತೆಗೆ ಬದಲಾಗಿ ಸಾಕಷ್ಟು ಕಷ್ಟವನ್ನು ಅನುಭವಿಸಿದಳು. ಅನುಕ್ಷಣ ನಿನ್ನನ್ನು ಸೀತೆಯಂತೆಯೇ ಪತಿಯೆಂದು ಭಾವಿಸಿದ್ದಾಳೆ. ಆದುದರಿಂದ ಸೀತಾದೇವಿಯೊಡನೆ ಮಾಯಾಸೀತೆಯಾದ ಈ ವೇದಾವತಿಯನ್ನು ನಿನ್ನ ಪತ್ನಿಯಾಗಿ ಸ್ವೀಕರಿಸು ಎಂದು ಶ್ರೀರಾಮಚಂದ್ರನನ್ನು ಪ್ರಾರ್ಥಿಸಿದನು. ಅಗ್ನಿದೇವನ ಈ ಕೋರಿಕೆ ನ್ಯಾಯವಾದುದೇ, ನನಗೂ ಈ ವಿಷಯದಲ್ಲಿ ಸಮ್ಮತಿಯಿದೆ. ಸ್ವಾಮಿ ಶ್ರೀರಾಮಚಂದ್ರ, ದಯವಿಟ್ಟು ವೇದವತಿಯನ್ನು ಪತ್ನಿಯಾಗಿ ಸ್ವೀಕರಿಸು ಎಂದು ಸೀತಾದೇವಿ ಪತಿಯಲ್ಲಿ ಪ್ರಾರ್ಥಿಸಿದಳು. ಆಗ ಶ್ರೀರಾಮನು "ಅಗ್ನಿದೇವ! ಈ ನನ್ನ ರಾಮಾವತಾರದಲ್ಲಿ ಒಂದೇ ಮಾತು, ಒಂದೇಬಾಣ, ಒಬ್ಬಳೇಸತಿ" ಇದು ವ್ರತನಿಯಮ. ನಾನು ಈ ವ್ರತನಿಯಮವನ್ನು ಅನುಸರಿಸುತ್ತಿರುವುದ ರಿಂದ ಈ ಸಮಯದಲ್ಲಿ ನಿಮ್ಮ ಈ ಆಸೆ ಪ್ರಾರ್ಥನೆ ಈಡೇರುವುದಿಲ್ಲ. ಆದರೆ ಮುಂಬರುವ ಕಲಿಯುಗದಲ್ಲಿ ನಾನು ವೆಂಕಟಾಚಲದಲ್ಲಿ ವೆಂಕಟೇಶನಾಗಿ ಅವತರಿಸುವ ಸಮಯದಲ್ಲಿ ವೇದವತಿಯು ಆಕಾಶರಾಜನಿಗೆ ಮಗಳಾಗಿ ಜನಿಸುವಳು. ಆಗ ನಾನು ವೇದವತಿಯನ್ನು ವಿವಾಹವಾಗಿ ನಿಮ್ಮೆಲ್ಲರ ಆಸೆ, ಕೋರಿಕೆಗಳು ಈಡೇರುತ್ತದೆ" ಎಂದು ಶ್ರೀರಾಮನು ವಾಗ್ದಾನ ಮಾಡಿದನು. ಅಲ್ಲಿಯ ವರೆಗೆ ವೇದವತಿಯು ಬ್ರಹ್ಮಲೋಕದಲ್ಲಿ ಇರಲಿ ಎಂದು ಅಗ್ನಿದೇವನಲ್ಲಿ ವಿನಂತಿಸಿಕೊಂಡನು. ಅಗ್ನಿದೇವನು ವೇದಾವತಿಯನ್ನು ಬ್ರಹ್ಮಲೋಕಕ್ಕೆ ಕರೆದುಕೊಂಡು

ಹೋಗಿ ಬಿಟ್ಟನು. ಶ್ರೀರಾಮನು ಸೀತೆಯೊಡನೆ ಅಯೋಧ್ಯೆ ತಲುಪಿದನು," ಎಂದು ತಾಯಿ ವಕುಳೆಗೆ ವಿವರಿಸಿದರು.

ಅಂದು ತ್ರೇತಾಯುಗದಲ್ಲಿ ಶ್ರೀರಾಮಚಂದ್ರನಾಗಿದ್ದ ನಾನು ಈಗ ಶ್ರೀನಿವಾಸನಾಗಿ ಅವತರಿಸಿದ್ದೇನೆ. ಆಗಿನ ವೇದಾವತಿಯು ಈಗ ನಾರಾಯಣವನವನ್ನು ಆಳುತ್ತಿರುವ ಚಕ್ರವರ್ತಿಯಾದ ಆಕಾಶರಾಜನ ಮಗಳು ಪದ್ಮಾವತಿಯಾಗಿ ಅವತರಿಸಿದ್ದಾಳೆ. ಅವಳು ಸಾಮಾನ್ಯಳಲ್ಲ ವಕುಳಮಾತೆ ಎಂದು ಹೇಳಿ ನಸುನಗುತ್ತಿದ್ದನು.

ಮಗು ಶ್ರೀನಿವಾಸ! ಇದುವರೆವಿಗೂ ನೀನು ಹೇಳಿದ ನಿನ್ನ ದಿವ್ಯಕಥೆ ಆಶ್ಚರ್ಯವಾಗಿದೆ, ಬಹಳ ಚೆನ್ನಾಗಿದೆ. ಆನಂದವಾಗಿದೆ. ಅದುಸರಿ! ನಿನ್ನ ರಾಮಾವತಾರದಲ್ಲಿ ವೇದವತಿಯ ಬಗ್ಗೆ ಹೇಳಿದೆಯಲ್ಲ "ಈ ವೇದವತಿ ಯಾರು?" ಎಂದು ವಕುಳಾದೇವಿ ಬಹಳ ಆಸಕ್ತಿಯಿಂದ ಶ್ರೀನಿವಾಸನನ್ನು ನೋಡುತ್ತ ಕೇಳಿದಳು. ಶ್ರೀನಿವಾಸನೂ ಅಷ್ಟೇ ಸಂತೋಷದಿಂದ ವೇದವತಿಯ ಬಗ್ಗೆ ಹೀಗೆ ಹೇಳಿದನು.

## ವೇದವತಿ ಯಾರು?

ಒಂದಾನೊಂದು ಕಾಲದಲ್ಲಿ "ಮಯ" ನೆಂಬ ಒಬ್ಬ ವಿಪ್ರೋತ್ತಮ ಇದ್ದನು. ಆ ವಿಪ್ರನು ತನ್ನ ನಿದ್ರಾಸಮಯವನ್ನು ಬಿಟ್ಟು, ಉಳಿದ ಸಮಯದಲ್ಲೆಲ್ಲ ಪ್ರತಿಕ್ಷಣದಲ್ಲಿಯೂ ವೇದಗಳನ್ನು ಸುಸ್ವರದಲ್ಲಿ, ಭಕ್ತಿಯಿಂದ ಪಠಿಸುತ್ತಿದ್ದನು. ನಿತ್ಯ ವೇದಾಧ್ಯಯನ ಸಂಪನ್ನನಾದ ಮಯನು ದೇವತಾರ್ಚನೆಗಾಗಿ ನೀರನ್ನು ತರಲು ನದಿತೀರಕ್ಕೆ ಹೋದನು. ಆ ಸರಸಿನಲ್ಲಿ ಓರ್ವ ಅಪ್ಸರೆ ಊರ್ವಶಿ ಅರೆನಗ್ನಾವಸ್ಥೆಯಲ್ಲಿ ಜಲಕ್ರೀಡೆ ಆಡುತ್ತ ಸ್ನಾನಮಾಡುತ್ತಿದ್ದಳು. ಆ ದೇವಕನ್ಯೆಯ ದೇಹಸೌಂದರ್ಯವನ್ನು ನೋಡಿದ ವಿಪ್ರೋತ್ತಮನಿಗೆ ಕಾಮವುಂಟಾಯಿತು. ಮನಸ್ಸಿನ ಚಂಚಲತೆಯಿಂದಾಗಿ ವಿಪ್ರನ ವೇದಪಠಣ ನಿಲ್ಲದೆ ನಿರಂತರವಾಗಿ ನಡೆಯುತ್ತಲೇ ಇತ್ತು. ಆ ಸಮಯದಲ್ಲಿ ಕಾಮೋದ್ರೇಕದಿಂದ ವೀರ್ಯ ಸ್ಖಲನವಾಯಿತು. ಆ ವೇದಪುರುಷನ, ತಪಸ್ವಿಯ ವೀರ್ಯದಿಂದ ಕ್ಷಣದಲ್ಲಿಯೇ ಅದ್ಭುತ ತೇಜೋರಾಶಿಯಿಂದ ಕೂಡಿದ ಶಿಶುವೊಂದು ಉದ್ಭವಿಸಿತು. ಆ ವಿಪ್ರನು ಆಶ್ಚರ್ಯದಿಂದ ನೋಡುತ್ತಾ ಹೆಣ್ಣು ಶಿಶುವನ್ನು ಸಂತೋಷದಿಂದ ಎತ್ತಿಕೊಂಡು, ಹೆಣ್ಣುಮಗುವಿನ ಜನನದಿಂದ ಸಂತೋಷಪಟ್ಟನು. ವೇದಗಳನ್ನು ಹೇಳುತ್ತಿದ್ದ ಕಾರಣ, ಆ ಸಮಯದಲ್ಲಿ ಮಗು ಉದ್ಭವಿಸಿದ್ದರಿಂದ ಮಗುವಿಗೆ 'ವೇದವತಿ' ಎಂದು ಹೆಸರಿಟ್ಟು ಪ್ರೀತಿಯಿಂದ ಬೆಳೆಸಿದರು. ಆ ಪುಟ್ಟ ಮಗು ಕೂಡ ಹೆಸರಿಗೆ ತಕ್ಕಂತೆ ತನ್ನ ತಂದೆಯಿಂದ ವೇದಗಳನ್ನು ಕಲಿತುಕೊಂಡಿತು. ನೋಡು

ನೋಡುತ್ತಿದ್ದಂತೆ ಬೆಳೆದು ವೇದ ನಿಷ್ಣಾತಳಾದ ವೇದವತಿಯು ವೇದ ಪುರುಷನಾದ ಸಾಕ್ಷಾತ್ತು ಶ್ರೀ ಮಹಾವಿಷ್ಣುವನ್ನೇ ತನ್ನ ಪತಿಯನ್ನಾಗಿ ಪಡೆಯಲು ನಿರ್ಧರಿಸಿದಳು. ಅಷ್ಟರಲ್ಲಿ ಅತಿಬಲ ಎಂಬ ರಾಕ್ಷಸನು ಅದ್ಭುತ ಸುಂದರಿಯಾಗಿದ್ದ ವೇದಾವತಿಯನ್ನು ಕಂಡನು. ಏನೇ ಆಗಲಿ ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕೆಂದು ಆಸೆಪಟ್ಟನು.

ತನಗೆ ವೇದವತಿಯನ್ನು ವಿವಾಹ ಮಾಡಿಕೊಡಬೇಕೆಂದು ರಾಕ್ಷಸನು ಅವಳ ತಂದೆ ಮಯನನ್ನು ಕೇಳಿದನು. ಮಯನು ಅತಿಬಲನ ಕೋರಿಕೆಯನ್ನು ನಿರಾಕರಿಸಿ, ತನ್ನ ಮಗಳು ಶ್ರೀಮಹಾವಿಷ್ಣುವನ್ನೇ ವಿವಾಹ ಮಾಡಿಕೊಳ್ಳುವುದಾಗಿ ನಿಶ್ಚಯಿಸಿದ್ದಾಳೆ ಎಂದು ಹೇಳಿದನು. ಮಯನ ಮಾತಿನಿಂದ ಕೆರಳಿದ ದುಷ್ಟರಾಕ್ಷಸ ಕ್ಷಣದಲ್ಲಿ ಮಯನನ್ನು ಸಂಹರಿಸಿ ವೇದವತಿಯನ್ನು ಬಲಾತ್ಕರಿಸಿದನು. ಕೋಪದಿಂದ ವೇದವತಿ, ರಾಕ್ಷಸನನ್ನು "ಸುಟ್ಟು ಬೂದಿಯಾಗು" ಎಂದು ಶಪಿಸಿದಳು. ಅವಳ ಶಾಪದ ಪ್ರಭಾವದಿಂದ ಆ ರಕ್ಕಸನು ಬೂದಿಯಾದನು. ನಂತರ ವೇದವತಿ ಶ್ರೀಮನ್ನಾರಾಯಣನನ್ನು ಪತಿಯಾಗಿ ಪಡೆಯುವ ಸಲುವಾಗಿ ತಪೋವನಕ್ಕೆ ತೆರಳಿ ತಪಸ್ಸಿಗೆ ಕೂತಳು. ಸೌಂದರ್ಯವತಿಯಾದ ವೇದವತಿ ತಪಸ್ಸು ಮಾಡುತ್ತಿರುವಾಗ ರಾವಣಾಸುರನು ಅವಳನ್ನು ನೋಡಿ ಮೋಹಗೊಂಡನು. ವಿವಾಹವಾಗುವಂತೆ ಹಲವಾರು ರೀತಿಯಲ್ಲಿ ಕಿರುಕುಳ ಕೊಟ್ಟನು. ಅನೇಕ ವಿಧವಾಗಿ ಬೇಡಿಕೊಂಡರು ಮಣಿಯದ ವೇದವತಿಯನ್ನು ಮುಟ್ಟಿ ಬಲಾತ್ಕಾರ ಮಾಡುತ್ತಾನೆ. ತನ್ನ ತಪೋಭಂಗ ಮಾಡಿದ್ದಲ್ಲದೆ ದೇಹವನ್ನು ಮುಟ್ಟಿ ಬಲಾತ್ಕಾರ ಮಾಡಿದ ರಾವಣಾಸುರನನ್ನು "ನನ್ನ ಸಾವಿಗೆ ಕಾರಣನಾದ ನಿನ್ನನ್ನು, ನನ್ನ ಪತಿ ಶ್ರೀಮನ್ನಾರಾಯಣನ ಕೈಯ್ಯಿನಿಂದಲೇ ನಿನ್ನ ಮರಣ ಹೊಂದುವಂತೆ ಮಾಡಿ ನನ್ನ ಪ್ರತೀಕಾರವನ್ನು ತೀರಿಸಿಕೊಳ್ಳುತ್ತೇನೆ ಇದು ನನ್ನ ಪ್ರತಿಜ್ಞೆ ಎಂದು ಹೇಳಿ ಅಗ್ನಿಪ್ರವೇಶ ಮಾಡಿದಳು. ನಂತರ ಅಗ್ನಿಯಲ್ಲಿಯೇ ಆವಿರ್ಭವಿಸಿ ಅವನ ಸಂರಕ್ಷಣೆಯಲ್ಲಿ ಬೆಳೆದಳು ವೇದವತಿ.

ನಂತರ ಕಾಲಗರ್ಭದಲ್ಲಿ ಶ್ರೀರಾಮನ ಪತ್ನಿ ಸೀತಾದೇವಿಯನ್ನು ರಾವಣಾಸುರನು ಅಪಹರಿಸಿಕೊಂಡು ಹೋಗುತ್ತಿದ್ದ ಸಮಯದಲ್ಲಿ ಅಗ್ನಿದೇವನ ಉಪಾಯದಿಂದ ನಿಜಸೀತೆಗೆ ಬದಲಾಗಿ ವೇದವತಿ ರಾವಣನ ಜೊತೆಯಲ್ಲಿ ಲಂಕೆಗೆ ಹೋದಳು. ರಾವಣನ ಸಂಹಾರವಾದಮೇಲೆ ನನ್ನ ಅನುಗ್ರಹದಿಂದ ಬ್ರಹ್ಮಲೋಕ ಸೇರಿದಳು. ಅಲ್ಲಿಂದ ಮುಂದೆ ಆಕಾಶರಾಜನ ಮಗಳಾಗಿ ಪದ್ಮಾವತಿಯಾಗಿ ಜನಿಸಿದಳು. ಆ ಪದ್ಮಾವತಿಗೆ ನನ್ನನ್ನು ನೋಡಿದ ಕ್ಷಣದಿಂದ ಪ್ರೀತಿ ಅಂಕುರಿಸಿತು. ನನ್ನ ಮನಸ್ಸಿನ ಪರಿಸ್ಥಿತಿಯು ಅದೇ ಆಗಿದೆ ಎಂದು ಸ್ವಾಮಿ ಶ್ರೀನಿವಾಸ ತನ್ನ ಪೂರ್ವಲೀಲೆಯನ್ನು, ಕಥೆಯನ್ನು ಮೈಮರೆತು ಕೇಳುತ್ತಿದ್ದ ವಕುಳಾದೇವಿ

ಆನಂದಭಾಷ್ಪವನ್ನು ಹರಿಸುತ್ತ "ಹಾಗಾದರೆ ಪದ್ಮಾವತಿಯ ತಂದೆ ಆಕಾಶರಾಜ ಯಾರು?" ಎಂದು ಪ್ರಶ್ನಿಸಿದಳು.

## ಹಿಂದಿನ ಜನ್ಮದಲ್ಲಿ ಆಕಾಶ ರಾಜ

ಹಿಂದೆ ಮಾಧವ ಎಂಬ ಬ್ರಾಹ್ಮಣನು ಪ್ರಾರಬ್ಧಕರ್ಮಕ್ಕೆ ವಶನಾಗಿ ಕುಂತಲ ಎಂಬ ಸ್ತ್ರೀಯೊಂದಿಗೆ ಸಂಭೋಗದಿಂದ ಮಹಾಪಾಪವನ್ನು ಮಾಡಿದನು. ಆ ಪಾಪದಿಂದ ಮುಕ್ತಿ ಹೊಂದಲು ವೆಂಕಟಾದ್ರಿಗೆ ಬಂದು ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನ ಮಾಡಿದನು. ಅಲ್ಲಿ ಭಗವಂತನಿಗಾಗಿ ತಪಸ್ಸು ಮಾಡಿದನು. ದೇವರು ಪ್ರತ್ಯಕ್ಷನಾಗಲಿಲ್ಲ ಎಂದು ಚಿಂತಿಸಿ ಪ್ರಾಣ ತ್ಯಾಗ ಮಾಡಿದ. ಆ ಸಮಯದಲ್ಲಿ ದೇವರು ಪ್ರತ್ಯಕ್ಷನಾಗಿ ಅವನ ಭಕ್ತಿ, ಪರಿತಾಪಕ್ಕೆ ಮೆಚ್ಚಿ ಹೇಳಿದನು, "ನೀನು ನಿನ್ನ ಮುಂದಿನ ಜನ್ಮದಲ್ಲಿ ಪಾಂಡವ ವಂಶದಲ್ಲಿ ಸುಧರ್ಮ ಎಂಬ ರಾಜನ ಮಗನಾಗಿ ಹುಟ್ಟಿ ಆಕಾಶರಾಜನೆಂಬ ಹೆಸರಿನಿಂದ ಪ್ರಸಿದ್ಧನಾಗುವೆ. ಆ ಸಮಯದಲ್ಲಿ ಸಾಕ್ಷಾತ್ ಶ್ರೀ ಮಹಾಲಕ್ಷ್ಮೀಯ ಸ್ವರೂಪಿಣಿಯಾದ ಹೆಣ್ಣುಮಗು ಒಂದು ನಿನಗೆ ಲಭಿಸುತ್ತದೆ. ಪದ್ಮಾವತಿದೇವಿ ಎನ್ನುವ ಆ ಕನ್ಯಾಮಣಿಯನ್ನು ನನಗೆ ಕೊಟ್ಟು ವಿವಾಹ ಮಾಡುವೆ. ನಿನ್ನ ಹೆಸರು, ಕೀರ್ತಿ ಆಚಂದ್ರಾರ್ಕವಾಗಿ ಬೆಳಗುತ್ತದೆ" ಎಂದು ವರವಿತ್ತನು.

"ಅಮ್ಮಾ! ಆ ಬ್ರಾಹ್ಮಣನು ಬೇರೆ ಯಾರು ಅಲ್ಲ. ಅವನೇ ಆಕಾಶರಾಜ. ಅವನ ಹೆಂಡತಿ ಧರಣಿದೇವಿ. ಮಹಾಪತಿವ್ರತೆ. ಅವರಿಗೆ ಸಂತಾನ ಭಾಗ್ಯವಿಲ್ಲದ ಕಾರಣ ಜ್ಯೋತಿಷಿಗಳ ಆದೇಶದಂತೆ ಪುತ್ರಕಾಮೇಷ್ಠಿ ಯಾಗವನ್ನು ಮಾಡಿದರು. ಯಾಗದ ಸಂದರ್ಭದಲ್ಲಿ ಯಜ್ಞಭೂಮಿಯನ್ನು ಉಳುವಾಗ, ನೇಗಿಲಿಗೆ ಒಂದು ಬಂಗಾರದ ಪೆಟ್ಟಿಗೆ ಸಿಲುಕಿತು. ಪೆಟ್ಟಿಗೆಯನ್ನು ತೆರೆದು ನೋಡಿದಾಗ ಅದರಲ್ಲಿ ಸಹಸ್ರದಳದ ಬಂಗಾರದ ಪದ್ಮ, ಆ ಪದ್ಮದಲ್ಲಿ ಹೊಳೆ ಹೊಳೆಯುವ ತೇಜಸ್ಸಿನಿಂದ ಪ್ರಕಾಶಿಸುತ್ತಿದ್ದ ಆಗತಾನೆ ಜನಿಸಿದಂತೆ ತೋರುವ ಒಂದು ಪುಟ್ಟ ಮುದ್ದಾದ ಮಗು ಮಲಗಿತ್ತು. ಸಂತಾನ ಭಾಗ್ಯವಿಲ್ಲದ ತಮಗೆ ಆ ದೇವರೇ ಅನುಗ್ರಹಿಸಿದ್ದಾನೆ ಎಂದು ರಾಜದಂಪತಿಗಳು ಸಂತೋಷಪಟ್ಟರು. ಸಹಸ್ರದಳ ಪದ್ಮದಲ್ಲಿ ದೊರೆತ ಮಗುವಿಗೆ "ಪದ್ಮಾವತಿ" ಎಂದು ನಾಮಕರಣ ಮಾಡಿದರು. ಯೌವ್ವನವತಿಯಾದ ಅಸಾಮಾನ್ಯವಾದ ಸೌಂದರ್ಯದಿಂದ ವಿರಾಜಿಸುತ್ತ ಅವಳ ಸಖಿಯರೊಡನೆ ವನವಿಹಾರ ಮಾಡುತ್ತಿದ್ದ ಪದ್ಮಾವತಿಯನ್ನು ನಾನು ನೋಡಿದೆ. ಆ ಕ್ಷಣದಿಂದ ನನ್ನ ಮನಸ್ಥಿತಿ ಅಲ್ಲೋಲ ಕಲ್ಲೋಲವಾಗಿದೆ. ನನ್ನ ಹತೋಟಿಗೆ ನಿಲುಕದ್ದಾಗಿದೆ ತಾಯಿ! ನನ್ನ ಕಥೆಯನ್ನು ಸಂಪೂರ್ಣವಾಗಿ ಕೇಳಿದೆ ಅಲ್ಲವೇ? ನಿನ್ನ ಎಲ್ಲ ಸಂದೇಹಕ್ಕೆ ಉತ್ತರ ಸಿಕ್ಕಿತಲ್ಲವೇ? ಎಂದು ಅನಂತ ಲೀಲಾಮಾನುಷ ವಿಗ್ರಹನಾದ ಸ್ವಾಮಿ ಶ್ರೀನಿವಾಸನು

ಹೇಳಿದ ಕಥೆಯನ್ನು ಮೈಮರೆತು ಕೇಳುತ್ತಿದ್ದ ವಕುಳಾ ವರ್ಣಿಸಲಾಗದ ಪರಮಾನುಭೂತಿಯಿಂದ "ಮಗುವೇ! ಶ್ರೀನಿವಾಸ! ತುಂಬಾ ಚೆನ್ನಾಗಿತ್ತು, ನನಗೆ ಹೇಳಲಾಗದಷ್ಟು ಸಂತೋಷವಾಗುತ್ತಿದೆ. ಈಗ ನಾನು ನಿನಗಾಗಿ ಏನುಮಾಡಬೇಕು? ಅದನ್ನು ಹೇಳು ಎಂದು ಕೇಳಿದಳು ಎಂದು ಸೂತಮಹರ್ಷಿಗಳು ಶೌನಕಾದಿಗಳಿಗೆ ಹೇಳತೊಡಗಿದರು.

## ಮದುವೆಯ ರಾಯಭಾರ!

"ಅಮ್ಮಾ! ವಕುಳಮಾತಾ! ನೀನು ನಾರಾಯಣವನದ ಚಕ್ರವರ್ತಿ ಆಕಾಶರಾಜನ ಬಳಿಗೆ ಹೋಗಿ ಅವನ ಮಗಳು ಪದ್ಮಾವತಿಯನ್ನು ನನಗೆ ಕೊಟ್ಟು ಮದುವೆ ಮಾಡಿಕೊಡುವಂತೆ ನೀನು ರಾಯಭಾರ ಮಾಡಿ ಈ ವಿವಾಹ ಕಾರ್ಯ ನಿರ್ವಿಘ್ನವಾಗಿ ನಡೆಯುವಂತೆ ಮಾಡಬೇಕು. ಅರ್ಥವಾಯಿತೆ ತಾಯಿ! ಲೋಕಕಲ್ಯಾಣಕ್ಕಾಗಿ ನೀನು ಪ್ರಯತ್ನಿಸುತ್ತಿರುವ ಈ ಕಾರ್ಯವು ತಪ್ಪದೆ ನೆರವೇರುತ್ತದೆ. ಜನನಿ! ನೀನು ಅಲ್ಲಿಗೆ ಹೋಗುವ ಮೊದಲು ಈ ಪರ್ವತದ ಮೂಲೆಯಲ್ಲಿ ಇರುವ ಕಪಿಲೇಶ್ವರ ಸ್ವಾಮಿಯ ದರ್ಶನ ಪಡೆಯಬೇಕು.

**"ಅಸ್ಮಾದೇವ ವರನ್ಮಾರ್ಗಾತ್ ಅವರುಹ್ಯ ಗಿರೇಸ್ತಟಾತ್,**
**ತ್ವಂ ಗಚ್ಛಾದಃ ಪ್ರದೇಶೇ ಚ ಕಾಪಿಲಂ ಲಿಂಗಮುತ್ತಮಮ್,**
**ತತ್ರಾಸ್ತೇ ತೀರ್ಥ ರಾಜೋ ಯಃ ಕಪಿಲೇಶ್ವರ ಸನ್ನಿಧೌ,**
**ತತ್ರ ಸ್ನಾತ್ವಾ ಯಥಾ ಯೋಗ್ಯಂ ಮದರ್ಥಂ ತೀರ್ಥ ಪುಂಗವೇ,**
**ಕಪಿಲೇಶ್ವರ ಮಾನೇದ್ಯ ಯಾವ್ಯತಾಂ ಪರಮವ್ಯಯಮ್,**
**ಶ್ರೀನಿವಾಸೇನ ಬಾಲೇನ ಸದಾ ಕಲ್ಯಾಣಕಾಂಕ್ಷಿಣಾ,**
**ಪ್ರೇಷಿತಾಽಪಾಂ ತದರ್ಥಂ ವೈ ಕುರು ಮೇಽಭೀಪ್ಸಿತಂ ಪ್ರಿಯಮ್"**

ಅಮ್ಮಾ! ವಕುಳಾದೇವಿ! ಈ ಪರ್ವತಕ್ಕೆ ಹೋಗುವ ದಾರಿಯಲ್ಲಿ ಈ ಬೆಟ್ಟದ ಕೆಳಭಾಗದಲ್ಲಿ ಅತ್ಯಂತ ಮಹಿಮಾನ್ವಿತವಾದ ಮತ್ತು ಅತ್ಯುತ್ತಮವಾದ ಶ್ರೀ ಕಪಿಲೇಶ್ವರ ಲಿಂಗವಿದೆ. ಕಪಿಲ ಮಹಾಲಿಂಗನ ಸನ್ನಿಧಿಯ ಬಳಿ ಪವಿತ್ರವಾದ ಕಪಿಲತೀರ್ಥ ಪುಣ್ಯಜಲದಲ್ಲಿ ಭಕ್ತಿಯಿಂದ ವಿಧಿವತ್ತಾಗಿ ಸ್ನಾನ ಮಾಡಿ ಶ್ರೀಕಪಿಲೇಶ್ವರನ ದರ್ಶನ ಪಡೆದು "ಈ ವಿವಾಹ ಕಾರ್ಯವನ್ನು ಯಾವುದೇ ಅಡೆತಡೆಯಿಲ್ಲದೆ ನೆರವೇರಿಸು" ಎಂದು ಭಕ್ತಿಯಿಂದ ಪ್ರಾರ್ಥಿಸಿ, ನನ್ನ ವಿವಾಹ ಕಾರ್ಯವನ್ನು ಪೂರೈಸಿ ನನ್ನನ್ನು ಸಂತೋಷಪಡಿಸು ತಾಯಿ ಎಂದು ಶ್ರೀನಿವಾಸನು ವಕುಳಾದೇವಿಯನ್ನು ಪ್ರಾರ್ಥಿಸಿದನು.

ಲೋಕ ಕಲ್ಯಾಣಕ್ಕಾಗಿ ಜಗತ್ಕಲ್ಯಾಣ ಚಕ್ರವರ್ತಿ ಶ್ರೀನಿವಾಸನು ತನಗೆ ವಹಿಸಿದ ಕಾರ್ಯಭಾರಕ್ಕಾಗಿ ವ್ಯಕ್ತಪಡಿಸಲಾಗದ ಆನಂದದಿಂದ "ಇದು ನನ್ನ ಎಷ್ಟು ಜನ್ಮದ ಪುಣ್ಯಫಲವೋ ಈ ಭಾಗ್ಯ ನನಗೆ ದೊರೆತಿದೆ. ಈ ಕಾರ್ಯದಲ್ಲಿ ನಾನು ನಿಮಿತ್ತಮಾತ್ರ. ಸ್ವಾಮಿ ಶ್ರೀನಿವಾಸನು ತನಗೆ ಒಪ್ಪಿಸಿರುವ ಕಾರ್ಯವನ್ನು ಕುಂದುಬಾರದಂತೆ ನಿರ್ವಹಿಸುವುದು ನನ್ನ ಕರ್ತವ್ಯ" ಎಂದು ಯೋಚಿಸುತ್ತ ಶೇಷಾಚಲ ಪರ್ವತದಲ್ಲಿರುವ ಕಪಿಲತೀರ್ಥವನ್ನು ತಲುಪಿ, ಪವಿತ್ರವಾದ ತೀರ್ಥದಲ್ಲಿ ಶಾಸ್ತ್ರೋಕ್ತವಾಗಿ ಸ್ನಾನವಿಧಿಯನ್ನು ಮುಗಿಸಿ, ಶ್ರೀಕಾಮೇಶ್ವರಿ ಸಹಿತನಾದ ಕಪಿಲೇಶ್ವರ ಸ್ವಾಮಿಯನ್ನು ಅನೇಕ ರೀತಿಯಲ್ಲಿ ಸ್ತುತಿಸಿ ಶ್ರೀನಿವಾಸನ ಕಲ್ಯಾಣವು ಶೀಘ್ರವಾಗಿ ನೆರವೇರಲಿ ಎಂದು ಪ್ರಾರ್ಥಿಸಿದಳು. ಅಲ್ಲಿಂದ ನಾರಾಯಣವನಕ್ಕೆ ಹೊರಟಳು.

ದಾರಿಯಲ್ಲಿ ಶ್ರೀಶುಕಮಹರ್ಷಿಗಳ ಆಶ್ರಮಕ್ಕೆ ಭೇಟಿ ನೀಡಿ ನಂತರ ಅಲ್ಲಿಯೇ ನೆಲೆಸಿದ್ದ ಅಗಸ್ತ್ಯೇಶ್ವರನ ದರ್ಶನ ಮಾಡಿದಳು. ಅದೇ ಸಮಯಕ್ಕೆ ಸರಿಯಾಗಿ ಅಗಸ್ತ್ಯೇಶ್ವರ ಸ್ವಾಮಿಗೆ ಅಭಿಷೇಕ ಮಾಡಲು ಪದ್ಮಾವತಿ ತನ್ನ ಸಖಿಯರೊಡನೆ ಬಂದಳು. ಅವರು ಯಾರೆಂದು ತಿಳಿಯದೆ ಅವರನ್ನು ವಕುಳಾದೇವಿ ಭೇಟಿಯಾದಳು. ಅವಳ ಸಖಿಯರನ್ನು ಅವರು ಯಾರು? ಎಲ್ಲಿಂದ ಬಂದಿದ್ದಾರೆ? ಬಂದ ಕಾರಣವೇನು? ಇತ್ಯಾದಿ ಪ್ರಶ್ನೆಗಳ ಸರಣಿಯೊಂದಿಗೆ ವಿವರಗಳನ್ನು ಕೇಳಿದಳು.

ನಾರಾಯಣವನದ ಮಹಾರಾಜನಾದ ಆಕಾಶರಾಜನ ಪುತ್ರಿ ಪದ್ಮಾವತಿದೇವಿಯ ಸಖಿಯರು ನಾವು. ಆಕಾಶರಾಜ, ನಾರಾಯಣವನದ ರಾಜ. ನಾವು ಪದ್ಮಾವತಿ ದೇವಿಯೊಡನೆ ವನವಿಹಾರದಲ್ಲಿ ಇದ್ದಾಗ ಒಬ್ಬ ದಿವ್ಯಪುರುಷನು ಕಾಣಿಸಿಕೊಂಡನು. ಆ ಪುರುಷನನ್ನು ನೋಡಿದ ಕ್ಷಣದಿಂದ ನಮ್ಮ ರಾಜಕುಮಾರಿ ಪದ್ಮಾವತಿ ಪ್ರೀತಿಯಲ್ಲಿ ಮುಳುಗಿದಳು. ವಿರಹ ತಾಪ ಜ್ವರದಿಂದ ಬಳಲುತ್ತಿದ್ದಾಳೆ. ಅಸ್ವಸ್ಥಳಾದ ನಮ್ಮ ರಾಜಕುಮಾರಿಯ ಆರೋಗ್ಯಕ್ಕಾಗಿ ನಮ್ಮ ರಾಜ ಮತ್ತು ರಾಣಿ ಅವರು ಸ್ವಾಮಿಗೆ ರುದ್ರಾಭಿಷೇಕ ಮಾಡಲು ನಮ್ಮನ್ನು ಇಲ್ಲಿಗೆ ಕಳಿಸಿದ್ದಾರೆ. ಅದಕ್ಕಾಗಿ ನಾವು ಇಲ್ಲಿಗೆ ಬಂದಿದ್ದೇವೆ. ನಮ್ಮ ರಾಜಕುಮಾರಿಗೆ ಕಾಣಿಸಿಕೊಂಡ ಆ ದಿವ್ಯಪುರುಷ ಯಾರು? ಎಲ್ಲಿಂದ ಬಂದ? ಅದು ನಮಗೆ ತಿಳಿಯದಾಗಿದೆ. ನಮ್ಮ ರಾಜಕುಮಾರಿಗಾಗಿ ಪ್ರಾರ್ಥನೆ ಮಾಡುತ್ತಿದ್ದೇವೆ ಎಂದು ಎಲ್ಲ ವಿವರವನ್ನು ವಕುಳಾದೇವಿಯ ಬಳಿ ಹೇಳಿಕೊಂಡರು.

"ಹಾಗಾದರೆ! ನಾನು ನಿಮ್ಮ ಮಹಾರಾಣಿ ಅವರನ್ನು ಭೇಟಿಮಾಡಿ, ಮಾತನಾಡಲು ಒಂದು ಸಭೆಯನ್ನು ಏರ್ಪಡಿಸಿ. ನಿಮ್ಮ ರಾಜಕುಮಾರಿಯು

ಖಂಡಿತವಾಗಿಯೂ ಗುಣ ಮುಖಳಾಗುತ್ತಾಳೆ" ಎಂದು ವಕುಳಮಾತೆ ಅವರನ್ನು ಒಪ್ಪಿಸಿ ಅವರೊಡನೆ ನಾರಾಯಣ ವನವನ್ನು ತಲುಪಿದಳು.

## ಕಣಿ ಹೇಳುವವಳ (ಕೊರವಂಜಿ) ವೇಷ

ತನ್ನ ತಾಯಿ ವಕುಳಾದೇವಿಯನ್ನು ವೆಂಕಟಾದ್ರಿಯಿಂದ ನಾರಾಯಣವನಕ್ಕೆ ಮದುವೆಯ ರಾಯಭಾರಕ್ಕೆ ಕಳುಹಿಸಿದ ಶ್ರೀನಿವಾಸ ತಕ್ಷಣ ತನ್ನ ರೂಪವನ್ನು ಬದಲಾಯಿಸಿದನು. ಲೀಲಾ ಮಾನುಷದ ರೂಪದಲ್ಲಿರುವ ಆ ಭಗವಂತ ಕಣಿಹೇಳುವ ಕೊರವಂಜಿ ವೇಷ ಧರಿಸಿದನು. ಕೂಡಲೇ ನಾರಾಯಣಪುರದ ಬೀದಿ ಬೀದಿಯಲ್ಲಿ ಅಲೆಯುತ್ತ, ಕಣಿ ಹೇಳ್ತೀನಮ್ಮಾ ಕಣಿ. ಹಿಂದೆ ಆದದ್ದನ್ನು, ಮುಂದೆ ಆಗುವುದನ್ನು ಹೇಳ್ತಿನಿ. ನಾನು ಹೇಳಿದೆಲ್ಲ ನಿಜವಾಗುತ್ತೆ. ಕಣಿ ಕಣಿ ಕಣಿಹೇಳ್ತೀನಮ್ಮಾ ಕಣಿ!" ಎಂದು ಹೇಳುತ್ತಾ ಒನಪು ವೈಯ್ಯಾರದಿಂದ ಎಲ್ಲರನ್ನು ಆಕರ್ಷಿಸಿದಳು. ಜನರು ಅವಳ ಮಾತಿನ ಮೋಡಿಗೆ ಪ್ರಭಾವಿತರಾದರು. ಪದ್ಮಾವತಿ ಕೆಟ್ಟಗಾಳಿಗೆ ತುತ್ತಾಗಿದ್ದಾಳೆಯೇ? ದೃಷ್ಟಿ ಕಳೆದುಕೊಂಡಿದ್ದಾಳೆಯೇ? ಯಾವುದೋ ಭೂತ ಹಿಡಿದಿದೆಯಾ! ಅದಕ್ಕೇ ಸರಿಯಾಗಿ ನಿದ್ದೆ ಮಾಡುತ್ತಿಲ್ಲ. ಊಟ ಮಾಡುತ್ತಿಲ್ಲ. ಅವಳ ಶರೀರವು ಜ್ವರದಿಂದ ಬಳಲುತ್ತಿದೆ. ಎಷ್ಟು ಔಷಧಿ, ಉಪಚಾರ ಮಾಡಿದರೂ ಸಾಲದು. ಅವಳ ಸ್ಥಿತಿ ಸುಧಾರಿಸುವುದಿಲ್ಲ! ಪರಿಸ್ಥಿತಿ ಬಗ್ಗೆ ಚಿಂತಿಸುತ್ತಿದ್ದ ಆಕಾಶರಾಜನ ಪತ್ನಿ ಧರಣಿದೇವಿಗೆ ಕಣಿ ಹೇಳುವವಳ ಧ್ವನಿ ಕೇಳಿಸಿತು.

"ಕಣಿ ಹೇಳ್ತೀನಮ್ಮಾ ಕಣಿ, ನಡೆದದ್ದನ್ನು ನುಡಿಯುವೆನು. ಹಿಂದಾದದ್ದನ್ನು, ಮುಂದೆ ಆಗುವುದನ್ನು ಹೇಳುವೆನು. ನಾನು ಹೇಳುವುದೆಲ್ಲ ನಿಜವಾಗುತ್ತೆ ತಾಯಿ ನಿಜವಾಗುತ್ತೆ. ಕೇಳಿಮ್ಮಾ ಕೇಳಿ!" ಕೂಡಲೆ ಧರಣಿದೇವಿ ಕಣಿ ಹೇಳುವ ಕೊರವಂಜಿಯನ್ನು ಸಭಾಂಗಣಕ್ಕೆ ಕರೆದಳು. ಪದ್ಮಾವತಿಯನ್ನು ಕಣಿ ಹೇಳುವವಳ ಮುಂದೆ ಕುಳ್ಳಿರಿಸಿ ಕಣಿ ಹೇಳುವಂತೆ ಹೇಳಿದಳು.

ಕಣಿ ಹೇಳುವ ಕೊರವಂಜಿ ವೇಷದಲ್ಲಿದ್ದ ಶ್ರೀನಿವಾಸ ದೇವರು ಪದ್ಮಾವತಿ ದೇವಿಯ ಎಡಗೈಯನ್ನು ಕೈಯಲ್ಲಿ ಹಿಡಿದು, "ಬೆಟ್ಟದ ಮೇಲಿನ ತಾಯಿ ನುಡಿಸ್ತಾಳೆ ತಾಯಿ! ನಿಮ್ಮ ಮಗು ಈ ಕ್ಷಣದಿಂದ ಸರಿಹೋಗುತ್ತಾಳೆ ಆತನಿಂದ ತಾಯಿ! ನಿಮ್ಮ ಮಗುವನ್ನು ಬೆಟ್ಟದ ಮೇಲಿನ ಆದಿನಾರಾಯಣ ಅವನಿಂದ ತೊಂದರೆ ಆಗಿದೆ ಎಂದು ತಿಳಿದುಕೊಂಡಿದ್ದೀರ ತಾಯಿ. ಅಲ್ಲ ತಾಯಿ, ಈ ನಿಮ್ಮ ಮಗಳು ದೇವಾಧಿದೇವನನ್ನು ಪ್ರತ್ಯಕ್ಷವಾಗಿ ನೋಡಿದ್ದಾಳೆ. ಅವಳ ಮನಸ್ಸು ಈಗ ಅವನನ್ನೇ ಬಯಸುತ್ತಿದೆ. ಅವನಿಗೂ ಸಹ ಈ ಸಿರಿಗೌರಿಯಂತಹ ಈ ನಿಮ್ಮ ಮಗಳ ಮೇಲೆ ಮನಸ್ಸಾಗಿದೆ

ತಾಯಿ. ಆವಾಗಿನಿಂದ ವಿರಹ ತಾಪದ ಜ್ವರ ಬಂದಿದೆ ತಾಯಿ ನಾನು ಹೇಳಿದ್ದೆಲ್ಲವೂ ಸತ್ಯ ತಾಯಿ. ಸತ್ಯವಾದರೆ ಹೌದು ಎನ್ನಿ ತಾಯಿ. ಇಲ್ಲವಾದರೆ ನನ್ನ ತಲೆ ಎರಡು ಹೋಳಾಗಲಿ. ನಿಜ, ಹೇಗೆ ಸುಳ್ಳಾಗಲು ಸಾಧ್ಯ. ಈ ಜ್ವರವು ಕಡಿಮೆಯಾಗುತ್ತದೆ. ಮಗು ಸಂಪೂರ್ಣವಾಗಿ ಆರೋಗ್ಯವಂತಳಾಗಿ, ಮುಂದೆ ಅವಳ ಜೀವನ ಚೆನ್ನಾಗಿ ಇರಬೇಕು ಎಂದರೆ, ಗಿರಿಯೊಡೆಯ ಆದಿದೇವನಿಗೆ ಮದುವೆ ಮಾಡಿಕೊಡಿ ತಾಯಿ, ಇದಕ್ಕಿಂತ ಬೇರೆ ಏನಿದೆ? ಯೋಚಿಸಬೇಡಿ ತಾಯಿ, ಈ ಬಂಗಾರದ ಬೊಂಬೆಯನ್ನು ಅವನಿಗೆ ಕೊಟ್ಟು ವಿವಾಹವನ್ನು ಆ ಬ್ರಹ್ಮಾಂಡ ನಾಯಕ ನಡೆಸಿಕೊಡುತ್ತಾನೆ ತಾಯಿ. ಈ ನಿನ್ನ ಮಗಳನ್ನು ಕೊಟ್ಟು ವಿವಾಹ ಮಾಡಿಕೊಡು ಎಂದು ಕೇಳಲು ಒಬ್ಬ ತಾಯಿ ನಿನ್ನ ಮನೆಯ ಬಾಗಿಲಿಗೆ ಬರುತ್ತಾರೆ, ನಾನು ಸತ್ಯವನ್ನೇ ಹೇಳುತ್ತಿದ್ದೇನೆ ತಾಯಿ, ಬೆಟ್ಟದೊಡೆಯನ ಮೇಲೆ ಆಣೆ ಮಾಡಿಹೇಳುತ್ತಿದ್ದೇನೆ.ಯಾವ ತೊಂದರೆಯು ಇಲ್ಲದೆ, ವಿವಾಹವು ನಿರ್ವಿಘ್ನವಾಗಿ ನೆರವೇರುತ್ತದೆ ತಾಯಿ. ಆದಷ್ಟು ಶೀಘ್ರದಲ್ಲಿಯೇ ಈ ವಿವಾಹವಾಗುವುದು. ನಿನ್ನ ಮಗಳು ಸೌಂದರ್ಯವತಿ, ರೂಪವತಿ ಅಷ್ಟೇ ಅಲ್ಲ ಅದೃಷ್ಟವಂತಳು ತಾಯಿ, ನಿನ್ನ ಮಗಳು ಏಕಾಕಿಯಾಗಿದ್ದು ನಲುಗುವುದು ಬೇಡ, ಆದಷ್ಟು ಬೇಗನೆ ಮದುವೆ ಮಾಡು. ನಿಧಾನವಾಗಿ ಮಾಡುತ್ತೇನೆ ಅಂದರೆ ಆಗ ಹೊಸ ಹೊಸ ಸಮಸ್ಯೆಗಳು ಎದುರಾಗಿತ್ತದೆ ತಾಯಿ" ಎಂದು ಸ್ವಾಮಿ ಶ್ರೀನಿವಾಸ, ಪದ್ಮಾವತಿಯ ಕರವನ್ನು ಹಿಡಿದು ಪ್ರೀತಿಯಿಂದ ಸ್ಪರ್ಶಿಸಿ ಅವಳ ಮನಸ್ಸನ್ನು ಶಾಂತಿಗೊಳಿಸುತ್ತ! ಆಕೆ ಯಾರನ್ನು ಮದುವೆಯಾಗಬೇಕು ಎಂದು ಇಷ್ಟಪಟ್ಟಿದ್ದಾಳೋ ಅವನನ್ನೇ ಮದುವೆ ಆಗುತ್ತಾಳೆ ಎಂದು ಹೇಳಿ ವೀಳ್ಯ ಪಡೆದು ಕೊರವಂಜಿ ಹೊರಟಳು.

ಕೊರವಂಜಿ ಏನನ್ನು ಹೇಳಿ ಹೋದಳೋ ಹಾಗೆಯೇ ಆಶ್ಚರ್ಯ ಆಗುವಂತೆ ವಕುಳಾ ಮಾತೆ ಬಂದಳು. ಅಗಸ್ತ್ಯೇಶ್ವರನಿಗೆ ಅಭಿಷೇಕ ಮಾಡಿದ ತೀರ್ಥಪ್ರಸಾದವನ್ನು ಸ್ವಲ್ಪ ಪದ್ಮಾವತಿಗೆ ಕೊಟ್ಟು ಅಂತಃಪುರವನ್ನು ಪ್ರವೇಶಿಸಿ ಆನಂದವನ್ನು ಉಂಟುಮಾಡಿದಳು. ಹಾಗೆಯೇ ಮಗ ಶ್ರೀನಿವಾಸ, ಸಪ್ತಗಿರಿಯಿಂದ ಹೊರಟ ಅವಳಿಗೆ ಅರಮನೆಗೆ ಹೋಗಿ ಏನು ಹೇಳಬೇಕು? ಏನು ಮಾತಾಡಬೇಕು ಎಂದು ಹೇಳಿಕಳಿಸಿದ್ದನೋ ಅದರಂತೆಯೇ ಮಹಾರಾಣಿ ಧರಣಿದೇವಿಯನ್ನು ಕಂಡು ತನ್ನ ಪರಿಚಯವನ್ನು ಹೇಳಿಕೊಂಡಳು. ಧರಣಿದೇವಿ, ವಕುಳಾಮಾತೆಯನ್ನು ಪ್ರೀತಿಯಿಂದ ಬರಮಾಡಿ ಕೊಳ್ಳುತ್ತ ಕೊರವಂಜಿ ಹೇಳಿದಂತೆಯೇ ನಡೆಯುತ್ತಿರುವುದನ್ನು ಕಂಡು ಆಶ್ಚರ್ಯಪಡುತ್ತ ಅವಳು ನುಡಿದಂತೆ ಎಲ್ಲವು ಒಳ್ಳೆಯದಾಗುತ್ತಿದೆ ಎಂದು ಸಂತೋಷಪಟ್ಟಳು. ಮಹಾರಾಜ ಆಕಾಶರಾಜನೂ ಅಂತಃಪುರಕ್ಕೆ ಬಂದನು.

ವಕುಳಮಾತೆ, ರಾಜದಂಪತಿಗಳಿಗೆ ನಮಸ್ಕರಿಸುತ್ತ, ಶ್ರೀನಿವಾಸನು, ವನವಿಹಾರ ಮಾಡುತ್ತಿದ್ದ ಪದ್ಮಾವತಿಯನ್ನು ನೋಡಿ ಮೋಹಿಸಿದ್ದಾನೆ. ಅವನು ಸಾಕ್ಷಾತ್ ಶ್ರೀಮನ್ನಾರಾಯಣ. ಆದ್ದರಿಂದ ಪದ್ಮಾವತಿಯನ್ನು ಕೊಟ್ಟು ಮದುವೆ ಮಾಡಿದರೆ ಎಲ್ಲವು ಒಳ್ಳೆಯದಾಗುತ್ತದೆ ಎಂದು ಹೇಳಿ ಅವರನ್ನು ಪ್ರಾರ್ಥಿಸಿದಳು. ಪದ್ಮಾವತಿಯು ಈ ಕಾರಣಕ್ಕಾಗಿಯೇ ಅವತರಿಸಿದ್ದಾಳೆ ಎಂದು ಕೊರವಂಜಿ ಹೇಳಿದ್ದನ್ನು ಧರಣಿದೇವಿ ಜ್ಞಾಪಿಸಿಕೊಂಡು ಸಂತೋಷಪಟ್ಟಳು.

ಆಕಾಶರಾಜ ದಂಪತಿಗಳು ಅನೇಕ ವಿಧಗಳಲ್ಲಿ ಸಂತೋಷಪಟ್ಟರು ಮತ್ತು ಇದು ತಮ್ಮ ಅನೇಕ ಜನ್ಮಗಳ ಮಹಾಭಾಗ್ಯ ಎಂದು ಹೇಳಿ ಸ್ವಾಮಿ ಶ್ರೀನಿವಾಸನಿಗೆ ತಮ್ಮ ಮಗಳು ಪದ್ಮಾವತಿಯ ಇಚ್ಛೆಯನ್ನು ಮನಃಪೂರ್ವಕವಾಗಿ ಒಪ್ಪಿ, ಅತಿಶೀಘ್ರದಲ್ಲಿರುವ ಮಹೂರ್ತದಲ್ಲಿ ವಿವಾಹವನ್ನು ಮಾಡಿಕೊಡುವುದಾಗಿ ಮಾತೆವಕುಳಾದೇವಿಗೆ ವಾಗ್ದಾನ ಮಾಡಿದರು.

ವಕುಳಾದೇವಿ, ತನ್ನ ಕೋರಿಕೆ ನೆರವೇರಿದ ಸಂತೋಷದಲ್ಲಿ ಆದಷ್ಟು ಬೇಗನೆ ವರಾಹಕ್ಷೇತ್ರಕ್ಕೆ ಹೊರಟು, ತನ್ನ ಬರುವಿಕೆಗಾಗಿ ಎದುರು ನೋಡುತ್ತಿರುವ ಸ್ವಾಮಿಯ ಸಂದೇಹವನ್ನು ನಿವಾರಣೆ ಮಾಡಿ ತಾನು ಹೋಗಿದ್ದ ವಿವಾಹಕಾರ್ಯ ಫಲಪ್ರದವಾಯಿತು ಎಂದು ನಡೆದ್ದನ್ನೆಲ್ಲ ಹೇಳಿ ಸಂತೋಷಪಟ್ಟಳು.

## ವಿವಾಹ ನಿಶ್ಚಯ

ವಕುಳಾದೇವಿ, ಆಕಾಶರಾಜ ಧರಣಿದೇವಿಯವರ ಹತ್ತಿರ ವಿವಾಹದ ಮಾತುಕತೆಯನ್ನು ಮುಗಿಸಿ ಅರಮನೆಯಿಂದ ಹೊರಟ ನಂತರ ಮಗಳು ಪದ್ಮಾವತಿಯ ಮನಸ್ಸಿನ ಪರಿಸ್ಥಿತಿಯನ್ನು ಗಮನಿಸಿದ ಆಕಾಶರಾಜ ತಡಮಾಡದೆ ಆದಷ್ಟು ಶೀಘ್ರದಲ್ಲಿ ವಿವಾಹ ಮಾಡಲು ನಿಶ್ಚಯಿಸಿದನು. ಕೂಡಲೆ ದೇವಗುರುಗಳಾದ ಬೃಹಸ್ಪತಿ, ಹಾಗು ಶುಕಮಹರ್ಷಿಗಳನ್ನು ಬರಮಾಡಿಕೊಂಡನು. ಅವರಲ್ಲಿ ಶ್ರೀನಿವಾಸ ಪದ್ಮಾವತಿಯರ ವಿವಾಹದ ಬಗ್ಗೆ ಹೇಳಿ, ಆದಷ್ಟು ಶೀಘ್ರದಲ್ಲಿ ವಿವಾಹವನ್ನು ನೆರವೇರಿಸಲು ಒಂದು ಒಳ್ಳೆಯ ಶುಭಮಹೂರ್ತವನ್ನು ನಿಶ್ಚಯ ಮಾಡಿಕೊಡಿ ಎಂದು ಪ್ರಾರ್ಥಿಸಿದನು.

ಇಬ್ಬರು ಮಹಾಮಹಿಮರು ಯೋಚಿಸಿ ಯೋಚಿಸಿ ಎಲ್ಲವಿಧದಲ್ಲಿಯೂ ಪರಿಶೀಲಿಸಿ ಕಡೆಗೆ ಅತಿಹತ್ತಿರದಲ್ಲಿ, ಅಂದರೆ ವೈಶಾಖಮಾಸದ ಶುಕ್ಲದಶಮಿ, ಶುಕ್ರವಾರ ಉತ್ತರಫಲ್ಗುಣಿ ಶುಭನಕ್ಷತ್ರ ದಂದು ವಿವಾಹ ಮಹೂರ್ತ ಶ್ರೇಷ್ಠವಾಗಿದೆ ಎಂದು ನಿಶ್ಚಯಿಸಿ ಅಂದು ಶ್ರೀನಿವಾಸ ಪದ್ಮಾವತಿಯರ ವಿವಾಹಮಾಡುವುದು ಎಂದು ನಿರ್ಣಯಿಸಿ ವಿವಾಹದ ಲಗ್ನಪತ್ರಿಕೆಯನ್ನು ಬರೆದರು.

ಆಕಾಶರಾಜನ ಕೋರಿಕೆಯ ಮೇರೆಗೆ ಬೃಹಸ್ಪತಿಯು ವಿವಾಹ ಶುಭಪತ್ರವನ್ನು ಶುಕ ಮಹರ್ಷಿಗಳಿಗೆ ನೀಡಿ ಶ್ರೀನಿವಾಸನನ್ನು ಮದುವೆಗೆ ಆಹ್ವಾನಿಸುವಂತೆ ವಿನಂತಿಸಿಕೊಂಡನು ವಿವಾಹದ ಶುಭಪತ್ರವನ್ನು ಸ್ವೀಕರಿಸಿದ ಶುಕಮಹರ್ಷಿಗಳು ಸಪ್ತಗಿರಿಯನ್ನು ಹತ್ತಿ ಶ್ರೀನಿವಾಸನಿಗೆ ಒಪ್ಪಿಸಿದರು. ವಿನಯದಿಂದ ಶ್ರೀನಿವಾಸನನ್ನು ತಾವು ಈ ವಿವಾಹಕ್ಕೆ ಸಮ್ಮತಿಸಿ ಬಂಧುಮಿತ್ರರೊಡಗೂಡಿ ಬಂದು ವಿವಾಹವನ್ನು ನೆರವೇರಿಸಿಕೊಡಿ ಎಂದು ಪ್ರಾರ್ಥಿಸಿದನು. ಸ್ವಾಮಿ ಶ್ರೀನಿವಾಸ ಗೌರವದಿಂದ ಶ್ರೀಶುಕಮಹರ್ಷಿಗಳನ್ನು ಸತ್ಕರಿಸಿ ಅವರ ಮುಖೇನ ಆಕಾಶರಾಜನಿಗೆ ಬದಲಿಪತ್ರವನ್ನು ಕಳುಹಿಸಿದನು. ಎಂದು ಮಹರ್ಷಿಸೂತರು ಶೌನಕಾದಿಗಳಿಗೆ ವಿವರವಾಗಿ ಹೇಳಿದರು.

## ಮುಕ್ಕೋಟಿ ದೇವತೆಗಳ ಆಗಮನ

ಶ್ರೀ ಶುಕಮಹರ್ಷಿಗಳು ವಿವಾಹದ ಲಗ್ನಪತ್ರಿಕೆಯನ್ನು ಕೊಟ್ಟು ಮದುವೆಗೆ ಆಹ್ವಾನಿಸಿ ಹೋದನಂತರ, ಶ್ರೀನಿವಾಸನು ಪದ್ಮಾವತಿಯೊಂದಿಗಿನ ತನ್ನ ವಿವಾಹದ ಬಗ್ಗೆ ಯೋಚಿಸಿ, ವ್ಯವಸ್ಥೆಗಳನ್ನು ನೋಡಲು ಬ್ರಹ್ಮಾದಿ ದೇವತೆಗಳನ್ನು ಆಹ್ವಾನಿಸಿದನು. ಶ್ರೀನಿವಾಸನ ಮದುವೆಯ ಶುಭಲೇಖವನ್ನು ಸ್ವೀಕರಿಸಿದ ನಂತರ ಸರಸ್ವತಿ ಒಡಗೂಡಿ ಬ್ರಹ್ಮದೇವರು, ಗಣಪತಿ, ಕುಮಾರಸ್ವಾಮಿಯೊಂದಿಗೆ ಪಾರ್ವತಿಸಮೇತನಾದ ಪರಮೇಶ್ವರ, ಇಂದ್ರ, ಅಗ್ನಿ, ಯಮ, ವರುಣ ಮೊದಲಾದ ದೇವತೆಗಳು ಮೊದಲು ಬಂದು ಸೇರಿದರು.

**"ಕಶ್ಯೋऽತಿರ್ಭರದ್ವಾಜೋ ವಾಮದೇವಶ್ಚ ಗೌತಮಃ**
**ವಿಶ್ವಾಮಿತ್ರೋವಸಿಷ್ಠಶ್ಚ ವಾಲ್ಮೀಕಿರ್ಜಮದಗ್ನಿಜಃ**
**ಪೌಲಸ್ತ್ಯಶ್ಚ ದಧೀಚಿತಶ್ಚ ಶುನಶ್ಯೇಪಶ್ಚ ಗಾಲವಃ**
**ಗಾರ್ಗ್ಯಃ ಕೃಷ್ಣ ಮಹಾರಾಜ, ನಪುತ್ರಾಹ ನಪರಿಗ್ರಹಃ**
**ಏವಂ ಮಹರ್ಷಯಃ ದೇವಾ ರಾಜಾನಶ್ಚ ಸಮಾಗತಾಃ**
**ವಿವಾಹಾರ್ಥಂ ಸಮಾಜಗ್ಮುಃ ಸರ್ವೇ ಸಂಭ್ರಮಕಾತರಾಃ"**

ಇವರು ಮಾತ್ರವಲ್ಲದೆ ಕಶ್ಯಪ, ಭಾರದ್ವಾಜ, ವಾಮದೇವ, ಗೌತಮ, ವಿಶ್ವಾಮಿತ್ರ, ವಶಿಷ್ಠ, ವಾಲ್ಮೀಕಿ, ಪರಶುರಾಮ, ಪುಲಸ್ತ್ಯ, ದಧೀಚಿ, ಶುನಶ್ಯೇಪ, ಗಾಲವ, ಗಾರ್ಗೇಯ ಮಹರ್ಷಿಗಳೆಲ್ಲರೂ ವೆಂಕಟೇಶನ ಕಲ್ಯಾಣವನ್ನು ನೋಡಲು ವೆಂಕಟಾಚಲಕ್ಕೆ ಬಂದು ಸೇರಿದರು. ಹೀಗೆ ಬಂದು ಸೇರುತ್ತಿದ್ದ ಪರಿವಾರವನ್ನು ಪ್ರಭುಶ್ರೀನಿವಾಸ ಆತ್ಮೀಯವಾಗಿ ಆಹ್ವಾನಿಸಿ ಗೌರವದಿಂದ ಸತ್ಕರಿಸಿದನು.

ಹೀಗಿರುವಲ್ಲಿ ಶ್ರೀನಿವಾಸನು ಇಂದ್ರನನ್ನು ಕರೆದು, ವಿಶ್ವಕರ್ಮ, ಮಯನಿಂದ ವೆಂಕಟಾಚಲ ಕ್ಷೇತ್ರದಲ್ಲಿ ತನ್ನ ವಿವಾಹಕ್ಕಾಗಿ ಬರುತ್ತಿರುವ ದೇವಗಣಗಳಿಗೆ ಅವರಿಗೆ ತೊಂದರೆ ಆಗದಂತೆ ಇರಲು ಬಿಡದಿಮನೆಗಳನ್ನು ಮದುವೆ ಪೂರ್ಣವಾಗುವವರೆವಿಗೂ ನಿರ್ಮಿಸುವಂತೆ ಅಪ್ಪಣೆ ಮಾಡಿದನು. ಹಾಗೆಯೇ ವಿಶ್ವಕರ್ಮನು ಆಕಾಶರಾಜನ ಅಧೀ ನದಲ್ಲಿರುವ ನಾರಾಯಣವನಕ್ಕೆ ಹೋಗಿ ಶ್ರೀಪದ್ಮಾವತಿ ಶ್ರೀನಿವಾಸರ ಮದುವೆಗಾಗಿ ಮುತ್ತು ರತ್ನಸ್ತಂಭಗಳಿಂದ ಕೂಡಿದ ಭವ್ಯ ದಿವ್ಯವಾದ ವಿವಾಹ ವೇದಿಕೆಯನ್ನು ನಿರ್ಮಿಸಿದನು.

ನಂತರ ವೆಂಕಟಾದ್ರಿಯಲ್ಲಿದ್ದ ವೆಂಕಟೇಶ್ವರನು ಸಕಲ ದೇವತೆಗಳನ್ನು ಒಟ್ಟುಗೂಡಿಸಿ ಜಗತ್ಕಲ್ಯಾಣಕ್ಕೆ ಆಕಾಶರಾಜನ ಮಗಳು ಪದ್ಮಾವತಿಯನ್ನು ವಿವಾಹವಾಗಲು ನಿರ್ಧರಿಸಿರು ವುದಾಗಿಯೂ, ಈ ಶುಭ ಕಾರ್ಯವು ಎಲ್ಲರ ಬೆಂಬಲವಿಲ್ಲದೆ ಸುಗಮವಾಗಿ ನಡೆ ಯುವುದಿಲ್ಲ, ಆದ್ದರಿಂದ ಎಲ್ಲರೂ ಕೈಜೋಡಿಸಿ ಈ ವಿವಾಹದಲ್ಲಿ ಭಾಗವಹಿಸಿಬೇಕೆಂದು ವಿನಂತಿಸಿಕೊಂಡನು. ಎಲ್ಲಾ ದೇವತೆಗಳು ಪದ್ಮಾವತಿ ಶ್ರೀನಿವಾಸನ ವಿವಾಹದಲ್ಲಿ ಭಾಗವಹಿ ಸಿದ್ದು ಮಾತ್ರವಲ್ಲದೆ ತಾವು ಸೇವೆ ಮಾಡುವುದನ್ನು ಅನೇಕ ಜನ್ಮಗಳ ಪುಣ್ಯವೆಂದು ಪರಿಗಣಿಸಿದರು.

ದೇವಸೇನಾಧಿಪತಿಯಾದ ಕುಮಾರಸ್ವಾಮಿ ವಿವಾಹದ ನಿಮಿತ್ತ ಆಗಮಿಸಿದ ಎಲ್ಲ ದೇವತೆಗಳು, ಋಷಿಮುನಿಗಳು, ಯೋಗಿಗಳನ್ನು ಸ್ವಾಗತಿಸಿ ಅವರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಿದನು. ವಿವಾಹಕ್ಕಾಗಿ ಬಂದವರೆಲ್ಲರನ್ನೂ ಪರಶಿವನು ಗೌರವಿಸಿ ಸತ್ಕರಿಸಿದನು. ಅಗ್ನಿದೇವನು ಅಡಿಗೆ ಬ್ರಾಹ್ಮಣನಾಗಿ, ವರುಣನು ಜಲಬ್ರಾಹ್ಮಣನಾಗಿ ಸೇವೆ ಸಲ್ಲಿಸಿದರು. ಸಕಲ ದೇವತೆಗಳು ಉತ್ಸಾಹದಿಂದ, ಆನಂದದಿಂದ ತಮ್ಮ ತಮ್ಮ ಕಾರ್ಯದಲ್ಲಿ ಮಗ್ನರಾಗಿರುವಾಗ, ಈ ಶುಭಸಂದರ್ಭದಲ್ಲಿ ಪಾರ್ವತಿದೇವಿ, ಸರಸ್ವತಿದೇವಿ ವರನಾದ ಶ್ರೀನಿವಾಸನಿಗೆ ಮಂಗಳಕರವಾದ ಅಭ್ಯಂಜನ ಸ್ನಾನ ಮಾಡಿಸಿ ಮದುವೆಯಾಗಲಿರುವ ವರನನ್ನು ಸಿದ್ಧ ಮಾಡಬೇಕು ಎಂದು ಆಲೋಚಿಸುತ್ತಿರುವಾಗ ಶ್ರೀಮಹಾಲಕ್ಷ್ಮಿಯು ಇಲ್ಲಿ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು, ಅದ್ಭುತವಾಗಿಯಿದ್ದಿರಬಹುದು ಎಂದು ಸ್ವಾಮಿ ಶ್ರೀನಿವಾಸನು ಯೋಚಿಸುತ್ತಿದ್ದನು. ಅವಳಿಲ್ಲದ ಮದುವೆ, ಮದುವೆಯೇ ಅಲ್ಲ ಎಂದು ಮನದಲ್ಲಿಯೇ ಮರುಗುತ್ತಿದ್ದನು. ಬ್ರಹ್ಮದೇವನು ಮರುಗುತ್ತಿದ್ದ ಶ್ರೀನಿವಾಸನನ್ನು ಸಮಾಧಾನ ಮಾಡುತ್ತಾ "ಶ್ರೀಮಹಾಲಕ್ಷ್ಮಿಯನ್ನು ಇಲ್ಲಿಗೆ ಕರೆತರುವ ಭಾಗ್ಯಕ್ಕಿಂತ ಬೇರೇನಿದೆ ಎಂದು ಅವಳನ್ನು ಕರೆತರಲು ಯಾರು ಬೇಕಾದರೂ ಹೋಗಬಹುದು" ಎಂದು ಹೇಳಿದನು. ತಕ್ಷಣವೇ ಶ್ರೀನಿವಾಸನು ಎದ್ದು, ಸೂರ್ಯಭಗವಂತನನ್ನು ಕರೆದು "ನೀನು, ಶ್ರೀಮಹಾಲಕ್ಷ್ಮಿಯು

ವಾಸವಾಗಿರುವ ಕೊಲ್ಹಾಪುರಕ್ಕೆ ಹೋಗಿ, ನಿನ್ನ ವಿಯೋಗದಿಂದಾಗಿ ವಿರಹವೇದನೆಯಿಂದ ಅಸ್ವಸ್ಥನಾಗಿದ್ದಾನೆ" ಎಂದು ಅಸತ್ಯವನ್ನು ನುಡಿದು ಅವಳನ್ನು ಕರೆದುಕೊಂಡು ಬರುವಂತೆ ಆದೇಶವಿತ್ತನು.

ಸ್ವಾಮಿ ಶ್ರೀನಿವಾಸನ ಆಜ್ಞೆಯನ್ನು ಶಿರಸಾವಹಿಸಿದ ಸೂರ್ಯದೇವನು ಕೊಲ್ಹಾಪುರಕ್ಕೆ ಹೋಗಿ ಶ್ರೀನಿವಾಸನ ಕೋರಿಕೆಯನ್ನು ಈಡೇರಿಸಲು ಸ್ವಾಮಿ ಹೇಳಿದಂತೆ ಎಲ್ಲವನ್ನು ಹೇಳಿದನು. ಸೂರ್ಯದೇವನು ಹೇಳಿದ್ದೆಲ್ಲವನ್ನೂ ಕೇಳಿದ ತಕ್ಷಣ ಶ್ರೀಮಹಾಲಕ್ಷ್ಮಿಯು ವೆಂಕಟಾಚಲಕ್ಕೆ ಬಂದು ತನ್ನ ಶ್ರೀನಿವಾಸನನ್ನು ನೋಡಿ ಆನಂದ ಪರವಶಳಾದಳು. ಎಲ್ಲ ದೇವಾನುದೇವತೆಗಳು ಸೇರಿರುವುದನ್ನು ಕಂಡು ಆಶ್ಚರ್ಯದಿಂದ ಕಾರಣ ಏನು ಎಂದು ಪ್ರಶ್ನಿಸಿದಳು. ತ್ರೇತಾಯುಗದಲ್ಲಿ ಶ್ರೀನಿವಾಸನು ಲಕ್ಷ್ಮೀದೇವಿಗೆ ನೀ ಕೊಟ್ಟಮಾತಿನಂತೆ ಅಂದು ವೇದವತಿಯಾಗಿದ್ದವಳು, ಪದ್ಮಾವತಿಯಾಗಿ ಮದುವೆಯಾಗುವ ನಿನ್ನ ಕೋರಿಕೆ ಇಂದು ನೆರವೇರಲಿದೆ. ಈ ಕಾರಣಕ್ಕಾಗಿಯೇ ನಿನ್ನನ್ನು ಇಲ್ಲಿಗೆ ಕರೆತರಲಾಯಿತು. ನೀನಿಲ್ಲದ ಮದುವೆ, ಮದುವೆಯೇ ಅಲ್ಲ ಎನಿಸಿತ್ತು ಎಂದು ಎಲ್ಲವನ್ನು ವಿವರವಾಗಿ ಹೇಳಿದನು.

ಅವನ ಮಾತಿನಿಂದ ಸಮಾಧಾನಗೊಂಡ ಶ್ರೀಲಕ್ಷ್ಮೀದೇವಿ, ತಾನೇ ಮುಂದೆ ನಿಂತು ವರನಿಗೆ ಶೃಂಗಾರ ಮಾಡಿದಳು. ಅದಕ್ಕೆ ಮುನ್ನ ಪಾರ್ವತಿದೇವಿ, ಸರಸ್ವತಿದೇವಿಯರು ಸೇರಿ ಶ್ರೀನಿವಾಸನಿಗೆ ಅಭ್ಯಂಜನ ಸ್ನಾನ ಮಾಡಿಸಿದ್ದರು.

ಕುಬೇರನು ಕೊಟ್ಟ ಆಭರಣ, ಹೊಸ ವಸ್ತ್ರಗಳಿಂದ ಅಲಂಕೃತನಾಗಿ ಶೋಭಾಯಮಾನವಾಗಿ, ನವವರನಾಗಿ ಶ್ರೀನಿವಾಸನು ತಮ್ಮ ಕುಲಕ್ಕೆ ದೇವತಾ ವೃಕ್ಷವಾದ ಶಮೀವೃಕ್ಷವನ್ನು ಕುಮಾರಧಾರಾತೀರ್ಥದಲ್ಲಿ ದರ್ಶನ ಮಾಡಿ ಪೂಜಿಸಿ, ಅದರ ಒಂದು ಕೊಂಬೆಯನ್ನು ವರಾಹಸ್ವಾಮಿ ದೇವಾಲಯದ ಬಳಿ ಪ್ರತಿಷ್ಠಾಪಿಸಿ ಪೂಜೆ ಮಾಡಿದನು.

ಹಾಗೆಯೇ ನಿನ್ನ ಮದುವೆಗೆ ನಾರಾಯಣಪುರಕ್ಕೆ ಹೋಗುವ ಮೊದಲು ಊಟ ವನ್ನು ಮುಗಿಸುವುದು ಶ್ರೇಯಸ್ಕರವೆಂದು ಬ್ರಹ್ಮನು ಶ್ರೀನಿವಾಸನನ್ನು ಕೇಳಿದನು, ಖಾಲಿ ಹೊಟ್ಟೆಯಲ್ಲಿ ಶುಭ ಕಾರ್ಯಗಳಿಗೆ ಹೋಗುವುದು ಒಳ್ಳೆಯದಲ್ಲ, ಆದ್ದರಿಂದ ಇಲ್ಲಿಗೆ ಬಂದಿರುವ ದೇವಗಂಧರ್ವರು ಎಲ್ಲರಿಗೂ ಅನ್ನಸಂತರ್ಪಣೆ, ಭೋಜನವನ್ನು ಏರ್ಪಾಡು ಮಾಡೋಣ ಎಂದು ಬ್ರಹ್ಮದೇವನು, ಶ್ರೀನಿವಾಸನನ್ನು ಕೋರಿದನು. ಆಗ ಶ್ರೀನಿವಾಸನು ತನ್ನ ಹತ್ತಿರ ಎಳ್ಳಷ್ಟು ಹಣವಿಲ್ಲದ ಸಮಯದಲ್ಲಿ ಹೇಗೆ ಹಣವನ್ನು ಹೊಂದಿಸುವುದು ಎಂದು ಯೋಚಿಸುತ್ತಿರುವಾಗ ತಕ್ಷಣವೆ ನೀಲಕಂಠನಾದ ಪರಶಿವನು ಹೀಗೆ ಹೇಳಿದನು:

**"ಶ್ರೋತವ್ಯಮ್ ವಚನಂ ತಾತ! ಮಮ ಬಾಲಸ್ಯ ಮಾಧವ!
ವಿವಾಹ ಕರಣೇ ದೇವ! ತಥಾ ಭವನಿಕರ್ಮಣಿ
ಪ್ರಾರಂಭನ್ಯಾಂತಪರ್ಯಾತಂ ಯಾಪೀ ಯತ್ನಂ ಸಮಾಚರತ್
ಸ ಏವ ಪುಣ್ಯವಾನ್ ಲೋಕೇ ಕೀರ್ತಿಮತ್ ನ ಸಂಶಯಃ
ಸಂವೇದ್ಯಾಃ ಸರ್ವ ಸಂಭಾರಾಃ ಶುಭಕಾರ್ಯೇಷು ಪುಷ್ಕಲಾಃ
ಬಹುಲಾರ್ಥವ್ಯಯೇನಾಪಿ ತದಭಾವೇ ತೃಣಂ ಚರೇತ್."**

ಅಪ್ಪಾ, ತಂದೆ! ಮಾಧವ ಮದುವೆ ಮಾಡಲು, ಮನೆ ಕಟ್ಟಲು ನಿರ್ಧರಿಸಿದವನು, ಪ್ರಾರಂಭ ಮಾಡಿದ ದಿನದಿಂದ ಅದನ್ನು ಪೂರ್ತಿಮಾಡಲು ಪ್ರಯತ್ನ ಮಾಡಬೇಕು. ಯಾವುದೇ ಕಾರಣಕ್ಕೂ ಅದನ್ನು ಅರ್ಧಕ್ಕೆ ಬಿಡಬಾರದು. ಅದನ್ನು ಪೂರ್ತಿಗೊಳಿಸುವುದು ಅದ್ಭುತ ಕಾರ್ಯವಾಗಿದೆ. ಅವನಲ್ಲಿ ಹಣವಿರಲಿ ಇಲ್ಲದಿರಲಿ ಸಾಲ ಮಾಡಿಯಾದರೂ ಅದನ್ನು ಪೂರ್ಣಗೊಳಿಸಬೇಕು. ಅದು ಶುಭಪ್ರದ ಎಂದು ಪರಮೇಶ್ವರನು ಹೇಳಿದನು. ಈಗ ನನ್ನ ಮದುವೆಗೆ ಯಾರು ಹಣವನ್ನು ಸಾಲವಾಗಿ ಕೊಡುತ್ತಾರೆ? ಯಾರಲ್ಲಿ ಕೇಳಲಿ? ಎಂದು ಯೋಚಿಸಿದ ಶ್ರೀನಿವಾಸ ಕುಬೇರನನ್ನು ಏಕಾಂತದಲ್ಲಿ ಕರೆದು ತನಗೆ ಬೇಕಾಗಿರುವ ಹಣವನ್ನು ಕೊಡು ಎಂದು ಕೋರಿದನು. ಹಾಗೆಯೇ ಆಗಲಿ ಸ್ವಾಮಿ! ಹಣವಿಲ್ಲದವನು, ಹಣ ಪಡೆದ ಶ್ರೀಮಂತನಿಗೆ ಕಾಲಕಾಲಕ್ಕೆ ಹಣವನ್ನು ಪಾವತಿಸುವುದಾಗಿ ಸಾಲದ ಪತ್ರ ಬರೆದುಕೊಡುತ್ತಾನೆ, "ನೀನು ಹಣ ತೆಗೆದುಕೊಂಡು ಪತ್ರವನ್ನು ಬರೆದು ನನಗೆ ಕೊಡು" ಎಂದು ಕುಬೇರ ಹೇಳಿದನು. ಅದರಂತೆ ಶ್ರೀನಿವಾಸನು ಅಶ್ವತ್ಥ ಮರದ ಕೆಳಗೆ ಕುಳಿತನು. ಸ್ವಾಮಿ ಪುಷ್ಕರಣಿಯ ಪಶ್ಚಿಮ ದಂಡೆ ಮತ್ತು ಬ್ರಹ್ಮ ದೇವನ ಸಮ್ಮುಖದಲ್ಲಿ ಸಾಲದ ಪತ್ರವನ್ನು ಈ ರೀತಿ ಬರೆದನು.

**"ಋಣಗ್ರಾಹಿ ಶ್ರೀನಿವಾಸೋ ಧನದಾಯೀ ಧನೇಶ್ವರಃ,
ಆತ್ಮಕಾರ್ಯ ನಿಮಿತ್ತಸ್ತು ಕಲ್ಯಾಣಾರ್ಥಂ ಕಲೌ ಯುಗೇ,
ವೈಶಾಖ ಶುಕ್ಲ ಸಪ್ತಮ್ಯಾಂ ವಿಲಂಬೇ ದೈವ ವತ್ಸರೇ,
ನಿಷ್ಕೇಣಾಂ ರಾಮಮುದ್ರಾಣಾಂ ಲಕ್ಷಾಣಿ ಚ ಚತುರ್ದಶ,
ದ್ರವ್ಯಂ ದತ್ತಂ ಧನೇಶೇನ ವೃದ್ಧಿ ಗ್ರಹಾಣ ಕಾರಣಾತ್,
ಸವೃದ್ಧಿದಿತ್ಸತಾ ಮೂಲಂ ಸ್ವೀಕೃತಂ ಚಕ್ರವೇಣಿನಾ,
ವಿವಾಹಾವರ್ಷಮಾರಭ್ಯ ಸಹಸ್ರಾನ್ತೇ ಧನಂ ಪುನಃ,
ದಾತವ್ಯಂ ಯಕ್ಷರಾಜಾಯ ಶ್ರೀನಿವಾಸೇನ ಶಾರ್ಙ್ಗಣಾ,
ಏಕಃ ಸಾಕ್ಷಿ ಚತುರ್ವಕ್ತ್ರೋ ದ್ವಿತೀಯಸ್ತು ತ್ರಿಲೋಚನಃ,**

**ತೃತೀಯಾಽಶ್ವತ್ಥ ರಾಜಸ್ತು ವೇತ್ತಿ ಸರ್ವಮಿದಂ ದೃಢಮ್,**
**ಇತ್ಯೇತಾದೃಣಪತ್ರಸ್ತು ಶ್ರೀನಿವಾಸಽಲಿಖತ್ಸ್ವಯಮ್"**

ಕಲಿಯುಗದಲ್ಲಿ ವಿಳಂಬಿನಾಮ ಸಂವತ್ಸರದ ಶುಕ್ಲಪಕ್ಷ ಸಪ್ತಮೀ ದಿನ ನಾನು, ಕುಬೇರನಿಂದ ನನ್ನ ವಿವಾಹಕ್ಕಾಗಿ ರಾಮಮುದ್ರೆ ಇರುವ ನಿವ್ವಳ ಹದಿನಾಲ್ಕು ಲಕ್ಷವನ್ನು ಸಾಲವಾಗಿ ಪಡೆದೆನು. ಮದುವೆಯಾದ ಈ ಸಂವತ್ಸರದಿಂದ, ಒಂದು ಸಾವಿರ ವರ್ಷದೊಳಗೆ ಬಡ್ಡಿ ಸಮೇತ ಸಾಲ ತೀರಿಸುತ್ತೇನೆ ಎಂದು ಬರೆದು ಕೊಟ್ಟಿರುವ ಸಾಲದ ಪತ್ರ ಇದಾಗಿದೆ. ಚತುರ್ಮುಖನೇ ಇದಕ್ಕೆ ಮೊದಲ ಸಾಕ್ಷಿ! ಮುಕ್ಕಣ್ಣನೇ ಇದಕ್ಕೆ ಎರಡನೆಯ ಸಾಕ್ಷಿ! ಅವರು ಕುಳಿತಿರುವ ಅಶ್ವಥ ವೃಕ್ಷವೇ ಮೂರನೆಯ ಸಾಕ್ಷಿ! ಶ್ರೀನಿವಾಸನ ಈ ಸಾಲ ಪತ್ರವನ್ನು ಬ್ರಹ್ಮದೇವನು ಬರೆದಿದ್ದಾನೆ. ಅದಕ್ಕೆ ಸಾಕ್ಷಿಯಾಗಿ ಪರಮೇಶ್ವರ, ಬ್ರಹ್ಮದೇವ, ಹಾಗು ಅಶ್ವಥವೃಕ್ಷ ನಿಂತರು.

ಮರುಕ್ಷಣವೇ ಶ್ರೀನಿವಾಸನು, ಅಗ್ನಿದೇವನನ್ನು ಕರೆದು ನನಗಾಗಿ ಬಂದು ಸೇರಿರುವ ಎಲ್ಲರಿಗೂ ಭೋಜನದ ವ್ಯವಸ್ಥೆಯನ್ನು ಮಾಡು ಎಂದು ಆದೇಶವಿತ್ತನು. ಶ್ರೀನಿವಾಸನ ಆಣತಿಯಂತೆ ಅಗ್ನಿದೇವನು ಸ್ವಾಮಿಪುಷ್ಕರಣಿಯನ್ನು ಅನ್ನದ ಪಾತ್ರೆಯಾಗಿ ಪಾಪನಾಶನ ತೀರ್ಥವನ್ನು ತೊವ್ವೆ ಪಾತ್ರೆಯಾಗಿ, ಆಕಾಶಗಂಗೆಯನ್ನು ಪರಮಾನ್ನ ಪಾತ್ರೆಯಾಗಿ, ದೇವತೀರ್ಥವನ್ನು ಪಲ್ಯದ ಪಾತ್ರೆಯಾಗಿಯೂ, ತುಂಬುರು ತೀರ್ಥವನ್ನು ಚಿತ್ರಾನ್ನದ ಪಾತ್ರೆಯಾಗಿ, ಕುಮಾರಧಾರ ತೀರ್ಥವನ್ನು ಭಕ್ಷ್ಯಪಾತ್ರೆಯಾಗಿ, ಪಾಂಡವತೀರ್ಥವನ್ನು ಸಾರಿನ ಪಾತ್ರೆಯಾಗಿಯೂ, ಉಳಿದ ತೀರ್ಥಗಳನ್ನು ತಯಾರಿಸಿ ಉಳಿದ ಪಾಕಶಾಲೆಯ ಪದಾರ್ಥದ ಪಾತ್ರೆಗಳಾಗಿಯೂ ಹಾಗು ಸ್ವಾದಿಷ್ಟವಾದ ಭಕ್ಷಗಳನ್ನು ತಯಾರಿಸಿದರು. ಇವೆಲ್ಲವನ್ನೂ ಅಹೋಬಲ ಶ್ರೀಲಕ್ಷ್ಮೀನರಸಿಂಹಸ್ವಾಮಿಗೆ ನೈವೇದ್ಯ ಮಾಡಿ ನಂತರ ಪಾಂಡವತೀರ್ಥದಿಂದ ಶ್ರೀಶೈಲದವರೆಗೆ ಸಾಲು ಸಾಲಾಗಿ ಕುಳಿತ ದೇವತೆಗಳ ಸೇವೆ ಮಾಡಿ, ಉಣಬಡಿಸಿದರು.

ಶ್ರೀನಿವಾಸನು, ಸಾಲ ಮಾಡಿ ತಂದಿದ್ದ ಹಣದಿಂದ ಎಲ್ಲಾ ದೇವತೆಗಳಿಗೆ ಔತಣವನ್ನು ಅರ್ಪಿಸಿದನು. ಭೋಜನದ ನಂತರ ದೇವ, ಯಕ್ಷ, ಗಂಧರ್ವ, ಋಷಿಗಣಗಳೊಂದಿಗೆ ವಿವಾಹದ ನವವರ ಶ್ರೀನಿವಾಸ ಸಮೇತರಾಗಿ ನಾರಾಯಣ ವನಕ್ಕೆ ತೆರಳಿದರು. ಆಕಾಶ ರಾಜನು ಅವರೆಲ್ಲರನ್ನೂ ಗೌರವಯುತವಾಗಿ ಭಕ್ತಿಯಿಂದ ಘನತೆಯಿಂದ ಸ್ವಾಗತಿಸಿದನು. ಪ್ರತಿಯೊಬ್ಬರಿಗೂ ಅವರವರ ಸ್ಥಾನಮಾನಕ್ಕನುಗುಣವಾಗಿ, ಸ್ವಲ್ಪವೂ ಕುಂದು ಬಾರದಂತೆ ಬಿಡದಿಯನ್ನು ಏರ್ಪಾಡು

ಮಾಡಿದುದೇ ಅಲ್ಲದೆ ಸ್ವಾದಿಷ್ಟವಾದ ಭೋಜನವನ್ನು ಅತ್ಯಂತ ವೈಭವಯುತವಾಗಿ ಏರ್ಪಾಡು ಮಾಡಿದ್ದನು.

## ಪದ್ಮಾವತಿ ಶ್ರೀನಿವಾಸನ ಪರಿಣಯ

ಅಂದು ಸಂಜೆ ಆಕಾಶರಾಜನು ತನ್ನ ಪತ್ನಿ ಧರಣಿದೇವಿ ಸಮೇತನಾಗಿ, ಅಳಿಯನಾಗುತ್ತಿರುವ ಶ್ರೀಹರಿಯನ್ನು ಎದುರುಗೊಂಡು ವರನ ಪೂಜೆಯನ್ನು ಶ್ರದ್ಧಾಭಕ್ತಿಯಿಂದ ಮಾಡಿದನು. ಶ್ರೀನಿವಾಸನ ದಿವ್ಯಪಾದಗಳನ್ನು ತೊಳೆದು ಆ ಜಲವನ್ನು ತಮ್ಮ ಶಿರದ ಮೇಲೆ ಪ್ರೋಕ್ಷಿಸಿಕೊಂಡರು.

ಆಕಾಶರಾಜನು ತನ್ನ ಪತ್ನಿ ಧರಣಿದೇವಿ ಸಮೇತನಾಗಿ ಅನೇಕ ವಿಧದಲ್ಲಿ ಪ್ರಾರ್ಥಿಸುತ್ತ ಪುರಾಣ ಪುರುಷನಾದ ಶ್ರೀನಿವಾಸನಿಗೆ ವರಪೂಜೆ ಮಾಡಿ, ನಂತರ ಅತ್ಯಂತ ಭಕ್ತಿಯಿಂದ ಸುಗಂಧ ದ್ರವ್ಯದಿಂದ ಕೂಡಿದ ತಾಂಬೂಲವನ್ನು ಸಮರ್ಪಿಸಿದನು. ನಂತರ ಅಮೂಲ್ಯವಾದ ಆಭರಣ, ವಸ್ತ್ರದಿಂದ ಅಲಂಕರಿಸಿದ ಅನೇಕ ರತ್ನಾಭರಣಗಳಿಂದ ಶೋಭಿತನಾದ ಸ್ವಾಮಿಯನ್ನು ಭದ್ರಗಜದ ಮೇಲೆ ಕುಳ್ಳಿರಿಸಿ, ಸಕಲ ದೇವತೆಗಳು ಗಜದ ಮುಂದೆ ನಡೆದು ಬರುತ್ತಿರಲು ಮಂಗಳ ವಾದ್ಯಗಳು ಮೊಳಗುತ್ತಿರಲು, ವೇದಘೋಷಗಳೊಂದಿಗೆ ರಾಜಭವನಕ್ಕೆ ಕರೆತಂದನು. ಆ ಭವನದಲ್ಲಿ ನಾಲ್ಕು ಸ್ಥಂಭದಿಂದ ಕೂಡಿದ ದಿವ್ಯಮಂಟಪದ ಮಧ್ಯದಲ್ಲಿ ರತ್ನಸಿಂಹಾಸನದಲ್ಲಿ ಕುಳ್ಳಿರಿಸಿದರು.

ಅದಕ್ಕೂ ಮುನ್ನ ಪದ್ಮಾವತಿ ದೇವಿಯನ್ನು ಮದುಮಗಳನ್ನಾಗಿ ಮಾಡಲು ರತ್ನಾಭರಣದ ಹಾರಗಳಿಂದ ಅಲಂಕರಿಸಿದರು. ಆ ವಧುವನ್ನು ಪಾದದಿಂದ ತಲೆಯವರೆಗೆ ಅನೇಕ ವಿಧ ವಿಧವಾದ ಆಭರಣಗಳಿಂದ ಅಲಂಕರಿಸಿ ಕನ್ಯೆ ಪದ್ಮಾವತಿಯನ್ನು ಮದುವೆಯ ಹೆಣ್ಣಾಗಿ, ನವವಧುವಾಗಿ ಮಾಡಿದರು. ಅವಳ ಕಪೋಲಗಳಿಗೆ ಮಂಗಳದ್ರವ್ಯವಾದ ಅರಿಶಿಣವನ್ನು ಹಚ್ಚಿದರು. ವಿವಿಧಮಂಗಳ ವಾದ್ಯಗಳು ಮೊಳಗುತ್ತಿರಲು ಇದೇ ವೇಳೆ ಪದ್ಮಾವತಿ ದೇವಿ ಸುಮಂಗಲಿಯರ ನೇತ್ರತ್ವದಲ್ಲಿ ಗೌರಿ ಪೂಜೆ ನೆರವೇರಿಸಿದರು.

ಈ ಶುಭ ಮುಹೂರ್ತದಲ್ಲಿ ತುಂಬುರು ನಾರದಾದಿಗಳು ದೇವಋಷಿಗಳು ದಿವ್ಯಗಾನವನ್ನು ಮಾಡುತ್ತಿರಲು, ಯಕ್ಷ ಕಿನ್ನರ ಗರುಡ ಗಂಧರ್ವಾದಿಗಳು ಸುಶ್ರಾವ್ಯವಾಗಿ ಗಾಯನ ಮಾಡುತ್ತಿರೆ, ಋಷಿಮುನಿಗಳು ವೇದಮಂತ್ರಗಳನ್ನು ಪಠಿಸುತ್ತಿರಲು, ಮಂಗಳವಾದ್ಯಗಳು ಮೊಳಗುತಿರೆ, ಶ್ರೀನಿವಾಸನ ಪರಿಣಯಘಟ್ಟ ಸಮೀಪಿಸಿತು. ಜಗತ್ಕಲ್ಯಾಣಕ್ಕೆ ಪದ್ಮಾವತಿ ಶ್ರೀನಿವಾಸರ ಪರಿಣಯದ ಸುಂದರ

ದೃಶ್ಯವನ್ನು ನೋಡಲು ಆನಂದದ ಕ್ಷಣವನ್ನು ಅನುಭವಿಸಲು ಕಾದಿದ್ದ ಜನಸ್ತೋಮ, ಸಮಸ್ತ ಚರಾಚರ ಜಗತ್ತು ರಮಣೀಯ ದೃಶ್ಯಗಳನ್ನು ಕಣ್ತುಂಬಿಕೊಂಡು ವಿಜಯಗೀತೆಗಳನ್ನು ಹಾಡುತ್ತಿದ್ದ ಶುಭ ಮಹೂರ್ತದಲ್ಲಿ , ಆಕಾಶರಾಜನು ಕನ್ಯಾದಾನ ಸಮಯದಲ್ಲಿ ಶ್ರೀನಿವಾಸನಿಗೆ ಬೆಲೆಬಾಳುವ ಅನೇಕ ಕಾಣಿಕೆಗಳನ್ನು ಸಮರ್ಪಿಸಿದನು.

**"ಕನ್ಯಾಪ್ರದಾನ ಸಮಯೇ ದಕ್ಷಿಣಾಮ್ ರಾಜ ಸತ್ತಮಃ**
**ಕೋಟಿಸಂಖ್ಯಾ ನ್ನಿಷ್ಕಪುಂಜಾನ್ ದತ್ತವಾನ್ವೇಂಕಟೇಶಿತುಃ**
**ಕಿರೀಟಂ ಶತಭಾರಂ ತು ಕಂಠಿಕಾಮಪಿ ತಾವತಿಮ್**
**ಪುನರೇಕಾಂ ತದರ್ಥಂ ಚ ತದರ್ಧಂ ಚತದ್ಧಚ್ತವ ಕಂಠಿಕಾಮ್**
**ಪದಕಾನಿ ದದೌ ಸಪನರ್ವ್ಣ್ಯಾಢ ನೃಪೋತ್ತಮಃ**
**ಮಾಲಿಕಾಂ ಮೌಕ್ತಿಕಾನಾಂ ಚ ಭುಜಭೂಷಣ ಯುಗ್ಮಕಂ**
**ಕರ್ಣಭೂಷೇ ಮೌಕ್ತಿ ಕಾಡ್ಯಾವಂಸಪರ್ಯಂತ ಲಂಬಿನೌ**
**ಕಂಕಣೇರತ್ನ ಮಾಣಿಕ್ಯ ವಜ್ರ ವೈಢೂರ್ಯ ನಿರ್ಮಿತೌ**
**ದ್ವಾತ್ರಿಂಶದ್ಭಾರಂತೋ ಸಂಯುಕ್ತ ಅನರ್ಘ್ಯಂ ದತ್ತವಾನ್ನೃಪಃ**
**ನಾಗಭೂಷಣ ಯುಗ್ಮಂ ಚ ಬಾಹುಪೂರಾದಿಕಾಮ್‌ಸ್ತಥಾ**
**ಭೂಷಣಾನ್ಯಂಗುಳಿಯಾಂಶ್ಚ ದಶಾನಾಂ ಚಿರಮುದ್ರಿಕಾಮ್**
**ಕಟಿಸೂತ್ರಂ ಸ್ವರ್ಣಮಯಂ ವರ ವಜ್ರಸಮನ್ವಿತಮ್**
**ಏಕಾದಶ ಶತಭಾರಂ ಬಹುರತ್ನ ಸಮನ್ವಿತಮ್**
**ಪಾದುಕೌ ಚ ತತ್ ರಾಜಾ ದತ್ತವಾನ್ಮಧುಘುತಿನೌ**
**ದದೌ ಭೋಜನಪಾತ್ರಂ ಚ ಷಷ್ಠಿಭಾರಯುತಂ ಪ್ರಭೋಃ**
**ಲಘುಪಾತ್ರ ಸಮಾಪೇತಂ ಬೃಹಾತ್ಪಾತ್ರಮಹಾಂ ತಥಾ**
**ಕಂಬಲಾನಾಮ್ ಚತುಷಷ್ಠಿಮ್ ದತ್ತವಾನ್ರಾಜಸತ್ತಮಃ"**

ಪದ್ಮಾವತಿ ಶ್ರೀನಿವಾಸರ ವಿವಾಹದ ಶುಭಸಮಯದಲ್ಲಿ ಆಕಾಶರಾಜನು ಅಳಿಯನಾದ ಶ್ರೀನಿವಾಸನಿಗೆ ಕೋಟ್ಯಾಂತರ ಧನರಾಶಿಯನ್ನು ದಕ್ಷಿಣೆಯಾಗಿ ಸಮರ್ಪಿಸಿದನು. ಶತಭಾರವುಳ್ಳ ಕಿರೀಟವನ್ನೂ, ಅಷ್ಟೇ ಭಾರವುಳ್ಳ ಕಂಠೀಹಾರವನ್ನು, ಅತ್ಯಂತ ಬೆಲೆಯುಳ್ಳ ನವರತ್ನ ಖಚಿತವಾದ ಕಂಠೀಹಾರವನ್ನೂ ಸಮರ್ಪಿಸಿದನು. ಜೊತೆಗೆ ಮುತ್ತಿನ ಭುಜಕೀರ್ತಿ, ಕವಚಗಳು, ಕಂಠೀಹಾರ, ಕರ್ಣಾಭರಣ, ದ್ವಾತ್ರಿತ್ರಿಂಶದ್ಭಾರಂತೋ ಮಾಣಿಕ್ಯದಿಂದ ಕೂಡಿದ ಕಡಗ ಕಂಕಣ, ಎರಡು ನಾಗಾಭರಣ, ಹತ್ತು ವಜ್ರವನ್ನು ಹೊಂದಿದ್ದ ಉಂಗುರಗಳನ್ನು, ಬೆಳ್ಳಿ ಉಡುದಾರವನ್ನು, ಬಂಗಾರದಿಂದ ತಯಾರು ಮಾಡಿದ್ದ ಪಾದುಕೆಗಳನ್ನು

ಶ್ರೀನಿವಾಸನಿಗೆ ಬಳುವಳಿಯಾಗಿ ಕೊಟ್ಟನು. ಅಲ್ಲದೆ ಪೂಜೆ ಮಾಡಲು ಚಿನ್ನದ ಹರಿವಾಣ, ಎರಡು ಕಲಶ (ಚಂಬು), ಅರವತ್ತು ನಾಲಕ್ಕು ದೀಪಸ್ತಂಭಗಳನ್ನೂ ಸಮರ್ಪಿಸಿದನು.

ಇನ್ನೂ ಅನೇಕಾನೇಕ ದಿವ್ಯವಸ್ತ್ರಗಳನ್ನು, ನವರತ್ನದ ಹಾರಗಳನ್ನು, ವಜ್ರಕವಚ, ಮರಕತಮಣಿ ಹಾಗು ವಜ್ರಾಭರಣಗಳನ್ನು ಕೊಟ್ಟು ನಂತರ ಅತ್ಯಂತ ವೈಭವದಿಂದ ಪುತ್ರಿ ಪದ್ಮಾವತಿಯನ್ನು ಸಾಲಂಕೃತ ವಧುವಾಗಿ ಕನ್ಯಾದಾನ ಮಾಡಿದನು.

**"ಅತ್ರಿ ಗೋತ್ರ ಸಮುದ್ಭೂತಾಂ ಸುವೀರಸ್ಯ ಪ್ರಪೌತ್ರಿಕಾಂ**
**ಸುಧರ್ಮಣಸ್ತು ಪೌತ್ರಂ ಚ ಪುತ್ರಿಮಾಕಾಶಭೂಪತೇ**
**ತ್ವಮಂಗಿಕುರು ಗೋವಿಂದ! ಕನ್ಯಾಮ್ ಕಮಲಲೋಚನಾಮ್**
**ಏವಮುಕ್ತ ಮಹಾರಾಜ ಮುದಾ ರತ್ನಾಮ್ಬರಂ ದದೌ"**

ಅತ್ರಿಮಹರ್ಷಿ ಗೋತ್ರದಲ್ಲಿ ಜನಿಸಿದ ಸುವೀರಚಕ್ರವರ್ತಿಯ ಮರಿಮೊಮ್ಮಗಳು (ಮನುಮುರಾಲನು), ಸುಧರ್ಮ ಮಹಾರಾಜನ ಮೊಮ್ಮಗಳು, ಆಕಾಶರಾಜನ ಮಗಳಾದ ಪದ್ಮಾವತಿ ಎನ್ನುವ ಕನ್ಯಾಮಣಿಯನ್ನು, ಓ ಗೋವಿಂದ! ನಿನಗೆ ಸಾಲಂಕೃತವಾಗಿ ಧಾರೆಯೆರೆದು ಕೊಡುತ್ತಿದ್ದೇನೆ. ನೀನು ತುಂಬುಹೃದಯದ ಸಂತೋಷದಿಂದ ಅವಳನ್ನು ಅಂಗೀಕರಿಸಿ, ಧರ್ಮಪತ್ನಿಯಾಗಿ ಸ್ವೀಕರಿಸು ಎಂದು ಪ್ರಾರ್ಥಿಸುತ್ತ ಆಕಾಶರಾಜನ ಪಕ್ಷದ ದೇವಗುರು ಬೃಹಸ್ಪತಿ, ವಧು ಪದ್ಮಾವತಿದೇವಿಯ ಗೋತ್ರಪ್ರವರವನ್ನು ಹೇಳುತ್ತ ಆಕಾಶರಾಜನಿಗೆ "ಕನ್ಯಾದಾನ"ವನ್ನು ಮಾಡು ಎಂದು ಹೇಳಿದರು.

ಇನ್ನು ಸ್ವಾಮಿ ಶ್ರೀನಿವಾಸನ ಪಕ್ಷದ ಪುರೋಹಿತರಾದ ವಶಿಷ್ಠ ಮಹರ್ಷಿಗಳು ಸ್ವಾಮಿಯ ಗೋತ್ರ ಪ್ರವರವನ್ನು ಈ ರೀತಿಯಾಗಿ ವಿವರಿಸುತ್ತ :

**"ಪ್ರಪೌತ್ರಸ್ಯ ಯಯಾತೇಸ್ತು ಪೌತ್ರಸ್ಯಾಮಿತತೇಜಸಃ**
**ಶೂರಸೇನಸ್ಯ ರಾಜೇಂದ್ರ! ವಾಸುದೇವಸ್ಯ ಭೂಪತೇ**
**ಪುತ್ರಸ್ಯ ವೆಂಕಟೇಶಸ್ಯ ಗೋತ್ರೇ ವಾಶಿಷ್ಠ ಸಂಜ್ಞತೇ**
**ಜಾತನ್ಯಾತ್ರಿ ಕುಲೋತ್ಪನ್ನಾಂ ಕನ್ಯಾಂ ಕನಕಭೂಷಿತಾಂ**
**ಗ್ರವೇಷ್ಯಾಮ ವಯಂ ರಾಜನ್ ತವ ಪುತ್ರಿಮ್ ನೃಪೋತ್ತಮ**
**ಕನ್ಯಾಪರ ಪ್ರವರಯಾರಿತ್ಯು ಚ್ಚಾರಿತಯಾ ರಥ**
**ಧರಣ್ಯಾ ಸಹಾ ರಾಜೇಂದ್ರಃ ಕನ್ಯಾದಾನ ಪರಾಯಣಃ**
**ಪ್ರಪ್ತೂಷ್ಟ ಹೃದಯಃ ಪ್ರಾಹಾ ಶ್ರೀನಿವಾಸಂ ಪರಾತ್ಪರಮ್"**

ಅಮಿತ ತೇಜೋವಂತನಾದ ಯಯಾತಿರಾಜನ ಮರಿಮೊಮ್ಮಗ, ಶೂರಸೇನಾ ಚಕ್ರವರ್ತಿಯ ಮೊಮ್ಮಗ, ಭೂಪತಿ ವಸುದೇವನ ಮಗ, ವಶಿಷ್ಠ ಮುನಿ ಗೋತ್ರೋದ್ಭವನಾದ, (ತಿರುಮಲೆಯಲ್ಲಿ ಜರುಗಿದ ವೈಖಾನಸಾಗಮದ ಪ್ರಕಾರ, ಶ್ರೀನಿವಾಸ ಭಾರದ್ವಾಜಗೋತ್ರದವನು ಎಂದು ನಿತ್ಯವೂ ಸಂಕಲ್ಪದಲ್ಲಿ ಹೇಳಲಾಗುತ್ತಿದೆ.) ಶ್ರೀವೆಂಕಟೇಶ್ವರನಿಗೆ ವಧುವಾಗಿ ಕನಕಾಭರಣ ಭೂಷಿತಳಾದ ನಿನ್ನ ಮಗಳನ್ನು ಸ್ವೀಕರಿಸಲು ಸಿದ್ಧವಾಗಿದ್ದೇವೆ. "ಓ ರಾಜಾ! ಕನ್ಯಾದಾನ ಮಾಡಲು ಸಿದ್ದವಾಗಿರುವ ನೀನು ಅತ್ಯಂತ ಸಂತೋಷದಿಂದ, ಪರಾತ್ಪರನಾದ ಶ್ರೀನಿವಾಸನಿಗೆ ಧಾರೆಯೆರೆದು ಕೊಡುತ್ತಿರುವ ಕನ್ಯಾಮಣಿಯನ್ನು ನಾವು ಅತ್ಯಂತ ಆನಂದದಿಂದ ಸ್ವೀಕರಿಸುತ್ತಿದ್ದೇವೆ ಎಂದು ವಶಿಷ್ಠ ಮಹರ್ಷಿಗಳು ಸಂತೋಷದಿಂದ ನುಡಿದರು.

ತಕ್ಷಣವೇ ಆಕಾಶರಾಜನು, ಸರ್ವಾಭರಣ ಭೂಷಿತಳಾದ ಪುತ್ರಿ ಪದ್ಮಾವತಿ ಸಮೇತನಾಗಿ ಶ್ರೀನಿವಾಸನ ಬಳಿಗೆ ಬಂದನು.

**"ಕನ್ಯಾಮಿಮಾಂ ಪ್ರದಾಸ್ಯಾಮಿ ಗೃಹಾಣ ಪುರುಷೋತ್ತಮ!**
**ಇತ್ಯುಕ್ತ್ವಾ ಪ್ರಾಕ್ಷಿಪದ್ರಾಜಾ ಧರಣ್ಯಾ ಸ್ರಾವಿತಾಂ ತದಾ**
**ಮಂತ್ರಪೂತಾಂ ಸ್ವಾಮಿತೀರ್ಥಧಾರಾಂ ಸಕನಕಾಂ ಕರೌ**
**ದಕ್ಷಿಣೇ ಶ್ರೀನಿವಾಸಸ್ಯ ದದೌ ಪದ್ಮಾವತಿಮ್ ತತಃ**
**ವಿಧಾನಂ ಚ ತತಶ್ಚಕ್ರೇ ರಾಜೇಂದ್ರ ಸ್ಸಪುರೇ ಪೀತಃ**
**ಪೂಜಯತ್ವಾ ಜಗನ್ನಾಥಂ ಗಂಧ ವಸ್ತ್ರೇನುಲೇಪನಃ**
**ಕಂಕಣಂ ಬಂಧಯಾಮಾಸ ವಾಸುದೇವ ಕರಾಂಭುಜೇ**
**ಪದ್ಮಾವತ್ಯಾಃ ಕರಾಂಭುಜೇ ಬಂಧಯತ್ಕ ಕಂಕಣಂ ಗುರುಃ**
**ತಥಾ ಮಾಂಗಲ್ಯ ಸೂತ್ರಸ್ಯ ಬಂಧಂ ವೈವಾಹಿಕಮ್ ತದಾ**
**ಶ್ರೀನಿವಾಸೇನ ದೇವೇ ಸಾ ಕಾರಯತ್ಸಪುರಾಪಿತಃ"**

ಆಕಾಶರಾಜನು, ತನ್ನ ಅಳಿಯನಾದ ಶ್ರೀನಿವಾಸನ ಬಲಗೈಯ ಮೇಲೆ, ಸರ್ವಾಭರಣ ಭೂಷಿತೆಯಾದ ಮಗಳು ಪದ್ಮಾವತಿಯ ಬಲಗೈಯನ್ನು ಇಡುತ್ತ ಮಂತ್ರಪೂರ್ವಕವಾಗಿ ಸ್ವಾಮಿಪುಷ್ಕರಣಿ ತೀರ್ಥದ ಸಮೀಪದಲ್ಲಿ ಕನ್ಯಾದಾನವನ್ನು ಮಾಡಿದನು. ಆ ಶುಭ ಸಮಯದಲ್ಲಿ ಜಗನ್ನಾಥನಿಗೆ ಶ್ರೀಚಂದನವನ್ನು ಲೇಪನ ಮಾಡಿ ಬೆಲೆಬಾಳುವ ವಸ್ತ್ರಗಳನ್ನು ಬಳುವಳಿಯಾಗಿ ಕೊಟ್ಟನು.

ನಂತರ ಬೃಹಸ್ಪತಿಯು ನೂತನ ವಧುವರರಿಗೆ ಕಂಕಣವನ್ನು ಕಟ್ಟಿಸಿದನು. ತರುವಾಯ ಸುಮಹೂರ್ತದಲ್ಲಿ

**"ಸಾವಿತ್ರೀವ ಚ ಕಲ್ಯಾಣಿ ಬಹುಪುತ್ರವತೀ ಭವ**
**ಸರ್ವ ಲೋಕಸ್ಯ ಜನನೀ ಭವ ಮಂಗಳದಾಯಿನೀ"**

ಹೀಗೆಂದು ಸುಮಂಗಳೆಯರು ಶುಭವನ್ನು ಕೋರುತ್ತ ಶುಭಕರವಾದ ಗೀತೆಯನ್ನು ಹಾಡುತ್ತಿರಲು, ಮಹಿಮರಾದ ಬ್ರಾಹ್ಮಣರು ದಿವ್ಯಮಂತ್ರ ಪಠಿಸುತ್ತಿರುವಾಗ ಪರಮ ಪವಿತ್ರವಾದ ಮಂಗಳಸೂತ್ರವನ್ನು ಸ್ವಾಮಿ ಶ್ರೀನಿವಾಸಪ್ರಭು ವಧು ಪದ್ಮಾವತಿಯ ಕುತ್ತಿಗೆಗೆ ವೈಶಾಖ ಶುಕ್ಲಪಕ್ಷ, ದಶಮಿ ಶುಕ್ರವಾರ ಉತ್ತರಾಫಲ್ಗುಣಿ ನಕ್ಷತ್ರದ ಶುಭ ಮಹೂರ್ತದಲ್ಲಿ ಕಟ್ಟಿದನು. ಆ ಶುಭ ಸಮಯದಲ್ಲಿ ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕನಾದ ಶ್ರೀನಿವಾಸ, ಮಂಗಳಸೂತ್ರವನ್ನು ಪದ್ಮಾವತಿಗೆ ಕಟ್ಟುತ್ತಿರಲು ಮುಕ್ಕೋಟಿ ದೇವತೆಗಳು, ಸನಕಸನಂದಾದಿ ಮಹರ್ಷಿಗಳು ಹರ್ಷಿತರಾಗಿ ಪುಷ್ಪವೃಷ್ಟಿ ಹರಿಸಿದರು. ಆ ನವವಧುವರರು ಒಬ್ಬರಿಗೊಬ್ಬರು ಮುತ್ತಿನ ಸೇಸೆಯನ್ನು ಹಾಕುತ್ತಿದ್ದರು. ಹೀಗೆ ದೇವಿ ಪದ್ಮಾವತಿ ಶ್ರೀಶ್ರೀನಿವಾ ಸರ ವಿವಾಹ ಅದ್ದೂರಿಯಾಗಿ, ಸೇರಿದ್ದವರ ಕಣ್ಣುಕೋರೈಸುವಂತೆ ಮಂಗಲಪ್ರದವಾಗಿ ಜರುಗಿ ಸುಸಂಪನ್ನವಾಯಿತು. ಇದೇ ಸಮಯದಲ್ಲಿ ಪೌರೋಹಿತ್ಯ ವಹಿಸಿದ್ದ ವಶಿಷ್ಠರು, ವಿವಾಹದನಂತರ ನಡೆಸಬೇಕಾದ ಮುಖ್ಯಕಾರ್ಯಕ್ರಮ ನಾಗೋಲಿ, ಲಾಜಾಹೋಮ ಮುಂತಾದ ವೈದಿಕ ವಿಧಿವಿಧಾನಗಳನ್ನು ಯಜುರ್ವೇದ ಮಂತ್ರಪೂರ್ವಕವಾಗಿ ಶಾಸ್ತ್ರೀಯವಾಗಿ ನಿರ್ವಹಿಸಿದರು. ವಿವಾಹಕ್ಕಾಗಿ ಒಂದು ಪಕ್ಷ, ವಾರ ಬಂದಿದ್ದ ಬಂಧು ಬಳಗದವರೆಲ್ಲ ವಿಧ ವಿಧವಾದ ಭಕ್ಷಭೋಜನವನ್ನು ತೃಪ್ತಿಯಾಗಿ ತಿಂದು, ಹೋಗುವಾಗ ಭೂರಿದಕ್ಷಿಣೆ, ಉಡುಗೊರೆಯನ್ನು ಸ್ವೀಕರಿಸಿ ಸಂತೋಷದಿಂದ ತೆರಳಿದರು.

ಈ ಶುಭಸಮಯದಲ್ಲಿ ಆಕಾಶರಾಜನು ಬಂದಿದ್ದ ಬ್ರಾಹ್ಮಣರಿಗೆ ಭೂರಿದಕ್ಷಿಣೆಯೊಂದಿಗೆ ಶ್ರೀಗಂಧದ ತಾಂಬೂಲವನ್ನು ಕೊಟ್ಟು ತೃಪ್ತಿಪಡಿಸಿದನು. ಯಾರು ಯಾರಿಗೆ ಏನೇನು ಬೇಕು ಅನ್ನಿಸುತ್ತದೆಯೋ ಆ ವಸ್ತುಗಳನ್ನು ಅವರಿಗೆ ಧಾರಾದತ್ತವಾಗಿ ಕೊಟ್ಟು ಸಂತೋಷಪಟ್ಟನು. ಹೀಗೆ ಐದುದಿನಗಳ ಕಾಲ ದೇವಿ ಪದ್ಮಾವತಿ ಶ್ರೀನಿವಾಸರ ಪರಿಣಯ ಮಹೋತ್ಸವ ಅತ್ಯಂತ ಅದ್ದೂರಿಯಾಗಿ ಜರುಗಿತು ಎಂದು ಸೂತಮಹರ್ಷಿಗಳು "ನ ಭೂತೋ ನ ಭವಿಷ್ಯತಿ" ಯಾಗಿ ಜರುಗಿದ ಪದ್ಮಾವತಿ ಶ್ರೀನಿವಾಸರ ಪರಿಣಯ ವಿಶೇಷವನ್ನು ಶೌನಕಾದಿಗಳಿಗೆ ಹೇಳುತ್ತ ಅವ್ಯಕ್ತವಾದ ಆನಂದವನ್ನು ಅನುಭವಿಸಿದರು.

## ತೀರ್ಥಯಾತ್ರೆ ಮಾಡಕೂಡದು

ಜಗತ್ಕಲ್ಯಾಣಕ್ಕಾಗಿ, ಶೋಭಾಯಮಾನವಾಗಿ ವೈಭವದಿಂದ ನಡೆದ ಪದ್ಮಾವತಿ ಶ್ರೀನಿವಾಸರ ಪರಿಣಯಕ್ಕೆ ಮುಂಚಿತವಾಗಿ ಆಗಮಿಸಿದ್ದ ಸಕಲ ಲೋಕವಾಸಿಗಳಾದ

ಯಕ್ಷಗಂಧರ್ವ ಕಿನ್ನರಕಿಂಪುರುಷರು, ಬ್ರಹ್ಮಾದಿ ದೇವತೆಗಳು ಮಹಾಮಹಿಮರಾದ ಮಹರ್ಷಿಗಳು, ಋಷಿಮುನಿಗಳು, ಯೋಗಿಗಳು ಮೊದಲಾದವರು ಅನೇಕ ವಿಧವಾದ ಕಾಣಿಕೆ, ಉಡುಗೊರೆಗಳನ್ನು ಸ್ವೀಕರಿಸಿ ಆನಂದದಿಂದ ಅವರವರ ಲೋಕಗಳಿಗೆ ತೆರಳಿದರು. ಅನಂತರ ಆಕಾಶರಾಜನು ತನ್ನ ಅಳಿಯ ಶ್ರೀನಿವಾಸನನ್ನು ಸಕಲ ಸಾರ್ವಭೌಮ ಮರ್ಯಾದೆಗಳೊಂದಿಗೆ ಗೌರವ ಪೂರ್ವಕವಾಗಿ ಬೀಳ್ಕೊಟ್ಟನು. ಮಗಳು ಪದ್ಮಾವತಿಗೆ ಅನೇಕ ಬೆಲೆಬಾಳುವ ಉಡುಗೊರೆಗಳನ್ನು ಕೊಟ್ಟುದಲ್ಲದೆ ಹೆಣ್ಣಾದವಳು ವಿವಾಹವಾಗಿ ಗಂಡನ ಮನೆಗೆ ಹೋದಮೇಲೆ ಅಲ್ಲಿ ಹೇಗಿರಬೇಕು, ಹುಟ್ಟಿದ ಮನೆಗೂ, ಸೇರಿದ ಮನೆಗೂ ಕೀರ್ತಿಯನ್ನು ತರುವಂತೆ ಕಳಶಪ್ರಾಯಳಾಗಿ ಬಾಳಬೇಕು ಎಂದು ಹಿತವಚನವನ್ನು ಹೇಳಿದನು.

ನೂತನ ದಂಪತಿಗಳು ನಾರಾಯಣ ವನದಿಂದ ವೆಂಕಟಾದ್ರಿಗೆ ತೆರಳಿದರು. ಹೋಗುವ ದಾರಿಯಲ್ಲಿ ಅನೇಕ ಸುಂದರವಾದ ವನ, ನದಿ, ಜಲಪಾತ, ಮುಂತಾದ ರಮಣೀಯವಾದ ಪ್ರಕೃತಿ ಸೌಂದರ್ಯವನ್ನು ಸವಿಯುತ್ತ ಮಹಾಮಹಿಮರಾದ ಮಹರ್ಷಿಗಳ ತಪೋಭೂಮಿಯನ್ನು ಸಂದರ್ಶಿಸಿದರು. ಅದೇ ದಾರಿಯಲ್ಲಿ ಅವರು ಸುವರ್ಣಮುಖಾರಿ ನದಿ ತೀರದಲ್ಲಿದ್ದ ಕುಂಭಸಂಭವರಾದ ಅಗಸ್ತ್ಯಮಹಾಮುನಿಗಳ ಆಶ್ರಮಕ್ಕೆ ಬಂದರು. ಆ ಮಹಾಮುನಿಗಳು ನವವಧುವರರಿಗೆ ಸ್ವಾಗತವನ್ನು ಬಯಸಿ ಸಂತೋಷದಿಂದ ಸತ್ಕರಿಸಿದರು. ಶ್ರೀನಿವಾಸನಿಗೆ ತಂದೆ ಶ್ರೀನಿವಾಸ! ನೂತನ ದಂಪತಿಗಳು ತೀರ್ಥಯಾತ್ರೆಯನ್ನಾಗಲೀ, ಕ್ಷೇತ್ರದರ್ಶನವನ್ನಾಗಲೀ ಮಾಡಕೂಡದು. ಇದು ಸಂಪ್ರದಾಯ. ಆ ಸಂಪ್ರದಾಯ, ನಿಯಮದ ಪ್ರಕಾರ ಈಗ ನೀವು ದಿವ್ಯಕ್ಷೇತ್ರವಾದ ಆದಿವಾರಾಹಕ್ಷೇತ್ರಕ್ಕೆ ಹೋಗುವಂತಿಲ್ಲ. ಆದ್ದರಿಂದ ನೀವಿಬ್ಬರೂ ಕೊಂಚಕಾಲ ಇಲ್ಲಿಯೇ, ಈ ಆಶ್ರಮದ್ದಲ್ಲಿಯೇ ಇರಬೇಕು. ತತ್ಫಲವಾಗಿ ನಮಗೆ ನಿಮ್ಮ ಸಾನಿಧ್ಯದಲ್ಲಿ ಸ್ವಲ್ಪಕಾಲ ನಿಮ್ಮೊಡನೆ ಇರುವ ಭಾಗ್ಯವನ್ನು, ಆ ಆನಂದದ ಕ್ಷಣವನ್ನು ನಮಗೆ ಕರುಣಿಸಿ ಎಂದು ಪ್ರಾರ್ಥಿಸಿದರು.

ಅದಕ್ಕೆ ಒಪ್ಪಿದ ಶ್ರೀನಿವಾಸ ಅಗಸ್ತ್ಯರ ಆಶ್ರಮದಲ್ಲಿಯೇ ಕೊಂಚಕಾಲ ಇರಲು ನಿಶ್ಚಯಿಸಿದನು. ಸ್ವಾಮೀ, ಶ್ರೀನಿವಾಸನಿಗೆ ಅವಳ ಪೂರ್ವ ಸಂಕಲ್ಪದಂತೆ ಪದ್ಮಾವತಿ ಪತ್ನಿಯಾಗಿ ದೊರೆತದ್ದಕ್ಕಾಗಿ ಶ್ರೀಲಕ್ಷ್ಮೀದೇವಿಯು ಸಂತೋಷ, ತೃಪ್ತಿ ಹೊಂದಿದಳು. ಆನಂದದಿಂದ ಇನ್ನು ಶ್ರೀನಿವಾಸನ ಜೊತೆಯಲ್ಲಿ ತಾನು ಇಲ್ಲದೆ ಇದ್ದರು ಪರವಾಗಿಲ್ಲ, ತನ್ನ ಸ್ವಾಮಿ ನವವಧುವಿನೊಂದಿಗೆ ಸಂತೋಷದಿಂದ ಇರುತ್ತಾನೆ ಎಂದು ಭಾವಿಸಿ ಕೊಲ್ಹಾಪುರಕ್ಕೆ ಹಿಂದಿರುಗಿದಳು. ತದನಂತರ ಮಾತೆ ವಕುಳಾದೇವಿಯು ಪದ್ಮಾವತಿ ಶ್ರೀನಿವಾಸರಿಗೆ "ನೀವು ಇಬ್ಬರೂ ಅಗಸ್ತ್ಯ ಮಹರ್ಷಿಗಳ ಆದೇಶದಂತೆ ಕೆಲವುಕಾಲ

ಇಲ್ಲಿಯೇ ಇದ್ದು ನಂತರ ತಿರುಮಲಗಿರಿಗೆ ಬನ್ನಿ. ನಿಮಗಾಗಿ ಕಾದಿರುತ್ತೇನೆ" ಎಂದು ಹೇಳಿ ಅವಳೂ ವೆಂಕಟಾಚಲಕ್ಕೆ ಹಿಂದಿರುಗಿದಳು.

## ಚೆರಿ ಅರ್ಥ

ಹೀಗೆ ಸ್ವಲ್ಪ ಕಾಲದ ನಂತರ ಆಕಾಶರಾಜ ವಯೋಧರ್ಮಕ್ಕೆ ಅನುಗುಣವಾಗಿ ಅಸ್ವಸ್ಥನಾಗಿ ಸ್ವರ್ಗಸ್ಥನಾದನು. ಹೀಗಿರುವಾಗ ರಾಜ್ಯಾಧಿಕಾರಕ್ಕಾಗಿ ಆಕಾಶರಾಜನ ತಮ್ಮನಾದ ತೊಂಡಮಾನನೂ, ಆಕಾಶರಾಜನ ಸುಪುತ್ರನಾದ ವಸುಧ ಇಬ್ಬರು ಪರಸ್ಪರ ಭೇಟಿಯಾದರು. ಇಬ್ಬರೂ ರಾಜ್ಯಕ್ಕಾಗಿ ದ್ವೇಷದಿಂದ ಯುದ್ಧ ಮಾಡಲು ನಿರ್ಧರಿಸಿದರು. ಆ ಯುದ್ಧದಲ್ಲಿ ಪದ್ಮಾವತಿಯ ಸೋದರನು, ಶ್ರೀನಿವಾಸನ ಬಾವಮೈದುನನಾದ ವಸುಧ ಶ್ರೀನಿವಾಸನನ್ನು ಯುದ್ಧದಲ್ಲಿ ತನ್ನ ಕಡೆಯಲ್ಲಿ ಇದ್ದು ಗೆಲಲ್ಲು ಸಹಾಯಮಾಡು ಎಂದು ವಿನಂತಿಸಿಕೊಂಡನು. ಅದಕ್ಕೆ ಪದ್ಮಾವತಿಯು ತನ್ನ ಸೋದರನಿಗೆ ಸಹಾಯಮಾಡಿ ರಾಜ್ಯವನ್ನು ಕೊಡಿಸು ಎಂದು ಕೇಳಿಕೊಂಡಳು. ಆದರೆ ಸ್ವಾಮಿ ಶ್ರೀನಿವಾಸನ ಅಂತರಂಗ ಭಕ್ತನಾದ ಆಕಾಶರಾಜನ ತಮ್ಮನಾದ ತೊಂಡಮಾನನು ಶ್ರೀವೆಂಕಟೇಶ್ವರನನ್ನು ಅನೇಕ ವಿಧವಾಗಿ ತನಗೆ ನ್ಯಾಯ ಕೊಡಿಸಬೇಕೆಂದು ಪ್ರಾರ್ಥಿಸಿದನು. ಇವರಿಬ್ಬರ ಪ್ರಾರ್ಥನೆಯನ್ನು ಆಲಿಸಿದ ಶ್ರೀನಿವಾಸನು ತಾನು, ತನ್ನ ಬಾವಮೈದುನಾದ ವಸುಧನ ಕಡೆಯಿದ್ದು ಯುದ್ಧವನ್ನು ಮಾಡುವುದಾಗಿಯೂ, ಹಾಗೆಯೇ ತನ್ನ ಭಕ್ತನಾದ ತೊಂಡಮಾನನಿಗೆ ತನ್ನ ಶಂಖ ಚಕ್ರಗಳನ್ನು ಕೊಡುವುದಾಗಿಯೂ ನಿಶ್ಚಯಿಸಿ ಯುದ್ಧದಲ್ಲಿ ಪಾಲ್ಗೊಂಡನು. ಹೋರಾಟ ತೀವ್ರವಾಗಿ ಮುಂದುವರೆಯಿತು. ಆ ಯುದ್ಧದಲ್ಲಿ ತೊಂಡಮಾನನು ಶ್ರೀನಿವಾಸನ ಮೇಲೆ ಸುದರ್ಶನ ಚಕ್ರವನ್ನು ಪ್ರಯೋಗಿಸಿ ತೀವ್ರವಾಗಿ ಗಾಯಗೊಳಿಸಿದನು. ಇದರಿಂದಾಗಿ ಶ್ರೀನಿವಾಸನು ಮೂರ್ಛೆ ಹೋದನು. ಯುದ್ಧ ಭೂಮಿಯಲ್ಲಿ ಶ್ರೀವೆಂಕಟೇಶ ಪ್ರಜ್ಞೆ ತಪ್ಪಿರುವ ಸುದ್ದಿಯನ್ನು ಕೇಳಿ ಪದ್ಮಾವತಿ ತಲ್ಲಣಗೊಂಡು ಓಡಿಬಂದಳು. ಶ್ರೀನಿವಾಸನು ನಿದ್ರಿಸಿದವನಂತೆ ಎದ್ದನು. ಕೊನೆಗೆ ಶ್ರೀನಿವಾಸನು, ವಸುಧ ಹಾಗು ತೊಂಡಮಾನನ ನಡುವೆ ಶಾಂತಿಯ ಒಪ್ಪಂದ ಮಾಡಿ, ರಾಜ್ಯವನ್ನು ಎರಡು ಭಾಗ ಮಾಡಿದನು. ಈರ್ವರಿಗೂ ಸಮಪಾಲು ಕೊಟ್ಟು ಶಾಂತಿ ಸಂಧಾನ ಆದಮೇಲೆ ಸ್ವಾಮಿಶ್ರೀನಿವಾಸ ಪದ್ಮಾವತಿ ಸಮೇತನಾಗಿ ಅಗಸ್ತ್ಯರ ಆಶ್ರಮಕ್ಕೆ ಬಂದನು.

## ತೊಂಡಮಾನನ ಶ್ರೀನಿವಾಸ ದರ್ಶನ

ಯುದ್ಧಮುಗಿದು ಸ್ವಾಮಿ ಶ್ರೀನಿವಾಸನ ಮಹಾಕರುಣೆಯಿಂದಾಗಿ ತಮಗೆ ದೊರೆಯುವ ಮುಂದಿನ ಸುಖವೇ ರಾಜತ್ವ ಎಂದು ಭಾವಿಸಿ ತೊಂಡಮಾನನು

ಶ್ರೀನಿವಾಸನನ್ನು ಭಕ್ತಿಯಿಂದ ಕಂಡು ಹಲವು ವಿಧದಲ್ಲಿ ಸ್ತುತಿಸಿದನು. ತಾನು, ಯಾರೂ ಮಾಡಬಾರದ ತಪ್ಪನ್ನು, ಘೋರವಾದ ತಪ್ಪನ್ನು ಮಾಡಿದ್ದಾಗಿಯೂ ತನಗೆ ಅತ್ಯಂತ ಪ್ರಿಯನಾದ ಸ್ವಾಮಿ ಶ್ರೀವೆಂಕಟೇಶನು ತನಗೆ ಸಹಾಯವಾಗಲಿ ಎಂದು ಕೊಟ್ಟ ಶಂಖಚಕ್ರವನ್ನು ನೀಡಿದ ಭಗವಂತನ ವಿರುದ್ಧವೇ ಪ್ರಯೋಗಿಸಿ ಘೋರವಾದ ತಪ್ಪನ್ನು ಮಾಡಿದೆ, ನನ್ನ ತಪ್ಪನ್ನು ಮನ್ನಿಸಿ ಕಾಪಾಡು ಎಂದು ಹಲವಾರು ರೀತಿಯಲ್ಲಿ ಬೇಡಿಕೊಂಡನು. ಅಲ್ಲದೆ ತನಗೆ ಕೊಟ್ಟ ಆಯುಧವನ್ನು ಸ್ವಾಮಿಗೆ ಭಕ್ತಿಯಿಂದ ಹಿಂದಿರುಗಿಸಿದನು. ಭಕ್ತಾಪರಾಧೀನನಾದ ಶ್ರೀನಿವಾಸ ನೊಂದಿರುವ ತನ್ನ ಭಕ್ತನನ್ನು ಸಮಾಧಾನ ಪಡಿಸುತ್ತ ಅವನ ನೋವನ್ನು ದೂರಮಾಡಲು "ನೀನು ಯಾವ ತಪ್ಪನ್ನು ಮಾಡಿಲ್ಲ. ರಣರಂಗದಲ್ಲಿ ಕ್ಷತ್ರಿಯ ಧರ್ಮವನ್ನು ಪಾಲಿಸಿರುವೆ. ರಣರಂಗದಲ್ಲಿ ಎದುರಾಳಿ ಯಾರೇ ಆಗಿರಲಿ ಯುದ್ಧದ ನಿಯಮದ ಪ್ರಕಾರ ಚಕ್ರವನ್ನು ಪ್ರಯೋಗಿಸಿರುವುದು ಅಪರಾಧವಲ್ಲ. ನಿನಗೆ ಸಿಕ್ಕಿರುವ ಆಯುಧವನ್ನು ಯುದ್ಧ ಮುಗಿದನಂತರ ಇದರ ಉಪಯೋಗವಿಲ್ಲ, ಬೇಡವೆಂದು ನನಗೆ ಹಿಂದಿರುಗಿಸುವುದು ಬೇಡ. ಕಲಿಯುಗ ಮುಗಿಯುವವರೆಗೂ ನಾನು ಆ ಆಯುಧ, ಶಂಖಚಕ್ರ ಇಲ್ಲದೆಯೇ ಇರುವುದಾಗಿ ತೀರ್ಮಾನಿಸಿದ್ದೇನೆ. ಆದಕಾರಣ ನನ್ನ ಶಂಖಚಕ್ರವು ನಿನ್ನ ಬಳಿಯಲ್ಲಿಯೇ ಇರಲಿ" ಎಂದು ಹೇಳುತ್ತ ತೊಂಡಮಾನನಿಗೆ ಆಜ್ಞೆ ಮಾಡಿದನು.

"ಓ ತೊಂಡಮಾನ ಚಕ್ರವರ್ತಿಯೇ! ನಿನ್ನ ಹಾಗೆಯೇ ನಿನ್ನ ಸಹೋದರರೆಲ್ಲರೂ ನನಗೆ ಅತ್ಯಂತ ಆಪ್ತರು, ಆತ್ಮೀಯ ಬಂಧುಗಳು, ಮಾತ್ರವಲ್ಲದೆ ನನ್ನ ಪರಮಭಕ್ತರು ಕೂಡ. ನಿನ್ನ ಒಡಹುಟ್ಟಿದ ಸೋದರ ಆಕಾಶರಾಜನು ನನಗೆ ಅವನ ಮಗಳಾದ ಪದ್ಮಾವತಿಯನ್ನು ವಿವಾಹ ಮಾಡಿಕೊಟ್ಟು ನನ್ನನ್ನು ಗೃಹಸ್ಥನಾಗಿ ಮಾಡಿ, ಹೆಣ್ಣುಕೊಟ್ಟ ಮಾವನಾಗಿದ್ದಾನೆ. ಈ ವಿವಾಹದ ಕಾರಣದಿಂದ ಆಕಾಶರಾಜನ ಹೆಸರು, ಕೀರ್ತಿ ಆಚಂದ್ರಾರ್ಕವಾಗಿ ಬೆಳಗುತ್ತಿದೆ. ಚಿರಕೀರ್ತಿ ಮಾತ್ರವಲ್ಲದೆ, ಚಿರಸ್ಥಾಯಿಯಾಗಿ ಪರಮಪದವನ್ನು ಹೊಂದಿದ್ದಾನೆ. ಪ್ರಸ್ತುತ ಗೃಹಸ್ಥನಾಗಿರುವ ನನಗೆ ವಾಸಿಸಲು ಮನೆಯಿಲ್ಲ. ಓ ರಾಜಾ! ಪ್ರಭು ತೊಂಡಮಾನ ನೀನು ನನಗೆ ಮಾವ ಅಲ್ಲವೇ? ನಿನ್ನ ಅಣ್ಣ ನನಗೆ ಹೆಣ್ಣನ್ನು ಕೊಟ್ಟು ಸಂಸಾರಿಯನ್ನಾಗಿ ಮಾಡಿದ್ದಾನೆ. ಈಗ ನೀನು ನನಗಾಗಿ ನನ್ನದೇ ಆದ ಒಂದು ಶಾಶ್ವತವಾದ ಮನೆಯನ್ನು ಕಟ್ಟಿಕೊಡಬೇಕಾಗಿದೆ. ಈ ನನ್ನ ಕೋರಿಕೆಯನ್ನು ಅತಿಶೀಘ್ರದಲ್ಲಿಯೇ ನೆರವೇರಿಸುವೆ ಎಂದು ಭಾವಿಸುತ್ತೇನೆ" ಎಂದು ಶ್ರೀನಿವಾಸನು ಚಕ್ರವರ್ತಿ ತೊಂಡಮಾನನಿಗೆ ಆದೇಶಿಸಿದನು. ತಕ್ಷಣವೇ ಮಹಾರಾಜ ತೊಂಡಮಾನ:

"ಇದು ಎಂತಹ ಮಾತು ಪ್ರಭು! ಶ್ರೀನಿವಾಸ! ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕ. ಬೇಡಿದ ವರವನ್ನು ನೀಡುವ ಆಪದ್ಬಾಂದವ, ಜಗತ್ಕಲ್ಯಾಣಕಾರಕನಾದ ನಿನಗೆ ನಾನು ವಾಸಿಸಲು ಯೋಗ್ಯವಾದ ಮನೆಯನ್ನು ಕಟ್ಟಿಕೊಡುವುದು ನನ್ನ ಮಹಾಭಾಗ್ಯ. ಓ ಪ್ರಭೂ! ನನ್ನಲ್ಲಿಟ್ಟಿರುವ ಅಪಾರ ಕರುಣೆ, ನಂಬಿಕೆಯಿಂದ ನನಗೆ ಈ ಕೆಲಸವನ್ನು ವಹಿಸಿದ್ದೀರ. ಇದರಿಂದ ನನ್ನ ಜೀವನ ಧನ್ಯವಾಯಿತು. ನಿಮ್ಮ ಕೃಪೆಯಿಂದಾಗಿ ನನ್ನ ಜೀವನ ಪರಿಪೂರ್ಣವಾಗಿದೆ ಸುಖಮಯವಾಗಿದೆ. ನಿನ್ನ ಕರುಣೆಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ. ಸ್ವಾಮೀ, ನೀನು ಬಯಸಿದ ನಿನ್ನ ನಿವಾಸವನ್ನು ಎಲ್ಲಿ? ಹೇಗೆ ಕಟ್ಟಬೇಕು? ಅದರಲ್ಲಿ ಏನು ಏನು ವಸತಿ ಸೌಲಭ್ಯಗಳು ಇರಬೇಕು? ಎಷ್ಟು ದ್ವಾರಗಳು ಇರಬೇಕು? ಈ ಎಲ್ಲ ವಿವರಗಳನ್ನು ಹೇಳು ಸ್ವಾಮಿ, ನಾನು ತಪ್ಪದೆ ಪಾಲಿಸಿ ನಿನಗೆ ಯೋಗ್ಯವಾದ ನಿವಾಸವನ್ನು ನಿರ್ಮಿಸಿ ಕೊಡುತ್ತೇನೆ ಎಂದು ಚಕ್ರವರ್ತಿ ತೊಂಡಮಾನ ಭಕ್ತಿಯಿಂದ ನಮಸ್ಕರಿಸಿದನು.

ತೊಂಡಮಾನನು ಹೇಳಿದ ಮಾತಿಗೆ ಸಂತುಷ್ಟನಾದ ಪ್ರಭು "ಓ ರಾಜನೇ, ನೀನು ವರಾಹಕ್ಷೇತ್ರದಲ್ಲಿ, ಶ್ರೀವರಾಹಸ್ವಾಮಿಯ ಅನುಮತಿಯನ್ನು ಪಡೆದು ನನಗೆ ಅನುಕೂಲ ವಾದ, ವಾಸಕ್ಕೆ ಯೋಗ್ಯವಾದ ದಿವ್ಯ ಭವನವನ್ನು ನಿರ್ಮಿಸು ಎಂದು" ಆಜ್ಞಾಪಿಸಿದನು.

ಆ ಭವನವು ಪೂರ್ವಾಭಿಮುಖವಾಗಿದ್ದು ಎರಡು ಗೋಪುರಗಳನ್ನು ಹೊಂದಿರಬೇಕು. ಮೂರು ಪ್ರಾಕಾರಗಳು, ಏಳು ಪ್ರವೇಶದ್ವಾರಗಳು, ಧ್ವಜಸ್ತಂಭ, ಆಸ್ಥಾನ, ಯಾಗ ಮಂಟಪವನ್ನು ಹೊಂದಿದ್ದು ವಾಸ್ತುಶಾಸ್ತ್ರದ ಪ್ರಕಾರ ಬ್ರಹ್ಮಾಂಡದ ಸಕಲ ಸೌಂದರ್ಯವನ್ನು ಹೊಂದಿದ್ದು ಮಧ್ಯದಲ್ಲಿ ಆನಂದನಿಲಯ ಎನ್ನುವ ಬಂಗಾರ ವಿಮಾನದ ಏರ್ಪಾಡು ಮಾಡಿ ನನಗೆ ಸಮರ್ಪಿಸಿ ನಿನ್ನ ಜನ್ಮವನ್ನು ಸಾರ್ಥಕಗೊಳಿಸಿಕೋ ಎಂದು ಪ್ರೀತಿಯಿಂದ ಹೇಳಿದನು.

ತೊಂಡಮಾನ, ಪ್ರಭುಶ್ರೀನಿವಾಸನ ಆದೇಶದಂತೆ ದಿವ್ಯ ಭವನವನ್ನು ನಿರ್ಮಿಸಿದನು. ಹಾಗೆಯೇ ಶ್ರೀನಿವಾಸನ ದರ್ಶನಕ್ಕೆ ಬರುವ ಭಕ್ತರ ಅನುಕೂಲಕ್ಕಾಗಿ ವೆಂಕಟಾದ್ರಿಗೆ ಮೆಟ್ಟಿಲನ್ನು ನಿರ್ಮಿಸಿದನು. ಮಧ್ಯದಲ್ಲಿ ಅಲ್ಲಲ್ಲಿ ತಂಗುದಾಣಗಳನ್ನು ನಿರ್ಮಿಸಿ, ನೀರಿಗೆ ತೊಂದರೆ ಆಗದಂತೆ ಅಕ್ಕಪಕ್ಕಗಳಲ್ಲಿ ನೀರಿನಕೊಳವನ್ನು ನಿರ್ಮಿಸಿದನು. ವಾಸಿಸಲು ಭವನವು ಎಲ್ಲ ರೀತಿಯಲ್ಲೂ ಸಿದ್ಧವಾದ ಮೇಲೆ ಆ "ಆನಂದನಿಲಯ" ದಿವ್ಯಭವನವನ್ನು ಚಕ್ರವರ್ತಿ ತೊಂಡಮಾನ ಸ್ವಾಮಿ ಶ್ರೀ ವೆಂಕಟೇಶನಿಗೆ ಭಕ್ತಿಪೂರ್ವಕವಾಗಿ ಸಮರ್ಪಿಸಿದನು.

ಶ್ರೀವೆಂಕಟೇಶ್ವರನು, ತೊಂಡಮಾನನು ನಿರ್ಮಿಸಿಕೊಟ್ಟ "ಆನಂದನಿಲಯ" ವನ್ನು ನೋಡಿ ಸಂತೋಷಪಟ್ಟನು. ಪಾಕಶಾಲೆ, ಧಾನ್ಯದ ಕಣಜ, ಮಲಗುವಕೋಣೆ, ಸಮಾಲೋಚನಾ ಮಂಟಪ, ಯಾಗಮಂಟಪ, ಧ್ಯಾನಮಂದಿರ ರತ್ನಖಚಿತ ಭಂಢಾರದಿಂದ ವಿಜೃಂಭಿಸಿರುವ ಆಲಯವನ್ನು ವೀಕ್ಷಿಸಿ ಹೀಗೆ ಹೇಳಿದನು: ಓ ಚಕ್ರವರ್ತಿ! ನನಗಾಗಿ ನಿರ್ಮಿಸಿದ ಈ ಭವನವು ತುಂಬಾ ದಿವ್ಯವಾಗಿ ದೈವಿಕವಾಗಿದೆ. ಆದರೆ ಇದರಲ್ಲಿ ಹುದುಗಿರುವ ಶ್ರೀತೀರ್ಥ, ಭೂತೀರ್ಥಗಳನ್ನು ಜೀರ್ಣೋದ್ಧಾರ ಮಾಡುವ ಕೆಲಸ ಆಗಬೇಕಿದೆ. ನೀವು, ನಿಮ್ಮ ಹಿಂದಿನ ಜನ್ಮದಲ್ಲಿ ಏರ್ಪಾಡು ಮಾಡಿದ್ದೀರ. ಆದರೆ ಅದು ಕಾಲಾಂತರದಲ್ಲಿ ನಿಕ್ಷೇಪವಾಗಿ ಭೂಮಿಯಲ್ಲಿ ಅಂತರ್ಗತವಾಗಿದೆ ಎಂದು ಹೇಳುತ್ತಿರುವಾಗ ತೊಂಡಮಾನನು ಆನಂದದಿಂದ, ಕಣ್ಣರೆಪ್ಪೆ ಮಿಟುಕಿಸದೆ ಆಶ್ಚರ್ಯದಿಂದ ನೋಡುತ್ತಿದ್ದನು. ಆ ದೇಗುಲ, ತೀರ್ಥಗಳನ್ನು ಯಾವಾಗ ಹೇಗೆ? ಉತ್ಖನನ ಮಾಡಿದರು? ಎಂಬುದನ್ನು ತಿಳಿಸಬೇಕೆಂದು ಭಕ್ತಿಯಿಂದ ಬೇಡಿಕೊಂಡನು. ಕೂಡಲೇ ಸ್ವಾಮಿ ವೆಂಕಟೇಶ ಈರೀತಿಯಲ್ಲಿ ವಿವರಿಸಲು ಆರಂಭಿಸಿದನು.

## ಭಕ್ತಶಿಖಾಮಣಿ ರಂಗದಾಸ

ಶ್ರೀ ವೈಕುಂಠಧಾಮನಾದ ಶ್ರೀ ಮಹಾವಿಷ್ಣುವು ಈ ಪರ್ವತರಾಜನ (ಸಪ್ತಗಿರಿಯಲ್ಲಿ) ಮೇಲೆ ಭೂಲೋಕದಲ್ಲಿ ಶ್ರೀದೇವಿ ಭೂದೇವಿ ಸಮೇತನಾಗಿ ಲೀಲಾಮಾನುಷ ರೂಪದಲ್ಲಿ ವಿಹರಿಸುತ್ತಿದ್ದನು. ಅವರು ಈ ಕ್ಷೇತ್ರದಲ್ಲಿ ವಿಹರಿಸುತ್ತಿದ್ದ ಸಮಯದಲ್ಲಿ ಶ್ರೀಹರಿಯ ಭೋಜನಕ್ಕೆ ಶ್ರೀಮಹಾಲಕ್ಷ್ಮಿಯು ಒಂದು ತೀರ್ಥವನ್ನು ಮತ್ತು ಭೂದೇವಿಯು ಒಂದು ತೀರ್ಥವನ್ನು ಸ್ಥಾಪಿಸಿದರು. ಆ ತೀರ್ಥಗಳು ಶ್ರೀತೀರ್ಥ, ಭೂತೀರ್ಥವೆಂದು ಪ್ರಸಿದ್ಧವಾಗಿವೆ. ಕೆಲವು ಸಾವಿರ ವರ್ಷಗಳ ನಂತರ, ಕಲಿಯುಗವನ್ನು ಪ್ರವೇಶಿಸುವ ಸಮಯದಲ್ಲಿ ಎರಡೂ ದಿವ್ಯ ಕ್ಷೇತ್ರಗಳು ನಿಕ್ಷೇಪಗೊಂಡವು.

ಅದರ ನಂತರ, ಬಹಳ ಕಾಲ, ಶ್ರೀಕೃಷ್ಣನ ಪರಮಭಕ್ತನಾದ ಗೋಪಿನಾಥನೆಂಬ ವೈಖಾನಸ–ಬ್ರಾಹ್ಮಣನು ವಿಷ್ಣುವನ್ನು ಕುರಿತು ತಪಸ್ಸು ಮಾಡಿದನು. ಅವನ ತಪಸ್ಸಿಗೆ ಪ್ರಸನ್ನನಾದ ಶ್ರೀಹರಿಯು ವರವನ್ನು ಕರುಣಿಸಿದನು. ಆ ವಿಪ್ರನು ಸಂತೋಷಗೊಂಡು, "ಸ್ವಾಮಿ! ಈಗ ನೀನು ನನಗೆ ಶ್ರೀಕೃಷ್ಣನ ರೂಪದಲ್ಲಿ ದರ್ಶನ ಕೊಟ್ಟಿರುವೆ. ಆ ಶ್ರೀಕೃಷ್ಣನ ರೂಪದಲ್ಲಿ ನಿತ್ಯವೂ ನಾನು ನಿನ್ನನ್ನು ಸದಾ ಪೂಜಿಸಬೇಕು" ಎಂದು ಪ್ರಾರ್ಥಿಸಿದನು.

ಶ್ರೀ ಹರಿಯು ಆತನ ಭಕ್ತಿಯನ್ನು ಮೆಚ್ಚಿ "ಓ ವಿಪ್ರವರ್ಯಾ! ನೀನು ವೆಂಕಟಾಚಲಕ್ಕೆ ಹೋಗು. ಅಲ್ಲಿ "ಗೋವಿಂದ" ಎಂದು ಕರೆಯಲ್ಪಡುವ ನಾನು

ಶ್ರೀಕೃಷ್ಣನ ರೂಪದಲ್ಲಿ ದರ್ಶನವನ್ನು ಕೊಡುತ್ತೇನೆ. ನೀನು ಅಲ್ಲಿಗೆ ಹೋಗಿ ನಿತ್ಯವೂ ಅರ್ಚಿಸುತ್ತ ಭಕ್ತಿಯಿಂದ ನೈವೇದ್ಯವನ್ನು ಸಮರ್ಪಿಸು. ನೀನು ಹೋಗುವ ದಾರಿಯಲ್ಲಿ ನಿನಗೆ ಒಬ್ಬ ಹುಡುಗ "ರಂಗದಾಸ" ಎನ್ನುವ ಭಕ್ತನು ನಿನ್ನ ಜೊತೆಯಲ್ಲಿ ಬರುತ್ತಾನೆ. ಆತನು ನೀನು ಮಾಡುವ ಕಾರ್ಯಗಳಿಗೆ, ಪೂಜೆಗೆ ಬೇಕಾದ ಹೂವು, ಹಣ್ಣು, ದ್ರವ್ಯಗಳನ್ನು ಅಣಿಮಾಡಿ ಇಡುತ್ತಾನೆ. ಆದ್ದರಿಂದ ನೀನು ಅವನನ್ನು ನಿನ್ನೊಂದಿಗೆ ಸೇರಿಸಿಕೊಂಡು ವೆಂಕಟಾದ್ರಿಗೆ ಹೋಗು. ತತ್ಫಲವಾಗಿ ನಿನ್ನ ಕೋರಿಕೆ ಈಡೇರುತ್ತದೆ. ಈ ನಿನ್ನ ಜನ್ಮ ಸಾರ್ಥವಾಗುತ್ತದೆ." ಎಂದು ವರವನ್ನು ಕೊಟ್ಟನು.

ಇದರಿಂದ ಸಂತಸಗೊಂಡ ಗೋಪಿನಾಥನು ವೆಂಕಟಾಚಲ ಕ್ಷೇತ್ರಯಾತ್ರೆಗೆ ರಂಗದಾಸನನ್ನು ತನ್ನೊಂದಿಗೆ ಕರೆದುಕೊಂಡು ಹೊರಟನು. ರಂಗದಾಸನು ನಿತ್ಯವೂ ಸ್ವಾಮಿಯ ಪೂಜೆಗೆ ಬೇಕಾದ ಹಣ್ಣು, ಹೂವು, ಪತ್ರೆ, ತುಳಸಿ ಎಲ್ಲವನ್ನು ಅಣಿಮಾಡುತ್ತಿದ್ದನು. ಅವೆಲ್ಲವನ್ನು ಅಲ್ಲಿಯೇ ಬೆಳೆಸಲು ತೋಟವನ್ನು ಮಾಡಿ, ಅದಕ್ಕೆ ನೀರುಣಿಸಿ ಆರೈಕೆ ಮಾಡಲು ಎರಡು ಬಾವಿಯನ್ನು ನಿರ್ಮಿಸಿದನು. ಹಿಂದೆ ಅದೇ ಸ್ಥಳದಲ್ಲಿ ಇದ್ದ ಶ್ರೀತೀರ್ಥ, ಭೂತೀರ್ಥಗಳು ಮತ್ತೆ ದಿವ್ಯವಾಗಿ ಪ್ರಕಟವಾಯಿತು.

ಗೋಪಿನಾಥನು ಶ್ರೀತೀರ್ಥದಿಂದ ತಂದ ನೀರನ್ನು ಸ್ವಾಮಿಯ ಅಭಿಷೇಕ, ಅರ್ಚನೆಗೆ ಉಪಯೋಗಿಸುತ್ತಿದ್ದನು. ಭೂತೀರ್ಥದಿಂದ ರಂಗದಾಸನು ಸಂಪಿಗೆ, ಗುನ್ನೇರು, ಮಂದಾರ, ಜಾಜಿ, ಮಲ್ಲಿಗೆ, ಸೇವಂತಿಗೆಗಳನ್ನು ತಂದು ಭಕ್ತಿಯಿಂದ ಪೂಜೆಗೆ ಅರ್ಪಿಸುತ್ತಿದ್ದರು. ಹೀಗೆ ಶ್ರೀನಿವಾಸನ ಆರಾಧನೆ ಕೆಲಕಾಲ ಅವಿರತವಾಗಿ ಮುಂದುವರೆಯಿತು.

ಒಂದು ದಿನ ಪುಷ್ಕರಿಣಿಯಲ್ಲಿ ತನ್ನ ಹೆಂಡತಿಯರೊಂದಿಗೆ ಜಲಕ್ರೀಡೆ ಆಡುತ್ತಿದ್ದ ಒಬ್ಬ ಗಂಧರ್ವನ ಮೇಲೆ ರಂಗದಾಸರ ಗಮನ ಬಿತ್ತು. ಅವನ ಸುಂದರ ರೂಪವನ್ನೂ ಅವನ ಪಕ್ಕದಲ್ಲಿದ್ದ ಲೋಕಸೌಂದರ್ಯವತಿಯರಾದ ಸ್ತ್ರೀಯರನ್ನೂ ನೋಡುತ್ತಿದ್ದ ರಂಗದಾಸ ವಿಚಲಿತನಾಗಿ ಸ್ವಲ್ಪ ಭ್ರಮೆಯಾಯಿತು. "ಆಹಾ! ಈ ರಾಜ ಎಷ್ಟು ಪುಣ್ಯ ಮಾಡಿದ್ದಾನೆ! ಎಂತಹ ಭೋಗ ಭಾಗ್ಯಗಳನ್ನು ಅನುಭವಿಸುತ್ತಿದ್ದಾನೆ. ಎಷ್ಟು ಸ್ತ್ರೀಯರ ಸುಖವನ್ನು ಅನುಭವಿಸುತ್ತಿದ್ದಾನೆ" ಎಂದು ಯೋಚಿಸುತ್ತಾ ಅವನ ಚಿತ್ತ ಕ್ಷಣಕಾಲ ಚಂಚಲವಾಯಿತು. ಗಂಧರ್ವರ ತೇಜಸ್ಸಿಗೆ ಬೆರಗಾದ ಅವನು ದಿಗ್ಭ್ರಮೆಗೊಂಡು, ಪೂಜೆಗೆ ಹೂವುಗಳನ್ನು ಸಂಗ್ರಹಿಸಲು ತಡಮಾಡಿದನು. ಅಷ್ಟರಲ್ಲಿ ತಾನು ಮಾಡಬೇಕಾಗಿದ್ದ ಕಾರ್ಯಕ್ಕೆ ತಡವಾದದ್ದಕ್ಕೆ ಪಶ್ಚಾತ್ತಾಪಪಟ್ಟು ರಂಗದಾಸ ತರಾತುರಿಯಲ್ಲಿ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಪೂಜೆಗೆ ಬೇಕಾದ ಹೂವು ಪತ್ರೆಯನ್ನು

ಕೊಯ್ದು ತಂದನು. ತಡವಾದದ್ದಕ್ಕೆ ಗೋಪಿನಾಥನು ಕೋಪಗೊಂಡು ನೀನು ಅದೇ ಲೋಕದಲ್ಲಿ ಹುಟ್ಟು ಎಂದು ಶಪಿಸಿದನು.

ಶಾಪದಿಂದ ನೋವನ್ನು ಅನುಭಸುತ್ತಿದ್ದ ರಂಗದಾಸನಿಗೆ ಶ್ರೀಹರಿಯು ಪ್ರತ್ಯಕ್ಷನಾಗಿ "ಓ ರಂಗದಾಸನೇ ನೀನು ನನ್ನ ಪರಮಭಕ್ತ. ನಾನು ನಿನ್ನ ಪಾಪವನ್ನೆಲ್ಲವನ್ನು ಪರಿಹರಿಸಿದ್ದೇನೆ. ನೀನು ಪುಷ್ಕರಣಿಯಲ್ಲಿ ಸಂಕಲ್ಪ ಸ್ನಾನಮಾಡಿ ನಿನ್ನ ಪಾಪವನ್ನು ನನಗೆ ಅರ್ಪಿಸು. ನಂತರ ನೀನು ನೋಡಿದ ಗಂಧರ್ವನಂತೆ ಸಕಲ ಭೋಗಭಾಗ್ಯವನ್ನು ಅನುಭವಿಸಿ ನನ್ನನ್ನು ಸೇರುತ್ತೀಯ. ಆಗಿನ ಆ ರಂಗದಾಸನೇ ಇಂದು ತೊಂಡಮಾನನಾಗಿದ್ದಾನೆ. ಆದುದರಿಂದ ಓ ರಾಜನೇ! ಆ ಜನ್ಮದಲ್ಲಿ ತೋಡಿ ನಿರ್ಮಿಸಿದ ಬಾವಿಗಳನ್ನು, ಪುನಃ ಜೀರ್ಣೋದ್ಧಾರ ಮಾಡಬೇಕು ಎಂದು ಶ್ರೀನಿವಾಸನು ಆಜ್ಞಾಪಿಸಿದ್ದನು.

ತನ್ನ ಪೂರ್ವಜನ್ಮದ ಕಥೆಯಿಂದ ಆಶ್ಚರ್ಯಗೊಂಡ ತೊಂಡಮಾನನು ಶ್ರೀತೀರ್ಥವನ್ನು ಪುನರುದ್ಧಾರಗೊಳಿಸಿ ಕಲ್ಲಿನ ಕಟ್ಟೆಯನ್ನು ಕಟ್ಟಿಸಿ, ಅದರ ಮೇಲೆ ಬಂಗಾರದ ರೇಕನ್ನು ಹೊದಿಸಿದನು. ಅಂದಿನಿಂದ ಅದು "ಬಂಗಾರುಬಾವಿ" ಎಂದೇ ಪ್ರಸಿದ್ಧವಾಯಿತು. ಮೆಟ್ಟಿಲುಗಳಿರುವ ಭೂತೀರ್ಥವನ್ನು ನಿರ್ಮಿಸಿ ಅದರಲ್ಲಿ ಹೂವಿನ ತೋಟವನ್ನು ಮಾಡಿ ದನು. ಹೀಗೆ ಈ ಎರಡು ತೀರ್ಥಗಳು ಶ್ರೀವೆಂಕಟೇಶನ ಸೇವೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ.

## ಆನಂದನಿಲಯ ಪ್ರವೇಶ

ಸ್ವಾಮಿ ವೆಂಕಟೇಶನ ಆಣತಿಯಂತೆ ತೊಂಡಮಾನನು ವೈಭವೋಪೇತವಾದ ಸುಂದರವಾದ, ಅತ್ಯಂತ ಶೋಭಾಯಮಾನವಾದ "ಆನಂದನಿಲಯಂ" ಎನ್ನುವ ದಿವ್ಯ ಭವನವನ್ನು ನಿರ್ಮಿಸಿದನು.

ಶ್ರೀನಿವಾಸನು ಭಕ್ತರನ್ನು ಸಂರಕ್ಷಿಸುವ ಸಲುವಾಗಿ ಆ ನೂತನ ಭವನವನ್ನು ಪ್ರವೇಶಿಸಲು ಶುಭ ಮಹೂರ್ತ ನಿಶ್ಚಯವಾಯಿತು. ಸಮಯಕ್ಕೆ ಸರಿಯಾಗಿ ಬ್ರಹ್ಮಾದಿದೇವತೆಗಳು, ವಶಿ ಷ್ಠಾದಿ ಮುನಿಗಳು, ಯೋಗಿಗಳು, ಮಹಾಮಹಿಮರಾದ ಮುನಿಗಳು ಮೊದಲಾದವರು ವೆಂಕಟಾದ್ರಿ ಕ್ಷೇತ್ರವನ್ನು ತಲುಪಿದರು. ಆ ದಿವ್ಯ ಘಳಿಗೆಯಲ್ಲಿ ಮಂಗಳವಾದ್ಯಗಳು ಮೊಳಗುತ್ತಿದ್ದರೆ, ಶೃತಿ ಶುಭಘೋಷದೊಂದಿಗೆ ವೈದಿಕರು ವೇದ ಮಂತ್ರ ಪಠಣ ಮಾಡುತ್ತಾ ಛತ್ರ ಚಾಮರ ರಾಜೋಚಿತ ಗೌರವದಿಂದ ವಿರಾಜಮಾನನಾಗಿದ್ದ ಶ್ರೀನಿವಾಸನ ಮೇಲೆ ದೇವತೆಗಳು ಪುಷ್ಪವೃಷ್ಟಿ ಮಾಡಿದರು. ಅಂತಹ ವಿಶೇಷ ಮತ್ತು ಶುಭ ಸಮಯದಲ್ಲಿ, ಪರಮಭಕ್ತನಾದ

ತೊಂಡಮಾನ ಚಕ್ರವರ್ತಿ ಪದ್ಮಾವತಿ ಶ್ರೀನಿವಾಸರನ್ನು ತಾನು ನಿರ್ಮಿಸಿದ ಆನಂದನಿಲಯವನ್ನು ಪ್ರವೇಶಿಸುವಂತೆ ಪ್ರಾರ್ಥಿಸಿದನು. ಮೇಲಾಗಿ ಆ ದಿನದಿಂದ ಜನರಿಗೆ ದರ್ಶನಮಾತ್ರವಲ್ಲದೆ, ಅವರ ಇಷ್ಟಾರ್ಥಗಳನ್ನು ನೆರವೇರಿಸಿ ಆನಂದವನ್ನು ಉಂಟುಮಾಡಿ ಮಹಿಮೆಯನ್ನು ತೋರಿದ್ದರಿಂದ "ಆನಂದ ನಿಲಯ"ವೆಂದು ಪ್ರಸಿದ್ಧವಾಯಿತು. ಅಂದಿನಿಂದ ಶ್ರೀನಿವಾಸನಿಗೆ "ಆನಂದನಿಲಯುಡು" ಎಂಬ ದಿವ್ಯನಾಮ ಬಂತು.

## ಬ್ರಹ್ಮ ಅಖಂಡಂ

ಶ್ರೀನಿವಾಸನು ಆನಂದ ನಿಲಯವನ್ನು ಪ್ರವೇಶಿಸಿದ ಶುಭ ಮುಹೂರ್ತದಲ್ಲಿ, ಬ್ರಹ್ಮ ದೇವರು ಆನಂದ ನಿಲಯದಲ್ಲಿ ಶ್ರೀನಿವಾಸನ ಸನ್ನಿಧಿಯಲ್ಲಿ ಎರಡು ಬೃಹತ್ತಾದ ದೀಪಗಳನ್ನು ಬೆಳಗಿಸಿದನು. ಆ ಎರಡು ದೀಪಗಳಿಗೆ "ಬ್ರಹ್ಮ ಅಖಂಡ" ಎಂದು ಹೆಸರಾಯಿತು. ಬ್ರಹ್ಮದೇವನು, ದೀಪಬೆಳಗಿಸಿದ ನಂತರ ಶ್ರೀನಿವಾಸನನ್ನು ಈ ರೀತಿಯಾಗಿ ಪ್ರಾರ್ಥಿಸಿದನು. "ಓ ಶ್ರೀನಿವಾಸ ಪ್ರಭು! ನಾನು ಇಂದು ಬೆಳಗಿಸಿದ ಅಖಂಡ ದೀಪಗಳು ಕಲಿಯುಗದಕೊನೆಯವರೆಗೂ ಬೆಳಗಲಿ, ಅಲ್ಲಿಯವರೆಗೆ "ಕಲೌ ವೆಂಕಟ ನಾಯಕ" ಎಂಬ ಹೆಸರಿನೊಂದಿಗೆ ಭಕ್ತರ ಕೋರಿಕೆಗಳನ್ನು ತೀರಿಸುತ್ತ ಕೊಂಗು ಬಂಗಾರದ ವರವನ್ನು ದಯಪಾಲಿಸು ಎಂದು ಕೋರಿದನು. ಶ್ರೀವೆಂಕಟಾಚಲಪತಿ, ಬ್ರಹ್ಮದೇವನ ಪ್ರಾರ್ಥನೆಯನ್ನು ಅಂಗೀಕರಿಸುತ್ತ ಬ್ರಹ್ಮನು ಬೆಳಗಿದ ದೀಪಗಳು ಕಲಿಯುಗ ಮುಗಿಯುವವರೆವಿಗೂ ಬೆಳಗುತ್ತಲೇ ಇರುತ್ತದೆ. ಆ ಎರಡು ದೀಪಗಳು ಶಾಂತ ಆಗುವವರೆಗೆ ನಾನು ಭಕ್ತರ ಕೋರಿಕೆಗಳನ್ನು ಈಡೇರಿಸುತ್ತ ಇರುತ್ತೇನೆ, ನಂತರ ನಾನು ವೈಕುಂಠಕ್ಕೆ ಹಿಂದಿರುಗುತ್ತೇನೆ, ಹಾಗೆಯೇ ಈ ಆನಂದ ನಿಲಯವು ಅದೃಶ್ಯ ಆಗುತ್ತದೆ ಎಂದು ಶ್ರೀನಿವಾಸನು ಬ್ರಹ್ಮದೇವರಿಗೆ ಹೇಳಿದನು. ನಂತರ ಸ್ವಾಮಿ ಶ್ರೀನಿವಾಸನು ಬ್ರಹ್ಮದೇವನನ್ನು ಕರೆದು ಲೋಕಕಲ್ಯಾಣಕ್ಕಾಗಿ, ಪ್ರಜೆಗಳ ಹಿತರಕ್ಷಣೆಗಾಗಿ ಧ್ವಜಾರೋಹಣದಿಂದ ಆರಂಭವಾಗಿ ವಿವಿಧ ವಾಹನ ಸೇವೆಗಳೊಂದಿಗೆ ಉತ್ಸವವನ್ನು ನಡೆಸತಕ್ಕದು ಎಂದು ಆದೇಶಿಸಿದನು.

ತಕ್ಷಣವೇ ಬ್ರಹ್ಮದೇವನು ತೊಂಡಮಾನನನ್ನು ಕರೆದು ವಿವಿಧ ವಾಹನಗಳನ್ನು , ಜೊತೆಗೆ ಒಳ್ಳೆಯ ರಥವನ್ನು ಸಿದ್ಧಪಡಿಸಬೇಕಾಗಿದೆ. ಈ ಕಾರ್ಯಕ್ಕೆ ವಿಶ್ವಕರ್ಮನನ್ನು ಕರೆಸಿ ಸಿದ್ಧ ಪಡಿಸಬೇಕು ಎಂದು ಹೇಳಲು, ಚಕ್ರವರ್ತಿ ತೊಂಡಮಾನನು ವಿಶ್ವಕರ್ಮನ ಸಹಾಯದಿಂದ ಅದ್ಭುತವಾದ ವಿವಿಧ ರಥಗಳನ್ನೂ, ವಾಹನಗಳನ್ನೂ, ಛತ್ರಚಾಮರ ಮುಂತಾದುವನ್ನು ಮಾಡಿಸಿದನು. ಅದರೊಂದಿಗೆ ಬ್ರಹ್ಮದೇವನು ಉತ್ಸವಗಳನ್ನು ಆಯೋಜಿಸಿದನು.

## ಬ್ರಹ್ಮೋತ್ಸವಗಳು

ಬ್ರಹ್ಮದೇವನು, ಸ್ವಾಮಿ ಶ್ರೀನಿವಾಸನ ಆಜ್ಞೆಯಂತೆ ಚತುರ್ವೇದಗಳ ಪ್ರತೀಕವಾದ ಉತ್ಸವ ಶ್ರೀನಿವಾಸಮೂರ್ತಿ, ಉಗ್ರಶ್ರೀನಿವಾಸಮೂರ್ತಿ, ಸರ್ವಾಧಿಪ ಶ್ರೀನಿವಾಸಮೂರ್ತಿ, ಲೋಕ ಶ್ರೀನಿವಾಸಮೂರ್ತಿ ಎನ್ನುವ ನಾಲಕ್ಕು ರೂಪದ ಶ್ರೀನಿವಾಸನ (ಅರ್ಚ) ವಿಗ್ರಹಮೂರ್ತಿಗಳನ್ನು ಆನಂದನಿಲಯದಲ್ಲಿ ಪ್ರತಿಷ್ಠಾಪಿಸಲು ಏರ್ಪಾಡು ಮಾಡಿದನು. ಈ ನಾಲ್ಕು ಮೂರ್ತಿಗಳೂ (ಮೂಲವಿರಾಟುಗಾ) ಮೂಲಸ್ವರೂಪದಲ್ಲಿ ಆನಂದ ನಿಲಯದಲ್ಲಿ ಸಾಕ್ಷಾತ್ ವೆಂಕಟಾಚಲಪತಿಯಾದ ಶ್ರೀನಿವಾಸ ಅಲ್ಲಿ ಪ್ರತ್ಯಕ್ಷವಾಗಿ ದರ್ಶನವನ್ನು ಕೊಡುತ್ತಿದ್ದಾನೆ. ಪ್ರಧಾನವಾಗಿ ಶ್ರೀನಿವಾಸ, ಆನಂದನಿಲಯುಡು ಎಂಬ ದಿವ್ಯನಾಮಾಂಕಿ ತನಾದ ಶ್ರೀನಿವಾಸನನ್ನು ಪ್ರಧಾನವಾಗಿ ಪೂಜಿಸುವ ಬ್ರಹ್ಮದೇವನು ಕನ್ಯಾ ಮಾಸದ ಶ್ರವಣ ನಕ್ಷತ್ರವು ಪೂರ್ಣಗೊಳ್ಳುವ ಒಂಬತ್ತು ದಿನಗಳ ಮೊದಲು ಪ್ರಾರಂಭಿಸಿ ಉತ್ಸವ ಮೂರ್ತಿಗಳಿಗೆ ನವಾಹ್ನಿಕಾಂಗ ಉತ್ಸವಗಳನ್ನು ನಡೆಸುತ್ತಿದ್ದಾನೆ.

ಈ ಉತ್ಸವಕ್ಕೆ ಮೊದಲು ಧ್ವಜಾರೋಹಣ ನಡೆಸುವ ಮುನ್ನಾದಿನ ಸಾಯಂಕಾಲದ ಸಮಯದಲ್ಲಿ ಅನಂತ ಗರುಡ ವಿಶ್ವಕ್ಸೇನಾದಿಗಳೊಂದಿಗೆ ಸಮಸ್ತ ಋಷಿಗಣ, ದೇವತೆಗಳೊಂದಿಗೆ ಆನಂದನಿಲಯದಿಂದ ಹೊರಡುವ ಉತ್ಸವ, ಮೆರವಣಿಗೆ ಪುರಾತನ ಬೀದಿಗಳಲ್ಲಿ ಛತ್ರ, ಚಾಮರ, ಮಂಗಳವಾದ್ಯಗಳೊಂದಿಗೆ ಪ್ರದಕ್ಷಿಣ ಮೆರವಣಿಗೆ ಮಾಡುತ್ತಾ (ಮೃತ್ಸಂಗ್ರಹಣ) ಮಾಡಿದ ನಂತರ ಆಲಯದಲ್ಲಿ ಅಂಕುರಾರ್ಪಣ ಕಾರ್ಯಕ್ರಮವನ್ನು ಅದ್ಭುತವಾಗಿ ನಿರ್ವಹಿಸಿದನು.

ಇದಕ್ಕೆ ಮೊದಲು ಮುನ್ನಾದಿನ ಧ್ವಜಾರೋಹಣ, ಅಂದು ರಾತ್ರಿ ಪಲ್ಲಕಿ ಉತ್ಸವ, ತದನಂತರ ಹಿರಿದಾದ ಶೇಷವಾಹನ ಸೇವೆ ಎರಡನೆಯದಿನ ಬೆಳಿಗ್ಗೆ ಶೇಷವಾಹನ, ಆ ರಾತ್ರಿ ಹಂಸವಾಹನಸೇವೆ ಮೂರನೆಯದಿನ ಬೆಳಿಗ್ಗೆ ಸಿಂಹವಾಹನ ಸೇವೆ, ಆ ರಾತ್ರಿ ಮುತ್ತಿನ ಮಂಟಪ ವಾಹನಸೇವೆ, ನಾಲಕ್ಕನೆಯದಿನ ಉದಯದಲ್ಲಿ ಕಲ್ಪವೃಕ್ಷ ವಾಹನಸೇವೆ, ಆ ರಾತ್ರಿ ಸರ್ವಭೂಪಾಲ ವಾಹನ ಐದನೆಯದಿನ ಬೆಳಿಗ್ಗೆ ಮೋಹಿನಿ ಅವತಾರ, ಆ ದಿನ ರಾತ್ರಿ ಬಂಗಾರು ಗರುಡ ವಾಹನಸೇವೆ, ಆರನೆಯದಿನ ಬೆಳಿಗ್ಗೆ ಹನುಮಂತ ವಾಹನಸೇವೆ ಆ ದಿನ ಸಾಯಂಕಾಲದಲ್ಲಿ ಮಂಗಳಗಿರಿ ವಾಹನಸೇವೆ ರಾತ್ರಿ ಗಜವಾಹನಸೇವೆ, ಏಳನೆಯದಿನ ಬೆಳಿಗ್ಗೆ ಸೂರ್ಯಪ್ರಭ ವಾಹನಸೇವೆ ಆ ರಾತ್ರಿ ಚಂದ್ರಪ್ರಭ ವಾಹನಸೇವೆ ಎಂಟನೆಯದಿನ ಉದಯದಲ್ಲಿ ರಥೋತ್ಸವ ಆ ರಾತ್ರಿ ಅಶ್ವವಾಹನಸೇವೆ, ಒಂಭತ್ತನೆಯ ದಿನ ಬೆಳಿಗ್ಗೆ ಪಲ್ಲಕಿ ಉತ್ಸವ. ತದನಂತರ ಮಂಗಳಗಿರಿ ಉತ್ಸವದಲ್ಲಿ ಸ್ವಾಮಿ ಪುಷ್ಕರಿಣಿಯಲ್ಲಿ ಶ್ರವಣ ನಕ್ಷತ್ರದಲ್ಲಿ

ಅವಭೃತ ಸ್ನಾನ. ರಾತ್ರಿ ಪಲ್ಲಕಿ ಉತ್ಸವದಲ್ಲಿ ಧ್ವಜಾರೋಹಣದೊಂದಿಗೆ ಈ ಉತ್ಸವಗಳು ಪೂರ್ಣಗೊಂಡವು. ಮರುದಿನ ಲೋಕ ಕಲ್ಯಾಣಾರ್ಥವಾಗಿ ಶ್ರೀ ವೆಂಕಟೇಶ್ವರ ಸ್ವಾಮಿಗೆ ಪುಷ್ಪಯಾಗೋತ್ಸವ ಮಂಗಳಪ್ರದವಾಗಿ, ಅದ್ದೂರಿಯಾಗಿ ನಡೆಯಿತು. ಬ್ರಹ್ಮದೇವನು ಈ ಉತ್ಸವಗಳನ್ನು ನಡೆಸಿದ್ದರಿಂದ ಅಂದಿನಿಂದಲೂ ಜಗತ್ಪ್ರಸಿದ್ಧವಾದ ಈ ಉತ್ಸವಗಳನ್ನು "ಬ್ರಹ್ಮೋತ್ಸವ" ಎಂದು ಕರೆಯಲಾಗುತ್ತದೆ. ಈ ಉತ್ಸವಗಳಲ್ಲಿ ಭಾಗವಹಿಸಿದ ಅಷ್ಟದಿಕ್ಪಾಲಕರು, ಎಲ್ಲಾ ಋಷಿಗಳು, ದೇವಾನುದೇವತೆಗಳು, ಯಕ್ಷಕಿನ್ನರರು ಮತ್ತು ಗಂಧರ್ವರಿಗೆ ವೆಂಕಟೇಶನು ಉಡುಗೊರೆಗಳನ್ನು ನೀಡಿದನು. ಶ್ರೀನಿವಾಸನು ಎಲ್ಲಾ ಇಷ್ಟಾರ್ಥಗಳನ್ನು ನೆರವೇರಿಸುತ್ತ, ವರವನ್ನುನೀಡುತ್ತ ಭಕ್ತೋದ್ಧಾರಕನಾಗಿ ನಿಂತಿರುವ ಕಾರಣ, ಸ್ವಾಮಿಯನ್ನು 'ವರಾಲರಾಯ' ಎಂದು ಪ್ರಸಿದ್ಧನಾದನು. ಎಲ್ಲಾ ಭಕ್ತರು ಶ್ರೀನಿವಾಸನಿಂದ ಅನೇಕ ವರಗಳನ್ನು ಪಡೆದು ಅವರು ತಮ್ಮ ಸ್ವಸ್ಥಾನಗಳಿಗೆ ಹಿಂತಿರುಗಿದರು. ತೊಂಡಮಾನ ಚಕ್ರವರ್ತಿಯು ಸ್ವಾಮಿ ವೆಂಕಟೇಶನ ಆಜ್ಞೆಯಂತೆ ತನ್ನ ರಾಜ್ಯಕ್ಕೆ ಮರಳಿ ಅತ್ಯಂತ ಸಮರ್ಪಕವಾಗಿ ರಾಜ್ಯಭಾರ ಮಾಡಿದನು.

ಅತ್ಯಂತ ಸುಂದರವಾಗಿ, ಮನೋಹರವಾಗಿ ವಾಸ್ತು ಶಾಸ್ತ್ರಕ್ಕನುಸಾರವಾಗಿ ನಿರ್ಮಿಸಿದ ಆನಂದನಿಲಯವನ್ನು ಪ್ರವೇಶಿಸಿದ ಶ್ರೀನಿವಾಸ ಪದ್ಮಾವತಿ ದೇವಿಯೊಡನೆ ಸಕಲ ಸುಖಗಳನ್ನು ಅನುಭವಿಸುತ್ತಾ ತನ್ನನ್ನು ಆಶ್ರಯಿಸಿದ ಭಕ್ತರ ಕೋರಿಕೆಗಳನ್ನು ಈಡೇರಿಸುತ್ತಿದ್ದನು. ಆದರೆ ಶ್ರೀಮಹಾಲಕ್ಷ್ಮೀ ತನಗೆ ವಿವಾಹವನ್ನು ಮಾಡಿಸಿ ಮತ್ತೆ ಕೊಲ್ಹಾಪುರಕ್ಕೆ ಹಿಂತಿರುಗಿ ಹೋದದ್ದು ಶ್ರೀನಿವಾಸನ ಗಮನಕ್ಕೆ ಬಂದಿರಲಿಲ್ಲ. ಇದು ಸ್ವಾಮಿಗೆ ತಿಳಿಯದ ವಿಷಯವಾಗಿತ್ತು. ಅವಳ ವಿರಹದ ನೋವನ್ನು ಸಹಿಸಲಾಗಲಿಲ್ಲ. ಮೇಲಾಗಿ ಮಹಾಲಕ್ಷ್ಮೀಯಿಲ್ಲದೆ ಭಕ್ತರ ಇಷ್ಟಾರ್ಥಗಳನ್ನು ಹೇಗೆ ಈಡೇರಿಸಲಿ ಎಂದು ಯೋಚಿಸಿ ಕೊನೆಗೆ ಆಕೆಯನ್ನು ಕರೆತರಲು ನಿರ್ಧರಿಸಿದನು. ಅದರಂತೆ ಶ್ರೀನಿವಾಸನು ಶ್ರೀ ಮಹಾಲಕ್ಷ್ಮೀ ಇರುವ ಕೊಲ್ಹಾಪುರಕ್ಕೆ ಹೋದನು.

## ಸಿರಿಯನ್ನು ಕೊಡುವ ವೃಕ್ಷ (ಕಲ್ಪವೃಕ್ಷ)

ಕೊಲ್ಹಾಪುರಕ್ಕೆ ತೆರಳಿದ ಶ್ರೀನಿವಾಸ ಶ್ರೀಮಹಾಲಕ್ಷ್ಮೀಯ ದರ್ಶನಕ್ಕಾಗಿ ಆರ್ತನಾಗಿ ಪ್ರಾರ್ಥಿಸಿದನು. ಅವಳ ದರ್ಶನಕ್ಕಾಗಿ ಮತ್ತೆ ಮತ್ತೆ ಬೇಡಿಕೊಂಡನು ಆದರೂ ಮಹಾಲಕ್ಷ್ಮೀಯ ದರ್ಶನ ಆಗಲೇ ಇಲ್ಲ, ಲಕ್ಷ್ಮೀದೇವಿ ಕಾಣಿಸಲಿಲ್ಲ. ಅಮ್ಮನವರ ದರ್ಶನಕ್ಕಾಗಿ ಹಲವು ರೀತಿಯಲ್ಲಿ ಬೇಡಿಕೊಂಡ ನಂತರ ಕೊನೆಗೆ ಒಂದು ಅಶರೀರವಾಣಿ ಈ ರೀತಿಯಾಗಿ ನುಡಿಯಿತು. "ಓ ಶ್ರೀನಿವಾಸ! ಇಲ್ಲಿ ನಿನಗೆ ಶ್ರೀ ಮಹಾಲಕ್ಷ್ಮೀಯ ದರ್ಶನ ಆಗುವುದೇ ಇಲ್ಲ. ನೀನು ಇಲ್ಲಿಂದ ದಕ್ಷಿಣಾಭಿಮುಖವಾಗಿ

ಪ್ರಯಾಣಿಸಬೇಕು. ಅಲ್ಲಿ ವೆಂಕಟಾಚಲ ದಿವ್ಯ ಕ್ಷೇತ್ರವಿದೆ! ಆ ಪುಣ್ಯಕ್ಷೇತ್ರದ ಸಮೀಪವೇ ಸುವರ್ಣಮುಖಿ ನದಿತೀರದಲ್ಲಿ ಶ್ರೀಶುಕಮಹರ್ಷಿ ಗಳ ಆಶ್ರಮವಿದೆ, ಅಲ್ಲಿಗೆ ಹೋಗು. ಶ್ರೀಶುಕಮುನಿಗಳ ಆಶ್ರಮದ ಬಳಿ ಒಂದು ಪದ್ಮ ಸರೋವರದ ವ್ಯವಸ್ಥೆ ಮಾಡು. ಆ ಪದ್ಮಗಳಲ್ಲಿರುವ ಶ್ರೀಮಹಾಲಕ್ಷ್ಮಿಯನ್ನು ನಿನ್ನ ಮನಃಸಂಕಲ್ಪದಿಂದ ಪೂಜಿಸು. ನೀನು ಹೀಗೆ ಮಾಡುವುದರಿಂದ ತಪ್ಪದೆ ನಿನಗೆ ಶ್ರೀಮಹಾಲಕ್ಷ್ಮೀಯ ದರ್ಶನ ಆಗುವುದು. ಅಲ್ಲಿ ನಿನ್ನಿಂದಾಗಿ ಎಲ್ಲರಿಗು ಸಿರಿಲಕ್ಷ್ಮೀಯ ಪ್ರತ್ಯಕ್ಷ ದರ್ಶನ ಆಗುವುದು".

ಆಕಾಶವಾಣಿಯ ಮಾತುಗಳಿಂದ ಆಶ್ಚರ್ಯಗೊಂಡ ಶ್ರೀನಿವಾಸನು ಸ್ವರ್ಣಮುಖಿ ನದಿತೀರದಲ್ಲಿರುವ ಶ್ರೀಶುಕಮಹರ್ಷಿಗಳ ಆಶ್ರಮವನ್ನು ತಲುಪಿದನು. ಅಲ್ಲಿ ಪದ್ಮಸರೋವರವನ್ನು ನಿರ್ಮಿಸಿ, ತಟಾಕದಲ್ಲಿ ಸೂರ್ಯಭಗವಂತನನ್ನು ಪ್ರತಿಷ್ಠಾಪಿಸಿ ಪೂಜಿಸಿ ಶ್ರೀ ಮಹಾಲಕ್ಷ್ಮೀಯ ದರ್ಶನಕ್ಕಾಗಿ ತೀವ್ರ ತಪಸ್ಸು ಮಾಡಿದನು.

ಸ್ವಾಮಿ ಶ್ರೀನಿವಾಸನ ಕಠಿಣವಾದ ತಪಸ್ಸನ್ನು ಕಂಡು, ಕಪಿಲಾದಿ ಮಹಾ ಮುನಿಗಳೆಲ್ಲರೂ ಪಾತಾಳ ಲೋಕದಲ್ಲಿರುವ ಲಕ್ಷ್ಮೀ ದೇವಿಯ ಬಳಿಗೆ ಹೋದರು. ಈಗಲಾದರೂ ನೀನು, ನಿನ್ನ ಏಕಾಂತವಾಸವನ್ನು ತೊರೆದು, ನಿನ್ನ ವಿರಹದ ವೇದನೆಯನ್ನು ಅನುಭವಿಸುತ್ತಿರುವ ನಿನಗಾಗಿ ಹಂಬಲಿಸುತ್ತಿರುವ ಶ್ರೀಮಹಾವಿಷ್ಣುವನ್ನು ಸೇರುವಂತೆ ಅನೇಕ ರೀತಿಯಲ್ಲಿ ಪ್ರಾರ್ಥಿಸಿದ್ದಾರೆ. ಭೃಗು ಮಹರ್ಷಿಯೂ ಲಕ್ಷ್ಮೀದೇವಿಯನ್ನು ಸ್ತುತಿಸಿ, "ಅಮ್ಮಾ! ಮಾತೆ ಸಿರಿಲಕ್ಷ್ಮೀ! ನೀನು ವಾಸಿಸುವ ದಿವ್ಯಸ್ಥಳವಾದ ಶ್ರೀನಿವಾಸನ ಹೃದಯವನ್ನು ನಿನ್ನನ್ನು ಅಗೌರವಿಸುವ ಉದ್ದೇಶದಿಂದ ನಾನು ನನ್ನ ಪಾದದಿಂದ ಸ್ಪರ್ಶಿಸಲಿಲ್ಲ ತಾಯಿ! ಬದಲಿಗೆ ಸ್ವಾಮಿವಿಷ್ಣುವಿನ ಹಿರಿಮೆಯನ್ನು ಜಗತ್ತಿಗೆ ತಿಳಿಸುವ ಸದುದ್ದೇಶದಿಂದ ನಾನು ಹಾಗೆ ಮಾಡಿದ್ದೇನೆ. ನೀನು ಕರುಣಾಮಯಿ, ನಾನು ಮಾಡಿದ ತಪ್ಪನ್ನು ಕರುಣೆಯಿಂದ ಕ್ಷಮಿಸಿ ಕೂಡಲೇ ಶ್ರೀನಿವಾಸನನ್ನು ಸೇರುವಂತೆ ಲಕ್ಷ್ಮೀದೇವಿಯನ್ನು ವಿಧ ವಿಧವಾಗಿ ಸ್ತುತಿಸಿ ಕೇಳಿಕೊಂಡನು.

ಎಲ್ಲರ ಪ್ರಾರ್ಥನೆಯನ್ನು ಕೇಳಿದ ಮಹಾಲಕ್ಷ್ಮೀಯು ಅಂದು ಅವಸರದಲ್ಲಿ ತಾನು ಮಾಡಿದ ಕಾರ್ಯಕ್ಕೆ ಪಶ್ಚಾತ್ತಾಪ ಪಟ್ಟಳು. ಆದರೆ, ಲೋಕಕಲ್ಯಾಣಕ್ಕಾಗಿ, ಭಕ್ತರ ರಕ್ಷಣೆಗಾಗಿ ತಾನು, ತನ್ನ ಸ್ವಾಮಿಯನ್ನು ಸೇರಲೇಬೇಕು ಎಂದು ಯೋಚಿಸಿ ಶ್ರೀನಿವಾಸನು ತಪಸ್ಸು ಮಾಡುತ್ತಿದ್ದ ದಿವ್ಯ ಸ್ಥಳ ಪದ್ಮಸರೋವರದಲ್ಲಿ ಆವಿರ್ಭವಿಸಿದಳು. ಕಾರ್ತಿಕ ಮಾಸದ ಶುಕ್ಲ ಪಂಚಮಿ ಶುಕ್ರವಾರದಂದು, ಬ್ರಾಹ್ಮೀ ಮುಹೂರ್ತದಂದು, ಉತ್ತರಾಷಾಢ ನಕ್ಷತ್ರಯುಕ್ತ ವಿಜಯಲಗ್ನದಲ್ಲಿ ಪ್ರಕಾಶಮಾನವಾಗಿ ಬೆಳಗುತ್ತಿದ್ದ ದೀಪಗಳು, ಮಂಗಳಕರವಾದ ಶಂಖನಾದ, ಭೇರಿ,

ಮೃದಂಗಗಳ ಶಬ್ದಗಳು ಕೇಳಿಬರುತ್ತಿರಲು, ಆ ಸರೋವರದಲ್ಲಿ ಬಂಗಾರದ ಸಹಸ್ರದಳ ಪದ್ಮದ ಮಧ್ಯದಲ್ಲಿ ಶ್ರೀಮಹಾಲಕ್ಷ್ಮೀ ದೇವಿಯು ಅವತರಿಸಿದಳು.

ಸುವರ್ಣ ಕಮಲದಲ್ಲಿ ಪದ್ಮಾಸನಿಯೂ, ಪದ್ಮಹಸ್ತೇ, ಪದ್ಮಾಲಂಕೃತವೂ ಆದ ನಿತ್ಯ ಯೌವನಶೋಭಿತಳಾದ ಶಾಶ್ವತ ಸೌಂದರ್ಯವತಿಯಾದ ಶ್ರೀಮಹಾಲಕ್ಷ್ಮೀಯು ಹದಿನಾರರ ಹರೆಯದ ತರುಣಿಯಾಗಿ ಅವತರಿಸಿದಳು. ಹೀಗೆ ಅವತರಿಸಿದ ತಾಯಿ ಮಹಾಲಕ್ಷ್ಮೀಯನ್ನು "ಪದ್ಮಾವತಿ" ಎಂದು ಬ್ರಹ್ಮ ಇಂದ್ರಾದಿ ದೇವತೆಗಳು, ಮಹಾಮಹಿಮರಾದ ಭೃಗು, ನಾರದ, ತುಂಬುರು ಮಹರ್ಷಿಗಳು, ಋಷಿಮುನಿಗಳು, ಸನ್ಯಾಸಿಗಳು, ಯೋಗಿಗಳು ಹಲವು ರೀತಿಯಲ್ಲಿ ಸ್ತುತಿಸಿದರು. ಸಹಸ್ರದಳ ಪದ್ಮದಿಂದ ಪ್ರಜ್ವಲಿಸುತ್ತಿರುವ, ಜಗದೇಕ ಸೌಂದರ್ಯ ದಿಂದ ಸ್ವರ್ಣಕಮಲದಲ್ಲಿ ಪ್ರತ್ಯಕ್ಷಳಾದ ಶ್ರೀ ಮಹಾಲಕ್ಷ್ಮಿಯನ್ನು ಕಂಡು ಶ್ರೀನಿವಾಸನು ಸಂತೋಷಿತನಾಗಿ, ತನ್ನ ತಪಸ್ಸು ಫಲಿಸಿದೆ, ಈಗಲಾದರು ಪ್ರಸನ್ನಳಾಗಿ ತನ್ನನ್ನು ಸೇರಿದಕ್ಕಾಗಿ ಅಭಿನಂದಿಸುತ್ತ ತನ್ನಲ್ಲಿದ್ದ ಕಲ್ಹಾರಮಾಲೆಯನ್ನು ಸಿರಿಲಕ್ಷ್ಮೀಗೆ ಹಾಕಿ ಆಲಿಂಗಿಸಿ ದನು. ಆ ಶುಭ ಸಂದರ್ಭದಲ್ಲಿ ದೇವದುಂದುಭಿ ಮೊಳಗಿದವು. ಯಕ್ಷ ಗಂಧರ್ವ ಕಿನ್ನರ ಕಿಂಪುರುಷಾದಿ ದೇವಗಣಗಳು ದಿವ್ಯ ದಂಪತಿಗಳ ಮೇಲೆ ಪುಷ್ಪವೃಷ್ಟಿ ಮಾಡಿದರು. ಪದ್ಮ ಸರೋವರದಲ್ಲಿ ಶ್ರೀನಿವಾಸನ ಜೊತೆಯಲ್ಲಿದ್ದ ಶ್ರೀ ಮಹಾಲಕ್ಷ್ಮೀಯನ್ನು ಬ್ರಹ್ಮೇಂದ್ರ ಭಕ್ತ ಸಮೂಹಗಳು ಸ್ತುತಿಸಿದವು.

**"ನಮಶ್ರಿಯೈ ಲೋಕಧಾತ್ರ್ಯೈ ಬ್ರಹ್ಮಮಾತ್ರೇ ನಮೋ ನಮಃ,**
**ನಮಸ್ತೇ ಪದ್ಮನೇತ್ರಾಯೈ ಪದ್ಮಮುಖ್ಯೈ ನಮೋ ನಮಃ,**
**ಪ್ರಸನ್ನ ಮುಖಪದ್ಮಾಯೈ ಪದ್ಮಕಾಂತ್ಯೈ ನಮೋ ನಮಃ**
**ನಮೋ ಬಿಲ್ವ ವನಸ್ಥಾಯೈ ವಿಷ್ಣುಪತ್ನ್ಯೈ ನಮೋ ನಮಃ,**
**ವಿಚಿತ್ರ ಕ್ಷಾಮಧಾರಿಣ್ಯೈ ಪೃಥು ಶ್ರೋಣ್ಯೈ ನಮೋ ನಮಃ,**
**ಪಕ್ವ ಬಿಲ್ವ ಫಲಾಪಿನ ತುಂಗಸ್ತನೈ ನಮೋ ನಮಃ,**
**ಸುರಕ್ತ ಪದ್ಮಪತ್ರಾಭ ಕರ ಪೇದತಲೇ ಶುಭೌ,**
**ಸುರತ್ನಾಂಗದ ಕೇಯೂರ ಕಾಂಚಿನೂಪುರ ಶೋಭಿತೇ,**
**ಯಕ್ಷ ಕರ್ದಮ ಸಂಲಿಪ್ತ ಸರ್ವಾಂಗ ಕಟಕೋಜ್ವಲೇ,**
**ಮಾಙ್ಗಲ್ಯಾಭರಣೈಶ್ಚಿತ್ರೈ ಮುಕ್ತಾಹಾರೈರ್ವಿಭೂಷಿತೇ,**
**ತಾಟಂಕೈರವತಂಸ್ತೈಶ್ಚಶೋಭಮಾನಾ ಮುಖಾಮ್ಬುಜೇ,**
**ಪದ್ಮಹಸ್ತೇ ನಮಸ್ತುಭ್ಯಂ ಪ್ರಸೀದ ಹರಿವಲ್ಲಭೇ,**

**ಋಗ್ಯಜುಸ್ಸಾಮ ರೂಪಾಯೈ ವಿದ್ಯಾಯೈ ತೇ ನಮೋ ನಮಃ,**
**ಪ್ರಸಿದಾನ್ಮಾನೇ ಕೃಪಾದೃಷ್ಟಿ**
**ಯೇ ದೃಷ್ಟೇಸ್ತ ತ್ವಯಾ ಬ್ರಹ್ಮಾ ರುದ್ರಂದ್ರತ್ವಂ ಸಮಾಪ್ನುಯುಃ"**

ಎಂದು ಪ್ರಾರ್ಥಿಸಿದ ದೇವತೆಗಳನ್ನು ಉದ್ದೇಶಿಸಿ ಶ್ರೀಮಹಾಲಕ್ಷ್ಮಿ "ದೇವತೆಗಳಿರಾ! ನೀವು ಸ್ತುತಿಸಿದ ಸ್ತುತಿಯಿಂದ ನಾನು ಬಹಳ ಸಂತೋಷಗೊಂಡಿದ್ದೇನೆ. ಈಗ ನೀವು ಮಾಡಿದ ಈ ಸ್ತುತಿಯನ್ನು ಸ್ತುತಿಸುತ್ತ (ಮಾರೆಡು ದಳದಜೊತೆ) ನನ್ನನ್ನು ಯಾವ ಕಾರ್ಯಸಿದ್ಧಿಗಾಗಿ ಅರ್ಚಿಸುತ್ತಾರೋ ಅವರವರ ಹಿಂದಿನ ಸ್ಥಾನಗಳನ್ನು ಪಡೆಯುವುದಲ್ಲದೆ ಬಡ್ತಿಯನ್ನೂ ಪಡೆಯುತ್ತಾರೆ. ಈ ಸ್ತೋತ್ರವನ್ನು ಪಠಿಸಿದವರಿಗೆ ಧರ್ಮಾರ್ಥ ಕಾಮ ಮೋಕ್ಷ ಚತುರ್ವಿಧ ಪುರುಷಾರ್ಥಗಳು ಸಿದ್ಧಿಸುತ್ತದೆ. ಅಷ್ಟಲ್ಲದೆ ನಾನು ಉದ್ಭವಿಸಿದ ಈ ಪದ್ಮ ಸರೋವರದಲ್ಲಿ ಈ ಶುಭ ಮುಹೂರ್ತದಲ್ಲಿ ಸ್ನಾನಮಾಡಿ ನನ್ನನ್ನು ಸ್ತುತಿಸಿದವರಿಗೆಲ್ಲ ದೀರ್ಘಾಯುಷ್ಯ, ಐಶ್ವರ್ಯ, ವಿದ್ಯೆ ದೊರೆಯುವುದಲ್ಲದೆ ತೇಜಸ್ವಿ ಸಂತಾನವೂ ಲಭಿಸುತ್ತದೆ ಎಂದು ವರವನ್ನು ನೀಡಿದಳು.

ಬ್ರಹ್ಮದೇವನು, ಸ್ವಾಮಿ ಶ್ರೀನಿವಾಸ ಹಾಗು ಶ್ರೀಮಹಾಲಕ್ಷ್ಮಿ ಅವರು ಅಂಶರೂಪದಲ್ಲಿದ್ದು ಈ ಪದ್ಮಸರೋವರಕ್ಕೆ ಬರುವ ಭಕ್ತರನ್ನು ಅನುಗ್ರಹಿಸಲಿ ಎಂದು ಮತ್ತೆ ಮತ್ತೆ ಪ್ರಾರ್ಥಿಸಿ ದನು. ಮೇಲಾಗಿ ಈ ಸುಸಂದರ್ಭದಲ್ಲಿ ಶ್ರೀನಿವಾಸನ ಉತ್ಸವವನ್ನು ಮಾಡುವ ಭಕ್ತರ ಆಸೆ ನೆರವೇರುತ್ತದೆ. ಶ್ರೀನಿವಾಸನು ಹಾಗೆಯೆ ನಿರ್ವಹಿಸುವುದಾಗಿ ಹೇಳಿ ವರವನ್ನು ನೀಡಿದನು.

ಬ್ರಹ್ಮದೇವನು ಪದ್ಮ ಸರೋವರದ ಆಗ್ನೇಯ ಮೂಲೆಯಲ್ಲಿರುವ ಶುಕಮಹರ್ಷಿಗಳ ಆಶ್ರಮದಲ್ಲಿ, ಶುಕಮಹರ್ಷಿಗಳಿಂದ ಪೂಜಿಸಲ್ಪಡುವ ಶ್ರೀ ಬಲರಾಮಕೃಷ್ಣರ ಗುಡಿಯ ಪಕ್ಕದಲ್ಲಿ ಸ್ವತಂತ್ರ ವೀರಲಕ್ಷ್ಮಿಯನ್ನು (ವಿರಹಾಲಕ್ಷ್ಮಿ) ಸಮೇತನಾದ ಶ್ರೀನಿವಾಸನನ್ನು ಪ್ರತಿಷ್ಠಾಪಿಸಿದನು. ಇಲ್ಲಿ ನಡೆಯಲಿರುವ ಪಂಚರಾತ್ರಾಗಮವಿಧಿ ಕಾರ್ಯದಲ್ಲಿ ಪೂಜೆ, ಉತ್ಸವಗಳ ವ್ಯವಸ್ಥೆ ಮಾಡಿದರು. ಪ್ರತಿ ಕಾರ್ತಿಕ ಶುದ್ಧ ಪಂಚಮಿಯದಿನ ಅಂದರೆ ತಾಯಿ ಪದ್ಮಾವತಿ, ಪದ್ಮಸರೋವರದಲ್ಲಿ ಅವತರಿಸಿದ ಶುಭದಿನ ಪದ್ಮಸರೋವರದಲ್ಲಿ ಅವಭೃತ ಸ್ನಾನ ನೆರವೇರುವಂತೆ ಬ್ರಹ್ಮದೇವನು ಉತ್ಸವವನ್ನು ನಿರ್ವಹಿಸಿದನು. ಪಂಚಮಿಯ ದಿನದಂದು ಹಬ್ಬ ಹರಿದಿನಗಳು ಮುಗಿದನಂತರ ಬ್ರಹ್ಮದೇವರು, ಶ್ರೀನಿವಾಸನ ಕಂಠದಿಂದ ಹೂವು ಮತ್ತು ಹರಿದ್ರಾಕುಂಕುಮವನ್ನು ತೆಗೆದುಕೊಂಡು ವೆಂಕಟಾಚಲದಿಂದ ಹೊರಟು ಶ್ರೀಶುಕಪುರದಲ್ಲಿ ಪ್ರತಿಷ್ಠಾಪನೆಗೊಂಡಿರುವ ತಾಯಿಗೆ ಶಾಶ್ವತವಾಗಿ ಇರುವಂತೆ

ಕಟ್ಟುವುದು ಹಾಗೆಯೇ ಉತ್ಸವವು ಅದ್ದೂರಿಯಾಗಿ ನಡೆಸಿದ ಬ್ರಹ್ಮದೇವನು ಅಲ್ಲಿಂದ ನಿರ್ಗಮಿಸಿದನು.

ಬ್ರಹ್ಮದೇವನ ಅಪೇಕ್ಷೆಯಂತೆ ಸ್ವಾಮಿ ಶ್ರೀನಿವಾಸನು, ಪದ್ಮಸರೋವರದ ತೀರದಲ್ಲಿ ವೀರಲಕ್ಷ್ಮಿಯಾಗಿ ಅರ್ಚಾಮೂರ್ತಿಯಾಗಿ ಕಂಡು ಬಂದ ಶ್ರೀಮಹಾಲಕ್ಷ್ಮಿ ತನ್ನ ರೂಪವನ್ನು ತಾಳಿ ಉಳಿದ ಪ್ರಮುಖ ಅಂಶಗಳೊಂದಿಗೆ ಲೀಲಾಮಾನುಷ ಸ್ವರೂಪಿಣಿಯಾಗಿ ವೆಂಕಟಾಚಲವನ್ನು ಸೇರಿದಳು. ಅಲ್ಲಿ ಪದ್ಮಾವತಿ ಸಮೇತನಾಗಿ ಶ್ರೀವೆಂಕಟೇಶನು ಭಕ್ತರ ಕೋರಿಕೆಗಳನ್ನು ಈಡೇರಿಸುತ್ತಿದ್ದು, ಪ್ರತ್ಯಕ್ಷವಾಗಿ ದರ್ಶನಭಾಗ್ಯವನ್ನು ನೀಡಿ, ಅವನೊಡನೆ ಸಂಭಾಷಿ ಸಲು ಭಕ್ತರಿಗೆ ಅನುಗ್ರಹಿಸುತ್ತ ಇದ್ದಾನೆ, ಎಂದು ಸೂತ ಮಹರ್ಷಿಗಳು ಭುವಿಯಲ್ಲಿ ಪ್ರತ್ಯಕ್ಷದೈವವಾದ ಶ್ರೀವೇಂಕಟೇಶ್ವರನನ್ನು (ಪಟ್ಟಪು) ದೈವವಾಗಿ ಶ್ರೀಮಹಾಲಕ್ಷ್ಮೀ ಶ್ರೀಶುಕಪುರದಲ್ಲಿ ನೆಲಸಿರುವನನ್ನು ಈ ರೀತಿಯಾಗಿ ಪ್ರಾರ್ಥಿಸಿದಳು.

**"ಗಂಗಾದಿ ತೀರ್ಥ ಜನಕಪಾದಪದ್ಮಮ್ ಸುತಾರಕಮ್,**
**ಶಂಖ ಚಕ್ರಾಭಯವರಂ ಶ್ರೀನಿವಾಸಂ ಭಜೇಽನಿಶಮ್,**
**ಸುವರ್ಣಮುಖೀ ತೀರಸ್ಥಂ ಸುವರ್ಣೇಡ್ಯಮ್ ಸುವರ್ಣದಮ್,**
**ಸುವರ್ಣಾಭಂ ಸುವರ್ಣಾಂಗಂ ಶ್ರೀನಿವಾಸಂ ಭಜೇಽನಿಶಮ್."**

"ಸ್ವಾಮಿ! ವೆಂಕಟಾಚಲಪತಿ! ಗಂಗಾದಿ ಸಮಸ್ತ ತೀರ್ಥಗಳಿಗೆ ಉಗಮಸ್ಥಾನವಾದ ಪಾದಪದ್ಮವು ಶ್ರೀಮಂತವಾಗಿದೆ. ಭಕ್ತರೆಲ್ಲರನ್ನು ಸಂಸಾರಸಾಗರದಿಂದ ಪಾರುಮಾಡುವ ಸ್ವಾಮಿಗೆ ಶಂಖಚಕ್ರ, ಅಭಯಮುದ್ರ, ವರಮುದ್ರಗಳನ್ನು ನಾಲ್ಕು ಕೈಗಳಲ್ಲಿ ಧರಿಸಿರುವವನೂ ಆದ ನಿನ್ನನ್ನು ನಾನು ಸದಾ ಸ್ಮರಿಸುತ್ತೇನೆ.

ಅಷ್ಟು ಮಾತ್ರವಲ್ಲ, ಪರಮಪವಿತ್ರವಾದ ಸುವರ್ಣಮುಖಿ ನದಿತೀರದಲ್ಲಿ ನೆಲೆಸಿರುವವನು, ಅತ್ಯಂತ ಶೋಭಾಯಮಾನವಾದ ಸುಂದರವಾದ ವರ್ಣಗಳ ವೇದಗಳಿಂದ ಸ್ತುತಿಸಲ್ಪಡುವವನು, ಭಕ್ತರಿಗೆ ಸಮೃದ್ಧವಾದ ಧನ ಧಾನ್ಯಗಳ ಸಂಪತ್ತನ್ನು ದಯಪಾಲಿಸುವವನು, ವೇದಗಳಿಂದ ಸ್ತುತಿಸಿದಾಗ ಬಂಗಾರದಂತೆ ಪ್ರಕಾಶಮಾನವಾಗಿ ಬೆಳಗುತ್ತಿರುವ, ಲಕ್ಷ್ಮೀಕರ ಬಂಗಾರದ ಕರಗಳಿಂದ, ಕಿರೀಟಕುಂಡಲ, ಸಮಸ್ತ ಸುವರ್ಣಆಭರಣಗಳಿಂದ ಅಲಂಕರಿಸಲ್ಪಟ್ಟ ಸುಂದರಾಂಗನೇ ಭಕ್ತರಿಗೆ ನಯನ ಮನೋಹರನಾಗಿ ತೋರುತ್ತಿರುವ ಹೇ ಆನಂದನಿಲಯನೇ, ನಿನ್ನನ್ನು ಆಭರಣಗಳಿಂದ ಅಲಂಕರಿಸಲ್ಪಟ್ಟಿದೆ, ತನ್ನ ಕೃಪೆಯಿಂದ ಭಕ್ತರನ್ನು ಸಂತೋಷಪಡಿಸುತ್ತದೆ! ಸದಾ ನಿನ್ನ

ಸೇವೆ ಮಾಡುತ್ತೇನೆ" ಎಂದು ಸೂತ ಮಹರ್ಷಿ ಪ್ರಾರ್ಥಿಸಿ ಮುಂದಿನ ಕಥೆಯನ್ನು ಹೀಗೆ ಮುಂದುವರಿಸಿದರು.

ಈ ರೀತಿಯಲ್ಲಿ ಪ್ರತ್ಯಕ್ಷವಾಗಿ ನೇರದರ್ಶನ, ಸಂದರ್ಶನ, ಸಂಭಾಷಣಾ, ಪಾದಸ್ಪರ್ಶ ಇತ್ಯಾದಿಯನ್ನು ಭಕ್ತರಿಗೆ ಅನುಗ್ರಹಿಸುತ್ತ ಶ್ರೀನಿವಾಸನು ವೆಂಕಟಾಚಲ ಕ್ಷೇತ್ರದಲ್ಲಿ ವಿಹರಿಸುತ್ತಿದ್ದಾನೆ. ತೊಂಡಮಾನ ಚಕ್ರವರ್ತಿ ಅವರು ತಮ್ಮ ಅರಮನೆಯಲ್ಲಿ ಶ್ರೀ ವೆಂಕಟೇಶ್ವರನನ್ನು ಚಿಕ್ಕ ವಿಗ್ರಹದ ರೂಪದಲ್ಲಿ ಅರ್ಚಿಸಿ, ಆರಾಧಿಸುತ್ತ ತನಗೆ ಇಷ್ಟವಾದ ಸಮಯದಲ್ಲಿ ಅವರು ರಹಸ್ಯ ಮಾರ್ಗದ ಮೂಲಕ ವೆಂಕಟಾಚಲದ ಹತ್ತಿರ ಇರುವ ಆನಂದನಿಲಯವನ್ನು ಪ್ರವೇಶಿಸಿ ದೇವದೇವನಾದ ಶ್ರೀನಿವಾಸನನ್ನು ತಮ್ಮ ಕಣ್ಣುಗಳಿಂದ ದರ್ಶನಮಾಡಿ, ಮನತುಂಬಿ ಪ್ರಾರ್ಥಿಸುತ್ತ ತನ್ನ ಭವನಕ್ಕೆ ಹಿಂದಿರುಗುತ್ತಿದ್ದನು.

## ತೊಂಡಮಾನುವಿನ ಶರಣಾಗತಿ

ಒಂದು ದಿನ ಶ್ರೀನಿವಾಸನು ಆನಂದನಿಲಯದಲ್ಲಿ ಶ್ರೀದೇವಿ ಮತ್ತು ಭೂದೇವಿ ಅವರೊಂದಿಗೆ ಸರಸಸಲ್ಲಾಪದಲ್ಲಿ ಮಗ್ನನಾಗಿದ್ದನು. ಆ ಸಮಯದಲ್ಲಿ ಚಕ್ರವರ್ತಿ ತೊಂಡಮಾನನು ರಹಸ್ಯವಾದ ಮಾರ್ಗದಿಂದ ಉದ್ವೇಗದಿಂದ ಆತುರದಲ್ಲಿ ಓಡಿ ಬಂದು ಶ್ರೀನಿವಾಸನ ಪಾದಗಳ ಮೇಲೆ ಬಿದ್ದು, ಬಹಳ ಆತಂಕ ಭಯದಿಂದ "ಸ್ವಾಮಿ! ವೆಂಕಟೇಶ! ಭಕ್ತವತ್ಸಲಾ! ಭಕ್ತ ಪ್ರಿಯಾ! ಕೋರಿದ ವರಗಳನ್ನು ಕೊಡುವವನೇ! ಪಾಹಿ ಪಾಹಿ! ನನ್ನನ್ನು ರಕ್ಷಿಸಿ ಕಾಪಾಡು ಶ್ರೀನಿವಾಸ! ನಿಮ್ಮ ಪಾದವೇ ನನಗೆ ಗತಿ! ನನ್ನನ್ನು ಉಳಿಸು, ತಂದೆಯೇ! ನೀನು ನನ್ನ ಆಶ್ರಯದಾತ! ನಾನು ನಿನಗೆ ಶರಣಾಗಿದ್ದೇನೆ. ನೀನು ನನಗೆ ರಕ್ಷಣೆ ಕೊಡುವ ತನಕ ನಿನ್ನ ಪಾದಗಳನ್ನು ಬಿಡುವುದಿಲ್ಲ. ನೀನು ನನ್ನನ್ನು ಕಾಪಾಡುತ್ತೇನೆ ಎಂದು ಮಾತು ಕೊಟ್ಟರೆ ಮಾತ್ರ ನಿನ್ನ ಪಾದಗಳನ್ನು ಬಿಡುತ್ತೇನೆ. ಅಲ್ಲಿಯವರೆಗೆ ನಿನ್ನನ್ನು ಬಿಡುವುದಿಲ್ಲ" ಎಂದು ಸಾಷ್ಟಾಂಗ ನಮಸ್ಕಾರ ಮಾಡಿ ಶ್ರೀನಿವಾಸನ ಪಾದಗಳನ್ನು ಗಟ್ಟಿಯಾಗಿ ಹಿಡಿದು ಪ್ರಾರ್ಥಿಸಿದನು.

ವೆಂಕಟೇಶನು ಕೂಡಲೇ "ತೊಂಡಮಾನ ಚಕ್ರವರ್ತಿ! ನಿಜವಾಗಿ ಏನಾಯಿತು ಹೇಳು, ನೀನು ಇಲ್ಲಿ ಭಯಪಡುವ ಅಗತ್ಯವಿಲ್ಲ. ಯಾಕಿಷ್ಟು ಹೆದರಿರುವೆ? ನಿನ್ನ ದೇಹವನ್ನು ನೋಡು.. ಎಷ್ಟು ಒದ್ದಾಡುತ್ತಿರುವೆ, ನಿನ್ನ ದೇಹವೆಲ್ಲ ಬೆವರಿನಿಂದ ಒದ್ದೆಯಾಗಿದೆ. ಯಾವುದೇ ನೋವು ಅನುಭವಿಸಬೇಡ. ನಿನ್ನ ಭಯಕ್ಕೆ ಕಾರಣವೇನು ಹೇಳು. ನನ್ನ ಪಾದವನ್ನು ಬಿಡು, ಮೇಲೇಳು. ವಿಷಯವೇನೆಂದು ಹೇಳು." ಎಂದು ಕೇಳಿದನು.

"ನಾನು ಎದ್ದೇಳುವುದಿಲ್ಲ ಎಂದಮೇಲೆ ಎದ್ದೇಳುವುದಿಲ್ಲ, ನೀನು ರಕ್ಷಣೆ ಕೊಟ್ಟು ಕಾಪಾಡುತ್ತೇನೆ ಎಂದು ಹೇಳಿದ ಮೇಲೆ ನಾನು ನಿನ್ನ ಪಾದವನ್ನು ಬಿಡುತ್ತೇನೆ, ಅಲ್ಲಿಯವರೆಗೆ ಬಿಡುವುದಿಲ್ಲ" ಎಂದು ತೊಂಡಮಾನನು ಪರಂಧಾಮನನ್ನು ಬಿಡದೆ ಪ್ರಾರ್ಥಿಸಿದನು.

## ಶಿಲೆಯಾದ ಶ್ರೀನಿವಾಸ

ತಕ್ಷಣವೇ ವೆಂಕಟೇಶ್ವರನು "ಓ ತೊಂಡಮಾನ! ನನ್ನ ಕಾಲಿಗೆ ಬಿದ್ದು ಶರಣಾಗಿ, ಬೇಡಿಕೊಂಡವರನ್ನು ರಕ್ಷಿಸಿ ಕಾಪಾಡುವುದು ಈ ನನ್ನ ಅವತಾರದ ಪರಮಧ್ಯೇಯ, ಉದ್ದೇಶ್ಯ. ಬೇಡಿದವರಿಗೆ ಬೇಡಿದ ವರವನ್ನು ನೀಡುವುದಕ್ಕಾಗಿಯೇ ನಾನು ವೈಕುಂಠದಿಂದ ಈ ಭೂಲೋಕಕ್ಕೆ ಬಂದಿದ್ದೇನೆ. ವೆಂಕಟೇಶ! ಗೋವಿಂದಾ! ಗೋವಿಂದಾ ಎಂದು ಸ್ತುತಿಸಿದರೆ ಸಾಕು, ಭಕ್ತರು ಮಾಡಿದ ಪಾಪಗಳು ಏನೇ ಇರಲಿ, ಅದರಿಂದ ಮುಕ್ತರನ್ನಾಗಿ ಮಾಡುತ್ತೇನೆ. ನನ್ನನ್ನು ಸ್ಮರಿಸಿದರೆ ಸಾಕು ಸ್ಮರಣೆಮಾತ್ರದಿಂದ ದುರಿತಗಳೆಲ್ಲವೂ ನಾಶ ಆಗುವುದು. ಅವರನ್ನು ಪುಣ್ಯಾತ್ಮರನ್ನಾಗಿ ಮಾಡುತ್ತೇನೆ. ಅದಕ್ಕಾಗಿಯೇ ನನ್ನನ್ನು "ವೆಂಕಟಪತಿ" ಎಂದು ಕೀರ್ತಿಸುತ್ತಾರೆ. ನನ್ನ ಪರಮಭಕ್ತ, ಅಂತರಂಗ ಭಕ್ತ, ನನಗೆ "ಆನಂದ ನಿಲಯ" ವನ್ನು ವಾಸಕ್ಕಾಗಿ ನಿರ್ಮಿಸಿ ಕೊಟ್ಟಿರುವ ಗೃಹದಾತನಾದ ನಿನಗೆ ಅಭಯವನ್ನು ನೀಡುತ್ತಿದ್ದೇನೆ. ನಿರ್ಭಯವಾಗಿರು. ಯಾವ ಸಂದೇಹ, ಸಂಶಯವಿಲ್ಲದೆ ನಿನಗೆ ಒದಗಿರುವ ಆಪತ್ತನ್ನು ವಿವರವಾಗಿ ಹೇಳು" ಎಂದು ಆದೇಶವಿತ್ತನು.

"ಪಾಪವೆಲ್ಲವನ್ನು ನಿನ್ನ ನಾಮಸ್ಮರಣೆ ಮಾತ್ರದಿಂದ ಹೋಗಲಾಡಿಸುತ್ತ ಸಾರ್ಥಕ ನಾಮವನ್ನು ಹೊಂದಿರುವ ಓ ವೆಂಕಟಪತಿ! ನಾನು ಘೋರಪಾಪವನ್ನು ಮಾಡಿದ್ದೇನೆ. ಆ ಮಹಾಪಾಪವನ್ನು ನಾನು ಗೊತ್ತಿದ್ದೋ, ಗೊತ್ತಿಲ್ಲದೆಯೋ ಮಾಡಿದ್ದೇನೆ. ಅದನ್ನು ಜ್ಞಾಪಿಸಿಕೊಂಡರೆ ನನಗೆ ಮೈನಡುಕ ಉಂಟಾಗುತ್ತದೆ. ಸ್ವಾಮಿ! ಶರಣಾಗತ ವತ್ಸಲನಾದ ನೀನು ನನಗೆ ಅಭಯಪ್ರಧಾನ ಮಾಡಿರುವುದರಿಂದ ನನಗೆ ಸಂಪೂರ್ಣವಾಗಿ ಧೈರ್ಯ ಬಂದಿದೆ. ನಾನು ಮಾಡಿದ ಪರಮ ಘೋರವಾದ ಪಾಪ ಯಾವುದು ಎಂದು ನಾನು ನಿಮಗೆ ವಿವರಿಸುತ್ತಿದ್ದೇನೆ. ಅನ್ಯಥಾ ಶರಣಂ ನಾಸ್ತಿ, ತ್ವಮೇವ ಶರಣಂ ಮಮ?

ಪ್ರಭು! ಶ್ರೀನಿವಾಸ! ಸುಮಾರು ಎರಡು ವರ್ಷಗಳ ಹಿಂದೆ ಒಂದು ದಿನ "ಕೂರ್ಮ" ಎಂಬ ವಿಪ್ರನು ತನ್ನ ತಂದೆಯ ಚಿತಾಭಸ್ಮವನ್ನು ಪವಿತ್ರ ಗಂಗಾ ನದಿಯಲ್ಲಿ ಮುಳುಗಿಸಲು ಕಾಶಿ ಕ್ಷೇತ್ರಕ್ಕೆ ಹೋಗುತ್ತಿದ್ದಾಗ ತನ್ನ ಹೆಂಡತಿ ಮಕ್ಕಳೊಂದಿಗೆ

ನನ್ನ ಬಳಿಗೆ ಬಂದನು. ಗರ್ಭವತಿಯಾದ ಅವನ ಪತ್ನಿ ಮತ್ತು ಐದು ವರ್ಷದ ಮಗ ಅವರನ್ನು ನನ್ನ ಸುಪರ್ದಿಗೆ ಬಿಟ್ಟು, ರಾಜಾ! ನಾನು ನನ್ನ ಕೆಲಸವನ್ನು ಮುಗಿಸಿ ಹಿಂದಿರುಗುವವರೆಗೂ ಅವರನ್ನು ನಿನ್ನ ಕಣ್ಣಿನ ರೆಪ್ಪೆಯಂತೆ ಕಾಪಾಡಬೇಕು ಎಂದು ಪ್ರಾರ್ಥಿಸುತ್ತ ಅವರನ್ನು ನನ್ನಲ್ಲಿ ಬಿಟ್ಟು ಕಾಶಿಗೆ ಹೊರಟನು.

ನಾನು ಆ ವಿಪ್ರನ ಸಂಸಾರವನ್ನು ದೊಡ್ಡ ಅರಮನೆಯಲ್ಲಿಟ್ಟು ಸಕಲ ಸೌಕರ್ಯಗಳನ್ನು ಒದಗಿಸಿದೆನು. ಅಷ್ಟೇ ಅಲ್ಲ. ಕಟ್ಟಡಕ್ಕೆ ಬೀಗ ಹಾಕಿ ಅವರ ಸುರಕ್ಷತೆಗೆ ಇತರರಿಂದ ತೊಂದರೆಯಾಗದಂತೆ ಭದ್ರತಾ ವ್ಯವಸ್ಥೆ ಮಾಡಿದ್ದೆ. ಆದರೆ ವಿಧಿ ಬಲವಾಗಿದೆ. ಅದಾದ ನಂತರ ನಾನು ನನ್ನ ರಾಜ್ಯ ಆಡಳಿತದ ಕಾರ್ಯದಲ್ಲಿ ತಲ್ಲೀನನಾಗಿದ್ದ ಕಾರಣ  ಸಂಪೂರ್ಣವಾಗಿ ಅವರ ಸಂಗತಿ ಮರೆತು ಹೋಗಿದ್ದೆ.

ಎರಡು ವರ್ಷಗಳ ನಂತರ, ಕೂರ್ಮ ಕಾಶಿಯಾತ್ರೆಯನ್ನು ಮುಗಿಸಿ ಹಿಂದಿರುಗಿ ಬಂದನು. ತನ್ನ ಪತ್ನಿ, ಮಕ್ಕಳನ್ನು ನಿಶ್ಚಿಂತೆಯಾಗಿ ನನ್ನ ಬಳಿ ಬಿಟ್ಟು ಕಾಶಿಯಾತ್ರೆ ಆನಂದದಿಂದ ಮುಗಿಸಿ ಬಂದೆ ಎಂದು ಹೇಳಿ, ತನ್ನ ಹೆಂಡತಿ, ಮಕ್ಕಳ ಯೋಗಕ್ಷೇಮವನ್ನು ವಿಚಾರಿಸಿದನು. ರಾಜ! ನಾನು ಹೊರಡುವ ಹೊತ್ತಿಗೆ ನನ್ನ ಹೆಂಡತಿ ಗರ್ಭಿಣಿಯಾಗಿದ್ದಳು! ಯಾವ ಮಗುವಿಗೆ ಜನ್ಮಕೊಟ್ಟಳು? ನನ್ನ ಐದು ವರ್ಷದ ಮಗ ಚೆನ್ನಾಗಿದ್ದಾನೆಯೇ! ಎಂದು ಮತ್ತೆ ಮತ್ತೆ ಕೇಳಿದನು. ನನ್ನ ಹೆಂಡತಿ ಮತ್ತು ಮಕ್ಕಳು ಸುರಕ್ಷಿತವಾಗಿದ್ದರೆ ನನ್ನ ಬರುವಿಕೆಗಾಗಿ ಕಾದು, ಬಂದು ನನ್ನನ್ನು ಎದುರುಗೊಳ್ಳಬೇಕಿತ್ತು. ಇನ್ನು ಕಾಯಲು ಸಾಧ್ಯವಿಲ್ಲ. ರಾಜ! ನಾನು ಚಿಂತಿತನಾಗಿದ್ದೇನೆ. ಬೇಗ ಹೇಳು! ನನ್ನ ಹೆಂಡತಿ ಮಕ್ಕಳು ಆರೋಗ್ಯವಾಗಿ, ಸುರಕ್ಷಿತರಾಗಿ ಇದ್ದಾರೆ ಅಲ್ಲವೇ?

ರಾಜನಾದ ನನಗೆ ವಿಪ್ರನ ಸಂಸಾರವನ್ನು ಇದುವರೆಗೆ ಮರೆತಿದ್ದಕ್ಕೆ ಆಶ್ಚರ್ಯಪಟ್ಟು, ಅವರಿಗೆ ಏನಾದರೂ ಆಗಿರಬಹುದು ಎಂಬ ಆಲೋಚನೆ ಮನಸ್ಸಿಗೆ ಬಂದು ಚಿಂತಿತನಾಗಿ, ಆ ವಿಪ್ರನನ್ನು ತಡೆದು ಅವನನ್ನು ಹೊರಗೆ ಹೋಗದಂತೆ ತಡೆದು ವಿಪ್ರನಿಗೆ ಈ ರೀತಿ ಹೇಳಿದನು.

'ಓ ಬ್ರಾಹ್ಮಣೋತ್ತಮ! ನಿಮ್ಮ ಕುಟುಂಬದ ಸದಸ್ಯರೆಲ್ಲರೂ ಸುರಕ್ಷಿತವಾಗಿದ್ದಾರೆ. ಆತಂಕ ಪಡಬೇಡ. ಗರ್ಭಿಣಿಯಾಗಿದ್ದ ನಿನ್ನ ಹೆಂಡತಿ ಹೆಣ್ಣುಮಗುವಿಗೆ ಜನ್ಮ ನೀಡಿದಳು. ನಿನ್ನ ಹೆಂಡತಿ ಮತ್ತು ಮಕ್ಕಳು ಎಲ್ಲರು ನಮ್ಮವರೊಂದಿಗೆ ವೆಂಕಟಾಚಲ ಕ್ಷೇತ್ರಕ್ಕೆ ಹೋಗಿದ್ದಾರೆ. ಅಲ್ಲಿ ಸ್ವಾಮಿ ವೆಂಕಟಾಚಲಪತಿಗೆ ಮಾಡುವ ಶುಕ್ರವರಾಭಿಷೇಕವನ್ನು ನೋಡಿ ಇಂದು ಅಥವಾ ನಾಳೆ ಅಥವಾ ಮರುದಿನ

ಹಿಂತಿರುಗಿ ಬರುತ್ತಾರೆ. ಅಲ್ಲಿಯವರೆಗೂ ನೀನು ನಿಶ್ಚಿಂತನಾಗಿರು ಎಂದು ಅವನಿಗೆ ಬೇಕಾದ ವ್ಯವಸ್ಥೆ ಮಾಡಿ, ಆತಂಕದಿಂದ ವಿಪ್ರನ ಕುಟುಂಬ ಇರುವ ಕಟ್ಟಡಕ್ಕೆ ಹೋದೆ. ನಿರ್ಜೀವ ಅಸ್ಥಿಪಂಜರವಾಗಿ ಉಳಿದಿದ್ದ ಅವರನ್ನು ಕಂಡು ಆತಂಕಗೊಂಡ ನಾನು ತಕ್ಷಣ ರಹಸ್ಯ ಬಾಗಿಲಿನಿಂದ ಆನಂದ ನಿಲಯಕ್ಕೆ ಬಂದಿದ್ದೇನೆ. ಓ ಶ್ರೀನಿವಾಸ! ಆಪದ್ಬಾಂಧವ! ಇದು ಸಂಭವಿಸಿದ್ದು, ಈ ಘೋರವಾದ ವಿಪತ್ತಿನಿಂದ ನನ್ನನ್ನು ರಕ್ಷಿಸು, ತಂದೆಯೇ! ಎಂದು ತೊಂಡಮನು ಹಲವು ರೀತಿಯಲ್ಲಿ ಪ್ರಾರ್ಥಿಸಿದನು.

ಈ ಕಥೆಯನ್ನು ವಿವರವಾಗಿ ಕೇಳಿದ ಶ್ರೀನಿವಾಸನು ಹೀಗೆ ಹೇಳಿದನು.. "ಮಾವ! ತೊಂಡಮಾನ ಚಕ್ರವರ್ತಿ! ನೀನು ಮಹಾಪಾಪ ಮಾಡಿದ್ದೀಯ. ಅದಕ್ಕೆ ಕ್ಷಮೆಯಿಲ್ಲ. ಬ್ರಾಹ್ಮಣ ಕುಟುಂಬದ ರಕ್ಷಣೆ ಮಾಡುವುದಾಗಿ ವಾಗ್ದಾನಮಾಡಿ, ನೀನು ನಿನ್ನ ಕರ್ತವ್ಯವನ್ನು ಮರೆತು, ಬ್ರಹ್ಮಹತ್ಯಾ ದೋಷಿತನಾಗಿರುವೆ. ಅದನ್ನು ಮುಚ್ಚಿಟ್ಟಿರುವೆ. ಈ ಸಮಸ್ಯೆ ಸುಲಭವಾಗಿ ಪರಿಹಾರ ಆಗುವುದಿಲ್ಲ. ಮಾಡಿರುವ ತಪ್ಪಿಗೆ ಶಿಕ್ಷೆಯನ್ನು ಅನುಭವಿಸಲೇ ಬೇಕು. ನನ್ನ ಭಕ್ತನಾದ ನಿನಗೆ ಬಂದಿರುವ ವಿಪತ್ತನ್ನು ಹೋಗಲಾಡಿಸಿ ನಿನ್ನನ್ನು ರಕ್ಷಿಸಿ ಈಗ ನಿನಗಾಗಿ ವಿಪ್ರನ ಕುಟುಂಬವನ್ನು ಬದುಕಿಸಬೇಕಿದೆ. ಅದಕ್ಕೆ ಬದಲಾಗಿ ಬೇರೊಬ್ಬರು ಸಾಯಬೇಕು, ಇಲ್ಲ ಅಂತಹ ಮಹಾ ಪಾಪವನ್ನು ಅನುಭವಿಸಲು ಸಿದ್ಧರಾಗಿರಬೇಕು. ಅಲ್ಲದೆ ನಾನು ನಿನಗೆ ಅಭಯವನ್ನು ನೀಡಿದ್ದೇನೆ. ನನಗೆ ಅತ್ಯಂತ ಅಂತರಂಗದ ಭಕ್ತನಾಗಿರುವುದರಿಂದ ನಿನ್ನಂತಹ ಮಹಾಪಾಪಿಯ ಪಾಪವನ್ನು ಹೋಗಲಾಡಿಸಿ ವೆಂಕಟನಾಥನಾದ ನಾನೇ **"ಕಲೌ ವೆಂಕಟ ನಾಯಕ"** ಸಾರ್ಥಕ ನಾಮಕ್ಕೆ ಅನುಗುಣವಾಗಿ ನಾನು ಅವರನ್ನು ಬದುಕಿಸುತ್ತೇನೆ. ಇನ್ನು ನೀನು ಚಿಂತಿಸಬೇಡ, ತಡಮಾಡದೆ ಅವರ ಅಸ್ಥಿಯನ್ನು ತೆಗೆದುಕೊಂಡು ಬಾ ಎಂದು ಆದೇಶಿಸಿದ ಶ್ರೀನಿವಾಸನಿಗೆ ತೊಂಡಮಾನನು ಅಸ್ಥಿಯನ್ನು ತಂದು ಒಪ್ಪಿಸಿದನು.

ಶ್ರೀನಿವಾಸನು ಅದನ್ನು ಸಮೀಪದಲ್ಲಿಯೇ ಇದ್ದ ಪಾಂಡವ ತೀರ್ಥಕ್ಕೆ ತೆಗೆದುಕೊಂಡು ಹೋದನು. ಕತ್ತಿನವರೆಗೆ ಆ ತೀರ್ಥದಲ್ಲಿ ಅಸ್ಥಿಪಂಜರವನ್ನು ಮುಳುಗಿಸಿ ನಂತರ ದಡದಲ್ಲಿ ಇಟ್ಟು ತನ್ನ ಕೈಯಿಂದ ನೀರನ್ನು ತೆಗೆದುಕೊಂಡು ಅದರ ಮೇಲೆ ಪ್ರೋಕ್ಷಣೆ ಮಾಡಿದನು. ತಕ್ಷಣದಲ್ಲಿ ಆ ವಿಪ್ರನ ಹೆಂಡತಿ ಮಕ್ಕಳು ಜೀವಂತರಾದರು. ಈ ವಿಚಿತ್ರ ಘಟನೆಯನ್ನು ಕಂಡ ದೇವತೆಗಳು ಆನಂದಭರಿತರಾಗಿ ಪುಷ್ಪವೃಷ್ಟಿ ಮಾಡಿದರು.

ಅಂದಿನಿಂದ ಆ ತೀರ್ಥ **"ಅಸ್ಥಿತೀರ್ಥ"** ಎಂದು ಪ್ರಸಿದ್ಧವಾಯಿತು. ನರಕದಲ್ಲಿ ಇರುವವರ ಅಸ್ಥಿಯನ್ನು ಈ ತೀರ್ಥದಲ್ಲಿ ಮುಳುಗಿಸಿದರೆ ಅವರಿಗೆ ಮೋಕ್ಷ

ಪ್ರಾಪ್ತಿಯಾಗುತ್ತದೆ ಎಂದು ದೇವತೆಗಳು ವರವನ್ನು ಕೊಟ್ಟಿದ್ದಾರೆ. ಶ್ರೀನಿವಾಸನು ಪ್ರಾಣದಾನ ಮಾಡಿದ ವಿಪ್ರನ ಹೆಂಡತಿ ಮಕ್ಕಳನ್ನು ತೊಂಡಮಾನನಿಗೆ ಒಪ್ಪಿಸಿ "ರಾಜ! ಇನ್ನು ಮುಂದೆ ನಾನು ಯಾರಿಗೂ ಪ್ರತ್ಯಕ್ಷವಾಗಿ ಗೋಚರಿಸುವುದಿಲ್ಲ. ಯಾರೊಂದಿಗೂ ನೇರವಾಗಿ ಮಾತನಾಡುವುದಿಲ್ಲ. ಮೌನವಾಗಿ ಇರುತ್ತೇನೆ. ಒಂದುವೇಳೆ ನಾನು ನನ್ನ ಭಕ್ತರೊಡನೆ ಮಾತನಾಡುವ ಸಂದರ್ಭ ಬಂದರೆ ನಾನು ಅವರನ್ನು ಬೇರೆ ಮಾರ್ಗದಲ್ಲಿ ಮಾತ್ರ ಮಾತನಾಡುತ್ತೇನೆ. ನೀನು ಮಾಡಿರುವ ಪಾಪ ಘನಘೋರವಾದದ್ದು. ನೀನು ನನಗಾಗಿ ಪ್ರೀತಿಯಿಂದ ಮಾಡಿದ ಸತ್ಕಾರ್ಯಕ್ಕಾಗಿ ನಾನು ನಿನಗೆ ಉಪಕಾರ ಮಾಡುತ್ತಿದ್ದೇನೆ. ಎಚ್ಚರಿಕೆಯಿಂದ ರಾಜ್ಯಭಾರವನ್ನು ಮಾಡು" ಎಂದು ಹೇಳುತ್ತಾ ಶ್ರೀನಿವಾಸನು ಅದ್ಭುತವಾದ ಸಾಲಗ್ರಾಮಶಿಲೆಯ ಮೂಲಕ ವಿಗ್ರಹ ಮೂರ್ತಿಯಾಗಿ ಸ್ವಯಂ ವ್ಯಕ್ತವಾದ ಪದ್ಮಪೀಠದಲ್ಲಿ ಆವಿರ್ಭಸಿದನು ಎಂದು ಸೂತ ಮಹರ್ಷಿಗಳು ಶ್ರೀನಿವಾಸನ ದಿವ್ಯಕಥೆಯನ್ನು ಹೀಗೆ ವರ್ಣಿಸಿದರು.

**"ಭಕ್ತಾನುಗ್ರಾಹಾಕಂ ವಿಷ್ಣುಂ ಸುಶಾಂತಂ ಗರುಡಧ್ವಜಂ,**
**ಪ್ರಸನ್ನ ವಕ್ತ್ರನಯನಂ ಶ್ರೀನಿವಾಸಂ ಭಜೇऽನಿಶಮ್,**
**ಭಕ್ತ ಭಕ್ತಿಸುವೇಶನ ಬದ್ಧ ಸತ್ಪಾದ ಪಂಕಜಂ,**
**ಸನಕಾದಿ ಧ್ಯಾನಗಮ್ಯಂ ಶ್ರೀನಿವಾಸಂ ಭಜೇऽನಿಶಮ್."**

ಓ ದೇವಾಧಿದೇವನಾದ ವೆಂಕಟಪತಿಯೇ! ನೀನು ಯಾವಾಗಲೂ ನಿನ್ನ ಭಕ್ತರನ್ನು ಅವರೊಡನಿದ್ದು ವರವನ್ನು ಕೊಟ್ಟು ಅನುಗ್ರಹಿಸುತ್ತಿರುವೆ ಅಲ್ಲವೇ ತಂದೆ! ಸರ್ವ ಕಾಲದಲ್ಲಿ, ಸರ್ವಪ್ರದೇಶದಲ್ಲಿ, ಸರ್ವಾವಸ್ಥೆಯಲ್ಲಿ ಎಲ್ಲವನ್ನು ವ್ಯಾಪಿಸಿರುವುದು ಮಾತ್ರವಲ್ಲದೆ, ಸದ್ಗುಣಶೀಲ ಭಕ್ತರಿಗೆ ಸಂತೋಷವನ್ನು ತರುವ ಅಂತಃಕರಣವನ್ನು, ಆಂತರಿಕ ಶಕ್ತಿಯನ್ನು ಸಹ ಕೊಟ್ಟಿದೀಯ. ದುಷ್ಟರನ್ನು ಸನ್ಮಾರ್ಗಕ್ಕೆ ತಂದು ಅವರಿಗೂ ಕರುಣೆಯನ್ನು ತೋರಿಸಿದ್ದೀಯ. ಭಕ್ತರ ರಕ್ಷಣೆಗಾಗಿ ನೀವು ಗರುಡವಾಹನದೊಂದಿಗೆ ಸದಾ ಸಿದ್ಧರಾಗಿ ಇರುತ್ತೀರ ಅಲ್ಲವೆ? ಓ ಶ್ರೀನಿವಾಸ! ಸಜ್ಜನರನ್ನು ಅತ್ಯಂತ ಪ್ರಸನ್ನ ಮುಖಭಾವದಿಂದ ಕಣ್ಣುಗಳಿಂದ ಅನುಗ್ರಹಿಸುತ್ತ ದರ್ಶಭಾಗ್ಯವನ್ನು ಕೊಡುತ್ತಿರುವ ನಿನ್ನನ್ನು ಸದಾ ಪೂಜಿಸುತ್ತೇನೆ. ಅಷ್ಟೇ ಅಲ್ಲ. ಓ ಆನಂದನಿಲಯವಾಸಾ! ಭಕ್ತನ ಭಕ್ತಿಯ ಆನಂದದ ಅಂಗೈಯಿಂದ ಬಂಧಿತವಾದ ಅತ್ಯಂತ ಶ್ರೇಷ್ಠವಾದ ಕಮಲದ ಪಾದಗಳನ್ನು ನೀನು ಹೊಂದಿದ್ದೀಯ! ಸನಕ ಸನಂದನಾದಿ ಪರಮ ಯೋಗಿಗಳಿಗೆ ಧ್ಯಾನದಿಂದಲೇ ದರ್ಶನಭಾಗ್ಯವನ್ನು ದಯಪಾಲಿಸುತ್ತಿರುವ ವೆಂಕಟಾಚಲಪತಿ! ಎಂದೆಂದಿಗೂ ನಿನ್ನ ಸೇವೆ ಮಾಡುತ್ತೇನೆ– ಎಂದು ಸೂತ ಮಹರ್ಷಿ ಶ್ರೀನಿವಾಸನನ್ನು ಅರ್ಧನಿಮೀಲಿತ ಕಣ್ಣುಗಳಿಂದ ಪ್ರಾರ್ಥಿಸಿ ಮುಂದಿನ ದಿವ್ಯ ಗಾಥೆಯನ್ನು ಮುಂದುವರಿಸಿದರು.

ಅನಂತ ಕರುಣಾಸಾಗರ, ಭಕ್ತವತ್ಸಲನಾದ ಶ್ರೀನಿವಾಸ, ತೊಂಡಮಾನ ಚಕ್ರವರ್ತಿಯ ಮೇಲೆ ದಯೆತೋರಿ ಮೃತಪಟ್ಟಿದ್ದ ವಿಪ್ರ ಕುಟುಂಬಕ್ಕೆ ಪ್ರಾಣದಾನ ಮಾಡಿದ. ಪುನರ್ಜೀವ ಪಡೆದ ವಿಪ್ರನ ಕುಟುಂಬವನ್ನು ಸಂಭ್ರಮ ಆಶರ್ಯದಿಂದ ನೋಡಿ ತೊಂಡಮಾನ ಚಕ್ರವರ್ತಿ ಸಂತೋಷಪಟ್ಟನು. ಶ್ರೀನಿವಾಸನು 'ಓ ತೊಂಡಮಾನ ಚಕ್ರವರ್ತಿ! ಈ ವಿಪ್ರಕುಟುಂಬವನ್ನು ಕೂರ್ಮನಿಗೆ ಅರ್ಪಿಸು. ಇನ್ಮುಂದೆ ಇಂತಹ ತಪ್ಪುಗಳನ್ನು ಮಾಡಬೇಡ' ಎಂದು ಉಪದೇಶಿಸಿದನು.

ಚಕ್ರವರ್ತಿ ತೊಂಡಮನು ಕೂರ್ಮುವಿನ ಬಳಿಗೆ ಹೋಗಿ "ಓ ವಿಪ್ರವರ್ಯಾ! ಇಲ್ಲಿ ನಿನ್ನ ಹೆಂಡತಿ ಮತ್ತು ಮಕ್ಕಳು ಇದ್ದಾರೆ. ಅವರನ್ನು ದಯೆಯಿಂದ ಸ್ವೀಕರಿಸಿ ನನ್ನನ್ನು ಕರುಣಿಸು" ಎಂದು ಅವರಿಗೆ ಅರ್ಪಿಸಿದನು. ಕೂರ್ಮನು, ತನ್ನ ಹೆಂಡತಿ ಮಕ್ಕಳನ್ನು ಇಷ್ಟುದಿನ ಎಲ್ಲಿಗೆ ಹೋಗಿದ್ದಿರಿ? ಎಂದು ಕೇಳಲು ಬ್ರಾಹ್ಮಣನ ಹೆಂಡತಿ ಕೇಳಿದಳು, "ನಾನು ಗಾಢ ನಿದ್ರೆಗೆ ಜಾರಿದೆ! ಆ ನಿದ್ರೆಯಲ್ಲಿ, ನಾವು ಶ್ರೀನಿವಾಸನ ಉದರಲೋಕಕ್ಕೆ ಹೋದೆವು. ನಾವು ಅಲ್ಲಿ ಅನೇಕ ಪುಣ್ಯಕ್ಷೇತ್ರಗಳನ್ನು ಮತ್ತು ದೇಗುಲಗಳನ್ನು ನೋಡಿ ಬಂದೆವು. ನಾವು ಎಲ್ಲಾ ದೇವರುಗಳ ದರ್ಶನ ಮಾಡಿದೆವು ಎಂದು ತಮ್ಮ ಅನುಭೂತಿ, ದೈವಾನುಭವದ ದಿವ್ಯಲೀಲೆ ಮಾಯೆಯ ಬಗ್ಗೆ ವಿವರಿಸಿದಳು. ವಿಪ್ರಕೂರ್ಮನು, ತನ್ನ ಹೆಂಡತಿ ತನ್ನಗಿಂತ ಪುಣ್ಯವಂತಳು, ಅದೃಷ್ಟವಂತಳು. ಆದುದರಿಂದಲೇ ಮರಣ ಹೊಂದಿದವಳು, ಮತ್ತೆ ಸಾಕ್ಷಾತ್ ಸ್ವಾಮಿ ವೆಂಕಟೇಶನ ದಯದಿಂದ, ಕೃಪಾದೃಷ್ಟಿಯಿಂದ ಮತ್ತೆ ಜೀವಿಸಿದಳು. ಸ್ವಾಮಿ ಶ್ರೀನಿವಾಸನಿಗಿಂತ ಮಿಗಿಲಾದ ಬೇರೆ ದೇವರು ಇಲ್ಲವೇ ಇಲ್ಲ ಎಂದು ಆನಂದ ಪಡುತ್ತ ರಾಜನಾದ ತೊಂಡಮಾನ ಬಹುಮಾನವಾಗಿ ಕೊಟ್ಟ ಧನಸಂಪತ್ತನ್ನು ಸ್ವೀಕರಿಸಿ, ಅನೇಕ ರೀತಿಯಲ್ಲಿ ಹಾಡಿ ಹೊಗಳಿ ಆಶೀರ್ವದಿಸಿ ಹಿಂದಿರುಗಿದರು.

## ಸಹಸ್ರನಾಮಾರ್ಚನೆ

ಬ್ರಾಹ್ಮಣನಾದ ಕೂರ್ಮನ ಹೆಂಡತಿ, ಮಕ್ಕಳು ನೋಡಿದ ಅದ್ಭುತವಾದ ದಿವ್ಯಲೋಕ ಸಂಚಾರವನ್ನು ದೇವತಾ ದರ್ಶನವನ್ನು ಕೇಳಿದ ತೊಂಡಮಾನ ಚಕ್ರವರ್ತಿ ಆ ವಿಪ್ರ ಕುಟುಂಬ ಎಷ್ಟು ಪುಣ್ಯ ಮಾಡಿದ್ದಾರೆ. ಇದೆಲ್ಲವು ಭಕ್ತಾಪರಾಧೀನನಾದ ಶ್ರೀವೇಂಕಟೇಶ್ವರ ಸ್ವಾಮಿಯ ಅನುಗ್ರಹದಿಂದ ಆ ವಿಪ್ರವನಿತೆ ಪಡೆದಿದ್ದಾಳೆ. ಮತ್ತೆ ನನಗೆ ಇಂತಹ ದಿವ್ಯಾನುಭೂತಿ, ಅಪಾರವಾದ ಸ್ವಾಮಿ ಶ್ರೀನಿವಾಸನ ಕರುಣೆ ಎಂದು ದೊರಕುತ್ತದೆ ಎಂದು ಚಿಂತಿಸತೊಡಗಿದನು. ಶ್ರೀವಾರಿ ವೆಂಕಟೇಶನ ದಯೆ ದೊರೆಯಲು ತಾನು ಏನನ್ನು ಮಾಡಬೇಕು, ಸಾಧಿಸಬೇಕು? ಏನು ಮಾಡಿದರೆ ದೊರೆಯುತ್ತದೆ ಎಂದು ಆಲೋಚಿಸುತ್ತ ಅಂಗೀರಸಾದಿ

ಮಹಾಮುನಿಗಳನ್ನು ಕಂಡು, ಅವರಿಂದ ವಿವರವನ್ನು ಪಡೆಯಬೇಕು ಎಂದು ಅವರನ್ನು ಈ ರೀತಿ ವಿನಮ್ರವಾಗಿ ಕೇಳಿದನು.

**"ಭೂದೇವ! ದೈವತುಷ್ಟ್ಯರ್ಥಂ? ವ್ಯಾನಾಮಯಃ**
**ಕಥಂ ತುಷ್ಯತಿ ಗೋವಿಂದ ವದ ಮೇ ಗುರುಸತ್ತಮ!"**

ಅಂಗೀರಸ ಋಷಿಯು ತೊಂಡಮನುವಿಗೆ ಹೇಳಿದನು: "ಓ ರಾಜ! ತೊಂಡಮ ಚಕ್ರವರ್ತಿ! ಶ್ರೀನಿವಾಸ ಸ್ವಾಮಿಯ ಕೃಪೆಯನ್ನು ಪಡೆಯಲು ಆ ಭಗವಂತನನ್ನು ಪೂಜಿಸದೆ ಬೇರೆ ದಾರಿಯಿಲ್ಲ. ತುಳಸಿ ದಳಗಳು ವೆಂಕಟೇಶ್ವರನಿಗೆ ಬಹಳ ಪ್ರಿಯವಾಗಿವೆ. ಆ ತುಳಸಿ ದಳಗಳೊಂದಿಗೆ ಸಹಸ್ರನಾಮಗಳನ್ನು ಪಠಿಸುವ ಮೂಲಕ ಪ್ರತಿ ನಿತ್ಯ ಶ್ರೀನಿವಾಸ ದೇವರಿಗೆ ಅರ್ಪಿಸು. ಹಾಗೆ ಮಾಡಿದರೆ ಶ್ರೀ ವೆಂಕಟಾಚಲಪತಿಯ ಮಹಾಕೃಪೆ ಸಿಗುತ್ತದೆ. ಕೊನೆಗೆ ಆ ಸ್ವಾಮಿಯ ಕೃಪೆಯಿಂದ ನಿನಗೂ ಮೋಕ್ಷ ಪ್ರಾಪ್ತಿಯಾಗುತ್ತದೆ" ಎಂದು ಅಂಗೀರಸ ಮುನಿಗಳು ಸೂಚನೆ ನೀಡಿದರು. (ಸಾಕ್ಷಾತ್ ಶ್ರೀವೆಂಕಟೇಶ್ವರನನ್ನು ಬಂಗಾರದ ಪದ್ಮಗಳಿಂದ ತನ್ನನ್ನು ಅರ್ಚಿಸು ಎಂದು ತೊಂಡಮಾನನಿಗೆ ಆದೇಶಿಸಿದನೆಂದು ವರಾಹಪುರಾಣದಲ್ಲಿ ಕಾಣಬರುತ್ತದೆ.) ಗುರುಗಳ ಆಜ್ಞಾನುಸಾರ ತೊಂಡಮಾನನು ಶ್ರೀನಿವಾಸನಿಗೆ ಅತ್ಯಂತ ಪ್ರಿಯವಾದ ತುಳಸೀದಳವನ್ನು ಬಂಗಾರದಲ್ಲಿ ಮಾಡಿಸಿ ಪ್ರತಿದಿನವೂ ಸಹಸ್ರನಾಮವನ್ನು ಪಠಿಸುತ್ತ ಅರ್ಚಿಸುತ್ತ ಆರಾಧಿಸುತ್ತಿದ್ದನು. ಬಂಗಾರದ ತುಳಸಿ ದಳಗಳಿಂದ ಅರ್ಚನ ತಿಂಗಳುಗಟ್ಟಲೆ ಭಕ್ತಿಯಿಂದ ಮುಂದುವರಿದರೂ ಶ್ರೀ ವೆಂಕಟೇಶ್ವರಸ್ವಾಮಿ, ತೊಂಡಮಾನನಿಗೆ ಒಲಿಯಲಿಲ್ಲ ಆನಂದಾನುಭೂತಿಯು ದೊರೆಯಲಿಲ್ಲ. ಚಕ್ರವರ್ತಿಗೆ ಸಂತಸವಾಗಲಿಲ್ಲ. ಆದ್ದರಿಂದ ನೊಂದ ತೊಂಡಮಾನನು ಚಿಂತೆಯಿಂದ ಯೋಚಿಸುತ್ತಾ ಭಗವಂತನನ್ನು ಪ್ರಾರ್ಥಿಸಿದ.

**ಭಕ್ತಾನಾಮಪರಾಧಾನ್ ನಗಣಯಂತಿ ಗುಣಾಧಿಕಾಃ,**
**ಕ್ಷಮಸ್ವ ಮಮ ದೌರಾತ್ಮ್ಯಂ ಭಕ್ತಸ್ಯ ಪುರುಷೋತ್ತಮ!**
**ವರದಾನ ವಾಸುದೇವ! ಭವಾನ್ ಶ್ರೇಷ್ಠತಮಾ ಮತಃ,**
**ದಯಾಂ ಕುರು ದಯಾಸಿಂಧೋ! ಭಕ್ತಿಪರಿ ಭಯಪಹಾ!**

ಪ್ರಭು! ಓ ವೆಂಕಟೇಶ್ವರಾ! ಭಕ್ತರ ಪಾಪಗಳನ್ನು ಲೆಕ್ಕಿಸದೆ ಅನುಗ್ರಹಿಸುವ ಭಗವಂತ ನೀನು, ನನ್ನ ಪಾಪಗಳನ್ನು ತೊಡೆದುಹಾಕು ಸ್ವಾಮಿ! ವರದಾನದಲ್ಲಿ ನಿನಗಿಂತ ಶ್ರೇಷ್ಠರು ಯಾರಿದ್ದಾರೆ? ನನ್ನ ತಪ್ಪುಗಳನ್ನು ಕ್ಷಮಿಸಿ ನನ್ನಲ್ಲಿಯೂ ದಯೆತೋರುಸ್ವಾಮಿ ಕರುಣಿಸಿ ಕಾಪಾಡು ಸ್ವಾಮಿ! ಭಕ್ತರ ಭಯವನ್ನು

ಹೋಗಲಾಡಿಸುವ ಶ್ರೀನಿವಾಸ! ಎಂದು ಹಲವು ಬಗೆಯಲ್ಲಿ ಹೊಗಳುತ್ತಾ, ಕೀರ್ತಿಸುತ್ತಿದ್ದಾಗ ಶ್ರೀನಿವಾಸರ ಮಾತು ಕೇಳಿಸಿತು.

**"ಭಕ್ತಾಶ್ಚ ಬಹವಃ ಸನ್ತಿ ನಾಸ್ತಿ ತ್ವತ್ಸಾದೃಶೋ ಭುವಿ,**
**ಕರ್ಮಕೃತ್ವಾ ಸುಘೋರಸ್ತು ಬ್ರಹ್ಮಸ್ತ್ರೀ ಪುತ್ರಘಾತುಕಂ,**
**ಪ್ರಪಿತ್ಸಸಿ ಕಥಂ ಪಾರಂ ದುಃಖಾದ್ರಾಜಕುಮಾರಕ,**
**ತವಾಗ್ರಜೋಪಕಾರೇಣ ಜೀವಿತಸ್ತು ಮಯಾ ಕೃತಮ್"**.

ಓ ರಾಜ! ನನಗೆ ಅನೇಕ ಭಕ್ತರಿದ್ದಾರೆ. ಅವರಿಗೆ ಸರಿಸಾಟಿಯಾದ ಭಕ್ತರು ಈ ಪ್ರಪಂಚದಲ್ಲಿ ಇಲ್ಲವೆಂದೇ ಹೇಳಬಹುದು. ಆದಾಗ್ಯೂ! ನಿನ್ನಂತಹ ಘೋರಪಾಪ ಮಾಡಿದವರು ಯಾರೂ ಇಲ್ಲ. ನೀನು ಒಬ್ಬ ಬ್ರಾಹ್ಮಣ ಮಹಿಳೆಯನ್ನು ಅವಳ ಮಗನ ಜೊತೆಯಲ್ಲಿ ಕೊಂದು ಮಹಾಪಾಪವನ್ನು ಮಾಡಿದ್ದೀಯ. ಆದರೆ, ನಿನ್ನ ಅಣ್ಣನಾದ ಆಕಾಶರಾಜ ನನ್ನ ಪರಮಭಕ್ತ. ನನಗೆ ಅವನಲ್ಲಿರುವ ವಾತ್ಸಲ್ಯದಿಂದ ನಾನು ಅವರನ್ನು ಬದುಕಿಸಿ ಮಹದುಪಕಾರವನ್ನು ಮಾಡಿದೆನು. ಬೇರೆಯವರಾಗಿದ್ದರೆ ಇದನ್ನು ಮಾಡುತ್ತಿ ರಲಿಲ್ಲ. ಇದು ಸಾಧ್ಯವಿಲ್ಲ. ಸ್ವಾಮಿಶ್ರೀನಿವಾಸ ಅದೃಶ್ಯವಾಗಿ ಮಾತನಾಡುತ್ತಿರುವಾಗ ತೊಂಡಮನು ಶ್ರೀನಿವಾಸನ ಮಾತಿಗೆ ಅಡ್ಡಿಪಡಿಸಿದನು--

"ಇಲ್ಲ ಸ್ವಾಮಿ! ಲೋಕದಲ್ಲಿ ಯಾರೇ ಆಗಿರಲಿ ತಾನು ಇತರರಿಗೆ ಮಾಡಿದ ಮಹಾ ಉಪಕಾರವನ್ನು ಜಗತ್ತಿನಲ್ಲಿ ಯಾರೂ ಬಹಿರಂಗಪಡಿಸಿಲ್ಲ. ಹಾಗೆ ಮಾಡಲೂಬಾರದು. ನಿನ್ನ ಭಕ್ತರಲ್ಲಿ ನಾನೇ ಅಗ್ರಗಣ್ಯ. ಈ ಮೂರುಲೋಕದಲ್ಲಿ ನನ್ನಂತಹ ಶ್ರೇಷ್ಠ ಭಕ್ತನಿಲ್ಲ ಎಂದು ಹೇಳಬಹುದು. ಅದಕ್ಕೆ ದಯಾಮಯನಾದ ನೀನು ಅಗ್ರಗಣ್ಯ..ಅಂತೆಯೇ ಪರೋಪಕಾರಿ ಗಳಲ್ಲಿ ನೀನೇ ಅಗ್ರಗಣ್ಯ. ಈಗ ನಿನ್ನ ಕರುಣೆ ನನಗಾಗಿಯೇ" ಎಂದು ಅಹಂಕಾರಯುತ ವಾದ ಭಕ್ತಿಯಿಂದ ಮಾತನಾಡಿ ಯಥಾಪ್ರಕಾರ ಎಂದಿನಂತೆ ಚಿನ್ನದ ತುಳಸಿದಳಗಳಿಂದ ಆನಂದನಿಲಯನ ಪಾದಕಮಲಗಳನ್ನು ಪೂಜಿಸಿದನು. ತೊಂಡಮಾನನ ಅವಿವೇಕದಿಂದ ಕೂಡಿದ ದರ್ಪವನ್ನು ನಾಶಮಾಡಲು ಶ್ರೀನಿವಾಸ ನಿಶ್ಚಯಿಸಿದನು. ಇದು ಸ್ವಲ್ಪ ಸಮಯದವರೆಗೆ ನಡೆಯಿತು.

## (ಮಣ್ಣು ನನ್ನ ಪ್ರೀತಿ!) ಭೂಮಿಯಲ್ಲಿ ಬೆಳೆದ ತುಳಸಿ ನನಗೆ ಪ್ರೀತಿ

ಒಂದು ದಿನ ಆನಂದನಿಲಯದಲ್ಲಿ, ಚಕ್ರವರ್ತಿ ತೊಂಡಮಾನನು ಚಿನ್ನದ ತುಳಸಿ ದಳಗಳಿಂದ ಸ್ವಾಮಿಯ ದಿವ್ಯವಾದ ಪಾದಪದ್ಮಗಳಿಗೆ ಸಹಸ್ರ ನಾಮಾರ್ಚನೆಯನ್ನು ಮಾಡುತ್ತಿದ್ದನು. ಪ್ರತಿಯೊಂದು ಚಿನ್ನದ ತುಳಸಿ ದಳವನ್ನು

ಭಗವಂತನ ಪಾದದಲ್ಲಿ ಅರ್ಪಿಸಲಾಗುತ್ತಿತ್ತು. ಏತನ್ಮಧ್ಯೆ, ಏನು ವಿಚಿತ್ರ! ತೊಂಡಮನು ಅರ್ಪಿಸಿದ ಚಿನ್ನದ ತುಳಸಿ ದಳಗಳು ವಿಚಿತ್ರವಾಗಿ ಪಾದವನ್ನು ಸೇರದೆ ಪಕಕ್ಕೆ ಸರಿದವು, ಮತ್ತು ವಿಚಿತ್ರವಾಗಿ, ಎಲ್ಲಿಂದಲೋ, ಅತ್ಯಂತ ಮನೋಹರವಾದ, ಸುಂದರವಾದ ಕಪ್ಪು ಮಣ್ಣಿನ ತುಳಸಿ ದಳಗಳು ಪೂಜಿಸಲ್ಪಟ್ಟಂತೆ ಬಂದು ಪಾದಗಳನ್ನು ಸೇರಿಕೊಂಡವು. ಇದನ್ನು ನೋಡಿದ ತೊಂಡಮಾನನು ಭಯಭೀತನಾಗಿ ಶ್ರೀನಿವಾಸನಿಗೆ ನಾನು ಮಾಡಿದ ಘೋರ ಪಾಪಕ್ಕೆ ಇನ್ನೂ ದಯೆತೋರಿಲ್ಲವೆಂದು ಕೊರಗುತ್ತ ಹೀಗೆ ಪ್ರಾರ್ಥಿಸಿದನು. "ಸ್ವಾಮಿ! ಸ್ವಾಮೀ! ಶ್ರೀನಿವಾಸ ಪ್ರಭು! ನಾನು ಘೋರ ಪಾಪವನ್ನು ಮಾಡಿದ್ದೇನೆ. ಸರಿ! ನೀನು ಅನಾಥ ರಕ್ಷಕ. ಪಾಪಗಳನ್ನು ಹೋಗಲಾಡಿಸುವ ವೆಂಕಟಪತಿ, ಪಾಪನಾಶಕ! ಮತ್ತು ನಾನು ಅರ್ಪಿಸಿದ ಚಿನ್ನದ ತುಳಸಿದಳಗಳನ್ನು ಬದಿಗಿಟ್ಟು ಕೇವಲ ಮಣ್ಣಿನಲ್ಲಿ ಬೆಳೆದ ತುಳಸೀ ದಳವನ್ನು ಸ್ವೀಕರಿಸುತ್ತಿದ್ದೀಯ! ಪ್ರಭು! ಈಗಲಾದರೂ ನನ್ನ ತಪ್ಪನ್ನು ಮನ್ನಿಸಿ ಕರುಣಿಸಿ ಕಾಪಾಡು ತಂದೆ! ಅನ್ಯಥಾ ಶರಣಂ ನಾಸ್ತಿ! ತ್ವಮೇವ ಶರಣಂ ಮಮ!" ಎಂದು ಸಾಷ್ಟಾಂಗ ದಂಡ ಪ್ರಣಾಮ ಮಾಡಿದನು. ಅಷ್ಟರಲ್ಲಿ ಶ್ರೀನಿವಾಸನು "ರಾಜ! ನೀನು ನನ್ನ ಹತ್ತಿರವಿದ್ದು ನನ್ನನ್ನು ಅರ್ಥಮಾಡಿಕೊಳ್ಳಲಿಲ್ಲ. ನನಗೆ ಅಹಂಕಾರದಿಂದ ಕೂಡಿದ ಭಕ್ತಿ ಬೇಡ. ವಿನಯಪೂರಿತ ನಿರಾಡಂಬರ ಭಕ್ತಿಯನ್ನು ಮಾತ್ರ ನಾನು ಸ್ವೀಕರಿಸುತ್ತೇನೆ. ಅವು ಮಣ್ಣಿನಿಂದ ಹುಟ್ಟಿದ ತುಳಸಿ ದಳಗಳು ನಿಜ, ಆದರೆ ಒಬ್ಬ ನಿರಾಡಂಬರ ಬಡ ಭಕ್ತನೊಬ್ಬ ಅರ್ಪಿಸಿದನು. ಆ ಮಣ್ಣಿನ ತುಳಸಿ ದಳಗಳನ್ನು ನಾನು ತುಂಬಾ ಪ್ರೀತಿಯಿಂದ ಸ್ವೀಕರಿಸುತ್ತಿದ್ದೀನಿ.. ಆ ಭಕ್ತ ಯಾರು! ಅವನ ಸೇವೆ ಏನು! ಅವನು ಮಾಡುವ ನಿರಾಡಂಬರ ಪೂಜೆ ಏನು ಎಂದು ನಾನು ನಿನಗೆ ಹೇಳುತ್ತೇನೆ, ಸಾವಧಾನವಾಗಿ, ಗಮನವಿಟ್ಟು ಕೇಳಿ ಮತ್ತು ವಿನಮ್ರ ಭಕ್ತಿಯಿಂದ ಆಚರಿಸು! ಆಗ ಮಾತ್ರ ನೀನು ಧನ್ಯನಾಗುತ್ತೀಯ," ಎಂದು ಹೇಳಿದ ಶ್ರೀನಿವಾಸನನ್ನು ಸೂತಮಹರ್ಷಿಗಳು ಹೀಗೆ ಪ್ರಾರ್ಥಿಸಿದರು.

**"ವೆಂಕಟೇಶ! ಚರಣೌ ತವ ವಂದ್ಯ ಸರ್ವತೀರ್ಥ ಶರಣೌ ಶರಣೌ ಮೇ,**
**ಮಾವಿಧೀರ ಶಿವವಿಶ ಫಣಿಶೆನ್ದ್ರಾರ್ಕ ನಾಮಹುತಭುಜೇ ಮುಖವಂದ್ಯ,**
**ಶ್ರೀನಿವಾಸ ಚರಣೌ ತವ ವಂದೇ ಲೋಕ ಪಾವನ ಸುಕುಂಕುಮವರ್ಣ,**
**ಶ್ರೀಪ್ರದೇಕಿಲ ಸುರರ್ಷಿ ನರಾಣಾಂ ಶ್ರೀಬುಗಾದಿ ನಿಗಮಾಗಮವೇದ್ಯ".**

ಓ ವೆಂಕಟೇಶ! ಪರಮ ಪುಣ್ಯಪ್ರದವಾದ ಗಂಗಾನದಿ, ಇರುವಂತಹ ವೆಂಕಟಾಚಲ ಪರ್ವತದಲ್ಲಿ ವಿಜೃಂಭಿಸುತ್ತಿರುವ ನೀನು ಶ್ರೀಸ್ವಾಮಿಪುಷ್ಕರಿಣಿ ಮೊದಲಾದವು, ಸಕಲ ತೀರ್ಥಗಳಲ್ಲಿ, ನೀನು ಸಹಸ್ರದಳದ ವೇದಪದ್ಮದಲ್ಲಿ ಹುಟ್ಟಿ

ನೆಲೆಸಿದ್ದಿಯ. ಅಂದಮೇಲೆ ಪವಿತ್ರ ಗಂಗೆಯ ಎಲ್ಲ ಪುಣ್ಯಕ್ಷೇತ್ರಗಳ ಜನ್ಮಸ್ಥಳವೂ ನಿನ್ನ ಪಾದಕಮಲಗಳಲ್ಲವೇ? ಭಕ್ತರ ರಕ್ಷಣೆಯಲ್ಲಿ ಸಿದ್ಧಹಸ್ತಳಾಗಿರುವ ಶ್ರೀಮಹಾಲಕ್ಷ್ಮೀದೇವಿ! ಬ್ರಹ್ಮದೇವ, ವಾಯುದೇವ, ಪರಮೇಶ್ವರ, ಗರುತ್ಮಂತ, ಆದಿಶೇಷ, ಇಂದ್ರ, ಸೂರ್ಯ, ಚಂದ್ರ, ಅಗ್ನಿ ಮೊದಲಾದ ಎಲ್ಲ ದೇವತೆಗಳಿಂದ ಸ್ತುತಿಸಲ್ಪಟ್ಟು ಪೂಜಿಸಲ್ಪಡುತ್ತಿರುವ ನಿನ್ನ ದಿವ್ಯ ಪಾದಕಮಲಗಳಿಗೆ ನಾನು ನಮಸ್ಕರಿಸುತ್ತೇನೆ. ಅಷ್ಟೇ ಅಲ್ಲ. ಓ ಶ್ರೀನಿವಾಸ! ಸಕಲ ಸತ್ಪುರುಷರಿಗೂ ಜ್ಞಾನವನ್ನು ದಯಪಾಲಿಸುವ ನಿನ್ನ ದಿವ್ಯ ಮಂಗಳ ಪಾದದ್ವಯಗಳು ಯಾವಾಗಲು ಕುಂಕುಮ ಬಣ್ಣದಿಂದ ಬೆಳಗುತ್ತಿರುತ್ತದೆ. "ಸಮಸ್ತ ದೇವತೆಗಳಿಗೆ, ಋಷಿಗಳಿಗೆ, ಅಂಬರೀಷಾದಿ ಭಕ್ತರಿಗೆ, ಚಕ್ರವರ್ತಿಗಳಿಗೆ ಮತ್ತು ಇತರ ಮಾನವರಿಗೆ ತತ್ವಜ್ಞಾನವನ್ನು ಕಲಿಸಿದ ಶುಭಪ್ರದವಾದ ಋಗ್ವೇದ ಆದಿಯಾಗಿ ನಿಗಮಾಗಮಗಳು, ಧರ್ಮಾಧರ್ಮಗಳು, ಭಾಗವತತತ್ವಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವಂತೆ ತಿಳಿಸಿದ ನಿನ್ನ ದಿವ್ಯ ಚರಣಗಳಿಗೆ ನಾನು ನಮಸ್ಕರಿಸುತ್ತೇನೆ ಎಂದೆನ್ನುತ್ತ ಸೂತಮಹರ್ಷಿಗಳು ಶ್ರೀವೇಂಕಟೇಶ್ವರನನ್ನು ತೋರಿಸುತ್ತ ಅವನನ್ನು ಆಶ್ರಯಿಸಿ ಭಕ್ತಿಯಿಂದ ಶರಣಾಗಿ ಎಂದು ಸಂದೇಶವನ್ನು ಕೊಡುತ್ತಿರುವ ದಿವ್ಯಪಾದವನ್ನು ಅರೆಮುಚ್ಚಿದ ಕಣ್ಣುಗಳಿಂದ ಧ್ಯಾನಿಸುತ್ತ, ನಂತರ ತಮ್ಮ ದಿವ್ಯಾಮೃತವನ್ನು ಮುಂದುವರಿಸಿದರು.

## ಭಕ್ತ ಕುಂಬಾರ ಕುಮ್ಮರದಾಸ

"ಓ ತೊಂಡಮಾನ ಚಕ್ರವರ್ತಿ! ನಾನು ಅನೇಕ ಯುಗಗಳಲ್ಲಿ ಅನೇಕ ಆತ್ಮೀಯ ಭಕ್ತರನ್ನು ಹೊಂದಿದ್ದೇನೆ. ವಿಶೇಷವಾಗಿ ಈ ಅವಧಿಯಲ್ಲಿ, ಇಂದು ಭೀಮನೆಂಬ ಕುಂಬಾರನು ನನಗೆ ತುಂಬಾ ಆಪ್ತನಾದವನು, ಹತ್ತಿರವಾಗಿದ್ದಾನೆ, ಅವನು ವಿನಮ್ರ ಮತ್ತು ನಿರಾಡಂಬರ ಭಕ್ತನೆಂದು ಪ್ರಸಿದ್ಧನಾಗಿದ್ದಾನೆ. ಅವನೊಬ್ಬ ಬೆಂದ ಮಡಿಕೆ. ಅವನು ಶೇಷಾಚಲ ಕ್ಷೇತ್ರದ ಉತ್ತರದ ಒಂದು ಯೋಜನಾ ಹಳ್ಳಿಯಲ್ಲಿ ವಾಸಿಸುತ್ತಾನೆ. ಈ ಕ್ಷೇತ್ರದಲ್ಲಿ ಅವಶ್ಯಕವಾದ ಮಣ್ಣಿನ ಮಡಕೆಗಳನ್ನು ಮಾಡುವುದೇ ಇವನ ಕೆಲಸ. ನಿರಂತರವಾಗಿ ಜೇಡಿಮಣ್ಣನ್ನು ತಂದು, ಅದನ್ನು ಚೆನ್ನಾಗಿ ನೀರಿನಲ್ಲಿ ಕಲಿಸಿ, ಹದಮಾಡಿ ಮಡಿಕೆಗೆ ಬೇಕಾದ ಮಣ್ಣಿನ ಉಂಡೆಗಳನ್ನು ಮಾಡಿ ಕುಂಬಾರನು ಚಕ್ರದ ಮೇಲೆ ಇಟ್ಟು ಮಡಿಕೆಗಳನ್ನು ತಯಾರಿಸುವುದು ಅದೂ ನನ್ನ ನಿವೇದನೆಗೆ ಎಷ್ಟುಬೇಕೋ ಅಷ್ಟು ಮಡಿಕೆಗಳನ್ನು ಮಾಡುವುದು ಇವನ ನಿತ್ಯದ ಕೆಲಸ. ಬೆಳಗ್ಗೆಯಿಂದ ರಾತ್ರಿಯವರೆಗೂ ಏನು ಕೆಲಸ ಮಾಡುತ್ತಿದ್ದರೂ ಶ್ರೀನಿವಾಸನದೇ ಧ್ಯಾನ, ಎಲ್ಲವನ್ನು ಆ ಶ್ರೀನಿವಾಸನೇ ಮಾಡಿಸುತ್ತಾನೆ ಎಂಬ ಧೃಡವಾದ ನಂಬಿಕೆ. ಅವನ ಗಮನ ಏನಿದ್ದರೂ ತನಗೆ ಬೇಕಾದ ಪಾತ್ರೆಗಳನ್ನು ಮಾಡುವುದರತ್ತ! ಬೆಳಿಗ್ಗೆ

ಎದ್ದು ತನ್ನ ನಿತ್ಯ ವಿಧಿಗಳನ್ನು ಮುಗಿಸಿ, ಮಡಿಕೆಗಳನ್ನು ತಯಾರು ಮಾಡುವ ಮೊದಲು ತನ್ನ ಆರಾಧ್ಯದೈವನನ್ನು ಧ್ಯಾನಿಸುತ್ತ ತನ್ನ ಎರಡು ಕೈಗಳನ್ನು ಜೋಡಿಸಿ "ಸ್ವಾಮಿ! ಏಡುಕೊಂಡಲಸ್ವಾಮಿ! ನಾನು ನಿನ್ನ ಕೆಲಸದಲ್ಲಿ ತೊಡಗಿದ್ದೇನೆ. ನೀನೇ ಇದನ್ನು ಮಾಡಿಸು ಸ್ವಾಮಿ!" ಎಂದು ನಮಸ್ಕರಿಸಿ ತನ್ನ ಕೆಲಸದಲ್ಲಿ ತೊಡಗಿಕೊಳ್ಳುವನು.

ಅವನು ಮಾಡುವ ಪ್ರತಿ ಕಾರ್ಯದಲ್ಲಿಯೂ ಭಗವಂತ ಇದ್ದಾನೆ ಎಂದು ನೆನೆದು ತನ್ಮಯನಾಗುತ್ತಾನೆ. ಆ ಅನುಭೂತಿಯಲ್ಲಿ, ತನ್ಮಯತೆಯಲ್ಲಿ, ಆ ಆತ್ಮೀಯತೆಯಲ್ಲಿ ಕಾಲವನ್ನು ಮರೆಯುತ್ತಿದ್ದರು. ಹೀಗೆ ಹಲವು ವರ್ಷಗಳು ಕಳೆದಿವೆ. ಆದರೆ ನಿತ್ಯವೂ ಭಗವಂತನನ್ನು ಹೀಗೆ ಪ್ರಾರ್ಥಿಸುತ್ತಿದ್ದನು. ಪ್ರಭು! ನಿಮ್ಮ ಅಡಿಗೆಗೆ, ಭಕ್ಷಗಳನ್ನು ತಯಾರು ಮಾಡಲು ಬೇಕಾದಷ್ಟು ಮಡಕೆಗಳನ್ನು ಮಾಡಿ ನಾಳೆ ನಿಮ್ಮ ಬೆಟ್ಟಕ್ಕೆ ಬಂದು ನಿನ್ನ ದರ್ಶನ ಮಾಡುತ್ತೇನೆ ಎಂದು ಪ್ರಾರ್ಥಿಸುತ್ತಿದ್ದನು. ಆದರೆ ಕೆಲವೊಮ್ಮೆ ಅವನು ತಯಾರಿಸಿದ ಮಡಕೆಗಳು ಯಾವುದೇ ಅಡಿಗೆ ಮಾಡಲು ತಕ್ಕುದ್ದಾಗಿರಲಿಲ್ಲ. ಮರುದಿನ ಹೊಸ ಮಡಿಕೆಗಳನ್ನು ಮಾಡಬೇಕಿತ್ತು. ಆದುದರಿಂದ ಬೆಟ್ಟಕ್ಕೆ ಹೋಗಬೇಕೆಂಬ ಅವನ ದಿನನಿತ್ಯದ ಆಸೆಯು ತೀರದ ಆಸೆಯಾಗಿಯೇ ಉಳಿಯಿತು. ಆದರೆ ಅವನಿಗೆ ಸಮಾಧಾನವಾಗಲಿಲ್ಲ, ನಾನು ಈ ಕೆಲಸ ಬಿಟ್ಟು ಬೆಟ್ಟಕ್ಕೆ ಹೋದರೆ ಹೇಗೆ! ಮಡಕೆಗಳನ್ನು ಮಾಡುವವರು ಯಾರು? ಮಡಕೆಗಳು ಸಿದ್ಧವಾಗದಿದ್ದರೆ, ಭಗವಂತನಿಗೆ ಭಕ್ಷ್ಯಗಳು ಹೇಗೆ ಸಿದ್ಧವಾಗುತ್ತವೆ? ಅವನು ಇದನ್ನು ಹೇಗೆ ಸಹಿಸುತ್ತಾನೆ ಎಂದೆಲ್ಲ ಯೋಚಿಸುತ್ತ, ಮತ್ತೊಮ್ಮೆ ಸ್ವಾಮಿಯ ದರ್ಶನಕ್ಕೆ ಹೋಗಬಹುದು. ತಡಮಾಡದೆ ಮೊದಲು ಮಡಿಕೆಗಳನ್ನು ಮಾಡಬೇಕು! ತನ್ನ ಉಸಿರು ಉಸಿರಿನಲ್ಲೂ ನಿರಂತರವಾಗಿ ಸ್ವಾಮಿಯನ್ನು ಜಪಿಸುತ್ತ ಮಣ್ಣಿನ ಮಡಕೆಗಳ ತಯಾರಿಕೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಿದ್ದನು. ಹೀಗಾಗಿ ಶ್ರೀವಾರಿಯ ದೇವಸ್ಥಾನಕ್ಕೆ ಬೇಕಾದ ಮಡಕೆಗಳನ್ನು ಮಾಡುವುದರಲ್ಲಿ ಯಾವತ್ತೂ ಬೇಸರ ಪಡದೆ, ಬಿಡುವಿಲ್ಲದಿದ್ದರೂ ಶ್ರದ್ಧಾ ಭಕ್ತಿಯಿಂದ ಮಣ್ಣಿನ ಮಡಕೆಗಳನ್ನು ಮಾಡುತ್ತಿದ್ದನು.

ತಿರುಮಲ ದೇವರ ನೇರ ದರ್ಶನವಿಲ್ಲದಿದ್ದರೂ ಕುಮ್ಮರದಾಸನು ಬೇಸರಿಸದೆ, ಕಾಲವ್ಯರ್ಥ ಮಾಡದೆ ಮರದ ದಿಮ್ಮಿಯಲ್ಲಿ ಚಿಕ್ಕ ವೆಂಕಟೇಶ್ವರನ ಪ್ರತಿಮೆಯನ್ನು ತಾನು ಕೆಲಸ ಮಾಡುತ್ತಿದ್ದ ಜಾಗದಲ್ಲಿಯೆ ಚಿಕ್ಕ ಕಟ್ಟೆಯಲ್ಲಿ ಪ್ರತಿಷ್ಠಾಪಿಸಿದನು. . ಆ ಕುಂಬಾರನ ಆ ಮರದ ಆಕೃತಿಯೇ ಆ ತಿರುಮಲ ಶ್ರೀನಿವಾಸ. ತಿರುಮಲದ ಅಧಿಪತಿಯು ಸಾಕ್ಷಾತ್ ಇಲ್ಲಿ ಈ ಮರದ ಆಕೃತಿಯ ರೂಪದಲ್ಲಿ ಕಾಣಿಸಿಕೊಂಡಿದ್ದಾನೆ ಎಂದು ಮನಸಾ ವಾಚಾ ಭಾವಿಸಿದ್ದಲ್ಲದೆ, ಕರ್ಮಣನೂ ಆ ಭಗವಂತನನ್ನು

ಪೂಜಿಸುತ್ತಾನೆ. ಪ್ರತಿದಿನ ಕೆಲಸ ಆರಂಭಿಸುವ ಮುನ್ನ ಕುಂಬಾರ ಭೀಮಣ್ಣ ಆ ಪ್ರತಿಮೆಗೆ ನಮಿಸುತ್ತಿದ್ದನು. ಕೊನೆಗೆ ಕೆಲಸ ಮುಗಿಸಿ, ಕೈಯ್ಯಿಗೆ ಅಂಟಿಕೊಂಡಿದ್ದ ಜಿಗುಟಾದ ಮಣ್ಣಿನಿಂದ ನಾಲ್ಕೈದು ಮಣ್ಣಿನ ಹೂಗಳನ್ನು ಮಾಡಿ ಶ್ರೀನಿವಾಸನ ಮರದ ಆಕೃತಿಯ ಪಾದಗಳ ಮೇಲೆ ಈ ಮಣ್ಣಿನ ಹೂವುಗಳನ್ನು ಅರ್ಪಿಸಿ "ಸ್ವಾಮಿ! ನನ್ನ ಹತ್ತಿರ ಇರುವುದು ಇದೆ. ನನ್ನ ಬಳಿ ಇನ್ನೇನೂ ಇಲ್ಲ. ಆದುದರಿಂದ ನಾನು ನಿನ್ನ ಪಾದಗಳ ಮೇಲೆ ಇಡುತ್ತಿರುವ ಹೂವುಗಳನ್ನು ಮಾಣಿಕ್ಯಕ್ಕಿಂತ ಹೆಚ್ಚೆಂದು ತಿಳಿದು ಸ್ವೀಕರಿಸಿ ನನಗೆ ಸಂತೋಷವನ್ನು ಕೊಡು ಪ್ರಭು! ಎಂದು ಆನಂದ ಭಾಷ್ಪ ಸುರಿಸುತ್ತ ಪ್ರಾರ್ಥಿಸುತ್ತಿದ್ದನು. ಅವನ ದಿನನಿತ್ಯದ ಕುಲಕಸುಬು ಹೀಗೆ ಮುಂದುವರೆಯಿತು. ಶ್ರೀನಿವಾಸನು ಆ ಕುಂಬಾರ ಭೀಮನು ಅರ್ಪಿಸುವ ಮಣ್ಣಿನ ಮಡಕೆಗಳಲ್ಲಿನ ಭಕ್ಷ್ಯ ಪಾಯಸಾದಿಗಳನ್ನು ಸೇವಿಸುತ್ತಿದ್ದನು. ಅವನು ಅರ್ಪಿಸುವ ಮಣ್ಣಿನ ಹೂವುಗಳನ್ನು ಬಹಳ ಪ್ರೀತಿಯಿಂದ ಸ್ವೀಕರಿಸುತ್ತಿದ್ದನು. ಆದುದರಿಂದ ಸ್ವಾಮಿಯು ಆ ಮಣ್ಣಿನ ಪುಷ್ಪಗಳನ್ನು ಆನಂದ ನಿಲಯದಲ್ಲಿ ತೊಂಡಮನುವಿಗೆ ತೋರಿಸಿದನು.

ಶ್ರೀನಿವಾಸನ ಮೂಲಕ ಕುಂಬಾರ ಭೀಮನ ಹಿರಿಮೆಯನ್ನು ಕೇಳಿದ ತೊಂಡಮಾನನು ಭಕ್ತನನ್ನು ಭೇಟಿ ಮಾಡಲು ಕಾಲ್ನಡಿಗೆಯಲ್ಲಿ ಹೊರಟನು. ರಾಜನ ಪ್ರಯಾಣ ಸಮಯದಲ್ಲಿ ಸೇವಿಸಲು ಬೇಕಾದ ನೀರು, ಫಲಾಹಾರ ಎಲ್ಲವನ್ನು ವರ್ಜಿಸಿ ಸಂಗಡಿಗರಿಲ್ಲದೆ ನಡೆದು ದಣಿದಿದ್ದ ತೊಂಡಮಾನನು ಭೀಮನ ಮನೆಗೆ ಬಂದು 'ಪರಮಭಕ್ತನಾದ ಭೀಮನಿಗೆ ನಮಸ್ಕಾರ' ಎಂದು ಹೇಳುತ್ತಲೇ ಮೂರ್ಛೆ ಹೋದನು. ಅಯ್ಯೋ.. ಯಾರೋ ರಾಜನು ಬಿದ್ದುಬಿಟ್ಟಿದ್ದಾನೆ! ಅವನು ಈ ದೀನನ ಮನೆಗೆ ಏಕೆ ಬಂದಿದ್ದಾನೆ? ಸಂದೇಹ ಪಡುತ್ತ ಚಿಂತಿಸುತ್ತಿದ್ದನು. ಹೀಗಿರುವಾಗ ಮೂರ್ಛೆಯಿಂದ ಎದ್ದ ತೊಂಡಮಾನನು ನೋಡು ನೋಡುತ್ತಿರುವಂತೆಯೇ ಸ್ವಾಮಿ ವೆಂಕಟೇಶ ಪ್ರತ್ಯಕ್ಷನಾದನು.

ಕುಂಬಾರನು ತನ್ನ ಕಣ್ಣೆದುರು ಪ್ರತ್ಯಕ್ಷ ದರ್ಶನ ಕೊಟ್ಟ ಭಗವಂತನನ್ನು ನೋಡಿ ಸಂತೋಷಪಟ್ಟನು ಮತ್ತು ಅವನನ್ನು ವಿಧ ವಿಧವಾದ ತನ್ನ ಪಾಮರ ಭಾಷೆಯಲ್ಲಿ ಸ್ತುತಿಸಿ ಮನಸಾರೆ ಕೊಂಡಾಡಿದನು.

ಪ್ರಭು! ಈ ಕುಂಬಾರನ ಮನೆಗೆ ಬಂದಿದ್ದೀಯಾ! ಎಂದೆನ್ನುತ್ತ, ಓ ಸ್ವಾಮೀ! ನನಗಾಗಿ ಆಯಾಸಪಟ್ಟು ನೀನು ಏಳುಗಿರಿಯನ್ನು ಇಳಿದು ಬಂದಿದ್ದೀಯ? ನಮ್ಮ ಮನೆಗೆ ಬಂದಿರುವ ನಿನ್ನನ್ನು ಹಾಡಿ ಹೊಗಳಲು ಮಾತುಗಳೇ ಬರುತ್ತಿಲ್ಲ. ಸ್ವಾಮಿ ನಿನ್ನನ್ನು ನೋಡಿ ಮೂಕನಾಗಿದ್ದೇನೆ. ಆತಂಕದಿಂದ ನನ್ನ ಬಾಯಿಂದ ಮಾತುಗಳು ಸರಿಯಾಗಿ ಬರುವುದಿಲ್ಲ ಸ್ವಾಮೀ! ಬಾಯಿ ತೊದಲುತ್ತಿದೆ. ಮಾತನಾಡುತ್ತಾನೆ. ಶಬರಿ,

ವಿದುರ, ಗಜೇಂದ್ರ, ವಿಭೀಷಣರ ಭಕ್ತಿಯೂ ನನಗಿಲ್ಲ! ನನಗೆ ಪೂಜೆಮಾಡುವುದು ತಿಳಿದಿಲ್ಲ. ಮತ್ತೆ ನೀನು ದೀನನಾದ, ಕಡುಬಡವನಾದ ಈ ಕುಂಬಾರನ ಮನೆಗೆ ಬಂದಿದ್ದೀಯ. ಸ್ವಾಮಿ! ನೀನು ಎಲ್ಲ ಲೋಕಗಳಿಗೂ ಅಧಿಪತಿ. ಅದಕ್ಕಿಂತ ಹೆಚ್ಚಾಗಿ, ನಿನಗೆ ತಿನ್ನಲು ಏನಾದರೂ ಕೊಡೋಣ ಎಂದರೆ ನನ್ನಲ್ಲಿ ನೀನು ತಿನ್ನುವಂತಹ ರುಚಿ ರುಚಿಯಾದ ತಿನಿಸು ಏನೂಇಲ್ಲ. ಬಡವನ ಮನೆಯಲ್ಲಿ ಒಳ್ಳೆಯ ರುಚಿಕರವಾದ ಹಿಟ್ಟಿನ ಖಾದ್ಯಗಳು ಏನೂ ಇಲ್ಲ! ಎಂತಹ ಹೀನಾಯ ಸ್ಥಿತಿ ನನ್ನದು. ಬಾ, ಬಾ, ಬಾ, ನನಗಾಗಿ ಬಾ, ಇಂದು ಶಿವರಾತ್ರಿ ಎಂದು ತಿಳಿದು ಬಾ ಬಾ ಸ್ವಾಮಿ, ನನಗಾಗಿ ಬಾ ತಂದೆ! ಎಂದು ಪ್ರೀತಿಯಿಂದ, ಭಕ್ತಿಭಾವದಿಂದ ಕುಂಬಾರನು ತನ್ನ ಎರಡು ತೋಳುಗಳನ್ನು ಚಾಚಿ ಸಂಭ್ರಮದಿಂದ ಬಿಗಿದಪ್ಪಿದನು. ವೆಂಕಟೇಶ್ವರನು ಕುಂಬಾರನನ್ನು ಸಾಂತ್ವನಗೊಳಿಸಿ ಹೀಗೆ ಹೇಳಿದನು.

"ಓಯ್! ತಮ್ಮಾ! ನಾನು ಕರ್ಮ ಮತ್ತು ಕಠೋರ ಜಪ ತಪಸ್ಸುಗಳಿಗಿಂತ ಪ್ರೀತಿಯಿಂದ ಕೂಡಿದ ಭಕ್ತಿ ನನಗೆ ಪ್ರಿಯ.! ನೀನು ನನ್ನಲ್ಲಿ ಇಟ್ಟಿರುವ ಪ್ರೀತಿ ಪ್ರೇಮ, ನನ್ನ ದರ್ಶನಕ್ಕಾಗಿ ಹಂಬಲಿಸುತ್ತಿರುವ ನೋವಿನಿಂದ ಕೂಡಿದ ನಿನ್ನ ಭಕ್ತಿಯ ಕರೆ ಅದರಿಂದ ನನಗೆ ತೃಪ್ತನಾಗಿದ್ದೇನೆ, ಸಂತೋಷ, ಆನಂದವನ್ನು ಉಂಟುಮಾಡಿದೆ. ನನಗೆ ಯಾವುದೇ ಭಕ್ಷ್ಯ ಭೋಜನದ ಅಗತ್ಯವಿಲ್ಲ. ನಿನ್ನ ಮನೆಯಲ್ಲಿ ಏನಿದೆಯೋ ಅದೇ ಸಾಕು,ನೀವು ಏನು ತಿನ್ನುತ್ತಿರೋ ಅದನ್ನೆ ನನಗೆ ಕೊಡು, ಅದು ನನಗೆ ಸಹಸ್ರ, " ಮೊದಲು ನನಗೆ ಸ್ವಲ್ಪ ಅನ್ನ ಕೊಡು, ನನಗೆ ಹಸಿವಾಗಿದೆ" ಎಂದು ವೆಂಕಟೇಶ್ವರ ಕುಂಬಾರ ಭಕ್ತನನ್ನು ಮತ್ತೆ ಮತ್ತೆ ಬೇಡಿದನು. ಕೂಡಲೆ ಕುಂಬಾರನ ಹೆಂಡತಿ ತಮಾಲಿನಿ ಒಂದು ಮಣ್ಣಿನ ತಟ್ಟೆಯಲ್ಲಿ ಮುದ್ದೆಯನ್ನು ಸ್ವಾಮಿಗೆ ತಂದುಕೊಡುತ್ತ "ಸ್ವಾಮಿ! ನಾವು ಆಚಾರ ವಿಚಾರ ತಿಳಿಯದ ಕುಂಬಾರರು. ಎಲ್ಲರನ್ನು ರಕ್ಷಿಸಿ ಕಾಪಾಡುವ ದೇವರು ನೀನು. ಇದನ್ನೇ ಪಂಚಭಕ್ಷ ಪರಮಾನ್ನ ಎಂದು ನಾನು ಕೊಟ್ಟಿರುವುದನ್ನು ಸ್ವೀಕರಿಸು ಎಂದು ಭಯಭಕ್ತಿಯಿಂದ ಪ್ರಾರ್ಥಿಸಿದಳು.. ಆ ದಂಪತಿಗಳ ಮೇಲಿನ ಪ್ರೀತಿಯಿಂದ ಮಣ್ಣಿನ ಪಾತ್ರೆಯಲ್ಲಿಯೇ ಅವರು ಕೊಟ್ಟಿದ್ದನು ತಿಂದನು. ದಂಪತಿಗಳು ತಮ್ಮ ಯಾವ ಜನ್ಮದ ಪುಣ್ಯವೋ ನಮ್ಮ ಜನ್ಮ ಪಾವನವಾಯಿತು ಎಂದು ಭಾವಿಸಿ ಭಗವಂತನ ಪಾದಗಳಿಗೆ ಬಿದ್ದು ಅಪಾರ ಸಂತೋಷ ದಿಂದ ಸಾಷ್ಟಾಂಗ ನಮಸ್ಕಾರ ಮಾಡಿದರು. ಅಷ್ಟೇ! ಸ್ವಾಮಿಯ ದಿವ್ಯ ಪಾದಸ್ಪರ್ಶದಿಂದ ಕುಂಬಾರ ದಂಪತಿಗಳು ತಮ್ಮ ಭೌತಿಕ ಶರೀರವನ್ನು ಕಳೆದುಕೊಂಡು, ದಿವ್ಯಶರೀರವನ್ನು ಹೊಂದಿದರು. ಈ ಅದ್ಭುತವಾದ ಘಟನೆ, ಸ್ವಾಮಿಯ ಲೀಲೆಯನ್ನು ಕಂಡು ಆಶ್ಚರ್ಯಚಕಿತರಾದ ದೇವತೆಗಳು ಪುಷ್ಪವೃಷ್ಟಿ ಹರಿಸಿದರು. ದುಂದುಭಿ ಮೊಳಗಲು ದೇವಲೋಕದ ಒಂದು ವಿಮಾನ

ಪ್ರತ್ಯಕ್ಷವಾಯಿತು. ಶ್ರೀ ವೆಂಕಟೇಶಸ್ವಾಮಿಯ ಆಜ್ಞೆಯಂತೆ ದಿವ್ಯಶರೀರದಿಂದ ವಿರಾಜಿಸುತ್ತಿದ್ದ ಕುಂಬಾರ ದಂಪತಿಗಳು ಆ ವಿಮಾನದಲ್ಲಿ ಕುಳಿತು ವೈಕುಂಠಕ್ಕೆ ಹೊರಟರು. ಸ್ವಾಮಿ ಶ್ರೀನಿವಾಸನು ಅದೃಶ್ಯವಾದನು.

ಇದನ್ನೆಲ್ಲ ಕಣ್ಣೆದುರು ನೋಡಿದ ತೊಂಡಮಾನನು ತನ್ನ ಕಣ್ಣೆದುರೇ ನಡೆದ ಈ ಅದ್ಭುತ ಘಟನೆಗೆ ಬೆರಗಾದ, ಎಷ್ಟು ಭಾಗ್ಯವಂತ ಈ ಭೀಮ! ಈ ಪರಮ ಭಕ್ತ ದಂಪತಿಗಳ ವೈಕುಂಠ ಸಂಚಾರವನ್ನು ನೋಡಿದ ನಾನೂ ಭಾಗ್ಯವಂತನೆ ಎಂದು ಭಾವಿಸಿದ, ಹಾಗೆಯೇ ತನ್ನಲ್ಲಿರುವ ಅಹಂಕಾರ ತುಂಬಿದ ಭಕ್ತಿಗಾಗಿ ಪಶ್ಚಾತ್ತಾಪಪಟ್ಟನು ಎಂದು ಸೂತರು ವಿವರಿಸುತ್ತಿದಾಗ, ಶೌನಕಾದಿಗಳು ಅದ್ಭುತ! ಪರಮಾದ್ಭುತ! ಶ್ರೀವೆಂಕಟೇಶನ ದಿವ್ಯಚರಿತೆ! ಮುಂದಿನ ಕಥೆಯನ್ನೂ ವಿವರಿಸಿ ಎಂದು ಕೇಳಿದಾಗ ಸೂತ ಮಹರ್ಷಿಗಳು ಮುಂದಿನ ಕಥೆಯನ್ನು ಹೀಗೆ ಮುಂದುವರೆಸಿದರು.

ಮಹಾಭಕ್ತ, ನಿರಂತರ ಅವರು ಶ್ರೀಸ್ವಾಮಿಯ ಸೇವಾ ಕಾರ್ಯದಲ್ಲಿ ತಮ್ಮ ಜೀವನವನ್ನು ಮುಡುಪಾಗಿ ಇಟ್ಟಿದ್ದರಿಂದ ಪ್ರತ್ಯಕ್ಷವಾಗಿ ಶ್ರೀವೆಂಕಟೇಶನ ದರ್ಶನ ಭಾಗ್ಯವನ್ನು ಪಡೆದರು. ದಿವ್ಯಶರೀರದೊಂದಿಗೆ ವೈಕುಂಠಕ್ಕೆ ಹೋದ ಕುಂಬಾರ ಭೀಮಣ್ಣನ ಘಟನೆಯನ್ನು ಕಣ್ಣಾರೆ ನೋಡಿದ ನಂತರ, ಚಕ್ರವರ್ತಿ ತೊಂಡಮನು ಪರಮ ಸಾತ್ವಿಕನಾದನು.

ತಿರುಮಲ ಕ್ಷೇತ್ರವನ್ನು ತಲುಪಿದ ನಂತರ ತೊಂಡಮಾನನು ನಿಷ್ಕಲ್ಮಶವಾದ ಮನಸ್ಸಿನಿಂದ ಧ್ಯಾನ್ಯವನ್ನು ಮಾಡುತ್ತಾ ಭಗವಂತನನ್ನು ಪ್ರಾರ್ಥಿಸಿದನು.

"ಸ್ವಾಮಿ! ಏಳು ಬೆಟ್ಟದೊಡೆಯ! ಅನಾಥರ ರಕ್ಷಕ! ಆಶ್ರಿತ ವತ್ಸಲಾ! ಅಜ್ಞಾನದಿಂದ ತುಂಬಿರುವ ನನಗೆ ಜ್ಞಾನೋದಯ ಮಾಡಿದ ಸದ್ಗುರು ನೀನು. ಭೀಮನಂಥ ಭಕ್ತ ನಾನಲ್ಲ. ಆದರೆ ನಿನ್ನ ಬಂಧುಕೋಟಿಗಳಲ್ಲಿ ನಾನು ಒಬ್ಬನಾಗಿದ್ದೀನಿ ಅಲ್ಲವೇ? ನಾನು ಮಾಡಿದ ಚಿಕ್ಕ ಸೇವೆಯಿಂದ ತೃಪ್ತನಾಗಿ ನನಗೆ ಮೋಕ್ಷವನ್ನು ದಯಪಾಲಿಸು! ಈ ಜೀವನ ಸಾಕು, ನಾನು ಈ ಭೌತಿಕ ದೇಹವನ್ನು ಸಹಿಸಲಾರೆ. ಓ ಕರುಣಾಕರಾ! ನನ್ನ ಮೇಲೆ ಕರುಣೆ ತುಂಬಿ ನಿನ್ನ ಸನ್ನಿಧಿಯನ್ನು ದಯಪಾಲಿಸು" ಎಂದು ಶ್ರೀನಿವಾಸನಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತ ದೀನನಾಗಿ ಕಣ್ಣೀರು ಸುರಿಸುತ್ತ ಅನೇಕ ವಿಧಗಳಲ್ಲಿ ಪ್ರಾರ್ಥಿಸಿದನು.

ಶ್ರೀನಿವಾಸನು, ತನ್ನ ಪಾದವನ್ನು ಹಿಡಿದು ಕಣ್ಣೀರು ಸುರಿಸುತ್ತಿದ್ದ ತೊಂಡಮಾನನನ್ನು ತಕ್ಷಣವೇ ಮೇಲೆತ್ತಿ, "ರಾಜ! ನೀನು ನನ್ನ ಪರಮ ಭಕ್ತ. ಆದರೆ ನೀನು ನಾನೊಬ್ಬನೇ ಭಕ್ತ ಎಂದು ಅಹಂಕಾರದಿಂದ ಮೆರೆಯುತ್ತಿದ್ದೆ. ಆ ಅಹಂಕಾರ

ಸಂಪೂರ್ಣವಾಗಿ ಹೋಗಿ ಈಗ ನೀನು ತೊಳೆದ ಮುತ್ತಿನಂತಿರುವೆ. ಶುದ್ಧ ಮನಸ್ಸಿನಿಂದ ನಿನ್ನ ಸಾಧನೆಯನ್ನು ಮುಂದುವರಿಸು. ಹೀಗೆ ತಪಸ್ಸು ಮಾಡು ಮುಂದಿನ ಜನ್ಮದಲ್ಲಿ ನಿನಗೆ ಮೋಕ್ಷ ಪ್ರಾಪ್ತಿಯಾಗು ವುದು. ಅದನ್ನು ನಾನು ಖಂಡಿತ ಅನುಗ್ರಹಿಸುತ್ತೇನೆ" ಎಂದು ಆಶೀರ್ವದಿಸಿದನು.

"ಸ್ವಾಮೀ! ವೆಂಕಟೇಶ! ಇನ್ನೊಂದು ಜನ್ಮದಲ್ಲಾದರೂ ನನಗೆ ಮೋಕ್ಷ ಸಿಗುತ್ತದೆ ಎಂದು ವರವನ್ನು ಅನುಗ್ರಹಿಸಿದೆಯಲ್ಲಾ ಅಷ್ಟುಸಾಕು ಆದರೂ ಪರವಾಗಿಲ್ಲ" ಎಂದು ಹೇಳಿ ಸ್ವಾಮಿ ಪುಷ್ಕರಿಣಿಯಲ್ಲಿ ಮನಃಪೂರ್ವಕವಾಗಿ ಸಂಕಲ್ಪಮಾಡಿ ಸ್ನಾನಮಾಡಿದ ನಂತರ ವೃದ್ಧನಾದ ತೊಂಡಮಾನ ಸ್ವಯಂಪ್ರೇರಣೆಯಿಂದ ಭೌತಿಕ ಶರೀರವನ್ನು ತ್ಯಜಿಸಿದನು. ಮರುಜನ್ಮದಲ್ಲಿ ಶ್ರೀನಿವಾಸನ ಸನ್ನಿಧಿಯಲ್ಲಿ ಸ್ವಚ್ಛವಾದ, ನಿರ್ವಿಕಾರವಾದ ಮನಸ್ಸಿನಿಂದ ನಿಶ್ಚಲವಾಗಿ ತಪಸ್ಸು ಮಾಡಿ ಮೋಕ್ಷವನ್ನು ಪಡೆದನು. ತಿರುಮಲೆಯಲ್ಲಿ ಸ್ವಾಮಿ ಗೋವಿಂದನ ಸನ್ನಿಧಿಯಲ್ಲಿ ನಿತ್ಯವೂ ತೊಂಡಮಾನನನ್ನು ಸ್ಮರಿಸಲಾಗುತ್ತಿದೆ. ಈ ಭೂಲೋಕದಲ್ಲಿ ಸ್ವಾಮಿ ಗೋವಿಂದನು ನೆಲೆಸಿರುವವರೆಗೆ ತೊಂಡಮಾನನ್ನನ್ನು ಸ್ಮರಿಸಲಾಗುತ್ತೆ. ಈ ದಿವ್ಯ ಕಥೆಯನ್ನು ಕೇಳಿದ ಮೇಲೆ ನಾವೆಲ್ಲರೂ ಒಮ್ಮೆ ಗಟ್ಟಿಯಾಗಿ ಗೋವಿಂದನ ನಾಮಜಪ ಮಾಡೋಣ.

## ಗೋವಿಂದಾ! ಗೋವಿಂದಾ!! ಗೋವಿಂದಾ!!!

ಸೂತ ಮಹರ್ಷಿಗಳು, ತಮ್ಮ ಶಿಷ್ಯರಿಂದ ಗೋವಿಂದಾ ನಾಮವನ್ನು ಹೇಳಿಸುತ್ತ ಅರೆಮುಚ್ಚಿದ ಕಣ್ಣುಗಳಿಂದ ಶ್ರೀನಿವಾಸ ದೇವರನ್ನು ಧ್ಯಾನಿಸಿದರು.

ಋಷಿಗಳೆಲ್ಲರೂ ಸೂತ ಮಹಾಮುನಿಗೆ ಹೀಗೆ ಹೇಳಿದರು. "ಓ ಸೂತ ಮಹಾಶಯ! ಅದ್ಭುತವಾಗಿ, ಪರಮಾನಂದದಾಯಕವಾಗಿ ತಿರುಮಲ ಪರಂಧಾಮನ ಚರಿತ್ರೆ, ಲೀಲಾವಿನೋದಗಳನ್ನು, ಮತ್ತು ಮಹಿಮೆಗಳನ್ನು ಕೃಪೆಯಿಂದ ವಿವರಿಸಿದಿರಿ. ನಮಗೆ ಸಂತೋಷವಾಗಿದೆ. ನಾವು ಆಧ್ಯಾತ್ಮಿಕ ಅಭ್ಯಾಸದಲ್ಲಿ ಉನ್ನತ ಸ್ಥಿತಿಯನ್ನು ಪಡೆದಂತೆ, ನಾವೆಲ್ಲರೂ ಸಹ ಅವ್ಯಕ್ತವಾದ ದಿವ್ಯವಾದ ಅನುಭೂತಿಯನ್ನು ಅನುಭವಿಸುತ್ತಿದ್ದೇವೆ. ಒಳ್ಳೆಯದು. ಆ ಶ್ರೀನಿವಾಸನನ್ನು ಎಲ್ಲ ವಿಧದಲ್ಲಿ ಆರಾಧಿಸುತ್ತ, ಪೂಜಿಸುತ್ತ ಆ ಭಗವಂತ ನಮ್ಮ ಎಲ್ಲಾ ಇಷ್ಟಾರ್ಥಗಳನ್ನು ಪೂರೈಸಲಿ ಎಂದು ಪ್ರಾರ್ಥಿಸೋಣ. ಆಸ್ವಾಮಿಯನ್ನು ಅರ್ಚಿಸಲು ಏನಾದರೂ ಮಾರ್ಗ, ನೇಮ ನಿಯಮವಿದೆಯೇ? ಇದ್ದಲ್ಲಿ ನಮಗೆ ಅದನ್ನು ವಿವರಿಸಿ ಎಂದು ಎಲ್ಲರೂ ಪ್ರಾರ್ಥಿಸಿದರು.

## "ಆನಂದನಿಲಯ" ಪೂಜಿಸುವ ವಿಧಾನ

ಕೂಡಲೆ ಸೂತರು ಪರಮಾನಂದಗೊಂಡು, ಹೌದು, ಆನಂದನಿಲಯನನ್ನು ಅರ್ಚಿ ಸುವ ವಿಶೇಷ ವಿಧಾನವಿದೆ, ಅದು ಬಹಳ ರಹಸ್ಯವಾಗಿದೆ.

ಒಂದಾನೊಂದು ಕಾಲದಲ್ಲಿ ಸಹಸ್ರ ಹೆಡೆಯನ್ನು ಹೊಂದಿದ್ದ ಆದಿಶೇಷನು ಕಪಿಲಮಹಾಮುನಿಗೆ ಆ ಉಪಾಸನಾ ವಿಧಾನವನ್ನು ಉಪದೇಶಿಸಿದನು. ಪರಮ ಪವಿತ್ರ ವಾದ, ಪುಣ್ಯಪ್ರದವಾದ ಅಷ್ಟೋತ್ತರ ಶತನಾಮಗಳನ್ನು ಹೇಳುತ್ತಾ ಶ್ರೀ ವೆಂಕಟೇಶ್ವರ ಸ್ವಾಮಿಯ ಪಾದಕಮಲಗಳಿಗೆ ಸುವರ್ಣ ಕಮಲಗಳನ್ನು ಅರ್ಪಿಸಬೇಕು.

ಹಿಂದೆ ಬ್ರಹ್ಮ ದೇವರು ಶ್ರೀ ವೆಂಕಟೇಶ್ವರನನ್ನು ಈ ಅಷ್ಟೋತ್ತರ ಶತನಾಮಗಳಿಂದ ಪೂಜಿಸಿ, ತನ್ನ ಇಷ್ಟಾರ್ಥಗಳನ್ನು ನೆರವೇರಿಸಿಕೊಂಡನು. ಆದುದರಿಂದ ನೀವೆಲ್ಲರೂ ಆನಂದ ನಿಲಯನನ್ನು ಸುವರ್ಣ ಕಮಲಗಳಿಂದ ಮತ್ತು ಅಷ್ಟೋತ್ತರ ಶತನಾಮಗಳಿಂದ ಪೂಜಿಸಿರಿ.

**"ತೇಷಾಂ ಶೇಷ ನಗಾಧೀಶ ಮಾನಸೋಲ್ಲಾಸ ಕಾರಿಣಾಮ್,**
**ನಾಮ್ನಾಮಷ್ಟಶತಂ ವಕ್ಷ್ಯೇ ವೆಂಕಟಾದ್ರಿ ನಿವಾಸಿನಃ,**
**ಆಯುರಾರೋಗ್ಯ ದಂ ಪುಂಸಾಂ ಧನಧಾನ್ಯ ಸುಖಪ್ರದಮ್, ।**
**ಜ್ಞಾನಪ್ರದಂ ವಿಶೇಷಣ ಮಹದೈಶ್ವರ್ಯ ಕಾರಕಮ್,**
**ಅರ್ಚಯೇತ್ ನಾಭಿರ್ದಿವ್ಯೈಃ ವೆಂಕಟೇಶ ಪಾದಾಂಕಿತೈಃ,**
**ನಾಮ್ನಾಮಷ್ಟ ಶತಾನ್ಯಾಸ್ಯ ಋಷಿರ್ ಬ್ರಹ್ಮಾ ಪ್ರಕೀರ್ತಿತಃ,**
**ಛಂಧೋಽನುಷ್ಟಪ್ ತಥಾ ದೇವಾ ವೆಂಕಟೇಶ ಉದಾಹೃತಃ,**
**ನೀಲಗೋಕ್ಷೀರ ಸಂಭೂತೋ ಬೀಜ ಮಿತ್ಯುಚ್ಯತೇ ಬುಧೈಃ,**
**ಶ್ರೀನಿವಾಸತಥಾ ಶಕ್ತಿಃ ಹೃದಯಂ ವೆಂಕಟಾಧಿಪಃ,**
**ವಿನಿಯೋಗಸ್ತಥಾಭಿಷ್ಟ ಸಿದ್ಧ್ಯರ್ಥೇ ಚ ನಿಗದ್ಯತೇ".**

ಶ್ರೀನಿವಾಸ ದೇವರಿಗೆ ಅತ್ಯಂತ ಪ್ರಿಯವಾದ ಈ ನಾಮಗಳನ್ನು ಜಪಿಸುವುದರಿಂದ ಮನುಷ್ಯರಿಗೆ ಆರೋಗ್ಯ ಪ್ರಾಪ್ತಿಯಾಗುತ್ತದೆ. ಧನ ಮತ್ತು ಧಾನ್ಯ ಸಮೃದ್ಧಿ ಇರುತ್ತದೆ. ಮಹಾದೈಶ್ವರ್ಯವು ಕೇವಲ ಜ್ಞಾನದಿಂದ ಕೂಡಿದ್ದು, ಸಂಪತ್ತನ್ನು ಕೂಡ ಹೊಂದಿದೆ ಎಂಬುದು ಸತ್ಯ. ಪ್ರತಿ ಹೆಸರಿನ ಕೊನೆಯಲ್ಲಿ "ವೆಂಕಟೇಶ" ಎಂಬ ದೈವಿಕ ಪದವನ್ನು ಸೇರಿಸಿ ಅರ್ಚಿಸಬೇಕು.

ಈ ಅಷ್ಟೋತ್ತರಶತನಾಮ ಮಂತ್ರಕ್ಕೆ ಋಷಿ ಬ್ರಹ್ಮ, ಅನುಷ್ಟುಪ್ ಛಂದಸ್ ಪರಮಾತ್ಮ, ವೆಂಕಟೇಶ್ವರಬೀಜಂ, ನೀಲಗೋಕ್ಷೀರದಿಂದ ಅಭಿಷೇಕಿಸಲ್ಪಟ್ಟ ಶ್ರೀನಿವಾಸನು ಶಕ್ತಿ ಶ್ರೀನಿವಾಸ ಹೃದಯವೂ ವೆಂಕಟಾಚಲಪತಿ! ಇದಕ್ಕೆ ವಿನಿಯೋಗವು ಇಂತಹ ಅಭೀಷ್ಟಗಳನ್ನು ಸಿದ್ಧಿಸುತ್ತದೆ. ಈಗ ಸ್ವಲ್ಪವೂ ಕಾಲವ್ಯರ್ಥ ಮಾಡದೆ, ಅಲಕ್ಷಮಾಡದೆ, ನಂಬಿಕೆ ಇಟ್ಟು ಶ್ರದ್ಧಾಭಕ್ತಿಯಿಂದ ಮನಸ್ಸಿಟ್ಟು ಕೇಳಿ.

1. ಓಂ ವೆಂಕಟೇಶಾಯ ಶ್ರೀ ವೆಂಕಟೇಶಾಯ ನಮಃ
2. ಓಂ ಶೇಷಾದ್ರಿ ನಿಲಯಾಯ ಶ್ರೀ ವೆಂಕಟೇಶಾಯ ನಮಃ
3. ಓಂ ವೃಷ ದೃಗ್ಗೋಚರಾಯ ಶ್ರೀ ವೆಂಕಟೇಶಾಯ ನಮಃ
4. ಓಂ ವಿಷ್ಣವೇ ಶ್ರೀ ವೆಂಕಟೇಶಾಯ ನಮಃ
5. ಓಂ ಮೇರುಪುತ್ರ ಗಿರೀಶಾಯ ಶ್ರೀ ವೆಂಕಟೇಶಾಯ ನಮಃ
6. ಓಂ ಸರಃ ಸ್ವಾಮಿತಟೇಜುಪ ಶ್ರೀವೆಂಕಟೇಶಾಯ ನಮಃ
7. ಓಂ ಕುಮಾರಕಲ್ಪ ಸೇವ್ಯಾಯ ಶ್ರೀವೆಂಕಟೇಶಾಯ ನಮಃ
8. ಓಂ ವಜ್ರಿ ದಿಗ್ವಿಷಯಾಯ ಶ್ರೀವೆಂಕಟೇಶಾಯ ನಮಃ
9. ಓಂ ಸುವರ್ಚಲಾಸುತನ್ಯಸ್ತ ಸೇನಾಪತ್ಯಭರಾಯ ಶ್ರೀವೆಂಕಟೇಶಾಯ ನಮಃ
10. ಓಂ ರಾಮಾಯ ಶ್ರೀವೆಂಕಟೇಶಾಯ ನಮಃ

---

101. ಓಂ ವೈಕುಂಠಾಚಲವಾಸಿನೇ ಶ್ರೀವೆಂಕಟೇಶಾಯ ನಮಃ
102. ಓಂ ಮುಕುಂದಾಯ ಶ್ರೀವೆಂಕಟೇಶಾಯ ನಮಃ
103. ಓಂ ಅನಂತಾಯ ಶ್ರೀವೆಂಕಟೇಶಾಯ ನಮಃ
104. ಓಂ ವಿರಿಂಚಾಭ್ಯರ್ಥಿತಾಸಿತ ಸೌಮ್ಯರೂಪಾಯ ಶ್ರೀವೆಂಕಟೇಶಾಯ ನಮಃ
105. ಓಂ ಸುವರ್ಣ ಮುಖರಿ ಸ್ನಾತ ಮನುಜಾಭೀಷ್ಟದಾಯಿನೇ ಶ್ರೀವೆಂಕಟೇಶಾಯ ನಮಃ
106. ಓಂ ಹಲಾಯುಧ ಜಗತೀರ್ಥ ಸಮಸ್ತ ಫಲದಾಯಿನೆ ಶ್ರೀವೆಂಕಟೇಶಾಯ ನಮಃ
107. ಓಂ ಗೋವಿಂದಾಯ ಶ್ರೀವೆಂಕಟೇಶಾಯ ನಮಃ
108. ಓಂ ಶ್ರೀನಿವಾಸಾಯ ಶ್ರೀವೆಂಕಟೇಶಾಯ ನಮಃ

ಈ ನೂರೆಂಟು ನಾಮಗಳು ಅತ್ಯಂತ ಮಹಿಮಾನ್ವಿತ ಆದದ್ದಾಗಿದೆ. ಈ ನಾಮಗಳನ್ನು ಅಷ್ಟೋತ್ತರ ಶತನಾಮಾವಳಿ ಎಂದು ಕರೆಯಲ್ಪಟ್ಟಿದೆ.

**"ತಸ್ಯ ಶ್ರೀವೆಂಕಟೇಶಸ್ತು ಪ್ರಸನ್ನೋ ಭವತಿ ಧ್ರುವಮ್**
**ಅರ್ಚನಾಯಾಂ ವಿಶೇಷೇಣ ಗ್ರಾಮ್ಯಮ್ಮಷ್ಟೋತ್ತರ ಶತಮ್**
**ವೆಂಕಟೇಶಾಭಿಧೇಯ್ತುರ್ಯೌ ವೆಂಕಟಾದ್ರಿ ನಿವಾಸಿನಮ್**
**ಅರ್ಚಯನ್ನಾಭಿಸ್ತಸ್ಯ ಫಲಂ ಮುಕ್ತಿಃ ನ ಸಂಶಯಃ**
**ಗೌಪ್ಯನಿಯಮಿದಂ ಸ್ತೋತ್ರಂ ಸರ್ವೇಷಾಮ್ ನ ಪ್ರಕಾಶಯತೌ**
**ಶ್ರದ್ಧಾ ಭಕ್ತಿಯುಜಾಮೇವ ದಾಪಯತೇ ನಾಮ ಸಂಗ್ರಹಾಮ್**
**ಇತಿ ಶೇಷೇಣ ಕಥಿತಂ ಕಪಿಲಾಯ ಮಹಾತ್ಮನೇ**
**ಕಪಿಲಾಖ್ಯಾಯಾ ಮಹಾಯೋಗಿನಾಕಾಶಾತ್ತು ಮಾಯಾಶ್ರುತಮ್**
**ತದುಕ್ತಂ ಭವತಾಮದ್ಯ ಸದ್ಯಃ ಪ್ರೀತಿಕರಂ ಹರಿಃ"**

ಈ ಅದ್ಭುತ ಮಹಿಮಾನ್ವಿತವಾದ ಅಷ್ಟೋತ್ತರ ಶತನಾಮಗಳಿಂದ ನಿತ್ಯವೂ ನಿರಂತರವಾಗಿ ಭಕ್ತಿಯಿಂದ ಯಾರು ಭಗವಾನ್ ಶ್ರೀ ಶ್ರೀನಿವಾಸನನ್ನು ಅರ್ಚಿಸುತ್ತಾರೊ ಇಲ್ಲವೆ ಪಠಿಸುತ್ತಾರೋ ಅಥವಾ ಕೇಳುತ್ತಾರೋ ಅಂತಹವರಿಗೆ ತಪ್ಪದೆ ಒಲಿದು ಪ್ರಸನ್ನನಾಗಿ ಬೇಡಿದ ವರವನ್ನು ಕರುಣಿಸುತ್ತಾನೆ, ಕೋರಿದ್ದನ್ನು ನೆರವೇರಿಸುತ್ತಾನೆ. ಅಂತಹವರಿಗೆ ಮೋಕ್ಷ ದೊರೆಯುವುದರಲ್ಲಿ ಸಂದೇಹವಿಲ್ಲ. ಈ ಸ್ತೋತ್ರವನ್ನು ಶ್ರದ್ಧೆಯುಳ್ಳವರಿಗೆ ಮತ್ತು ನಂಬಿಕೆಯುಳ್ಳವರಿಗೆ ಮಾತ್ರ ಈ ಅಷ್ಟೋತ್ತರ ಶತನಾಮಗಳನ್ನು ಉಪದೇಶಿಸಬೇಕು. ಈ ಹಿಂದೆ ಆದಿಶೇಷನು ಕಪಿಲ ಮಹರ್ಷಿಗೆ ಉಪದೇಶಿಸಿದ್ದನು. ಆದರೆ ನಾನೇ ಕಪಿಲ ಮಹರ್ಷಿಯಿಂದ ಕೇಳಿದ್ದೇನೆ. ಈ ನಾಮಾವಳಿಯ ಮೂಲಕ ನೀವೆಲ್ಲರೂ ಇದರ ಉಪಯೋಗವನ್ನು ಪಡೆಯಬೇಕೆಂದು ನಾನು ನಿಮಗೆ ಉಪದೇಶಿಸುತ್ತಿದ್ದೇನೆ. ಅದು ಶ್ರೀ ಶ್ರೀನಿವಾಸನಿಗೂ ಪ್ರೀತಿಯಾಗಿದೆ" – ಸೂತ ಮಹರ್ಷಿಗಳು ಹೇಳಿ

**ವೇದೇಷು ಚ ಪುರಾಣೇಷು ವೇಂಕಟೇಶ ಕಥಾಮೃತಂ**
**ವರ್ಣಿತಂ ಕತಿಹಾಶೇಷು ಭಾರತದ್ಯಾಗಮೇಷು ಚ**
**ಮನೋಹರಂ ತು ಸಂಶ್ರಾವ್ಯ ಮಹಾಮುತ್ರೇಷ್ಟದಾಯಕಂ**
**ಜ್ಞಾನಪ್ರದಂ ವಿಶೇಷಣ ಮಹದೈಶ್ವರ್ಯಕಾರಣಮ್**
**ವೈರಾಗ್ಯ ಭಕ್ತಿ ಸತ್ತ್ವಾದಿ ಪ್ರದೇಂದ್ರಿಯ ವಶಪ್ರದಮ್**
**ವೆಂಕಟಾಗ್ರೇ ಶುಚಿಕ್ಷೇತ್ರೇಽಶುಚಿದೇಶೇ ನ ವಿದ್ಯತೇ**

ಪ್ರಭು! ಓ ಮಹಾಮಹಿಮಾ ವೆಂಕಟೇಶ! ನಿನ್ನ ಅದ್ಭುತವಾದ ದಿವ್ಯ ಚರಿತ್ರೆ ಅಮೃತ ದಂತಿದೆ. ಇದು ಮನುಷ್ಯನ ಜರಾ ಮರಣಗಳೆರಡನ್ನೂ ನಿವಾರಿಸುತ್ತದೆ ಮತ್ತು ಮೋಕ್ಷವನ್ನು ನೀಡುತ್ತದೆ. ಇಂತಹ ಪರಮ ಪವಿತ್ರವಾದ ನಿನ್ನ ದಿವ್ಯಚರಿತ್ರೆ ಋಗ್ವೇದಾದಿ, ನಾಲ್ಕು ವೇದಗಳು, ಹದಿನೆಂಟು ಮಹಾಪುರಾಣಗಳು, ಮಹಾಭಾರತ, ಶ್ರೀಮದ್ರಾಮಾಯಣ, ಮತ್ತು ಅನೇಕ ಆಗಮ ಗ್ರಂಥಗಳಲ್ಲಿ ಸಮೃದ್ಧವಾಗಿ ವರ್ಣಿಸಲ್ಪಟ್ಟಿರುವ ನಿನ್ನ ದಿವ್ಯ ಕಥೆಯು ತುಂಬಾ ಪವಿತ್ರವಾಗಿದೆ.

ಓ ಸ್ವಾಮಿಯೇ! ನಿನ್ನ ವೃತ್ತಾಂತವು ಹೃದ್ಯಂಗಮವಾಗಿದೆ. ನಿನ್ನ ಕಥೆ ತುಂಬಾ ಹೃದಯಸ್ಪರ್ಶಿಯಾಗಿದೆ. ಕೇಳಲು ಮಧುರವಾಗಿದೆ. ಇದನ್ನು ಕೇಳುವವರು ಇಹಪರದಲ್ಲಿ ಶ್ರೇಯಸ್ಸನ್ನು ಹೊಂದುತ್ತಾರೆ. ಹಾಗೆಯೇ ಮೋಕ್ಷ ಸಿದ್ಧಿಸಲು ಬೇಕಾದ ವೇದ ವೇದಾಂತ ಶಾಸ್ತ್ರ ಸಂಬಂಧವಾದ ಜ್ಞಾನದ ಜೊತೆಗೆ, ಈ ಜಗತ್ತಿನಲ್ಲಿ ಬದುಕಲು ಬೇಕಾದ ಸಂಪತ್ತನ್ನು ಹೇರಳವಾಗಿ ನೀಡುತ್ತದೆ. ಅಷ್ಟು ಮಾತ್ರವಲ್ಲ ಓ ಸಪ್ತಗಿರಿವಾಸ ನಿನ್ನ ಮಧುರವಾದ ಕಥೆಯನ್ನು ಕೇಳುವುದರಿಂದ ಮನಸ್ಸಿಗೆ ನೆಮ್ಮದಿ, ಸಂತೋಷ ಆಗುತ್ತದೆ. ಮನಸ್ಸು ಆನಂದದಲ್ಲಿ ತೇಲಾಡುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಇಂದ್ರಿಯಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಸಹಾಯ ಮಾಡುತ್ತದೆ, ಸಂಯಮವನ್ನು ಕಲಿಸುತ್ತದೆ. ಸೌಮ್ಯ ಗುಣವನ್ನು ಅಭಿವೃದ್ಧಿ ಪಡಿಸುತ್ತದೆ. ಭಕ್ತಿ ಕೌಶಲ್ಯವನ್ನು ಹೆಚ್ಚಿಸುತ್ತದೆ. ಕಡೆಗೆ ವೈರಾಗ್ಯವನ್ನು ಉಂಟುಮಾಡುತ್ತದೆ. ಮೋಕ್ಷ ಬೇಕೆಂದು ಬಯಸುವವರಿಗೆ ಮೋಕ್ಷವನ್ನು, ಮುಕ್ತಿ ಸಿಗುವಂತೆ ಮಾಡುತ್ತದೆ. ಇಂತಹ ಪರಮ ಪವಿತ್ರವಾದ ದಿವ್ಯಕಥೆಯ ಕೇಂದ್ರ ಸ್ಥಾನವಾಗಿರುವ ಶ್ರೀವೆಂಕಟಾಚಲ ಕ್ಷೇತ್ರಕ್ಕೆ ಬಂದವರಿಗೆ ಯಾವುದೇ ತರಹವಾದ ದೋಷ ಉಂಟಾಗುವುದಿಲ್ಲ ಎಂದು ಸೂತ ಮಹರ್ಷಿಗಳು ಅನೇಕ ವಿಧದಲ್ಲಿ ಗುಣಗಾನ ಮಾಡುತ್ತ ಕೊಂಡಾಡಿದರು.

## ವೆಂಕಟಾಚಲಕ್ಷೇತ್ರ ನಿಯಮ

ಓ ಮಹನೀಯ! ಸೂತ ಮಹರ್ಷಿ! ನಮಗೆ ಇಲ್ಲಿಯವರೆವಿಗೂ ತಿಳಿಯದೆ ಇದ್ದ ಶ್ರೀವೆಂಕಟಾಚಲ ಕ್ಷೇತ್ರ ಮಹಿಮೆ, ಅಂದು ನಮಗೆ ಶ್ರೀಶ್ರೀನಿವಾಸನ ದಿವ್ಯಚರಿತ್ರೆಯನ್ನು, ಅದ್ಭುತವಾದ ಮಹಿಮೆಗಳನ್ನು, ಅಸಾಧಾರಣವಾದ ಲೀಲೆಗಳನ್ನು ಕರ್ಣಾನಂದಕರ ವೀಣಾನಾದದಂತೆ ಸೊಗಸಾಗಿ ಹೇಳಿದಿರಿ. ನಾವು ಆನಂದವಾಗಿ ಆನಂದನಿಲಯನ ಕಥೆಯನ್ನು ಕೇಳಿ ಧನ್ಯರಾಗಿದ್ದೇವೆ. ಆ ಸ್ವಾಮಿಯನ್ನು ಸೇವಿಸುವ, ಅರ್ಚಿಸುವ ವಿಧಾನವನ್ನು ನಿಮ್ಮಿಂದ ತಿಳಿದೆವು. ಬಹಳ ಚೆನ್ನಾಗಿದೆ. ನೀವು ಸ್ವಾಮಿಯ ಲೀಲಾಮೃತವನ್ನು, ಕಥೆಯನ್ನು ಹೇಳುವ ವಿಧಾನ, ಶೈಲಿ ಅದ್ಭುತವಾಗಿದೆ.

ಶ್ರೀವೆಂಕಟೇಶನ ದಿವ್ಯಕ್ಷೇತ್ರವಾದ ಸಪ್ತಗಿರಿಯನ್ನು ನೀವು ವರ್ಣಿಸಿದ ರೀತಿ ಬಹಳ ರಮಣೀಯವಾಗಿತ್ತು. ನಮ್ಮ ಕಣ್ಣಮುಂದೆ ನಡೆದಂತೆ ಇದೆ. ನೀವು ಹೇಳುತ್ತ ಹೋದಹಾಗೆ ನಾವು ಪ್ರತ್ಯಕ್ಷವಾಗಿ ದರ್ಶನ ಮಾಡಿದ ದಿವ್ಯಾನುಭವವನ್ನು ಅನುಭವಿಸಿದ್ದೇವೆ. ಹಾಗೆಯೇ ನಾವೆಲ್ಲರೂ ಸೇರಿ ವೆಂಕಟಾಚಲ ಯಾತ್ರೆಯನ್ನು ಆಶಯ, ಆಸಕ್ತಿಯಿಂದ ಪಾದಯಾತ್ರೆಯನ್ನು ಮಾಡಲು ಸಂಕಲ್ಪಿಸಿದ್ದೇವೆ. ಆ ಸ್ವಾಮಿಯ ದಿವ್ಯಮಂಗಳ ಮೂರ್ತಿಯನ್ನು ಕಂಡು ಕಣ್ಣುತುಂಬಿ ಕೊಳ್ಳಬೇಕು, ಹಾಗೆಯೇ ನಮ್ಮ ಕೈಯ್ಯಾರ ಸ್ವಾಮಿ ಆನಂದನಿಲಯನನ್ನು ಅರ್ಚಿಸಬೇಕು ಎಂದಿದ್ದೇವೆ. ಸಪ್ತಗಿರಿವಾಸನನ್ನು ಹಾಡಿ ಹೊಗಳಿ ಕೀರ್ತಿಸಬೇಕು ಎಂದಿದ್ದೇವೆ. ನಾವು ಆ ಕ್ಷೇತ್ರವನ್ನು ತಲುಪಿದಮೇಲೆ ಆಚರಿಸಬೇಕಾದ ವಿಧಿವಿಧಾನಗಳು ಏನಾದರೂ ಇರುವುದಾ? ಆ ಕ್ಷೇತ್ರದಲ್ಲಿ ಏನಾದರೂ ದಾನಧರ್ಮದ ಕಾರ್ಯವನ್ನು ಮಾಡಬೇಕಾ? ಹಾಗೆ ಮಾಡಿದ ಮೇಲೆ ಅದರಿಂದ ಉಂಟಾಗುವ ಫಲಿತಾಂಶ ಏನಾದರು ಇದ್ದೆಯಾ? ಎನ್ನುವುದನ್ನು ನಮಗೆ ವಿವರಿಸಿ, ನಾವು ನಮ್ಮ ವೆಂಕಟಾಚಲ ಯಾತ್ರೆಯನ್ನು ಸಂಪೂರ್ಣವಾಗಿ, ಫಲಪ್ರದವಾಗಿ ಮಾಡಿಕೊಳ್ಳುತ್ತೇವೆ. ದಯಮಾಡಿ ನಮ್ಮ ಮೇಲೆ ಕರುಣೆಯಿಟ್ಟು ಆ ವಿಧಾನವನ್ನು ಕೂಡ ನಮಗೆ ಉಪದೇಶಿಸಿ ಎಂದು ಭಕ್ತಿಪೂರ್ವಕವಾಗಿ ಕೇಳಿಕೊಳ್ಳುತ್ತೇವೆ ಎಂದು ವಿನಂತಿಸಿಕೊಂಡರು.

"ನನ್ನ ಪ್ರೀತಿಯ ಶಿಷ್ಯರೇ, ನೀವೆಲ್ಲರೂ ಅನುಭವಿಸುವ ಈ ಅನಿರ್ವಚನೀಯ ಆನಂದ ಆನಂದನಿಲಯದ ದಿವ್ಯ ಕಥೆಯನ್ನು ಕೇಳುವುದರಿಂದ ಮಾತ್ರ ಉಂಟಾಗುತ್ತದೆ, ಇದನ್ನು ಇನ್ನು ಹೆಚ್ಚಿಸಿಕೊಳ್ಳಲು, ಶಾಶ್ವತ ಸಂತೋಷವನ್ನು ಪಡೆಯಲು, ನೀವೆಲ್ಲರೂ ಪಾದ ಯಾತ್ರೆಯ ಮೂಲಕ ಆ ಏಳು ಬೆಟ್ಟಗಳನ್ನು ಹತ್ತಬೇಕು. ನೀವು ಪ್ರಕೃತಿಯ ಸೊಬಗನ್ನು ನೋಡಿ ನಿಮ್ಮ ಕಣ್ಣನ್ನು ತುಂಬಿಕೊಳ್ಳಬೇಕು. ಆ ಸಪ್ತಗಿರಿಯನ್ನು ಕಾಯ, ವಾಚಾ, ಮನಸಾ ತ್ರಿಕರಣ ಶುದ್ಧಿಯಿಂದ ಮಾಡಬೇಕು. ನೀವು ನಿಮ್ಮ ಸ್ವಇಚ್ಛೆಯಿಂದ ವೆಂಕಟಾಚಲ ಯಾತ್ರೆಯನ್ನು ಮಾಡಬೇಕೆಂದು ಸಂಕಲ್ಪ ಮಾಡಿರುವುದು ನಿಮ್ಮ ಮಹಾಭಾಗ್ಯ, ವಿಶೇಷ ವಾಗಿದೆ. ಇದು ನೀವು ಆ ಸಪ್ತಗಿರಿವಾಸನ ಅನುಗ್ರಹಕ್ಕೆ ಪಾತ್ರರಾಗಿದ್ದೀರ ಎನ್ನುವುದಕ್ಕೆ ಕನ್ನಡಿಯಾಗಿದೆ. ಆದರೂ ನೀವು ಕೋರಿದಹಾಗೆ ಆ ಕ್ಷೇತ್ರದಲ್ಲಿ ನೀವು ಮಾಡಬೇಕಾದ, ಮಾಡಬಾರದ ಕೆಲಸಗಳನ್ನು ಹೇಳುತ್ತೇನೆ. ಎಚ್ಚರಿಕೆಯಿಂದ, ಏಕಾಗ್ರತೆಯಿಂದ ಕೇಳಿ.

ಮಹಾಮಹಿಮರೇ, ನೀವೆಲ್ಲರೂ ತೊಂದರೆ ಮಾಡಿಕೊಳ್ಳದೆ ಸಾವಕಾಶವಾಗಿ ಹೋಗಿ ಬನ್ನಿ. ಅದಕ್ಕೆ ಮುಂಚಿತವಾಗಿ ಆ ಕ್ಷೇತ್ರ ಸಮೀಪಕ್ಕೆ ಹೋಗುತ್ತಿದ್ದ ಹಾಗೆ ಭಕ್ತಿಯಿಂದ ಪ್ರದಕ್ಷಿಣ ಪೂರ್ವಕ ಸಾಷ್ಟಾಂಗ ನಮಸ್ಕಾರ ಮಾಡಬೇಕು. ಆ ಸಪ್ತಗಿರಿಯ

ಹತ್ತಿರದಲ್ಲಿ, ಸ್ವಲ್ಪ ಇಳಿಜಾರಿನಲ್ಲಿ ಇರುವ ಕಪಿಲತೀರ್ಥದಲ್ಲಿ ಸ್ನಾನವನ್ನು ಮಾಡಿ ಶುದ್ಧರಾಗಿ. ತೀರ್ಥದ ಹತ್ತಿರ ಇರುವ ದೇವಸ್ಥಾನಕ್ಕೆ ಹೋಗಿ, ಅಲ್ಲಿ ನೆಲಸಿರುವ ದೇವತೆಗಳನ್ನು ಪೂಜಿಸಿ ನಮಸ್ಕಾರ ಮಾಡಿ. ಮನೋಹರವಾಗಿ ಹಸಿರಿನಿಂದ ಕಂಗೊಳಿಸುತ್ತಿರುವ ಪರಿಸರ, ಜಲಧಾರೆಗಳು, ಚಿಲಿಪಿಲಿ ಪಕ್ಷಿಗಳ ಇಂಚರ, ಕಾಡುಪ್ರಾಣಿಗಳ ಸದ್ದು ಗದ್ದಲ, ಘರ್ಜನೆ ಇದೆಲ್ಲದರ ನಡುವೆ ಭಕ್ತರು ಭಕ್ತಿಯಿಂದ ಸ್ವಾಮಿಯನ್ನು ಗೋವಿಂದ ಗೋವಿಂದ ಎಂಬ ಕೂಗು ಪ್ರತಿಧ್ವನಿಸುತ್ತಿರುವ ಸಪ್ತಗಿರಿಯನ್ನು ಅತ್ಯಂತ ಭಕ್ತಿಯಿಂದ ನೋಡಿ.

**"ಆರುಹ್ಯ ರತ್ನಸಾನುಂ ತಂ ಶುಕ ಕೋಕಿಲ ಮಂಜುಲಮ್**
**ಸ್ವಾಮಿಪುಷ್ಕರಣೀಂ ಪದ್ಮ ವನವಾತೇನ ರಂಜಿತಾಮ್**
**ಪ್ರಾಪ್ಯ ಸ್ನಾತ್ವಾ ಚ ತತ್ತೀರ್ಥೆ ಪ್ರದಕ್ಷಿಣ ವಿಧಾನತಃ**
**ಪರಿಸೃತ್ಯ ವಿಮಾನಂ ಚ ದರ್ಶನಾತ್ ಪಾಪನಾಶನಮ್**
**ಹೃದಯಾನಂದ ಜನನಂ ಪುಲಕೋದ್ಗಮ ಕಾರಕಮ್**
**ಪ್ರವಿಶ್ಯ ಭೂವರಾಹಾಂ ಚ ನತ್ವಾ ಶ್ರೀ ವೆಂಕಟಾಧಿಪಮ್**
**ಶ್ರೀ ಭೂಮಿಭ್ಯಾಂ ಮುದಾ ಯುಕ್ತಂ ಶಂಖ ಚಕ್ರ ವರಾಯುಧೇ**
**ದಧಾನಂ ಪುಂಡರೀಕಾಕ್ಷಂ ಸ್ಮಯಮಾನ ಮುಖಾಂಬುಜಂ**
**ದಯಾಮೃತ ತರಂಗಾಬ್ಧಿ ಮಂದಸ್ಮಿತ ಮನೋಹರಮ್**
**ಸಮದೃಷ್ಟ್ವಾ ಚ ನತ್ವಾ ಚ ಸ್ತುತ್ವಾ ನಾಮಭಿರೇವ ಚ**
**ಅರ್ಚಯತ್ವಾ ಚ ಕಮಲೈಃ ಲಬ್ಧ್ವಾಽಭೀಷ್ಟಂ ಚ ದುರ್ಲಭಮ್**
**ಕೃತ ಕೃತ್ಯಾ ವಿವರ್ತಧ್ವಂ ಇತ್ಯುಕ್ತಾ ಮುನಯ ಸ್ತಥಾ"**

ಆ ಶೇಷಾದ್ರಿ ಪರ್ವತದಲ್ಲಿರುವ ಕಮಲಗಳ ಮೇಲೆ ತಂಪಾದ ಗಾಳಿ ಬೀಸುತ್ತಿರುವಾಗ ಹೃದಯವನ್ನು ಬೆಚ್ಚಗಾಗುವ ಅಲೆಗಳಿಂದ ನಿಧಾನವಾಗಿ ಚಲಿಸುವ ನೀರಿನಿಂದ ತುಂಬಿದ ಶ್ರೀಸ್ವಾಮಿ ಪುಷ್ಕರಿಣಿಯನ್ನು ಕಣ್ಣಾರೆ ನೋಡಿ. ಪ್ರದಕ್ಷಿಣ ನಮಸ್ಕಾರ ಮಾಡಿ. ಸಂಕಲ್ಪ ಪೂರ್ವಕವಾಗಿ ಪವಿತ್ರವಾದ ಶ್ರೀ ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ. ಪುಷ್ಕರಿಣಿಯ ತೀರದಲ್ಲಿ ಪ್ರಕಾಶದಿಂದ ಹೊಳೆಯುತ್ತಿರುವ ಆನಂದನಿಲಯದ ಸುವರ್ಣ ವಿಮಾನವನ್ನು ನೋಡಿ. ಚಿನ್ನದ ವಿಮಾನವನ್ನು ನೋಡಿದ ತಕ್ಷಣದಿಂದ ಹೃದಯವು ಆನಂದದಲ್ಲಿ ತೇಲಾಡುತ್ತದೆ ಮೈಪುಳಕಗೊಳ್ಳುತ್ತದೆ. ಅಷ್ಟೇ ಅಲ್ಲ, ಪಾಪಗಳನ್ನು ಹೋಗಲಾಡಿಸಿ, ದರ್ಶನ ಪಡೆದ ಕೂಡಲೇ ಪರಮ ಪಾವನರಾಗುತ್ತಾರೆ. ಅಂತಹ ಆನಂದನಿಲಯ ವಿಮಾನವನ್ನು

ಪ್ರದಕ್ಷಿಣೆ ಹಾಕುತ್ತಾ ಪುಷ್ಕರಿಣಿಯ ದಡದಲ್ಲಿ ಸ್ಥಿತನಾಗಿರುವ ಶ್ವೇತ ವರಾಹಸ್ವಾಮಿಯ ದರ್ಶನ ಮಾಡಿ ಪೂಜಿಸಿ ಆನಂದಿಸಿ. ರಕ್ಕಸ ಹಿರಣ್ಯಾಕ್ಷನ ಹಿಡಿತದಿಂದ ಭೂದೇವಿಯನ್ನು ರಕ್ಷಿಸಿ ತನ್ನ ತೊಡೆಯಮೇಲೆ ಸ್ಥಿತಳಾಗಿರುವ ಭೂದೇವಿ ಸಮೇತನಾಗಿ ಕಾಣಿಸಿಕೊಂಡ ಕಾರಣ ಈ ಭಗವಂತನಿಗೆ 'ಭೂವರಾಹಸ್ವಾಮಿ' ಎಂದೂ ಹೆಸರು. ವರಾಹಸ್ವಾಮಿ ಜ್ಞಾನಪ್ರದ, ಬುದ್ಧಿಪ್ರದ. ಈ ಭೂವರಾಹಸ್ವಾಮಿಯನ್ನು ದರ್ಶನ ಮಾಡಿದ ನಂತರ ಶ್ರೀ ವೆಂಕಟೇಶ್ವರ ಸ್ವಾಮಿಯ ದರ್ಶನ ಮಾಡಬೇಕು. ಅದು ಈ ಕ್ಷೇತ್ರದ ಸಂಪ್ರದಾಯ. ಶ್ರೀವರಾಹಸ್ವಾಮಿ ಭಕ್ತರಿಗೆ ಜ್ಞಾನವನ್ನು ನೀಡುತ್ತಾನೆ. ಜ್ಞಾನವನ್ನು ಸಂಪಾದಿಸಿದ ಭಕ್ತನು ಸಂತೋಷವಾಗಿರುವನು! ಆದ್ದರಿಂದ ಮೊದಲು ಜ್ಞಾನಪ್ರದನಾದ ಭೂವರಾಹಸ್ವಾಮಿಯನ್ನು ದರ್ಶನ ಮಾಡಿ ನಂತರ ಆನಂದನಿಲಯಕ್ಕೆ ಭೇಟಿ ನೀಡಬೇಕು.

ಶ್ರೀದೇವಿ ಭೂದೇವಿಯರೊಡಗೂಡಿ ಆನಂದದಿಂದ, ಸಂತೋಷದಿಂದ ತೃಪ್ತನಾಗಿದ್ದಾನೆ. ಮಾತ್ರವಲ್ಲದೆ, ಶಂಖ ಚಕ್ರಗಳನ್ನು ಧರಿಸಿ ವಿಶಾಲವಾದ ಕಣ್ಣುಗಳಿಂದ ಮತ್ತು ಮಂದಸ್ಮಿತ ವದನಾರವಿಂದದಿಂದ ಹೊಳೆಯುತ್ತಿರುವ ಘನವೆಂಕಟ ಪ್ರಭುವನ್ನು ನೋಡಿ. ಆ ಶ್ರೀನಿವಾಸನು, ದಯೆ ಕರುಣೆಯ ಅಲೆಗಳಿಂದ ತುಂಬಿದ ಮಹಾಸಾಗರ. ಭಕ್ತರಿಗೆ ಸದಾ ಮುಗುಳ್ನಗೆಯಿಂದ ಮನೋಹರವಾಗಿ ದರ್ಶನ ಕೊಡುತ್ತಿರುವ ಬೆಟ್ಟದೊಡೆಯನನ್ನು ಮನಸಾರೆ ದರ್ಶನಮಾಡಿ, ನಮಸ್ಕಾರಮಾಡಿ ಧನ್ಯರಾಗಿ. ಅಷ್ಟೋತ್ತರ ಶತನಾಮವನ್ನು ಪಠಿಸುತ್ತ ಕಮಲದ ಹೂವುಗಳಿಂದ ತಿರುಮಲೇಶನನ್ನು ಅರ್ಚಿಸಿ! ನಿಮ್ಮ ಕೋರಿಕೆಗಳನ್ನು ಈಡೇರಿಸಿಕೊಳ್ಳಿ. ಆದ್ದರಿಂದ ನಿಮ್ಮ ವೆಂಕಟಾಚಲಯಾತ್ರೆ ಜೀವನವನ್ನು ಧನ್ಯವನ್ನಾಗಿ ಮಾಡುತ್ತದೆ.

ಆ ದಿವ್ಯಕ್ಷೇತ್ರದಲ್ಲಿರುವ ಪವಿತ್ರ ತೀರ್ಥಗಳನ್ನು ಭಕ್ತಿಯಿಂದ ಪೂಜಿಸಿ ಸ್ನಾನಮಾಡಿ. ಮೇಲಿರುವ ದಿವ್ಯ ದೇಗುಲಗಳನ್ನೂ ಸಂದರ್ಶಿಸಿ ಪೂಜಿಸಿ, ದಾನವನ್ನು ಮಾಡಿ ಪುನೀತರಾಗಿ ಎಂದು ಸೂತ ಮಹರ್ಷಿಗಳು ಹೇಳುತ್ತಿರಲು ಶೌನಕಾದಿಗಳು ಮತ್ತೆ ಪ್ರಶ್ನಿಸಿದರು.

ಓ ಋಷಿ ವರೇಣ್ಯ! ವೆಂಕಟಾಚಲ ಕ್ಷೇತ್ರದಲ್ಲಿ ಯಾವ ಯಾವ ದಾನಗಳನ್ನು ಮಾಡಬೇಕು. ಯಾವ ದಾನ ಶ್ರೀ ವೆಂಕಟೇಶ್ವರನಿಗೆ ಪ್ರಿಯವಾದದ್ದು. ಯಾವ ದಾನವನ್ನು ಮಾಡಿದರೆ ಸ್ವಾಮಿ ಶ್ರೀನಿವಾಸನು ಪ್ರಸನ್ನನಾಗುತ್ತಾನೆ. ನಮ್ಮನ್ನು ಅನುಗ್ರಹಿಸಿ ಆಶೀರ್ವದಿಸುತ್ತಾನೆ? ಅದನ್ನು ವಿಸ್ತಾರವಾಗಿ ಹೇಳಿದರೆ ಒಳ್ಳೆಯದು. ನೀವು ಹೇಳಿದ ರೀತಿಯಲ್ಲಿ ನಡೆದು ಸ್ವಾಮಿ ವೆಂಕಟೇಶನ ದರ್ಶನಮಾಡಿ ಸಫಲರಾಗಿ

ಮರಳಿ ಬಂದು ತಮ್ಮ ದರ್ಶನ ಮಾಡುತ್ತೇವೆ ಎನ್ನಲು, ಅವಶ್ಯವಾಗಿ ಹಾಗೆಯೇ ಮಾಡಿ ಎಂದೆನ್ನುತ್ತ ಸೂತರು

**"ಶ್ರೀ ವೆಂಕಟೇಶ ಯಾತ್ರಾರ್ಥಂ ಗಚ್ಛದ್ವಂ ಸುದೃಢ ವ್ರತಾಃ**
**ವಿಷ್ಣು ಸಂದರ್ಶನಂ ಕೃತ್ವಾಭಕ್ತಿ ಮನ್ತೋ ಜಿತೇಂದ್ರಿಯಾಃ"**

ಓ ಮಹಾತಪೋಧನರೇ, ನೀವೆಲ್ಲರೂ ಸೇರಿ ಧೃಡವಾದ ಸಂಕಲ್ಪವನ್ನು ಮಾಡಿ ಕಠಿಣವಾದ ವ್ರತವನ್ನು ಕೈಗೊಂಡು ವೆಂಕಟಾಚಲ ಯಾತ್ರೆಮಾಡಲು ಹೊರಟ್ಟಿದ್ದೀರಿ. ಶ್ರೀನಿವಾಸನ ನಾಮಸ್ಮರಣೆ ನಿಮ್ಮ ಉಸಿರಾಗಿರಲಿ. ಅವನ ನಾಮಸ್ಮರಣೆ ಮಾಡುತ್ತ ಪಾದಚಾರಿಗಳಾಗಿ ಬೆಟ್ಟವನ್ನು ಹತ್ತಿ ಯಾತ್ರೆಯನ್ನು ಮಾಡಿ. ಸತ್ಕಥಾ ಶ್ರವಣ, ಭಗವಂತನ ನಾಮ ಮನನ, ಧ್ಯಾನ ಅನುಷ್ಠಾನದ ನಿಯಮಾನುಸಾರ ಇಂದ್ರಿಯ ನಿಗ್ರಹಣ, ಹತೋಟಿಯಲ್ಲಿ ಇಟ್ಟುಕೊಂಡು ಪರಮ ಭಕ್ತಿಯಿಂದ ದರ್ಶನಮಾಡಿ ಕೃತಾರ್ಥರಾಗಿ. ಅಮೋಘವೂ, ವರ್ಣನಾತೀತನಾದ ಮಹಾಮಹಿಮಾನ್ವಿತವಾದ ಶ್ರೀವೆಂಕಟಾಚಲ ಗಿರಿಯನ್ನು ಪ್ರೇಮದಿಂದ, ಭಕ್ತಿಯಿಂದ ಆಧರಿಸಿ. ಆಗ ಆ ಪರ್ವತರಾಜ, ನಿಮಗೆ ಬೇಕೆನ್ನುವಷ್ಟು, ನಿಮ್ಮ ಕಣ್ಣು ಮನಸ್ಸು ತುಂಬುವಷ್ಟು ದರ್ಶನಭಾಗ್ಯವನ್ನು ಕೊಡುತ್ತಾನೆ. ಹಾಗೆ ದರ್ಶನ ಮಾಡಿದವರಿಗೆ ಅನುಗಾಲವು ಶುಭವನ್ನು ಪ್ರಸಾದಿಸುವ ನಿತ್ಯಕಲ್ಯಾಣ ಮೂರ್ತಿಯನ್ನು ಕಣ್ಣುಗಳಿಂದ ದರ್ಶನಮಾಡಿ, ಮನಸಾರ ಸ್ಮರಿಸಿ, ಮನತುಂಬಿ, ಬಾಯಿತುಂಬಾ "ಗೋವಿಂದಾ! ಗೋವಿಂದಾ!! ಗೋವಿಂದಾ!!! ಎಂದು ಹೆಜ್ಜೆ ಹೆಜ್ಜೆಗೂ ಕರೆಯುತ್ತ ಸ್ಮರಿಸಿ" ಎಂದು ಸೂತಮಹರ್ಷಿಗಳು ಶೌನಕಾದಿಗಳನ್ನು ಶ್ರೀವೆಂಕಟಾಚಲ ಯಾತ್ರೆಗೆ ಹೋಗಲು ಪ್ರೇರಿಪಿಸುತ್ತ,

ಪುಣ್ಯಾತ್ಮರಾದ ತಪೋನಿಷ್ಠರೇ, ಈಗ ನಾನು ಹೇಳುವುದನ್ನು ಭಕ್ತಿಯಿಂದ, ಎಚ್ಚರಿಕೆಯಿಂದ, ಗಮನವಿಟ್ಟು ಕೇಳಿ. ಶ್ರೀವೆಂಕಟಾಚಲ ಕ್ಷೇತ್ರದಲ್ಲಿ ಆಚರಿಸಬೇಕಾದ ಧರ್ಮ ಕಾರ್ಯ, ದಾನ ವಿಧಾನವನ್ನು ಹೇಳುತ್ತೇನೆ,

## ಮಾಡಬೇಕಾದ ದಾನ, ಮತ್ತು ಅದರ ಫಲ

ಅನುಪಮವೂ, ಪರಮ ಪವಿತ್ರವು ಆದ ಈ ಅನುಪಮವಾದ ವೆಂಕಟಾಚಲ ಪರ್ವತದ ಮೇಲೆ ಶ್ರೀನಿವಾಸಪ್ರಭುವಿನ ಸನ್ನಿಧಿಯಲ್ಲಿ ಮಾಡಬೇಕಾದ ಪ್ರಮುಖ ದಾನವೆಂದರೆ ಅನ್ನದಾನ, ಅದಕ್ಕಿಂತ ಶ್ರೇಷ್ಠವಾದದ್ದು ಪಿತೃದೇವತೆಗಳನ್ನು ತೃಪ್ತಿಪಡಿಸಲು ಮಾಡುವ ಶ್ರಾದ್ಧವಿಧಿ. ಇವೆರಡೂ ಹೆಚ್ಚು ಫಲದಾಯಕವಾದದ್ದು. ಮತ್ತು ಚಿನ್ನವನ್ನು ದಾನ ಮಾಡಿದರೆ ಶಾಶ್ವತವಾದ ಆನಂದ ಮೋಕ್ಷಪ್ರಾಪ್ತಿ ಆಗುತ್ತದೆ.

ವಸ್ತ್ರದಾನ ಮಾಡಿದರೆ ದೀರ್ಘಾಯುಷ್ಯವು ಪ್ರಾಪ್ತಿಯಾಗುತ್ತದೆ. ಶ್ರೀವೆಂಕಟೇಶ್ವರ ಸ್ವಾಮಿಯ ಪ್ರೀತಿಯಾದದ್ದು ಗೋದಾನ, ಅದರಲ್ಲಿಯೂ ವಿಶೇಷವಾಗಿ ಕಪಿಲ ಗೋವುಗಳನ್ನು ದಾನ ಮಾಡಿದರೆ, ಶಾಶ್ವತವಾದ ವಿಷ್ಣುಲೋಕದಲ್ಲಿ, ಗೋವಿನ ಮೈಯ್ಯಲ್ಲಿರುವ ರೋಮಗಳ ಸಂಖ್ಯೆಯು ಎಷ್ಟು ಇದೆಯೋ ಅಷ್ಟೇ, ಗೋವುಗಳ ಸಂಖ್ಯೆಯು ಹೆಚ್ಚುತ್ತದೆ, ಪೂಜಿಸಲ್ಪಡುತ್ತದೆ.

ಶ್ರೀನಿವಾಸನ ಪೂಜೆಗೆ ಕರ್ಪೂರ, ಶ್ರೀಗಂಧ, ಶಂಖ, ಆಭರಣಗಳನ್ನು ಅರ್ಪಿಸಿದರೆ ಮಹಾಪಾತಕಗಳು ನಾಶವಾಗುತ್ತವೆ. ಶ್ರೀ ಸ್ವಾಮಿಗೆ ಭೂಮಿಯನ್ನು ದಾನ ಮಾಡಿದರೆ, ನೀವು ಎಲ್ಲಾ ಬಂಧನ, ಸಂಸಾರ ಬಂಧನದಿಂದ ಮುಕ್ತರಾಗಿ ಮಹಾಭಾಗ್ಯವನ್ನು ಪಡೆಯುತ್ತೀರಿ. ಶ್ರೀ ವೆಂಕಟೇಶ್ವರ ಸ್ವಾಮಿಗೆ ರಥವನ್ನು ತಯಾರು ಮಾಡಬೇಕಾದ ವಸ್ತುಗಳನ್ನು ಸಹಾಯ ಮಾಡಿದರೆ ಕೋಟಿ ಕನ್ಯಾದಾನ ಮಾಡಿದ ಫಲ, ಸಹಸ್ರಾರು ಗೋವುಗಳನ್ನೂ ದಾನ ಮಾಡಿದ ಫಲ ಉಂಟಾಗುತ್ತದೆ. ತಿರುಮಲೇಶ, ತಿರುವೆಂಕಟ ಪ್ರಭುವಿಗೆ ಮಹಾ ರಾಜೋಪಚಾರದ ವಸ್ತುಗಳು ಅಂದರೆ ಛತ್ರಚಾಮರ, ಬಂಗಾರದ ಆಭರಣ, ಸುಗಂಧ ಭರಿತ ಹೂಮಾಲೆ, ಆನೆ, ಕುದುರೆ ಭಕ್ಷಗಳನ್ನು ಅರ್ಪಿಸಿದರೆ ಚಕ್ರವರ್ತಿ ಆಗುವ ಯೋಗ, ಪರಮಪದವನ್ನು ಹೊಂದಿ ನಿರತಿಶಯವಾದ ಆನಂದವನ್ನು ಹೊಂದುತ್ತಾನೆ.

ಅಷ್ಟಮಿ, ಚತುರ್ದಶಿ, ಪೌರ್ಣಿಮಾ, ಸಂಕ್ರಮಣ, ಅಮಾವಾಸ್ಯ ಅಂದು ತಿರುಮಲೇಶನಿಗೆ ಉತ್ಸವ ಸೇವೆ ಮಾಡಿದರೆ ತಾನು ಮಾಡಿದ ಸಹಸ್ರಾರು ಅಪರಾಧಗಳನ್ನು ಸ್ವಾಮಿವೆಂಕಟೇಶನು ಕ್ಷಮಿಸಿ, ಭೋಗ ಮೋಕ್ಷಗಳನ್ನು ಕರುಣಿಸುತ್ತಾನೆ.

ವೆಂಕಟಾಚಲ ಕ್ಷೇತ್ರದಲ್ಲಿ ಶ್ರೀನಿವಾಸನ ಸನ್ನಿಧಿಯಲ್ಲಿ ಹಸುವಿನ ತುಪ್ಪದ ದೀಪವನ್ನು ಹಚ್ಚಿ ತನ್ನ, ಹಾಗು ತನ್ನ ಪೂರ್ವಜರನ್ನು ಸ್ಮರಿಸಿದರೆ ಅವರು ಮಾಡಿದ್ದ ಮಹಾಪಾಪಗಳೆಲ್ಲ ನಶಿಸುತ್ತದೆ.

ಸಪ್ತಗಿರಿಯಲ್ಲಿರುವ ಪವಿತ್ರತೀರ್ಥಗಳಲ್ಲಿ ಭಕ್ತಿಯಿಂದ ಸ್ನಾನಮಾಡಿ ಚಿನ್ನ, ಬೆಳ್ಳಿ, ಗೋವು, ಭೂಮಿ ಇವುಗಳನ್ನು ದಕ್ಷಿಣೆಯೊಂದಿಗೆ, ಸುಗಂಧಯುಕ್ತವಾದ ತಾಂಬೂಲ, ದ್ರವ್ಯ, ಮೊಸರು, ಮಜ್ಜಿಗೆ, ಬೆಲ್ಲದ ಪಾನಕ, ಮೃಷ್ಟಾನ್ನ ಭೋಜನವನ್ನು ದಾನ ಮಾಡಿದರೆ, ಸಕಲ ಪಾಪಗಳು ನಿವಾರಣೆಯಾಗಿ, ಬಡತನವು ಹೋಗಿ ಐಶ್ವರ್ಯವಂತನಾಗುತ್ತಾನೆ.

ತಿರುಮಲ ಕ್ಷೇತ್ರದಲ್ಲಿ ಬಾಯಾರಿದವರಿಗೆ ನೀರು ಕೊಡದಿದ್ದರೆ ಅವರು ಪಶುಪಕ್ಷಿಗಳಾಗಿ ಹುಟ್ಟುತ್ತಾರೆ. ಹಾಗಾಗಿ ನೀರು ಕೊಡಬೇಕು. ನೀರನ್ನು ದಾನ

ಮಾಡಿದರೆ ಹೇಳಲಾಗದ ಅನೇಕ ವಿಧ ವಿಧದ ಸತ್ಫಲಗಳು ದೊರಕುತ್ತದೆ.. ಅವುಗಳನ್ನು ಹೇಳಲು ಸಾಧ್ಯವೇ ಇಲ್ಲ.. ಜಲದಾನದ ಮಹಿಮೆಗಳು ಅನಂತ ಎಂದು ಸೂತ ಮಹರ್ಷಿಗಳು ಮತ್ತೆ ಹೇಳುತ್ತ, ನಮ್ಮ ಗುರುಗಳಾದ ವೇದವ್ಯಾಸ ಮಹರ್ಷಿಗಳು ಒಂದುಸಾರಿ ಮಾಡಿದ ಇಂತಹ ವಿಶೇಷವಾದ ಕಾರ್ಯವನ್ನು ಗುರುತಿಸಿ ಅಂಜನಾದೇವಿಗೆ ಹೀಗೆ ಹೇಳಿದರು,

**ಅನ್ನದಾನಂ ವಸ್ತ್ರದಾನಂ ದ್ವಯಮೇತತ್ಪ್ರಶಂಸ್ಯತೇ**
**ಪಿತುಃ ಶ್ರಾದ್ಧಮ್ ವಿಶೇಷೇಣ ವೆಂಕಟಾದ್ರೌ ನಗೋತ್ತಮೇ**
**ಸಾಲಗ್ರಾಮಶಿಲಾದಾನಂ ಯಃ ಕರೋತಿ ನಗೋತ್ತಮೇ**
**ಅಂಗ ಭಂಗಮವಾಪ್ನೋತಿ ಸ್ವಾನುಭೂತಿಂ ಚ ವಿಂದತಿ**
**ಕನ್ಯಾಂ ದದಾತಿ ಯೋ ದೇವಿ ಶೌತ್ರಿಯಾಯ ದ್ವಿಜಾತಯೇ**
**ವಿಷ್ಣುಲೋಕಂ ಸಮಾನಾದ್ಯ ಮೋದತೇ ಪಿತೃಭಿಸ್ಸಹ**

ವೆಂಕಟಾಚಲ ಕ್ಷೇತ್ರದಲ್ಲಿ ವಿಶೇಷವಾಗಿ ಅನ್ನದಾನ, ವಸ್ತ್ರದಾನ, ಪಿತೃಶ್ರಾದ್ಧ, ಅತ್ಯಂತ ಪ್ರಮುಖವಾದುದು. ಹಾಗೆಯೇ ಈ ಪರ್ವತದಲ್ಲಿ ಪವಿತ್ರ ಸಾಲಗ್ರಾಮಗಳನ್ನು ದಾನ ಮಾಡಿದರೆ ಸಕಲ ಸುಖಗಳನ್ನು ಅನುಭವಿಸಿ ಕೊನೆಗೆ ಕೈವಲ್ಯ ಪ್ರಾಪ್ತಿಯಾಗುತ್ತದೆ. ಈ ಕ್ಷೇತ್ರದಲ್ಲಿ ಕನ್ಯಾದಾನ ಮಾಡಿದರೆ ವಿಷ್ಣು ಲೋಕದಲ್ಲಿ ಸುಖಭೋಗಗಳು ಲಭಿಸುತ್ತವೆ ಎಂದು ಸೂತ ಮಹರ್ಷಿಗಳು ವಿವರಿಸಿದರು.

ಆದ್ದರಿಂದ, ಓ ಮಹನೀಯರೇ! ವೆಂಕಟಾಚಲ ಕ್ಷೇತ್ರದಲ್ಲಿ ನೀವು ಕೇಳಿ ತಿಳಿದುಕೊಂಡ ದಾನಗಳನ್ನು ಮಾಡುವಂತವರಾಗಿ. ನೀವು ತಿಳಿದೋ, ತಿಳಿಯದೆಯೋ ಮಾಡಿದ ಪಾಪಗಳು ಮತ್ತು ದೋಷಗಳನ್ನು ಹೋಗಿಸಿಕೊಳ್ಳಿ. ಇನ್ನು ಇಲ್ಲಿಯೇ ಕಾಲವ್ಯರ್ಥ ಆಗುವುದು ಬೇಡ ಬೇಗ ಹೊರಡಿ. ವೆಂಕಟಾಚಲ ಪರ್ವತದ ಬಳಿ ಹೋಗಿ ಆ ದಿವ್ಯ ಪರ್ವತಕ್ಕೆ ಭಕ್ತಿಯಿಂದ ನಮಿಸಿ ಹತ್ತಿ. ಅದನ್ನು ಹತ್ತುವಾಗ ವಿವಿಧ ರೀತಿಯಲ್ಲಿ ಪ್ರಾರ್ಥನೆ ಮಾಡಿ.

**ವೆಂಕಟಾದ್ರಿಂ ಗಿರಿಂತಸ್ತು ಪ್ರಾರ್ಥಯೇತ್ಪುಣ್ಯ ವರ್ಧನಮ್**
**ಸ್ವರ್ಣಾಚಲ ಮಹಾಪುಣ್ಯ ಸರ್ವದೇವ ನಿಷೇವಿತ**
**ಬ್ರಹ್ಮಾದಯಾಽಪಿ ಯಂ ದೇವಾಃ ಸೇವಂತೇ ಶ್ರದ್ಧಾಯ ಸಹ**
**ತಂ ಭವನ್ತ ಮಹಾಂ ಪದ್ಭ್ಯಾಮ್ ಆಕ್ರಮೇಯಂ ನಗೋತ್ತಮ್**
**ಕ್ಷಮಸ್ವ ತದಘಂ ಮೇಽದ್ಯ ದಯಯಾ ಪಾಪಚೇತಸಃ**
**ತನ್ಮೂರ್ಧ್ನಿ ಕೃತಾಽಽ ವಾಸಂ ಮಾಧವಂ ದರ್ಶಯಸ್ವ ಮೇ**

**ಪ್ರಾರ್ಥಯಿತ್ವಾ ಸರಸ್ತ್ಯವಂ ವೆಂಕಟಾದ್ರಿ ನಗೋತ್ತಮಮ್**
**ತತಾಮೃದು ಪದಂ ಗಚ್ಛೇತ್ ಪಾವನಂ ವೆಂಕಟಾಚಲಂ**
**ವೆಂಕಟಾದ್ರೌ ಮಹಾಪುಣ್ಯೇ ಸರ್ವಪಾತಕನಾಶನೇ**
**ಸ್ವಾಮಿಪುಷ್ಕರಣೀ ತೀರ್ಥೇ ಸ್ನಾತ್ವಾ ನಿಯಮ ಪೂರ್ವಕಮ್**
**ಪಿಂಡದಾನಂ ತತಃ ಕುರ್ಯಾತ್ ಅಪಿ ಸರ್ವಹ ಮಾತ್ರಕಮ್**
**ಶಮೀದಲ ಸಮಾನಾ ನ್ವಾ ದದ್ಯಾತ್ಪಿಂಡಾನ್ ಪಿತೃ ಸ್ಮೃತಿ**
**ಸ್ವರ್ಗಸ್ಥಾ ಮೋಕ್ಷಮಾಯಾನ್ತಿ ಸ್ವರ್ಗ ನರಕವಾಸಿನಃ**

ಓ ಬಂಗಾರು ಪರ್ವತರಾಜ! ಸರ್ವ ದೇವತೆಗಳಿಂದ ಪೂಜೆಯನ್ನು ಸ್ವೀಕರಿಸುತ್ತಿರುವ ಮಹಾ ಪವಿತ್ರವಾದ ಶೇಷಾಚಲನೇ! ಬ್ರಹ್ಮಾದಿ ದೇವತೆಗಳು ಅತ್ಯಂತ ನೇಮನಿಷ್ಠೆ, ಭಕ್ತಿಶ್ರದ್ಧೆಯಿಂದ ನಿನ್ನನ್ನು ಪೂಜಿಸುತ್ತಿದ್ದಾರೆ. ಹೀಗಿರುವಾಗ ನಾನು ಬೆಟ್ಟ ಹತ್ತುವ ಮುನ್ನ ನನ್ನ ಪಾದವನ್ನು ನಿನ್ನ ಮೇಲೆ ಇಡುತ್ತಿದ್ದೇನೆ. ಕರುಣಾ ಸಾಗರನಾದ ನೀನು ಕರುಣೆಯಿಂದ ನನ್ನ ಪಾಪಗಳನ್ನು, ತಪ್ಪುಗಳನ್ನು ಕ್ಷಮಿಸಿ ನಿನ್ನ ಪರ್ವತ ಶಿಖರದಲ್ಲಿ ಪ್ರಕಾಶಮಾನನಾಗಿ ಬೆಳಗುತ್ತಿರುವ ಪ್ರಭು ಶ್ರೀನಿವಾಸನನ್ನು ನಾನು ನೋಡುತ್ತೇನೆ ಎಂದು ಹೇಳಿ ಪ್ರದಕ್ಷಿಣ ಪೂರ್ವಕವಾಗಿ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಮೃದುವಾಗಿ ಪಾದಗಳನ್ನು ತಿರುಪತಿ ಬೆಟ್ಟದ ಮೇಲೆ ಇಡುತ್ತಿದ್ದೇನೆ. ಮಹಾಪವಿತ್ರವಾದ ದರ್ಶನ ಮಾಡಿದರೆ ಮಾತ್ರ, ಸಕಲ ಪಾಪಗಳನ್ನು ಹೋಗಲಾಡಿಸಿಕೊಳ್ಳಲು ಸ್ವಾಮಿಪುಷ್ಕರಣಿಯನ್ನು ದರ್ಶನ ಮಾಡಿ ಭಕ್ತಿಯಿಂದ ನಮಸ್ಕರಿಸಿ ಆ ಪವಿತ್ರತೀರ್ಥದಲ್ಲಿ ಸಂಕಲ್ಪಮಾಡಿ ಸ್ನಾನ ಮಾಡಬೇಕು. ಅದೇ ಪುಷ್ಕರಣಿ ತೀರ್ಥದಿಂದ ಪಿತೃಗಳಿಗೆ ತರ್ಪಣ ಕೊಡಬೇಕು. ಹೆಸರುಬೇಳೆ ಅಥವಾ ಶಮೀವೃಕ್ಷದ ಸಮ್ಮಿತ್ತನ್ನು ಉಪಯೋಗಿಸಿ, ಪಿಂಡವನ್ನು ಮಾಡಿ ಪಿತೃದೇವತೆಗಳಿಗೆ ಸಮರ್ಪಣೆ ಮಾಡಿ, ಶ್ರಾದ್ಧತರ್ಪಣ ಕೊಡಬೇಕು. ಹಾಗೆ ಮಾಡಿದಾಗ ಮಾತ್ರ ಸ್ವರ್ಗದಲ್ಲಿ ಇರುವ ಪಿತೃದೇವತೆಗಳಿಗೆ ಮೋಕ್ಷ ಪ್ರಾಪ್ತಿ ಆಗುತ್ತದೆ. ನರಕದಲ್ಲಿ ಇರುವ ಪಿತೃದೇವತೆಗಳಿಗೆ ಸ್ವರ್ಗ ಪ್ರಾಪ್ತಿಯಾಗಿ, ಶ್ರಾದ್ಧಮಾಡಿ, ತರ್ಪಣ ಕೊಟ್ಟವರಿಗೆ ಸರ್ವ ಶ್ರೇಯಸ್ಸನ್ನು ಕೋರಿ ಹರಸುತ್ತಾನೆ. ಸ್ವಾಮಿ ಶ್ರೀವೆಂಕಟೇಶನ ಸನ್ನಿಧಾನದಲ್ಲಿ ಏನೇ ದಾನ ಮಾಡಿದರೂ, ವಿತರಣೆ ಮಾಡಿದರೂ ಅದು ಶ್ರೇಯಸ್ಕರ. ಸತ್ಪಾತ್ರರಿಗೆ ದಾನ ಮಾಡಿದರೆ ಸಂಪೂರ್ಣ ಫಲ ದೊರಕುತ್ತದೆ. ಹಾಗೆ ಶ್ರೀವೆಂಕಟಾಚಲ ಕ್ಷೇತ್ರದಲ್ಲಿ ಎಷ್ಟೇ ಚಿಕ್ಕ ತಪ್ಪು, ಪಾಪ ಮಾಡಿದರೆ ಅದು ಒಂದಕ್ಕೆ ಎರಡಾಗುತ್ತದೆ ಅದರ ಫಲವನ್ನು ಅನುಭವಿಸಬೇಕಾಗುತ್ತದೆ. ತಿರುಮಲ ಕ್ಷೇತ್ರದಲ್ಲಿ ಯಾವಾಗಲೂ ಸದ್ಭಾವನೆ, ಸದ್ವಿಚಾರದ ಆಲೋಚನೆ, ಒಳ್ಳೆಯ ನಡವಳಿಕೆ ಮುಖ್ಯವಾಗಿ ಇರಬೇಕು. ಅದು

ವಿಹಾರ ಕ್ಷೇತ್ರವಲ್ಲ, ವಿನೋದ ಕ್ಷೇತ್ರವಲ್ಲ, ಅದು ಪವಿತ್ರವಾದ ಸಿದ್ಧಿಕ್ಷೇತ್ರ. ಸಪ್ತಗಿರಿ ಸಾಧನ ಕ್ಷೇತ್ರ. ಆ ಪವಿತ್ರ ಕ್ಷೇತ್ರದಲ್ಲಿ ಏನೇ ಸಾಧನೆ ಮಾಡಿದರೂ ಅದು ಫಲಿಸುತ್ತದೆ. ಆದರೆ ಆ ಸಾಧನೆ ಹೇಗಿರಬೇಕು? ಸಾಧನೆ ತಪಸ್ಸಾಗಿರಬೇಕು ಧ್ಯಾನ ಆಗಿರಬೇಕು. ಸದ್ಗ್ರಂಥ ಪಾರಾಯಣ, ಸಂಕೀರ್ತನ, ಜಪ ಮಾಡಬೇಕು. ಭಜನೆ ಪುರಾಣ ಪ್ರವಚನ ಮಾಡಬೇಕು. ಅದೂ ಆಗದಿದ್ದರೆ ಕ್ಷೇತ್ರವನ್ನು ನಿರ್ಮಲವಾಗಿ, ಸ್ವಚ್ಛವಾಗಿ ಇಡಲು ಶ್ರಮದಾನ ಮಾಡಬೇಕು. ಕ್ಷೇತ್ರದ ಸೌಂದರ್ಯವನ್ನು ಹೆಚ್ಚಿಸಿ ಕಾಪಾಡಲು ಹಣ್ಣಿನ ಗಿಡ, ಸುವಾಸನಾಯುಕ್ತ ಬಣ್ಣ ಬಣ್ಣದ ಹೂವಿನ ಗಿಡವನ್ನು ಹಾಕಿ ಬೆಳಸಿ ಶ್ರೀನಿವಾಸನ ಭಕ್ತರ ಸೇವೆ ಮಾಡಬೇಕು. ಅನ್ನದಾನ, ವಸ್ತ್ರದಾನ, ಔಷಧ ದಾನ ಹೀಗೆ ಇಂತಹ ದಾನ ಏನಾದರೂ ಯಾವುದಾದರೂ ಮಾಡಬಹುದು.

ಹೀಗಾಗಿ ನಿಮ್ಮ ನಿಮ್ಮ ಈ ಯಾತ್ರೆಯಲ್ಲಿ ಆ ಕ್ಷೇತ್ರದಲ್ಲಿ ಕೆಲಸಕ್ಕೆ ಬಾರದ ಮಾತುಗಳನ್ನು ಆಡಿ ಕಾಲ ವ್ಯರ್ಥ ಮಾಡದೆ ಒಂದೊಂದು ಕ್ಷಣವನ್ನು ಸದ್ವಿನಿಯೋಗ ಮಾಡಬೇಕು. ಆ ಸ್ವಾಮಿಯ ಕೃಪೆಯಿಂದ ವೆಂಕಟಾಚಲ ಸಂಕಲ್ಪ ಯಾತ್ರೆ ದೊರೆತಿದೆ. ಆ ಸ್ವಾಮಿಯ ದಯೆಯಿಂದ ಆ ದಿವ್ಯಕ್ಷೇತ್ರದಲ್ಲಿ ಸಂಚರಿಸುವ ಯೋಗ ಸಿದ್ಧಿಸುತ್ತದೆ. ಯಾತ್ರೆಯ ಸಮಯದಲ್ಲಿ ಆಲಸ್ಯವನ್ನಾಗಲಿ, ನಿರ್ಲಕ್ಷ್ಯವನ್ನಾಗಲಿ ತೋರಬಾರದು.

ಅಷ್ಟುಮಾತ್ರವಲ್ಲದೆ, ನಿಮ್ಮ ಈ ಯಾತ್ರೆಯ ಮುಖ್ಯ ಗುರಿ ಶ್ರೀನಿವಾಸನ ದರ್ಶನ ಆಗಿರಬೇಕು, ಹಾಗೆಯೇ ಸ್ವಾಮಿಯನ್ನು ಕುರಿತು ಕೆಲವು ವಿಶೇಷವನ್ನು ಹೇಳುತ್ತೇನೆ, ಸಾವಧಾನವಾಗಿ ಕೇಳಿ.

**"ಶ್ರೀ ವೆಂಕಟೇಶ್ವರ ದೇವಂ ಯಃ ಪಶ್ಯತಿ ಸಕೃನ್ನರಃ**
**ಸ ನರಾ ಮುಕ್ತಿಮಾಪ್ನೋತಿ ವಿಷ್ಣುಸಾಯುಜ್ಯಮಾಪ್ನುಯಾತ್"**

ಸ್ವಾಮಿ ವೆಂಕಟೇಶ್ವರನನ್ನು ಒಂದೇ ಒಂದುಬಾರಿ ಮನಸಾ ಸ್ಮರಿಸುತ್ತ, ವಾಚಾ ಕೀರ್ತಿಸುತ್ತ ಒಂದೇ ಒಂದು ಬಾರಿ ದರ್ಶನ ಮಾತ್ರದಿಂದ ಮೋಕ್ಷವು ಸಿದ್ಧಿಸುತ್ತದೆ. ಯಾವರೀತಿಯ ಕಷ್ಟ, ಸಾಧನೆ ಬೇಕಿಲ್ಲ. ಕೃತಯುಗದಲ್ಲಿ ಹತ್ತು ವರ್ಷ, ತ್ರೇತಾಯುಗದಲ್ಲಿ ಒಂದು ವರ್ಷ, ದ್ವಾಪರ ಯುಗದಲ್ಲಿ ಐದು ತಿಂಗಳು, ಈ ಕಲಿಯುಗದಲ್ಲಿ ಒಂದು ದಿನ ಸಂಪಾದಿಸಿದ ಪುಣ್ಯಕ್ಕೆ, ಕೋಟಿಗಿಂತ ಅಧಿಕವಾಗಿ, ಒಂದು ಕ್ಷಣಮಾತ್ರ ದರ್ಶನ ಮಾಡುವುದರಿಂದ ತಕ್ಷಣ ಲಭಿಸುತ್ತದೆ. ಇದರಲ್ಲಿ ಸಂದೇಹವಿಲ್ಲ.

**ಕಿಂ ದಾನ್ತೈಃಕಿಂ ವ್ರತೈಸ್ತೇಷಾಂ ಕಿಂ ತಪೋಭಿ ಕಿ ಮದ್ವರೈಃ**
**ವೆಂಕಟೇಶಂ ಪರಂ ದೇವಂ ಯಾ ನ ಚಿಂತಯತಿ ಕ್ಷಣಮ್**

**ಅಜ್ಞಾನೀ ಸ ಚ ಪಾಪೀ ಸ್ಯಾತ್ ಸ ಮೂಕೋ ಬಧಿರಸ್ತಥಾ**
**ಸ ಜಡೋऽನ್ಧಶ್ಚ ವಿಜ್ಞೇಯಃ ಛಿದ್ರಂ ತಸ್ಯ ಸದಾ ಭವೇತ್**

ಯಾವುದೇ ರೀತಿಯ ದಾನ ಮಾಡದವರಿರಲಿ, ತಪಸ್ಸನ್ನು ಮಾಡದವರಿರಲಿ, ಯಾವುದೇ ಯಜ್ಞ ಮಾಡದವರಿರಲಿ, ಶ್ರೀನಿವಾಸ ದೇವರನ್ನು ಒಮ್ಮೆ ಸ್ಮರಿಸಿದರೆ ಸಾಕು. ಅವನ ಜನ್ಮ ಧನ್ಯವಾಗುತ್ತದೆ. ಹಾಗೆ ಮಾಡದವನನ್ನು ಅಜ್ಞಾನಿ, ಪಾಪಿ, ಮೂಕ, ಕಿವುಡ, ಮೂರ್ಖ, ಕುರುಡ ಎಂದು ಕರೆಯುತ್ತಾರೆ.

ವೆಂಕಟೇಶ್ವರನನ್ನು ಸ್ಮರಿಸುವವರಿಂದ ಸ್ನೇಹ, ದ್ವೇಷ, ಲೋಭ ಅಥವಾ ಇತರರ ಭಯದಿಂದ ಉಂಟಾಗುವ ದುಃಖಗಳು ಪರಿಹಾರವಾಗುತ್ತವೆ. ಮೇಲಾಗಿ ಚಿಕ್ಕ ಕ್ರಿಮಿಕೀಟಗಳಿಂದ ಹಿಡಿದು ಬ್ರಹ್ಮಾದಿ ದೇವತೆಗಳವರೆಗೆ ಎಲ್ಲರೂ ಶ್ರೀನಿವಾಸನ ಸನ್ನಿಧಿಯಲ್ಲಿ ಸಮಾನತೆಯನ್ನು ಪಡೆಯುತ್ತಾರೆ. ಅಂದರೆ ಶ್ರೀನಿವಾಸನು ತನ್ನ ಸನ್ನಿಧಿಯಲ್ಲಿ ನಿಂತು ತನ್ನನ್ನು ಸಮಾನವಾಗಿ ಪೂಜಿಸುವ ಮೇಲು ಕೀಳೆಂಬ, ಬಡವ ಬಲ್ಲಿದನೆಂಬ ಬೇಧಭಾವವಿಲ್ಲದೆ ಎಲ್ಲರನ್ನೂ ಸ್ವಾಗತಿಸುತ್ತಾನೆ. ಯಾರು ಬೇಕಾದರು ಸ್ಮರಿಸಬಹುದು. ಯಾರು ಬೇಕಾದರೂ ಭೇಟಿ ನೀಡಬಹುದು.

**"ಶ್ರೀನಿವಾಸ ಚ್ಚ ನ ಸಮಂ ನಾಧಿಕಂ ಪುಣ್ಯ ಮಸ್ತಿ ವೈ**
**ವೆಂಕಟಾದ್ರಿ ನಿವಾಸಂ ತಂ ದೃಷ್ಟಿ ಯೋ ಮೋಹಮಾಸ್ಥಿತಃ."**

ಶ್ರೀನಿವಾಸನನ್ನು ಪೂಜಿಸುವುದಕ್ಕಿಂತ, ಮಹಿಮಾನ್ವಿತವಾದ ಸೇವೆಗಿಂತ ಉದಾತ್ತ ಕೆಲಸ ಈ ಜಗತ್ತಿನಲ್ಲಿ ಬೇರೆ ಇಲ್ಲವೇ ಇಲ್ಲ. ಹಾಗೆಯೇ ಆ ದೇವನನ್ನು ಮರೆಯುವುದು, ದ್ವೇಷಿಸುವುದು ಮಹಾಪಾಪ. ಅಂತಹ ಮನುಷ್ಯ ಯಾವ ತರಹದ ಅಧೋಗತಿಗೆ ಇಳಿಯುತ್ತಾನೆ ಎಂಬುದನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಇಂತಹ ದೇವಾಧಿದೇವನ ದಿವ್ಯಲೀಲೆಯನ್ನು ವರ್ಣಿಸಲು ಸಾಧ್ಯವಿಲ್ಲ. ಎಷ್ಟು ಹೇಳಿದರು ಅದು ಕಡಿಮೆಯೆ. ಆದ್ದರಿಂದ ಋಷಿ ಮುನಿಗಳೇ, ವೆಂಕಟಾಚಲ ಕ್ಷೇತ್ರ ಯಾತ್ರೆಗೆ ಶ್ರದ್ಧಾಭಕ್ತಿಯಿಂದ ಹೊರಡಿ.

**ಭವಾಬ್ದಿತಾರಂ ಕಟಿವರ್ತಿ ಹಸ್ತಾಂ**
**ಸ್ವರ್ಣಾಂಬರಂ ರತ್ನ ಕಿರೀಟ ಕುಂಡಲಮ್**
**ಆಲಂಬಿ ಸೂತ್ರೋತ್ತಮ ಮಾಲ್ಯಭೂಷಿತಂ**
**ನಮಾಮ್ಯಹಂ ವೆಂಕಟ ಶೈಲನಾಯಕಮ್**

ವೆಂಕಟಶೈಲ ನಾಯಕ, ನಿನ್ನ ಪಾದಪದ್ಮಕ್ಕೆ ಶರಣಾಗಿ ಬೇಡಿದವರಿಗೆ ಅಗಾಧವಾದ ಸಂಸಾರ ಸಾಗರವನ್ನು ದಾಟಲು ಬೇಕಾದ ದಾರಿಯನ್ನು ಮಾಡಿಕೊಟ್ಟು,

ತೋರಿಸಿ ಅನಾಯಾಸವಾಗಿ ದಾಟಿಸಲು "ನಾನು ಇದ್ದೀನಿ" ಎಂದು ತೋರಿಸಿದ್ದೀಯ. ಅಲಂಕಾರ ಪ್ರಿಯನಾದ ನೀನು ಅನೇಕ ಬಂಗಾರದ ಆಭರಣದೊಂದಿಗೆ ವಜ್ರ ಕಿರೀಟ, ಕರ್ಣಕುಂಡಲ, ಯಜ್ಞೋಪವೀತ, ಪರಿಮಳಯುಕ್ತ ಬಣ್ಣ ಬಣ್ಣದ ಪುಷ್ಪಮಾಲೆಗಳಿಂದ ವಿರಾಜಮಾನನಾಗಿ ದರ್ಶನವನ್ನು ಕೊಡುತ್ತ ಎಲ್ಲರನ್ನು ಪ್ರೀತಿಸುವ ನಿನಗೆ ಕಾಯಾ, ವಾಚಾ, ಮನಸಾ ಭಕ್ತಿಯಿಂದ ನಮಸ್ಕರಿಸುತ್ತಿದ್ದೇನೆ ಎಂದು ಆನಂದೋದ್ರೇಕದಿಂದ ಪರವಶರಾಗಿ ಗೋವಿಂದಾ! ಗೋವಿಂದಾ! ಗೋವಿಂದಾ ಎಂದು ಸ್ತುತಿಸುತ್ತ ಸೂತ ಮಹರ್ಷಿಗಳು, ಶೌನಕಾದಿ ಮುನಿಗಳನ್ನು ಬೀಳ್ಕೊಟ್ಟು, ವೆಂಕಟಾಚಲಪತಿಯನ್ನು ಪ್ರಾರ್ಥಿಸಿದರು.

**ಶ್ರವಣಾತ್ಸರ್ವಪಾಪಘ್ನಂ ಮನನಾತ್ಪುಣ್ಯ ವರ್ಧನಮ್**
**ಸ್ವಾಧ್ಯಾನಾತ್ಸಿದ್ಧಿದಂ ವಿಷ್ಣಂ ಪ್ರೇಕ್ಷಣಾನ್ಮೋಕ್ಷದಂ ಭಜೇ**

ಪ್ರಭು! ಓ ವೆಂಕಟೇಶ! ನಿಮ್ಮ ದೈವಿಕ ಕಥೆಗಳನ್ನು ಕೇಳಿದವರ ಎಲ್ಲಾ ಪಾಪಗಳು ನಾಶವಾಗುತ್ತದೆ. ನಿನ್ನ ಪವಿತ್ರ ಚರಿತ್ರೆಯನ್ನು ಧ್ಯಾನಿಸಿದರೆ ಸಾಕು ಪುಣ್ಯವು ಎಣೆಯಿಲ್ಲದೆ ಬೆಳೆಯುತ್ತವೆ. ತಿರುಮಲೇಶ! ನಿನ್ನನ್ನು ಧ್ಯಾನಿಸಿದರೆ ಸಾಕು! ಅಣಿಮಾದಿ ಅಷ್ಟಸಿದ್ಧಿಗಳು ಪ್ರಾಪ್ತವಾಗುತ್ತದೆ. ಶರಣಾಗತವತ್ಸಲ ಓ ವೆಂಕಟೇಶ್ವರಸ್ವಾಮಿ! ಆಪಾದಮಸ್ತಕವು ನಿಮ್ಮ ದಿವ್ಯ ಮಂಗಳವಾದ ಮೂರ್ತಿಯನ್ನು ನೋಡಿದರೆ ಸಾಕು ಬಹಳ ಸುಲಭವಾಗಿ ಮೋಕ್ಷವು ಸಿದ್ಧಿಸುತ್ತದೆ. ಆದುದರಿಂದ ಭಕ್ತವತ್ಸಲನಾದ ಶ್ರೀನಿವಾಸ! ನಾನು ನಿನ್ನನ್ನು ಆರಾಧಿಸುತ್ತೇನೆ ಎಂದು ಸೂತಮಹರ್ಷಿಗಳು ಸ್ವಾಮಿಯನ್ನು ಪ್ರಾರ್ಥಿಸುತ್ತ ಈ ದಿವ್ಯಚರಿತೆಯನ್ನು ಹಾಡಿ, ಸ್ಮರಿಸಿ, ಧ್ಯಾನಿಸಿ ನಿಮ್ಮ ನಿಮ್ಮ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳಿ ಎಂದು ಶೌನಕಾದಿಗಳಿಗೆ ಸಂದೇಶವನ್ನು ಕೊಡುತ್ತ ಹೇಳಿದರು.

ಅನಂತಕೋಟಿ ಬ್ರಹ್ಮಾಂಡ ನಾಯಕ, ಅಡುಗಡುಗು ದಂಡಾಲವಾಡು, ಆಪದ್ಬಾಂಧವ, ಕರೆಯಲಾಕ್ಷಣ ಬಂದು ಮಾತನಾಡುವ ದೇವರದೇವ, ವಿಶೇಷವಾಗಿ "ಕಲೌ ವೆಂಕಟ ನಾಯಕ" ಎಂದು ಬಿರುದನ್ನು ಧರಿಸಿರುವ ಭಕ್ತಾಪರಾಧೀನ, ಭಕ್ತಜನ ಪಕ್ಷಪಾತಿ, ಭಕ್ತವತ್ಸಲನಾದ ವೆಂಕಟಾಚಲಪತಿಯನ್ನು ಕುರಿತು ಅನೇಕಾನೇಕ ವಿಧಾನದಲ್ಲಿ, ಅನೇಕ ವಿಶೇಷ ವಿಷಯವನ್ನು ಸೂತ ಮಹರ್ಷಿಗಳ ಮೂಲಕ ಕೇಳಿ ತಿಳಿದುಕೊಂಡ ಶೌನಕಾದಿಗಳು ವೆಂಕಟಾಚಲ ಯಾತ್ರೆಗೆ ಹೊರಟರು.

ಭಾರದ್ವಾಜ, ಕೌಶಿಕ, ಜಾಬಾಲಿ, ಕಶ್ಯಪ, ಕ್ರತು, ದಕ್ಷ, ಪೌಲಸ್ತ್ಯ, ಗೌತಮ, ಪುಲಹ, ಆಂಗೀರಸ, ದೇವಳ, ದೇವದರ್ಶನ, ಕೌತ್ಸ, ಕಣ್ವ, ಮೃಕಂಡ, ಶತಾನಂದ,

ಮೈತ್ರೇಯ ಹೀಗೆ ಅನೇಕ ಮಹರ್ಷಿಗಳು, ಮಹಾಯೋಗಿಗಳು, ಪರಮ ಮುನಿಗಳು ದೇವದೇವನಾದ ವೆಂಕಟೇಶನನ್ನು ಆದಷ್ಟು ಬೇಗ ದರ್ಶನ ಮಾಡುವ ಕುತೂಹಲ, ಆಸೆಯಿಂದ ಶೇಷಾಚಲ ಯಾತ್ರಿಗಳ ಗುಂಪಿನಲ್ಲಿ ಸೇರಿಕೊಂಡರು.

ಅಡಿಗಡಿಗೆ, ಭಕ್ತರೆಲ್ಲರು ಗೋವಿಂದ! ಗೋವಿಂದಾ! ಗೋವಿಂದಾ! ಏಡು ಕೊಂಡಲವಾಡ ಗೋವಿಂದಾ! ವೆಂಕಟರಮಣ ಗೋವಿಂದಾ! ಎಂದು ಸ್ವಾಮಿಯ ನಾಮಜಪ ಮಾಡುತ್ತ ಪ್ರಯಾಣವನ್ನು ಮುಂದುವರಿಸಿದರು. ಮೊದಲು ಗಂಗಾನದಿಯಲ್ಲಿ ಸ್ನಾನಮಾಡಿ ನಂತರ ದಕ್ಷಿಣಾಭಿಮುಖವಾಗಿ ಪ್ರಯಾಣಿಸುತ್ತ ಅನೇಕಾನೇಕ ತೀರ್ಥಗಳಲ್ಲಿ ಸ್ನಾನಮಾಡಿ, ಹಾಗೆಯೆ ಹಲವಾರು ಕ್ಷೇತ್ರದರ್ಶನ ಮಾಡಿ ಗಂಗೆಯ ಪಕ್ಕದಲ್ಲಿರುವ ಪವಿತ್ರ ಗೋದಾವರಿ ನದಿಯನ್ನು ತಲುಪಿದರು. ಅಲ್ಲಿ ತೀರ್ಥಕರ್ಮಗಳನ್ನು ನೆರವೇರಿಸಿ ಕೃಷ್ಣ ವೇಣಿನದಿಯಲ್ಲಿ ಸ್ನಾನ ಮಾಡಿ ಮುಂದೆ ಸಾಗಿದರು.

**"ತತ್ರತತ್ರ ಮಹಾನದ್ಯಾಂ ಸ್ನಾತ್ವಾಸ್ನಾತ್ವಾ ತಪೋಧನಾಃ**
**ವೆಂಕಟಾದ್ರಿಂ ಸಮಾಗತ್ಯ ತಪ್ತ ಜಾಂಬೂನದಾತ್ಮಕಮ್**
**ಸರ್ವತೀರ್ಥಮಯಂ ಪುಣ್ಯಂ ಸರ್ವ ಸಿದ್ಧ ನಿಷೇವಿತಮ್**
**ಮದಮಂಜುಲ ಮಯೂರ ಕೇಕಸ್ವನ ಮನೋಹಾರಮ್**
**ದಿವ್ಯ ನಿರ್ಝರ ಸಂಪೂರ್ಣಂ ಫಲಪುಷ್ಪ ದ್ರುಮೈರ್ಯುತಂ**
**ಅನತಿಕ್ರಮ್ಯ ಸೂತೋಕ್ತ ಸೇವಾಕ್ರಮಮಿಮೇ ಬುಧಾಃ**
**ಚಕ್ರುಃ ಶ್ರೀವೇಂಕಟೇಶಸ್ಯ ಸೇವಾಂ ಪರಮ ಪಾವನಮ್**
**ಸ್ನಾನಂ ಮಂತ್ರೇಶ್ಚ ಕುರ್ವನ್ತಾ ನಿರ್ಜರೇಷು ಸರಸ್ಸು ಚ**
**ಪಶ್ಯಂತನ್ತಾನಿ ರಮ್ಯಾಣಿ ಸಾಸೂನಿ ಮಣಿಮಂತಿ ಚ**
**ಶೃಣ್ವನ್ತಃ ಶ್ರೋತ್ರರಮ್ಯಾಣಿ ಪಕ್ಷಿಣಾಂ ವಚನಾನ್ಯಪಿ**
**ಗಾಯಂತಃ ಸಾಮಗಾನಾನಿ ಪಠಸ್ತಃ ಸ್ತುತಿಸಂಚಯಮ್**
**ನೃತ್ಯನ್ತಃ ಸಂಭ್ರಮಾತ್ ಸರ್ವೇ ಕ್ಷ್ವೇಲಂತಶ್ಚ ತಪೋಧನಾಃ**
**ಉತ್ಪತನ್ತಃ ಪತಂತಶ್ಚ ಪೂರ್ವಾವೇಶ ವಶಂಗತಾಃ**
**ಗಿರಿ ಪ್ರದಕ್ಷಿಣಂ ಸಮ್ಯಕ್ ಕುರ್ವನ್ತಸ್ತೇ ಶನೈಃ ಶನೈಃ**
**ಸ್ನಾತ್ವಾ ಕಪಿಲತೀರ್ಥಂ ಚ ದೃಷ್ಟ್ವಾಷ್ಟ್ವಾ ನತ್ವಾ ಶಿವಂಗಿರಮ್**
**ಆರುಹ್ಯ ಮೇರು ಶೃಂಗಾಭಂ ಸಿದ್ಧ ಗಂಧರ್ವ ಸೇವಿತಮ್"**

ಹೀಗಿರುವಾಗ ಅಲ್ಲಲ್ಲಿ ಮಾರ್ಗಮಧ್ಯದಲ್ಲಿ ಅವರಿಗೆ ಕಾಣಸಿಗುತ್ತಿದ್ದ ಮಹಾನದಿ, ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿ ಕೊನೆಗೆ ವೆಂಕಟಾಚಲ ಕ್ಷೇತ್ರವನ್ನು ತಲುಪಿದರು. ಆ ಪರ್ವತರಾಜನಿಗೆ ತಲೆಬಾಗಿ ನಮಸ್ಕರಿಸಿದರು.

ಆ ಕ್ಷೇತ್ರ ಸರ್ವತೀರ್ಥ, ದೇಗುಲಗಳಿಂದ ತುಂಬಿದ್ದು ಪವಿತ್ರತೆಯಿಂದ ಪ್ರಕಾಶಿಸುತ್ತಿತ್ತು. ಅನೇಕ ಸಿದ್ಧರು, ಸಾಧುಗಳು ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದರು. ಅಲ್ಲಿ ಮನೋಹರವಾಗಿ ಆಡುತ್ತ, ಪಾಡುತ್ತ ನಡೆವ ಭಕ್ತರ ಗುಂಪು ಗುಂಪಾಗಿ ಕಾಣಿಸುತ್ತಿದ್ದರು. ತೀರ್ಥಗಳಲ್ಲಿ, ಜಲಪಾತಗಳಲ್ಲಿ ನೀರು ಸಮೃದ್ಧವಾಗಿ ತುಂಬಿ ಹರಿಯುತ್ತಿತ್ತು. ಫಲಪುಷ್ಪಗಳಿಂದ ತುಂಬಿ ತೂಗಾಡುತ್ತಿದ್ದ ಗಿಡ ಮರಗಳಿಂದ ತುಂಬಿದ ವೆಂಕಟಾದ್ರಿಯನ್ನು ಸಮೀಪಿಸಿದರು. ಸೂತ ಮಹರ್ಷಿಗಳು ಹೇಳಿದ ವೆಂಕಟಾಚಲ ಸೇವಾಕ್ರಮದ ಪ್ರಕಾರ ಮೊದಲು ದೂರದಿಂದಲೇ ವೆಂಕಟಾಚಲ ಕ್ಷೇತ್ರಕ್ಕೆ ಭೇಟಿ ನೀಡಿ ಪ್ರದಕ್ಷಿಣೆ ಹಾಕಿದರು. ಬಹಳ ಸಂತೋಷದಿಂದ ಎಲ್ಲಾ ಋಷಿಗಳು ಸಾಮಗಾನವನ್ನು ಪಠಿಸುತ್ತಾ ಮತ್ತು ಇತರ ವೇದ ಮಂತ್ರಗಳಿಂದ ಶ್ರೀನಿವಾಸ ದೇವರನ್ನು ಸ್ತುತಿಸುತ್ತಾ ವೆಂಕಟಾಚಲಗಿರಿಯ ಪ್ರದಕ್ಷಿಣೆಯನ್ನು ಪ್ರಾರಂಭಿಸಿದರು. ಆ ಪ್ರದಕ್ಷಿಣೆಯಲ್ಲಿ ಆನಂದ ಉದ್ರೇಕದಿಂದ ಭಕ್ತರೆಲ್ಲರೂ ಅನಂತ ಭಕ್ತಿಭಾವದಿಂದ ಮಂತ್ರಮುಗ್ಧರಾಗಿ ಮೈಮರೆತು ಸಂತೋಷದಿಂದ ಗೋವಿಂದಾ.... ಗೋವಿಂದಾ.. ಎಂದು ಕೂಗುತ್ತಾ, ಬೀಳುತ್ತಾ, ಏಳುತ್ತಾ, ಉರುಳುತ್ತಿದ್ದರು.

ಶ್ರೀವೆಂಕಟಾಚಲ ಪರ್ವತದ ತಪ್ಪಲಿನಲ್ಲಿ ಇರುವ ಶ್ರೀಕಪಿಲತೀರ್ಥ ರಾಜನನ್ನು ಸಂದರ್ಶಿಸಿದರು. ಕಪಿಲತೀರ್ಥದ ನೀರಿನಲ್ಲಿ ಪುಣ್ಯಸ್ನಾನ ಮಾಡಿ ಪಿತೃಶ್ರಾದ್ಧವನ್ನು ನೆರವೇರಿಸಿದರು. ನಂತರ ಆ ತೀರ್ಥದಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಶ್ರೀಕಾಮಾಕ್ಷಿ ಸಮೇತ ಶ್ರೀ ಕಪಿಲೇಶ್ವರ ಸ್ವಾಮಿ ಮತ್ತು ಅಲ್ಲಿನ ಪರಿವಾರ ದೇವತೆಗಳನ್ನು ಪೂಜಿಸಿ, ಬಳಿಕ ಸಿದ್ಧ, ಗಂಧರ್ವ, ದೇವಾನುದೇವತೆಗಳಿಂದ ಸೇವೆ ಮಾಡಿಸಿಕೊಳ್ಳುತ್ತಿರುವ ಸಪ್ತಗಿರಿಯನ್ನು ಏರಿದರು.

ಅತ್ಯಂತ ಅದ್ಭುತವಾದ, ಭವ್ಯವಾದ ಕಾಡು, ಬಂಡೆಗಳಿಂದ ಕೂಡಿದ ಚಿನ್ನದ ಮೇರುಪರ್ವತಕ್ಕಿಂತ ಸಾವಿರಪಟ್ಟು ಹೆಚ್ಚು ಪ್ರಕಾಶಮಾನವಾಗಿ ಬೆಳಗುತ್ತಿರುವ ಶ್ರೀವೆಂಕಟಾಚಲ ಕ್ಷೇತ್ರವನ್ನು ನೋಡಿ ಬೆರಗಾದರು. ಅಂತಹ ದಿವ್ಯ ಭವ್ಯವಾದ ಪರ್ವತವನ್ನು ಹಿಂದೆಂದು ನೋಡಿರಲಿಲ್ಲ. ಆಶ್ಚರ್ಯದಿಂದ ಅವರು ಅತ್ಯಂತ ಶ್ರೇಷ್ಠವಾದ ಆನಂದನಿಲಯ, ಬಂಗಾರದ ವಿಮಾನವನ್ನು ನೋಡಿ ಭಕ್ತಿಪರವಶರಾಗಿ

ನಮಸ್ಕಾರ ಮಾಡಿದರು. ಪವಿತ್ರ ಶ್ರೀಸ್ವಾಮಿ ಪುಷ್ಕರಣಿಯಲ್ಲಿ ಸ್ನಾನಮಾಡಿ ವರಾಹಸ್ವಾಮಿಯನ್ನು ಪೂಜಿಸಿ ನಂತರ ಆನಂದನಿಲಯವನ್ನು ಪ್ರವೇಶಿಸಿದರು.

**ಕೋಟಿಕಂದರ್ಪ ಲಾವಣ್ಯಂ ಕಿರೀಟ ಮಕುಟೋಜ್ವಲಮ್**
**ಉರಃಸ್ಥಿತ ಶ್ರೀಯಾऽಕ್ರಾಂತ ಮುಕ್ತದಾಮೋಪಶೋಭಿತಮ್**
**ಚತುರ್ಭುಜಮುದಾರಾಂಗಂ ಶಂಖ ಚಕ್ರಧರಂ ಪರಮ್**
**ನೀಲಮೇಘನಿಭಂ ಶ್ಯಾಮಂ ಪೀತವಾಸ ಸಮಚ್ಯುತಮ್**
**ಶ್ರೀಭೂಮಿ ಸಹಿತಂ ವಿಷ್ಣು ಪದ್ಮಾರ್ಚಿತ ಪದಾಂಬುಜಮ್**
**ಪ್ರಣೇಮುಂ ಸಮಾನೇ ಪೃಷ್ಟ್ವಾ ಹರ್ಷೋತ್ಫುಲ್ಲ ವಿಲೋಚನಾಃ**
**ತುಷ್ಟುಪುರ್ವೇದ ಮಂತ್ರಶ್ಚ ಸ್ತೋತ್ರಶ್ಚ ಶ್ರುತಿ ಸಮ್ಮತಃ"**

ಕೋಟಿ ಮನ್ಮಥರ ಸೌಂದರ್ಯದಿಂದ ಪ್ರಕಾಶಿಸುತ್ತಿರುವವನು, ವಜ್ರ ವೈಡೂರ್ಯ ಗಳಿಂದ ಕೂಡಿದ ಮಣಿಮಯ ಕಿರೀಟದಿಂದ ಉಜ್ವಲವಾಗಿ ದರ್ಶನಕೊಡುತ್ತಿರುವವನು, ವಕ್ಷಸ್ಥಳದಲ್ಲಿ ಮಹಾಲಕ್ಷ್ಮೀದೇವಿ ಸಮೇತನಾಗಿ ಮುತ್ತಿನ ಮಾಲೆಗಳಿಂದ ಅಲಂಕರಿಸಲ್ಪಟ್ಟು ವಿನೂತನವಾಗಿ ಶೋಭಿಸುತ್ತಿರುವವವನೂ, ಹಸ್ತದಲ್ಲಿ ಶಂಖ ಚಕ್ರ, ಕಟಿ ವರದ ಹಸ್ತಹೊಂದಿರುವ, ಚತುರ್ಭುಜನಾದ, ನೀಲಮೇಘಶ್ಯಾಮ, ಪಿತಾಂಬರಧಾರಿ ಅಚ್ಯುತನು, ಅನಂತನು, ಶ್ರೀಭೂದೇವಿ ಸಹಿತನಾಗಿರುವವನು. ಸಹಸ್ರ ಪದ್ಮಗಳಿಂದ ಅರ್ಚಿಸಿ ಕೊಳ್ಳುತ್ತಿರುವ ಪಾದಪದ್ಮ ವಿರಾಜಿತನೂ ಆದ ಆನಂದನಿಲಯನನ್ನು ಆನಂದವಾಗಿ ವೇದಮಂತ್ರಗಳಿಂದ ಸ್ತುತಿಸುತ್ತಿದ್ದಾರೆ. ಮನಃ ಪೂರ್ತಿಯಾಗಿ ನೋಡಿ ಕಣ್ಣು ತುಂಬಿಕೊಂಡಿ ದ್ದಾರೆ. ಸಾಷ್ಟಾಂಗ ಪ್ರಣಾಮಗಳನ್ನು ಮಾಡಿದರು. ದೇವತೆಗಳಿಂದ ಸುತ್ತುವರೆದಿರುವ, ಅನಂತ, ಪಾದಕಮಲಗಳಿಂದ ಧನ್ಯರಾಗಿ ಆನಂದನಿಲಯನನ್ನು, ವೇದ ಮಂತ್ರಗಳಿಂದ ಸ್ತುತಿಸಿದರು. ಕನ್ನೂರಪಾಕಕ್ಕೆ ಭೇಟಿ ನೀಡಿದರು. ಸಾಷ್ಟಾಂಗ ಮಾಲೆ. ಭೂಮಿಯ ಕಣಗಳನ್ನು ತಾಳ್ಮೆ ಎಂದು ಪರಿಗಣಿಸಬಹುದು. ಆದರೆ ಶ್ರೀಪತಿಯಾದ ಶ್ರೀನಿವಾಸ ದೇವರ ಪರಿಪೂರ್ಣ ಗುಣಗಳನ್ನು ವರ್ಣಿಸಲು ಸಾಧ್ಯವಿಲ್ಲ ಎಂದು ಯೋಚಿಸಿ ಅನೇಕ ಬಗೆಯಲ್ಲಿ ವೆಂಕಟಾಚಲಪತಿಯನ್ನು ಕೊಂಡಾಡಿದರು. ಶ್ರೀವೆಂಕಟೇಶ್ವರನ ಅಷ್ಟೋತ್ತರ ಶತನಾಮಗಳನ್ನು ಸುಶ್ರಾವ್ಯವಾಗಿ ಮತ್ತು ಶ್ರದ್ಧಾಭಕ್ತಿಯಿಂದ ಹಾಡುತ್ತ, ಶ್ರೀನಿವಾಸನ ಪಾದಕಮಲಗಳನ್ನು ಕಮಲದ ಹೂವುಗಳಿಂದ ಪೂಜಿಸಿದರು. ನಂತರ ಸ್ವಾಮಿ ಶ್ರೀವೆಂಕಟೇಶನ ಪಾದದಲ್ಲಿದ್ದ ತುಳಸಿದಳಗಳನ್ನು ಸ್ವೀಕರಿಸಿದರು "ಓಂ ಶ್ರೀಯೈಃ

ನಮಃ, ಓಂ ಲೋಕ ಧಾತ್ರ್ಯೈ ನಮಃ, ಓಂ ಬ್ರಹ್ಮ ಮಾತ್ರೇ ನಮಃ..." ಎಂಬುದಾಗಿ ಚರ್ತುವಿಶಂತಿ 24 ನಾಮಗಳಿಂದ ಅರ್ಚಿಸಿದರು. ಸ್ವಾಮಿಯ ವಕ್ಷಸ್ಥಳದಲ್ಲಿರುವ ಶ್ರೀ ಮಹಾಲಕ್ಷ್ಮಿಯನ್ನು ಪೂಜಿಸಿದರು. ಕೂಡಲೆ ಶ್ರೀನಿವಾಸನು ಪ್ರತ್ಯಕ್ಷನಾಗಿ ತನ್ನನ್ನು ಪೂಜಿಸಿ ಕಾಣಿಕೆಗಳನ್ನು ಅರ್ಪಿಸಿದ ಪರಮ ಯೋಗಿಗಳಿಗೆ ಭಕ್ತರಿಗೆ ಹೀಗೆ ಹೇಳಿದನು.

"ಓ ಮಹಾಮಹಿಮರೇ! ನೈಮಿಷಾರಣ್ಯದಲ್ಲಿ ನಿಮ್ಮೆಲ್ಲರನ್ನು ಅನುಗ್ರಹಿಸಿದ್ದೇನೆ. ಸೂತ ಮಹರ್ಷಿಗಳಿಂದ ವೆಂಕಟಾಚಲೇಶನ ಮಹಾತ್ಮೆ, ಚರಿತ್ರೆಯನ್ನು ನೀವೆಲ್ಲರೂ ಭಕ್ತಿಯಿಂದ ಕೇಳಿದ್ದೀರ. ಈ ಪುಣ್ಯಚರಿತ್ರೆಯನ್ನು, ವೆಂಕಟಾಚಲ ಮಹಾತ್ಮೆಯನ್ನು ಕ್ಷೇತ್ರದಿಂದ ಎಷ್ಟೇ ದೂರದಲ್ಲಿದ್ದರೂ ಶ್ರದ್ಧಾಭಕ್ತಿಯಿಂದ ಕೇಳಿದ್ದೀರಾ, ಮನನಮಾಡಿ ಪಠಿಸಿದವರೆಲ್ಲರಿಗೂ ಅವರ ಮನಃ ಸಂಕಲ್ಪಗಳು, ಎಲ್ಲಾ ಇಷ್ಟಾರ್ಥಗಳು ನೆರವೇರುತ್ತವೆ. ಮುಖ್ಯವಾಗಿ ನಾನು ಈ ಭೂಮಿಯಲ್ಲಿ ಮಾನವರ ಉದ್ಧಾರಕ್ಕಾಗಿಯೇ ಅವತರಿಸಿದ್ದೇನೆ. ಕನ್ಯಾಮಾಸದಲ್ಲಿ ಈ ವೆಂಕಟಾಚಲ ಮಹಾತ್ಮೆಯನ್ನು ಕೇಳಿದರೆ, ಪಠಿಸಿದರೆ ನಾನು, ಅತ್ಯಂತ ಸುಲಭವಾಗಿ ಸಂತೋಷದಿಂದ ವರವನ್ನು ಕೊಡುತ್ತೇನೆ. ಈ ಕಲಿಯುಗದಲ್ಲಿ ನನ್ನನ್ನು ಸುಲಭವಾಗಿ ಮೆಚ್ಚಿಸಲು, ಜಯಿಸಲು ಇದೇ ಪ್ರಧಾನ ಮಾರ್ಗ ಆದ್ದರಿಂದ "ಕಲೌ ವೆಂಕಟ ನಾಯಕ" ಎಂಬ ಬಿರುದು ಧರಿಸಿ ಕಲಿಯುಗದಲ್ಲಿ ಮಾನವರಿಗಾಗಿಯೇ ನಾನು ಈ ಪರ್ವತದಲ್ಲಿ ನೆಲೆಸಿ ನಿಂತಿರುವೆ. ಬೇಡಿದವರಿಗೆ ಧನ, ಧಾನ್ಯ, ಸಂಪತ್ತು, ಭೂಮಿ, ಸಂತಾನ ಹೀಗೆ ಸಕಲ ಸಂಪತ್ತನ್ನೂ ವರವಾಗಿ ಕೊಡುತ್ತೇನೆ. ಅದಕ್ಕಾಗಿಯೇ ನನ್ನನ್ನು **"ವರಾಲ ರಾಯುಡು"** ಎಂದು ಕರೆಯುತ್ತಾರೆ. ಇದಲ್ಲದೆ, ನಾನು ಜೀವನದ ಅಂತ್ಯದಲ್ಲಿ ಸುಲಭವಾಗಿ ಮೋಕ್ಷವನ್ನು ನೀಡುತ್ತೇನೆ.

ಹೀಗೆ ಸಾಕ್ಷಾತ್ತಾಗಿ ಪ್ರತ್ಯಕ್ಷ ದರ್ಶನವನ್ನು ನೀಡುತ್ತ ವರವನ್ನು ನೀಡುವ ಸ್ವಾಮಿಯನ್ನು ಮಹರ್ಷಿಗಳೆಲ್ಲರು, ಭಕ್ತರೆಲ್ಲರೂ ಸಂತಸದಿಂದ ದರ್ಶನ ಪಡೆದರು. ಇವರೆಲ್ಲರೂ ಆ ವೆಂಕಟಾಚಲ ಕ್ಷೇತ್ರದಲ್ಲಿ ಐದು ವರ್ಷಗಳ ಕಾಲ ಇದ್ದು, ಅದರಲ್ಲಿನ ಪುಣ್ಯಕ್ಷೇತ್ರಗಳ ಸೇವೆ ಮಾಡಿದರು. ದೈವಿಕ ಸ್ಥಳಗಳಿಗೆ ಭೇಟಿ ನೀಡಿದರು. ಅವರು ತಮ್ಮ ಸಾಧನಾ ಮತ್ತು ತಪಸ್ಸುಗಳನ್ನು ಮುಂದುವರೆಸಿದರು. ಹಿಂದಿರುಗುವ ಪ್ರಯಾಣದಲ್ಲಿ, ಅವರವರ ತಮ್ಮ ದೈವಿಕ ಭಾವನೆಗಳನ್ನು ಅನೇಕ ರೀತಿಯಲ್ಲಿ ಅನುಭವವನ್ನು ಹಂಚಿಕೊಳ್ಳುತ್ತ, ನಂತರ ನೈಮಿಷಾರಣ್ಯವನ್ನು ತಲುಪಿ ಅವರ ಮಹಾಭಾಗ್ಯಕ್ಕೆ ಕಾರಣರಾದ ಸೂತ ಮಹರ್ಷಿಗೆ ಹೀಗೆ ಹೇಳಿದರು.

"ಓ ಮಹನೀಯ! ಸೂತಮಹರ್ಷೀ! ನಿಮ್ಮ ಕೃಪೆಯಿಂದ ನಮಗೆಲ್ಲರಿಗೂ ಶ್ರೀವೆಂಕಟೇಶನ ದಿವ್ಯ ದರ್ಶನವಾಯಿತು. ಆಶ್ಚರ್ಯ! ವಿಸ್ಮಯ!! ಏನು ನಿಮ್ಮ ವರ್ಣನಾಚಾತುರ್ಯ ಸ್ವಾಮೀ, ಯಾವುದೂ ನಮ್ಮದಲ್ಲ. ನೀವು ವರ್ಣಿಸಿದಂತೆ ಆ ಪರ್ವತದಲ್ಲೂ ಆ ಕ್ಷೇತ್ರದಲ್ಲೂ ಶ್ರೀನಿವಾಸ ಭಗವಂತ ಪ್ರತ್ಯಕ್ಷನಾಗುತ್ತಿದ್ದಾನೆ. ಆ ಪುಣ್ಯಕ್ಷೇತ್ರದ ವೈಭವ, ಮಹಿಮೆ ಅಪರಿಮಿತ! ನೀವು ವರ್ಣಿಸಿದ ರೀತಿ ರಮಣೀಯವಾಗಿ ಯಥಾರ್ಥವಾಗಿದೆ. ಓ ಪರಮಯೋಗಿ! ನೀನು ಈ ಹಿಂದೆ ವೆಂಕಟಾಚಲ ಕ್ಷೇತ್ರ ಮತ್ತು ಅದರ ಏಳು ಬೆಟ್ಟಗಳನ್ನು ಸಂದರ್ಶಿಸಿದ್ದೀರಾ. ಅದನ್ನು ನಮಗೆ ತಿಳಿಸಿ ಕೃತಾರ್ಥರನ್ನಾಗಿ ಮಾಡಿ ಎಂದು ಪ್ರಾರ್ಥಿಸಿದರು.

"ಓ ಪುಣ್ಯಾತ್ಮರೇ! ನೀವೇ ಧನ್ಯರು. ವೆಂಕಟಾಚಲ ಯಾತ್ರೆಯನ್ನು ಸಂಪೂರ್ಣವಾಗಿ ಫಲಪ್ರದವಾಗಿ ಮಾಡಿಕೊಂಡು ಬಂದಿರುವ ಮಹಾಭಕ್ತರು ನೀವು. ನಾನು, ನನ್ನ ಗುರುಗಳಾದ ವೇದವ್ಯಾಸ ಮಹರ್ಷಿಗಳ ಸಂಪೂರ್ಣ ಅನುಗ್ರಹದಿಂದ ಶ್ರೀವೆಂಕಟಾಚಲ ಮಹಾತ್ಮೆಯನ್ನು, ಸ್ವಾಮಿಯ ಲೀಲಾವಿನೋದವನ್ನು ಕೇಳಿ ಕೃತಾರ್ಥನಾಗಿದ್ದೇನೆ. ಅದನ್ನು ನಿಮಗೆ ಹೇಳುವ ಭಾಗ್ಯ ನನಗೆ ದೊರಕಿತು. ಕೋಟ್ಯಾನುಕೋಟಿ ಸಂವತ್ಸರದಿಂದ ಈ ಪರಮ ಪವಿತ್ರವಾದ ಕಥೆಯನ್ನು ಸಾವಿರಾರು ಭಕ್ತರು ಕೇಳಿರುವ ವೆಂಕಟಾಚಲ ಮಹಾತ್ಮೆಯನ್ನು ಸ್ವತಃ ಆದಿಶೇಷನು ವರ್ಣಿಸಿದ್ದಾನೆ. ಮಹಾಮಹಿಮನಾದ ಶ್ರೀನಿವಾಸನ ಮಹಿಮೆಯನ್ನು ಎಷ್ಟೇ ವರ್ಣಿಸಿದರು ಅದು ಕಡಿಮೆಯೆ. ಅದು ಅನಂತ, ಆ ಸ್ವಾಮಿಯ ಮಹಿಮೆಯನ್ನು, ಆ ಸ್ವಾಮಿಯಿಂದಲೇ ಕೇಳಬೇಕು, ಅವನ ಮಹಾತ್ಮೆ, ಲೀಲೆ ಏನೆಂದು ಅವನಿಗೇ ತಿಳಿದಿರುವುದು.

**ಶ್ರೀವೆಂಕಟೇಶಸ್ಯ ಕಥಾಮೃತಂತ್ವಿದಂ**
**ಮಹಾತ್ಮ್ಯಸಾರಂ ಸುತಪಸ್ವಿ ಗಮ್ಯಮ್**
**ಶ್ರೀವೆಂಕಟೇಶಸ್ಯ ಮಹಾಪ್ರಿಯ ಪ್ರಿಯಂ**
**ಲೋಕೋತ್ತರಂ ದೇವ ಋಷಿ ಪ್ರಿಯಂಚ**

ಹೀಗೆ ಶ್ರೀ ವೆಂಕಟೇಶ್ವರನ ಕಥಾಮೃತವು ಜನನ ಮತ್ತು ಮರಣವನ್ನು ತಡೆಯುತ್ತದೆ ಎಂದು ನಮಗೆ ತಿಳಿದಿದೆ. ಶ್ರೀ ಸ್ವಾಮಿಯ ಎಲ್ಲಾ ಅದ್ಭುತ ಲೀಲೆಗಳು ಅತ್ಯಂತ ಶ್ರೇಷ್ಠವಾದದ್ದು. ಆತನನ್ನು ತಿಳಿಯುವ ಭಾಗ್ಯ ಅದೃಷ್ಟ ವಿಶೇಷ ಪುಣ್ಯ ಮಾಡಿದವರಿಗೆ ಮಾತ್ರ ಲಭಿಸುತ್ತದೆ. ಶ್ರೀನಿವಾಸನ ಅದ್ಭುತವಾದ ಲೀಲಾಕಥಾಮೃತವು ಪರಮ ಪವಿತ್ರವಾದದ್ದು. ಶ್ರೀನಿವಾಸನ ಕಥೆಗಳನ್ನು ಕೇಳಿ, ಕೀರ್ತಿಸಿ, ಮನಸಾರ ಸ್ಮರಿಸಿದರೆ ಸಾಕು ಶ್ರೀನಿವಾಸನು ಅತ್ಯಂತ ಪ್ರಿಯವಾಗಿ ಭಾವಿಸುತ್ತಾನೆ.

ಲೋಕೋತ್ತರವಾದ ವೈಭವ ಸಾಕು! ನೆನಪಾದರೆ ಸಾಕು! ಶ್ರೀನಿವಾಸ ತುಂಬಾ ಆತ್ಮೀಯ. ಲೋಕದ ದೇವತೆಗಳಿಗೂ ಋಷಿಗಳಿಗೂ ಪ್ರಿಯವಾದುದನ್ನು ದಯಪಾಲಿಸುತ್ತಾನೆ.

**ಸಮಸ್ತ ಪಾಪೌಘ ವಿನಾಶ ಕಾರಣಂ**
**ಸಮಸ್ತ ಪುಣ್ಯೌಘ ಸಮೃದ್ಧಿ ಕಾರಣಮ್**
**ಶ್ರೀವೆಂಕಟೇಶಸ್ಯ ಪಾದಾರವಿಂದಯೋಃ**
**ಸದ್ಭಕ್ತಿ ವೃದ್ಧೌ ರಸಮಾನ ಕಾರಣಮ್**

ಶ್ರೀನಿವಾಸನ ದಿವ್ಯಚರಿತ್ರೆಯನ್ನು ಕೇಳಿದರೆ, ಓದಿದರೆ ಸಾಕು ಸಕಲ ಪಾಪಗಳು ನಿವಾರಣೆ ಆಗುತ್ತದೆ. ಪುಣ್ಯರಾಶಿ ಮತ್ತಷ್ಟು ಹೆಚ್ಚಾಗಲಿದೆ. ಶ್ರೀ ವೆಂಕಟೇಶ್ವರನ ದಿವ್ಯ ಪಾದಗಳಿಗೆ ಭಕ್ತಿಯಿಂದ ವಂದಿಸುವ ಶ್ರದ್ಧೆ ಹೆಚ್ಚಾಗುತ್ತದೆ. ಆದ್ದರಿಂದ ಮತ್ತೊಮ್ಮೆ ಓದಿ. ಶ್ರೀನಿವಾಸನ ಕಥೆಯನ್ನು ಮತ್ತೆ ಮತ್ತೆ ಓದಿ. ಇತರರೊಂದಿಗೆ ಓದಿ. ವೆಂಕಟೇಶನ ಹಿರಿಮೆಯನ್ನು ವೀಣೆಯಂತೆ ಕೇಳಿ! ಓದಿದವರಿಗೆ, ಕೇಳಿದವರಿಗೆ, ಕೇಳಿಸಿದವರಿಗೆ ಶ್ರೀ ವೆಂಕಟೇಶ್ವರನಲ್ಲಿ ಶರಣಾಗಿ, ಲಭಿಸಬೇಕಾದ ಸಕಲ ವರಗಳು ಲಭಿಸಲಿ!

## ಆನಂದಮಯ

ಸಪ್ತಗಿರಿಯೊಡೆಯ, ತಿರುಮಲೇಶ ಶ್ರೀವೆಂಕಟೇಶ್ವರನಿಗೆ ಸಹಸ್ರ ನಾಮಗಳು. ಆದರೆ ಅದರಲ್ಲಿ **"ಆನಂದನಿಲಯ"** ಎನ್ನುವ ನಾಮ ಪ್ರಸಿದ್ಧ, ಸಾರ್ಥಕವಾದದ್ದಾಗಿದೆ.

ತಿರುಮಲ ಯಾತ್ರೆಯನ್ನು ಮಾಡುವ ಸಂಕಲ್ಪ ಮಾತ್ರದಿಂದಲೇ ಆನಂದದ ಅನುಭವ ಉಂಟಾಗುತ್ತದೆ. ಕುಟುಂಬದವರೊಡಗೂಡಿ ಹೊರಟರೆ ಆಗುವ ಆನಂದ ವರ್ಣಿಸಲು ಸಾಧ್ಯವಿಲ್ಲದ್ದು . ಸಪ್ತಗಿರಿಯಲ್ಲಿ ನಡೆಯುತ್ತಿದ್ದರೆ ಉಂಟಾಗುವ ಅವ್ಯಕ್ತ ಆನಂದವನ್ನು ವರ್ಣಿಸಲು ಪದಗಳೇ ಇಲ್ಲ. ಇನ್ನು ಆ ಅಖಿಲಾಂಡಕೋಟಿ ಬ್ರಹ್ಮಾಂಡನಾಯಕ **"ಬಂಗಾರು ಮೇಡ"** ಆನಂದನಿಲಯನ ಸ್ವರ್ಣ ವಿಮಾನವನ್ನು ತಲೆಯೆತ್ತಿ ನೋಡಿದರೆ ತನ್ಮಯತೆಯಿಂದ ಕೂಡಿದ ದಿವ್ಯಾನಂದ! ಆ ದಿವ್ಯವಾದ ಬಂಗಾರದ ವಿಮಾನದೊಳಗೆ ನಿಂತು ಭಕ್ತರ ಬರುವಿಕೆಗಾಗಿ ಕಾಯುತ್ತಿರುವ ತಿರುಮಲೇಶನನ್ನು ಒಂದೇ ಒಂದುಕ್ಷಣ ದರ್ಶಿಸಿದರೆ ಸಾಕು ಭಕ್ತಿಬಾವದಿಂದ ಕಣ್ಣುಗಳು ಆನಂದ ಭಾಷ್ಪವನ್ನು ಸುರಿಸುತ್ತದೆ. ಈ ಅವ್ಯಕ್ತ ಆನಂದದ ಅನುಭವ ಪ್ರತಿಯೊಬ್ಬ ಭಕ್ತನಿಗೂ, ಪ್ರತಿಸಾರಿ ನೋಡಿದಾಗಲೂ ಉಂಟಾಗುತ್ತದೆ ಹಾಗೆಯೇ ಅವನಲ್ಲಿ ಭಕ್ತಿಭಾವದ ಪರಿವರ್ತನೆ ಉಂಟಾಗುವುದರಲ್ಲಿ ಸಂಶಯವಿಲ್ಲ.

ಕೇವಲ ಒಂದೇ ಒಂದುಕ್ಷಣದ ದರ್ಶನ ಮಾತ್ರದಿಂದ ಭಕ್ತನ ಸಕಲ ಇಷ್ಟಾರ್ಥವನ್ನು ಪೂರೈಸಿ ದಿವ್ಯಾನಂದವನ್ನು ಕೊಡುವ "ಕೋರಿನ ವರಾಲರಾಯುಡು" ಬಿರುದನ್ನು ಹೊಂದಿ ನಿರಂತರವಾಗಿ ಕೋಟಿ ಕೋಟಿ ಜನರನ್ನು ಸೆಳೆಯುತ್ತಿರುವ, ಆಕರ್ಷಿಸುತ್ತಿರುವ ಈ "ಆನಂದ ನಿಲಯನು" ಯಾರು? ಅವನು ಎಲ್ಲಿಂದ ಬಂದಿದ್ದಾನೆ? ಬಂದ ಉದ್ದೇಶವೇನು? ಏಳು ಬೆಟ್ಟಗಳು ಯಾವುವು? ಅದರ ಕಥೆ ಏನು? ಆನಂದನಿಲಯ ಎಂದು ಕರೆಯಲು ಕಾರಣ ಏನು? ಸ್ವಾಮಿ ಇಲ್ಲಿ ಬಂದು ನೆಲೆಸುವ ಮೊದಲು ಬೇರೆ ಯಾರಿದ್ದರು? ಇಂತಹ ಅನೇಕ ಪ್ರಶ್ನೆಗಳಿಗೆ ಉತ್ತರವಾಗಿದೆ ಈ "ಆನಂದನಿಲಯಂ" ಕಿರುಹೊತ್ತಿಗೆ. ಅಲ್ಲದೆ ಸ್ವಾಮಿ ಭಕ್ತರ ಕಥೆಗಳು, ಸ್ವಾಮಿಯ ಪರಿಣಯ, ಕಲ್ಯಾಣ, ಹಲವಾರು ತೀರ್ಥಗಳು, ಅದರ ಮಹಿಮೆ, ವೆಂಕಟಾಚಲ ಕ್ಷೇತ್ರ ಮಹಿಮೆ, ಅಲ್ಲಿ ಮಾಡಬಹುದಾದ ದಾನಗಳು, ಎಲ್ಲವು ಈ ಗ್ರಂಥದಲ್ಲಿ ವಿವರಿಸಲಾಗಿದೆ. "ಆನಂದನಿಲಯಂ" ಗ್ರಂಥವನ್ನು ನೀವು ಓದಿ ಆನಂದಿಸಿ! ನಿಮ್ಮ ಬಂದು ಮಿತ್ರರಿಗೂ ಹೇಳುವಂತರಾಗಿ.

**ಗೋವಿಂದಾ! ಗೋವಿಂದಾ! ಗೋವಿಂದಾ!**
**ಗೋವಿಂದಾ! ಗೋ....ವಿಂದ! ಗೋ....ವಿಂದಾ!**

* * *